TEXT PROBLEM WITHIN THE BOOK ONLY

TEXT CUT WITHIN THE BOOK ONLY

UNIVERSAL LIBRARY

OU_200601

UNIVERSAL LIBRARY

University of Mysore.

Oriental Library Publications

KANNADA SERIES No. 16

ನಯಸೇನವಿರಚಿತಂ

ಧರ್ಮಾಮೃತಂ

ಉತ್ತರಭಾಗ—ಅಧ್ಯಾಯಗಳು ೧೦–೧೪

DHARMAMRITAM

BY

NAYASENA

PART II—CHAPTERS 10—14

EDITED BY

ARTHASASTHRA-VISARADA, VIDYALANKARA

DR. R. SHAMA SASTRY, B.A., PH.D., M.R.A.S.,

Curator, Government Oriental Library, Mysore: Director of Archæological Researches in Mysore; Periodical Lecturer to the Post-Graduates' Classes of the Calcutta University, and B.B.R.A.S Campbell Memorial Medalist

---

MYSORE

PRINTED AT THE GOVERNMENT BRANCH PRESS

1926

(*All Rights Reserved*).

ವಿಷಯಾನುಕ್ರಮಣಿಕೆ.

ಉಪೋದ್ಘಾತ		v.
೧೦. ದಶಮಾಶ್ವಾಸಂ—ಅಹಿಂಸಾವ್ರತದ ಕಥೆ	....	೧
೧೧. ಏಕಾದಶಾಶ್ವಾಸಂ—ಸತ್ಯವ್ರತದ ಕಥೆ	....	೬೦
೧೨. ದ್ವಾದಶಾಶ್ವಾಸಂ—ಅಸ್ತೇಯವ್ರತದ ಕಥೆ	....	೧೧೧
೧೩. ತ್ರಯೋದಶಾಶ್ವಾಸಂ—ಬ್ರಹ್ಮವ್ರತದ ಕಥೆ	....	೧೬೩
೧೪. ಚತುರ್ದಶಾಶ್ವಾಸಂ—ಅಪರಿಗ್ರಹ ವ್ರತದ ಕಥೆ	....	೨೦೯

ಉಪೋದ್ಘಾತ

ನಯಸೇನ

ಈ ಗ್ರಂಥದ ಕರ್ತೃವು ತನ್ನ ಹೆಸರನ್ನು "ನಯಸೇನ ಮುನೀಂದ್ರ" ನೆಂದೂ (I ೮,೨೧) "ನಯಸೇನ ಬುಧ" ನೆಂದೂ (I, ೫೮), ಆಶ್ವಾಸಾಂತ್ಯ ಗದ್ಯದಲ್ಲಿ "ನಯಸೇನದೇವ" ನೆಂದೂ ಹೇಳಿಕೊಂಡಿದ್ದಾನೆ. ಆಶ್ವಾಸಾಂತ್ಯ ಗದ್ಯಪದ್ಯಾದಿಗಳಿಂದ ಈತನಿಗೆ ಸುಕವಿನಿಕರಪಿಕಮಾಕಂದ, ವಾತ್ಸಲ್ಯರತ್ನಾಕರ, ಸುಕವಿಜನಮನಃಪದ್ಮಿನೀರಾಜಹಂಸ ನೂತ್ನಕವಿತಾವಿಳಾಸ ಮುಂತಾದ ಬಿರುದುಗಳು ಇದ್ದಂತೆ ಕಾಣುತ್ತದೆ (I ೫೩). ಇವುಗಳನ್ನು ಅವನಿಗಿಂತ ಹಿಂದೆ ಇದ್ದ ಜೈನ ಕವಿಗಳ ಸಂಪ್ರದಾಯವನ್ನು ಅನುಸರಿಸಿ ಆಯಾ ಕಥಾನಾಯಕನಿಗೂ ಸಂದರ್ಭಾನುಸಾರವಾಗಿ ಉಪಯೋಗಿಸಿದ್ದಾನೆ. ಈತನಿಗೆ ತರ್ಕಶಾಸ್ತ್ರದಲ್ಲಿ ಪೂರ್ಣಪಾಂಡಿತ್ಯವಿದ್ದಿತಂತೆ. (I ೨೧). ತನಗೆ

ಗುರು ವಿದ್ಯಾಬ್ಧಿ ನರೇಂದ್ರಸೇನಮುನಿಪಂ ತ್ರೈಲೋಕ್ಯಚಕ್ರೇಶ್ವರಂ
ಪರಮಶ್ರೀಜಿನನಿಷ್ಟದೈವನಮಳಂ ಶ್ರೀ ಜೈನಯೋಗೀಶ್ವರರ್
ಪರಮಾರ್ಥಂ ತನಗಾಳ್ದರುತ್ತಮವಿನೇಯರ್ ಬಂಧುವರ್ಗಂ...(I ೫೬)

ಎಂದು ಹೇಳಿಕೊಂಡಿದ್ದಾನೆ. ಆದ್ದರಿಂದ, ಈ ಗ್ರಂಥವನ್ನು ಬರೆದಾಗ ಪ್ರಾಯಶಃ ಆತನು ಸಂನ್ಯಾಸಿಯಾಗಿದ್ದನೆಂದು ತೋರುತ್ತದೆ. ನರೇಂದ್ರಸೇನ ಮುನಿಯು ತಪಸ್ಸು ಶ್ರುತ ಇವೆರಡನ್ನೂ ಉಳ್ಳವನೆಂದೂ (I, ೨೦), ತನ್ನ ಶಿಷ್ಯನಾದ ನಯಸೇನನಿಗೆ ತರ್ಕಶಾಸ್ತ್ರವನ್ನು

ಸಮಗ್ರವಾಗಿ ಹೇಳಿಕೊಟ್ಟು ಪ್ರಸಿದ್ಧನಾಗಿದ್ದನೆಂದೂ, ಸಿದ್ಧಾಂತದಲ್ಲಿ ಜಿನಸೇನಾಚಾರ್ಯರನ್ನೂ, ಶಾಸ್ತ್ರಪಾಂಡಿತ್ಯದಲ್ಲಿ ಪೂಜ್ಯಪಾದಮುನಿಗಳನ್ನೂ, ಷಟ್ತರ್ಕದಲ್ಲಿ ಪ್ರಸಿದ್ಧರಾದ ಸಮಂತಭದ್ರಮುನಿಗಳನ್ನೂ ಮೀರಿಸಿದ್ದನೆಂದೂ (I ೨೪), ಆತನಿಗೆ 'ಭುವನೈಕಮಲ್ಲನುತಪಾದಾಂಭೋಜ' ರಾದ ಗುಣಚಂದ್ರ ಪಂಡಿತರು 'ತ್ರೈವಿದ್ಯಮಹಾಭಿಧಾನ' ವನ್ನು 'ಕೂರ್ತಟ್ಟಿಯಿಂ' ಕೊಟ್ಟರೆಂದೂ, ನರೇಂದ್ರಸೇನ ಮುನಿಯಂಥ 'ವಾಗ್ಮೀಶ' ರೇ ಮತ್ತೊಬ್ಬರಿಲ್ಲವೆಂದೂ ಹೊಗಳಿದ್ದಾನೆ. ಈ ಗ್ರಂಥದ ಕೊನೆಯಲ್ಲಿ (XIV ೧೬೪)

ಮುಳುಗುಂದದೊಳಿರ್ದು ಮಹೋ
ಜ್ಜ್ವಳಧರ್ಮಾಮೃತಮನರ್ತಿಯಿಂದಂ ಭವ್ಯಾ ।
ವಳಿಗಱಿಪಿದಂ ಧರಿತ್ರೀ
ತಳಪೂಜ್ಯಂ ಸುಕವಿನಿಕರಪಿಕಮಾಕಂದಂ ॥

ಎಂದು ಹೇಳಿರುವುದರಿಂದ ನಯಸೇನನ ಸ್ಥಳವು ಧಾರವಾಡ ಡಿಸ್ಟ್ರಿಕ್ಟಿನಲ್ಲಿರುವ ಮುಳುಗುಂದವೆಂದು ತೋರುತ್ತದೆ. ಈತನ ಕಾಲವು ಹನ್ನೆರಡನೆಯ ಶತಮಾನದ ಆದಿಭಾಗವೆಂದು 'ಧರ್ಮಾಮೃತ' ದಿಂದಲೇ ಸುಲಭವಾಗಿ ನಿಶ್ಚಯಿಸಬಹುದು. ಹೇಗೆಂದರೆ, ಅವನು ತನ್ನ ಈ ಗ್ರಂಥವು

ಗಿರಿಶಿಖಿವಾಯುಮಾರ್ಗಶಶಿಸಂಖ್ಯೆಯೊಳಾವಗಮೊಂದಿ ವರ್ತಿಸು
ತ್ತಿರೆ ಶಕಕಾಲಮುನ್ನತಿಯ ನಂದನವತ್ಸರದೊಳ್ ಮಹೋತ್ಸವಂ
ಬೆರಸೆಸೆದಿರ್ದ ಭಾದ್ರಪದಮಾಸದೊಳಗ್ಗದ ಶುಕ್ಲಪಕ್ಷದೊಳ್
ನಿರುಪಮಮಪ್ಪ ಪಾಡಿವದೊಳೊಪ್ಪುವ ಹಸ್ತಯುತಾರ್ಕವಾರದೊಳ್ ॥

ಮುಗಿಯಿತೆಂದು ಹೇಳಿದ್ದಾನೆ. ಇದರ ಪ್ರಕಾರ ಧರ್ಮಾಮೃತದ ಕಾಲವು ಶಾಲೀವಾಹನ ಶಕ ೧೦೩೭ ಆಗುತ್ತದೆ. ಡಾ॥ ಸ್ವಾಮಿ ಕಣ್ಣುಪಿಳ್ಳೆಯವರ ಇಂಡಿಯನ್ ಎಫಿಮೆರಿಸ್‌ನ ಪ್ರಕಾರ ಈ ಪದ್ಯದಲ್ಲಿ ಉಕ್ತವಾಗಿರುವ ನಂದನಸಂವತ್ಸರ ಮುಂತಾದವುಗಳು ಕ್ರಿ. ಶ. ೧೧೧೨ ರಲ್ಲಿ

ಬರುತ್ತವೆ. ಆದರೆ ೧೦೩೭ ಕ್ಕೆ ೭೮ ನ್ನು ಸೇರಿಸಿದರೆ ಕ್ರಿ. ಶ. ೧೧೧೫ ಆಗುತ್ತದೆ. ಕ್ರಿ. ಶ. ೧೧೧೫ ನೆಯ ವರ್ಷದಲ್ಲಿ ನಂದನ ಸಂವತ್ಸರಾದಿಗಳು ಬರುವುದಿಲ್ಲ. ಇದನ್ನು ನೋಡಿದರೆ ಮೇಲಣ ಪದ್ಯದಲ್ಲಿ ಮೊದಲನೆಯ ಪದವು ತಪ್ಪು ಬಿದ್ದಿರಬಹುದೋ ಏನೋ ಎಂಬ ಸಂದೇಹವು ಬರುತ್ತದೆ. ಆದರೆ ನಮಗೆ ದೊರೆತಿರುವ ಪ್ರತಿಗಳಲ್ಲೆಲ್ಲಾ ಇರುವುದು ಇದೊಂದೇ ಪಾಠ; ಅದೂ ಸ್ಪಷ್ಟವಾಗಿದೆ. ಇಂತಹ ಸಂದರ್ಭಗಳಲ್ಲಿ ಮಾತೃಕೆಯ ಪ್ರಮಾಣವಿಲ್ಲದೆ ಸ್ವೇಚ್ಛೆಯಾಗಿ ಮೂಲವನ್ನು ತಿದ್ದುವುದು ಸರಿಯಲ್ಲವೆಂದು ಭಾವಿಸಿ 'ಗಿರಿ' ಎಂಬ ಶಬ್ದವನ್ನೇ ಉಳಿಸಿದೆ. 'ಗಿರಿ' ಶಬ್ದಕ್ಕೆ 'ಏಳು' ಎಂದೇ ಅರ್ಥ. ಜೈನರಲ್ಲಿಯೂ ಅದಕ್ಕೆ 'ನಾಲ್ಕು' ಎಂದು ಅರ್ಥ ಎಲ್ಲಿಯೂ ಬಂದಿಲ್ಲ.

ಧರ್ಮಾಮೃತ

ಈ ಗ್ರಂಥದಲ್ಲಿ, ಸಾಗಾರರು ಅಥವಾ ಗೃಹಸ್ಥರು ಆಚರಿಸಬೇಕಾದ ಸಮ್ಯಗ್ದರ್ಶನ ಮತ್ತು ಅದರ ಎಂಟು ಅಂಗಗಳನ್ನೂ [1] 'ಅಣುವ್ರತ'ಗಳಾದ ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹಗಳನ್ನೂ ಅನುಷ್ಠಾನ ಮಾಡಿ, ಹಿಂದೆ ಸದ್ಗತಿಯನ್ನು ಪಡೆದವರ ಕಥೆಗಳು—ಒಂದೊಂದು ಅಧ್ಯಾಯದಲ್ಲಿ ಒಂದೊಂದರಂತೆ—ಹದಿನಾಲ್ಕು ಅಧ್ಯಾಯಗಳಲ್ಲಿ ಉಕ್ತವಾಗಿವೆ. 'ಜಿನ ಮತದೊಳನಿತು ಸಾರಮದನಿತುಂ ಲೇಸಾಗಿ ತೋರ್ಪುದೀ ಕೃತಿಯೊಳ್' ಎಂದು ಕವಿಯು ಹೇಳಿಕೊಂಡಿದ್ದಾನೆ. ಮಗಧರಾಜನಾದ ಶ್ರೇಣಿಕಮಹಾರಾಜನು [2] ವಿಪುಲಾದ್ರಿಗೆ ಬಂದಿದ್ದ ವರ್ಧಮಾನ ಸ್ವಾಮಿಯ ಮುಂದೆ ಗೌತಮರನ್ನು ಕುರಿತು "ದರ್ಶನ ನಿಶ್ಶಂಕಾದ್ಯಷ್ಟಗುಣಗಳು ಪಂಚಾಣು ವ್ರತಗಳು ಈ

---

1 ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ ಸ್ಥಿತಿಕರಣ, ವಾತ್ಸಲ್ಯ, ಧರ್ಮಪ್ರಭಾವನೆ.

2 ಇವನು ಧರ್ಮಾಸಕ್ತನಾದ ಒಬ್ಬ ವೃದ್ಧಮಗಧರಾಜನೆಂದು ಉತ್ತರಾಧ್ಯಯನ ಸೂತ್ರದಲ್ಲಿ (ಅಧ್ಯಾಯ ೨೦) ಉಕ್ತವಾಗಿದೆ. ಇವನನ್ನೇ ಬೌದ್ಧರು ಬಿಂಬಿಸಾರನೆಂದು ಕರೆದಿದ್ದಾರೆ.

ಪದಿನಾಲ್ಕು ಮಹಾರತ್ನಗಳೊಂದೊಂದರಲ್ಲಿಯೂ ಚರಿಸಿ ನಿರ್ವೃತಿಯನ್ನು ಪಡೆದ ಮಹಾ ಪುರುಷರ ಕಥೆಗಳನ್ನು ತನಗೆ ತಿಳಿಯುವಂತೆ ಹೇಳ ಬೇಕೆಂದು ಕೇಳಿಕೊಂಡಂತೆಯೂ ಆಗ ಗೌತಮರು ಈ ಕಥೆಗಳನ್ನು ಹೇಳಿದಂತೆಯೂ ತಿಳಿಸುತ್ತಾನೆ (I ೬-೪.)

ಗ್ರಂಥಾದಿಯಲ್ಲಿ, ಮಹಾವೀರ ಸಿದ್ಧರು ಆಚಾರ್ಯರು ಉಪಾಧ್ಯಾಯರು ಸಾಧುಗಳು ಯಕ್ಷಿ (ಗಜಮುಖ) ಯಕ್ಷ 'ವಾಕ್ಸುಂದರಿ' ಸರಸ್ವತಿ (?) ಇವರನ್ನು ಪ್ರಾರ್ಥಿಸಿ (I ೧-೬) ಅನಂತರ ಅರ್ಹದ್ಬಲ್ಯಾಚಾರ್ಯರಿಂದ ಅಕಳಂಕದೇವರ ವರೆಗಿನ ಗುರುಪರಂಪರೆಯನ್ನು ವಂದಿಸುತ್ತಾನೆ (I ೯-೩೬). ಇವರ ಪರಿಗಣನೆಯಲ್ಲಿ ಕಾಲಕ್ರಮವನ್ನು ಅನುಸರಿಸಿದಂತಿಲ್ಲ. ಆಮೇಲೆ, ತನ್ನ ಹಿಂದೆ ಇದ್ದ ಪ್ರಸಿದ್ಧ ಕವಿಗಳನ್ನೂ ಅವರ ಕಾವ್ಯಗಳ ವಿಶೇಷ ಗುಣಗಳನ್ನೂ

ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸವ್ಯಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ ನಿರಂತರಂ ||

ಎಂಬ ಪದ್ಯದಲ್ಲಿ (I, ೩೯) ಹೇಳಿ

ರಸಭಾವಂ ಗಮಕಂ ಕಾ
ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ |
ಕುಸುಮಿಯ ಬಗೆ ....

ಇವಿಷ್ಟರಿಂದಲೂ ಶೋಭಿಸತಕ್ಕದ್ದೇ ಸತ್ಕಾವ್ಯವೆಂಬುದಾಗಿಯೂ ಹೊಸಗನ್ನಡ ಬರೆಯುತ್ತೇವೆಂದು ಕನ್ನಡ ಮಾತಿನಲ್ಲಿ ಸಂಸ್ಕೃತವನ್ನು ತಂದು ಗಿಡಿಯಬಾರದೆಂದೂ ತನ್ನ ಅಭಿಪ್ರಾಯವನ್ನು ಸೂಚಿಸಿ (I ೪೦ -೪೩) ದೋಷದರ್ಶಿಗಳಾದ ಜಡರನ್ನೂ, ಕುಕವಿಗಳನ್ನೂ ನಿಂದಿಸಿ (I ೪೩-೪೬),

ಕಾವ್ಯದಲ್ಲಿ ' ಸಹಜ ' ವಿಲ್ಲದಿದ್ದರೆ ಅದು ಶೋಭಿಸದೆಂದು

ಮಱೆಯಿಲ್ಲದೆ ಪೊಯ್ಸ್ನಾರಿಂ
ಬೆಳಗುವೆ ಧರೆ ಮಱುಗಿ ಕುದಿದು ಶಾಸ್ತ್ರದ ಬಲದಿಂ ।
ದಳಪಿಂ ಪೇಪ್ದೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ॥

ಉಪ್ಪಿಲ್ಲದೆ ಕೇಳೊಕ್ಕಳ
ತುಪ್ಪಮನೆಱೆದುಣ್ಬೆನೆಂಬೊಡುಂಬುಣಿಸೇಂ ಸ್ವಾ।
ದಪ್ಪುದೆ ಸಹಜಂ ತನಗಿನಿ
ಸಪ್ಪೊತವಿಲ್ಲದನ ಕವಿತೆ ರುಚಿವಡೆದಪ್ಪುದೇ ? ॥

ಎಂಬ ಪದ್ಯಗಳಲ್ಲಿ ಹೇಳಿ, ಕಾಳಿದಾಸನು ರಘುವಂಶದ ಆದಿಯಲ್ಲಿ ಹೇಳಿಕೊಂಡಿರುವಂತೆ

ಪಱುಗೋಲೊಳ್ ವಾರ್ಧಿಯು ತಡಿ
ಗುಱದೆ ಭರಂಗೆಯ್ದು ಪೋಪೆನೆಂಬೆಗ್ಗನವೋಲ್ ।
ನೆಱೆ ಜಿನವಾಕ್ಯಾಂಬುಧಿಯುಮ
ನುಱದೀಸುವೆನೆಂಬ ದಿಟ್ಟರೆಮ್ಮಂ ಪೆಱರಾರ್ ॥

ಎಂದು ಸ್ವಾಹಂಕಾರಖಂಡನೆಯನ್ನು ಮಾಡಿಕೊಂಡು, ಪುಣ್ಯ ಚರಿತ್ರೆಯನ್ನು ಕಾವ್ಯದಲ್ಲಿ ಗ್ರಥಿಸುವುದರಿಂದ ಉಂಟಾಗುವ " ಕರ್ಮ ನಿರ್ಜರೆಯನಂತಿಂತುಂತೆನಲ್ ಬರ್ಕುಮೆ " ? ಎಂದು ಕೇಳಿ, ನರೇಂದ್ರ ಸೇನ ಮುನಿಯೇ ತನ್ನ ಗುರು, ಜಿನನೇ ಇಷ್ಟ ದೇವತೆ, ಜೈನಯೋಗೀ ಶ್ವರರೇ ಒಡೆಯರು, ಉತ್ತಮ ವಿನೇಯರೇ ನಂಟರು, ಎಂದು ಹೇಳಿ, ತನ್ನ ಬಿರುದುಗಳನ್ನು ತಿಳಿಸಿ, ಧರ್ಮಾಮೃತವನ್ನು ' ಅಱಿಯೆ ' ಪೇಱ್ವೆನೆಂದು ಪ್ರತಿಜ್ಞೆ ಮಾಡುತ್ತಾನೆ (I ೫೯). ಅನಂತರ ಶ್ರೇಣಿಕನಿಗೆ ಗೌತಮಮುನಿಗಳು ಈ ಕಥೆಗಳನ್ನು ಹೇಳಿದ ಸಂದರ್ಭವನ್ನು ವಿವರಿಸಿ ಕಥೆಹೇಳುವುದಕ್ಕೆ ಆರಂಭಿಸುತ್ತಾನೆ.

ಇದಕ್ಕೆ ಹಿಂದೆಯೇ ಆದಿಪಂಪನಿಂದ ಮೊದಲುಮಾಡಿಕೊಂಡು ಆದಿಪುರಾಣ, ಶಾಂತಿಪುರಾಣ, ಅಜಿತನಾಥಪುರಾಣ ಮುಂತಾದ ಚಂಪೂ ರೂಪವಾದ ಜೈನಪುರಾಣ ಗ್ರಂಥಗಳು ಹುಟ್ಟಿದ್ದುವು. ಆದರೆ ಇವು ಪುರಾಣಗಳೆನಿಸಿಕೊಂಡಿದ್ದರೂ ಪುರಾಣಶೈಲಿಯಲ್ಲಿಲ್ಲ; ಪ್ರೌಢವಾದ ಸಂಸ್ಕೃತ ಚಂಪೂಕಾವ್ಯಶೈಲಿಯಲ್ಲಿವೆ. ಗದ್ಯದಲ್ಲಿ ಬರೆದ "ಭವ್ಯಕೋಟಿಗೆ ಅಱಿಪಿದ" ಚಾವುಂಡರಾಯನನ್ನು ಬಿಟ್ಟರೆ ಮಿಕ್ಕ ಪುರಾಣಕರ್ತೃಗಳೆಲ್ಲರೂ ವಿದ್ವಾಂಸರ ಮೆಚ್ಚಿಗೆಗೋಸ್ಕರ ಬರೆದರು. ಆದರೆ ಹನ್ನೆರಡನೆಯ ಶತಮಾನದ ಆರಂಭದಲ್ಲಿ ತಮ್ಮ ತಮ್ಮ ಧರ್ಮದ ತತ್ವಗಳನ್ನೂ, ಶ್ರೇಷ್ಠತೆಯನ್ನೂ ಜನಸಾಮಾನ್ಯಕ್ಕೆ ಸುಲಭವಾದ ಭಾಷೆಯಿಂದ ತಿಳಿಸಬೇಕೆಂಬ ಬಂದ ಸಂಕಲ್ಪವು ಕನ್ನಡ ವೀರಶೈವ ಕವಿಗಳಲ್ಲಿ ಬಂದಂತೆ ಜೈನಕವಿಗಳಲ್ಲಿಯೂ ಬಂದಂತೆ ತೋರುತ್ತದೆ. ನಯಸೇನನ ಧರ್ಮಾಮೃತವೂ ಬ್ರಹ್ಮಶಿವನ (ಕ್ರಿ. ಶ.1125) ಸಮಯಪರೀಕ್ಷೆಯೂ, ವೃತ್ತವಿಲಾಸನ (ಕ್ರಿ. ಶ. 1160) ಧರ್ಮಪರೀಕ್ಷೆಯೂ ಇದಕ್ಕೆ ನಿದರ್ಶನಗಳಾಗಿವೆ. ಸಾಮಾನ್ಯ ಜನರಿಗೆ ಅರ್ಥವಾಗುವಂತೆಯೂ, ರುಚಿಸುವಂತೆಯೂ ಗ್ರಂಥವನ್ನು ಬರೆಯಬೇಕೆಂಬ ಉದ್ದೇಶವಿದ್ದಿರಬಹುದಾದುದರಿಂದಲೇ

ಪೊಸಕನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡವಂ ಚಿಂ ।
ತಿಸಿ ಕೂಡಲಾಱದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ॥ (I. ೪೧)

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ಧಗನ್ನಡದೊಳ್ ತಂ ।
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ॥ (I.೪೨)

ಎಂದು ತನ್ನ ಕಾಲದಲ್ಲಿ ಸಂಸ್ಕೃತಭೂಯಿಷ್ಠವಾಗಿ ಬರೆಯುತ್ತಿದ್ದವರ ಶೈಲಿಯನ್ನು ಹಳಿದು ತಾನು "ಸುದ್ಧಗನ್ನಡ"ದಲ್ಲಿ ಬರೆಯುವ

ನೆಂದು ಸೂಚಿಸಿದ್ದಾನೆ. ಇದರಿಂದ ಸಂಸ್ಕೃತಶಬ್ದವನ್ನೇ ಪ್ರಯೋಗಿಸುವುದಿಲ್ಲವೆಂದು ಆಂಡಯ್ಯನಂತೆ ಹಟಮಾಡಿಕೊಂಡು ನಯಸೇನನೂ ಬರೆಯುವುದಕ್ಕೆ ಹೊರಟನೆಂದು ಹೇಳುವುದಕ್ಕಾಗುವುದಿಲ್ಲ. ಆಂಡಯ್ಯನು ತನ್ನ ಉದ್ದೇಶ್ಯವನ್ನು ಬಹುಶ್ರಮಪಟ್ಟು ಸಾಧಿಸಿದನು. ಆದರೂ ಸಂಸ್ಕೃತಶಬ್ದಪೂರ್ಣವಾದ ಗ್ರಂಥವು ಎಷ್ಟು ದುರವಗಾಹವೋ ಅವನ ತದ್ಭವಪೂರ್ಣವಾದ ಕಾವ್ಯವೂ ಅಷ್ಟೇ, ದುರವಗಾಹವಲ್ಲದಿದ್ದರೂ, ಕ್ಲಿಷ್ಟವೂ ವಿಚಿತ್ರವೂ ಆಯಿತು. ನಯಸೇನನು ಹೀಗೆ ಸಂಸ್ಕೃತ ಶಬ್ದಗಳನ್ನೇ ಉಪಯೋಗಿಸುವುದಿಲ್ಲವೆಂದು ಹೊರಟವನಾಗಿ ಕಾಣುವುದಿಲ್ಲ. ವ್ಯವಹಾರದಲ್ಲಿರುವ ಸಂಸ್ಕೃತಶಬ್ದಗಳನ್ನು ಉಪಯೋಗಿಸುತ್ತ, ಕೋಶಸಹಾಯವಿಲ್ಲದೆ ಅರ್ಥವಾಗದ ಉದ್ಗ್ರಂಥಮಾತ್ರದೃಷ್ಟವಾದ ಕ್ಲಿಷ್ಟ ಶಬ್ದಗಳನ್ನು ತ್ಯಜಿಸಿ, ಸಂಸ್ಕೃತಕಾವ್ಯ ಸರಣಿಯನ್ನು ಬಿಟ್ಟು ಕನ್ನಡನುಡಿಯ ಮಾರ್ಗವನ್ನೇ ಅನುಸರಿಸಿ ಬರೆಯಬೇಕೆಂಬುದು ಇವನ ಆಶಯವಾಗಿ ಕಾಣುತ್ತದೆ. ಆದ್ದರಿಂದಲೇ ಪ್ರಥಮಾಶ್ವಾಸದ ಪೀಠಿಕಾ ಭಾಗವನ್ನು ಬಿಟ್ಟರೆ ಮುಂದೆ ಬಹುಮಟ್ಟಿಗೆ ಸುಲಭವಾದ ಸಂಸ್ಕೃತ ಶಬ್ದಗಳನ್ನೇ ಬೆರೆಸಿಕೊಂಡು ಸಾಮಾನ್ಯ ಜನರಿಗೆ ಅರ್ಥವಾಗುವಂಥ ಕನ್ನಡ ಶೈಲಿಯಲ್ಲಿ ತನ್ನ ಗ್ರಂಥವನ್ನು ಬರೆದಿದ್ದಾನೆ. ಕಂದಗಳೂ ಪ್ರಸಿದ್ಧ ವೃತ್ತಗಳೂ ಹೆಚ್ಚು. ಅಪ್ರಸಿದ್ಧ ವೃತ್ತಗಳು ಅಪೂರ್ವ. ಇವೆಲ್ಲಕ್ಕಿಂತಲೂ ಸ್ಪಷ್ಟವಾಗಿ ನಯಸೇನನ ಶೈಲಿಯ ವೈಲಕ್ಷಣ್ಯವು ಕಂಡುಬರುವುದು ಅವನ ಗದ್ಯದಲ್ಲಿ. ಕನ್ನಡ ಚಂಪೂಗ್ರಂಥಗಳಲ್ಲಿ ಬರುವ ಗದ್ಯವೆಂದರೆ ಕಾದಂಬರೀ ಹರ್ಷ ಚರಿತೆಗಳ ಶೈಲಿಯ ಛಾಯೆಯೇ ಹೆಚ್ಚು; ಈ ವಿಧವಾದ ಶೈಲಿಗೂ ನಯಸೇನನ ಗದ್ಯ ಶೈಲಿಗೂ ಅಜಗಜಾಂತರವಿರುವುದು. ಆದರಲ್ಲಿ ಹುಡುಕಿದರೂ ಪ್ರಾಚೀನ ಕವಿಪ್ರಿಯಗಳಾದ ಪರಿಸಂಖ್ಯೆ, ವಿರೋಧಾಭಾಸ, ಶ್ಲೇಷೆ, ಅತ್ಯುಕ್ತಿ ಇವು ಸಿಕ್ಕುವುದಿಲ್ಲ. ಎಲ್ಲೆಲ್ಲಿ ನೋಡಿದರೂ ಉಪಮೆ; ಸರಪಣಿಯಂತೆ ಸಾಲು ಹಿಡಿದು ಬರುವ ಉಪಮೆ; ಪ್ರತಿಯೊಬ್ಬನೂ ತನ್ನ ಸುತ್ತುಮುತ್ತಿನ ದೈನಂದಿನ ಪ್ರಪಂಚದಲ್ಲಿ ನೋಡಿರಬಹುದಾದ ಸಂಗತಿಗಳ ಸಾದೃಶ್ಯ; ಎಲ್ಲರ

ಛಾಯಲ್ಲಿಯೂ ಇದ್ದಿರಬಹುದಾದ ಗಾದೆಗಳು, ಸಾಮೆತಿಗಳು. ಇವು ಹೆಚ್ಚಾಗಿಯೇ ಇರುವುದರಿಂದ ಒಂದುವಿಧವಾದ ಚಮತ್ಕಾರರಾಹಿತ್ಯವೂ, ನೀರಸತೆಯೂ, ಅನವೀಕ್ಷ್ಯತತ್ವವೂ ಪಂಡಿತರಾದವರಿಗೆ ತೋರಬಹುದು. ಆದರೆ ಸಾಮಾನ್ಯಜನರಿಗೆ ಇವು ಮನಸ್ಸಿಗೆ ಹಿಡಿಯುವಷ್ಟು ಕಾವ್ಯದ ಚಮತ್ಕಾರ ವಿಶೇಷಗಳೂ, ಅಲಂಕಾರ ವೈಚಿತ್ರ್ಯಗಳೂ ಹಿಡಿಯುವುದಿಲ್ಲ; ಆದ್ದರಿಂದಲೇ ಈ ಗ್ರಂಥವು ಕುಮಾರವ್ಯಾಸ ಭಾರತ, ತೊರವೆಯ ರಾಮಾಯಣ ಮುಂತಾದ ಗ್ರಂಥಗಳಂತೆ ಜನಸಾಮಾನ್ಯ ರಂಜಕವಾಗಿದ್ದಂತೆ ತೋರುತ್ತದೆ. ಇವುಗಳಲ್ಲಿ ಕಂಡುಬರುವ ಪಾಠಭೇದಗಳೂ, ಅಧಿಕ ಪಾಠಗಳೂ, ಪ್ರಕ್ಷೇಪಗಳೂ ಈ ಗ್ರಂಥಗಳು ಜನರಲ್ಲಿ ಬಹಳವಾಗಿ ಬಳಕೆಯಲ್ಲಿದ್ದಿರಬೇಕೆಂಬುದಕ್ಕೆ ಸಾಕ್ಷಿಗಳಾಗಿವೆ.

ಕನ್ನಡದ ಶಬ್ದರೂಪಗಳನ್ನು ಉಪಯೋಗಿಸುವುದರಲ್ಲಿಯೂ ನಯಸೇನನು ವ್ಯಾಕರಣಗಳನ್ನೂ ಪೂರ್ವಕವಿಪ್ರಯೋಗಗಳನ್ನೂ ಇಟ್ಟುಕೊಂಡು ಶುದ್ಧ ಹಳಗನ್ನಡ ಮಾತ್ರವನ್ನೇ ಅಂಗೀಕರಿಸಿಲ್ಲ. ಅವನು (ತನ್ನ ಕಾಲದ) ಹೊಸಕನ್ನಡದಲ್ಲಿ ಕಾವ್ಯವನ್ನು ಬರೆಯುವನೆಂದು ಸೂಚಿಸಿದ್ದಾನೆ; ಆದ್ದರಿಂದಲೇ ಇವನ ಗ್ರಂಥದಲ್ಲಿ ಱಕುಳ ಕ್ಷಳಘಟಿತವಾದ ಶಬ್ದಗಳು ಪ್ರಾಸಸ್ಥಾನಗಳಲ್ಲಿ ಮಿಳಿತವಾಗಿ ಕಂಡುಬರುತ್ತವೆ. ಅರಿಸಮಾಸಗಳು ದೊರೆಯುತ್ತವೆ. ‘ಅರ್ತಿ’ ‘ಬಿರ್ದು’ ‘ಎರ್ದು’ ‘ಚೆಲುವು’ (I. 2.) ಮುಂತಾದ ಕೆಲವು ಮಧ್ಯಕನ್ನಡದ ರೂಪಗಳು ಸಿಕ್ಕುತ್ತವೆ. ಇಲ್ಲಿ ‘ಅರ್ತಿ’ ‘ಬಿರ್ದು’ ‘ಎರ್ದು’ ಎಂಬ ಈ ರೂಪಗಳನ್ನು ಕುರಿತು ಸ್ವಲ್ಪ ವಿಚಾರಮಾಡಬೇಕು.

ರೇಫಕ್ಕೂ ಳಕಾರಕ್ಕೂ ಮಧ್ಯಸ್ಥವಾಗಿ ಉಚ್ಚಾರವಾಗುವ ೞಕಾರವು ಕನ್ನಡದಲ್ಲಿ ಸುಮಾರು ಕ್ರಿ. ಶ. ೯೦೦ರವರೆಗೆ ಸ್ವಸ್ವರೂಪದಲ್ಲಿದ್ದು ಅಲ್ಲಿಂದ ಮುಂದೆ ಕೆಲವು ಕಡೆ ರೇಫವೂ ಮತ್ತೆ ಕೆಲವು ಕಡೆ ಳಕಾರವೂ ಆದಂತೆ ಕಂಡುಬರುತ್ತದೆ. ಆದ್ದರಿಂದ ‘ಅರ್ದಿದುದು’, ‘ಬಿರ್ದು,’ ‘ಏಳು,’ ‘ಏಳ್ಗ,’ ‘ಗರ್ದೆ’ ಎಂಬ ರೂಪಗಳು ಕ್ರಿ. ಶ. ೧೦೧೯ ನೆಯ

ಒಂದು ಶಾಸನದಲ್ಲಿ ದೊರೆಯುತ್ತವೆ. (ಇವಕ್ಕೆ ಅೞ್ದುದು, ಬೞ್ದು, ಏೞು, ಏೞ್ಗೆ, ಗೞ್ದೆ ಎಂಬಿವು ಪ್ರಾಚೀನ ರೂಪಗಳು.) ಇದರಂತೆ ಬಳಿ, ಗಳ್, ಗೞೆ ಎಂಬಿವು ಕ್ರಿ. ಶ. ೧೦೪೮ ನೆಯ ಒಂದು ಶಾಸನದಲ್ಲಿಯೂ, ನೆಗೞ್, ಸಗಳ್, ಬಳಿ, ಕೞ್ಚು, ಎಂಬಿವು ಕ್ರಿ. ಶ. ೧೦೭೫ ನೆಯ ಒಂದು ಶಾಸನದಲ್ಲಿಯೂ, ಪೊಗಳ್, ನೆಗರ್ತ್ತೆ, ಪಾಳ್, ಅಳಿ, ಎಂಬಿವು ಕ್ರಿ. ಶ. ೧೦೮೩ ನೆಯ ಒಂದು ಶಾಸದಲ್ಲಿಯೂ, ಕರ್ಚ್ಚು, ಅಳಿ ಪೊಗಳ್ತೆ, ನೆಗಳ್ತೆ ಇವು ೧೧೮೧ ನೆಯ ಒಂದು ಶಾಸನದಲ್ಲಿಯೂ, ‘ಎಳೆ ನಗರ್ ನಾಡೆೞ್ಪತ್ತು’ ಎಂಬುದು ಕ್ರಿ. ಶ. ೮೯೦ ನೆಯ ಒಂದು ಶಾಸನದಲ್ಲಿಯೂ, (ಬೌರಿಂಗ್ ಪೇಟೆ ೧೭), ‘ಎಡವಲೆಯೆಳ್ಪತ್ತುಂ’ ಎಂಬುದು ಕ್ರಿ. ಶ. ೧೧೧೫ ನೆಯ ಒಂದು ಶಾಸನದಲ್ಲಿಯೂ, (ಚಿಕ್ಕಮಗಳೂರು ೭೮) ದೊರೆಯುತ್ತವೆ.

ಕೇಶಿರಾಜನ ಶಬ್ದಮಣಿದರ್ಪಣದಿಂದಲೂ ಇದನ್ನು ಊಹಿಸಬಹುದು. ಅವನ ಕಾಲಕ್ಕೆ ಆಗಲೇ (ಸುಮಾರು ೧೨೬೦) ೞಕಾರವು (ಉಚ್ಚಾರಣೆಯಲ್ಲಿ) ನಷ್ಟವಾಗಿ ಹೋಗಿತ್ತು. ಇದನ್ನು ಅವನಿಗಿಂತ ಸುಮಾರು ೧೫೦ ವರ್ಷಗಳ ಹಿಂದೆ ನಯಸೇನನಿಗೆ ಸಮಕಾಲಿಕನಾಗಿ ಇದ್ದ ಹರಿಹರನು

ನೋಡುವೊಡೊಂದಕ್ಕರಮುದು
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ ।
ಕೂಡೆ ಕವಿತತಿ ವಿಚಾರಿಸ
ಬೇಡದಱಿಂ ೞಕುಳಕ್ಷಳಂಗಳನಿದಱೊಳ್ ॥ (ಗಿರಿಜಾ ಕಲ್ಯಾಣ)

ಎಂದು ಹೇಳಿದ್ದಾನೆ. ಕೇಶಿರಾಜನು ಈ ಸಂಗತಿಯನ್ನು ಇಷ್ಟು ಸ್ಪಷ್ಟವಾಗಿ ಹೇಳಿಲ್ಲ. ಆದರೂ ಅವನು ೞಕಾರ ಶುದ್ಧಿಗಾಗಿ ಶ್ರಮ ಪಟ್ಟಿರುವುದರಿಂದ ಅವನ ಕಾಲಕ್ಕೆ ೞಕಾರಘಟಿತವಾದ ಶಬ್ದಗಳು ಯಾವ ರೂಪದಲ್ಲಿದ್ದುವು ಎಂಬುದನ್ನು ತಿಳಿಯಬಹುದು. (೧) ಱಕಾರವನ್ನು ‘ಱ’ ಕಾರವೆಂದೇ ವ್ಯವಹಾರ ಮಾಡುವಾಗ ೞಕಾರವನ್ನು

ಮಾತ್ರ ೞ (ಱಕಾರದಂತೆ ಇರುವ ೞಕಾರ) ಎಂದು ವ್ಯವಹರಿಸುತ್ತಾನೆ (ಸೂತ್ರ ೧೯ ಇತ್ಯಾದಿ). ಅದನ್ನು ಆಗಲೂ ಈಗಿನಂತೆಯೇ 'ರಳ' ಎಂದು ಕರೆಯುತ್ತಿದ್ದಿರಬಹುದು. (೨) ಜನರು ೞಕಾರಕ್ಕೂ ಳಕಾರಕ್ಕೂ ಭೇದ ಮಾಡದೆ ೞಕಾರವನ್ನು ಳಕಾರದಂತೆ ಉಚ್ಚರಿಸುತ್ತಿದ್ದದ್ದರಿಂದ ಯಾವ ಯಾವ ಶಬ್ದಗಳಲ್ಲಿ ೞಕಾರವಿರಬೇಕೆಂಬುದನ್ನೂ, ಯಾವ ಯಾವ ಶಬ್ದಗಳಲ್ಲಿ ಳಕಾರವಿತ್ತೆಂಬುದನ್ನೂ ತೋರಿಸಿ ಒಂದು ಪಟ್ಟಿಯನ್ನು ಕೊಟ್ಟಿದ್ದಾನೆ. (೩) ಕೆಲವು ಕಡೆಗಳಲ್ಲಿ ಳಕಾರವಿರಬೇಕೋ ೞಕಾರವಿರಬೇಕೋ ಅವನಿಗೇ ಸಂದೇಹ (ಸೂತ್ರ ೨೨-೨೫). (೪) ೞಕಾರವು ಸೇರಿದ ಸಂಯುಕ್ತಾಕ್ಷರಗಳನ್ನೂ ರೇಫ ಸೇರಿ ಆದ ಸಂಯುಕ್ತಾಕ್ಷರವನ್ನೂ ಪ್ರಾಸಸ್ಥಾನದಲ್ಲಿ "ಪಿರಿಯರು" ಉಪಯೋಗಿಸುತ್ತಿದ್ದರು.[1] (ಸೂತ್ರ ೨೪). ಪ್ರಾಸಸ್ಥಾನದಲ್ಲಿ ಸಮಾನಾಕ್ಷರಗಳು ಇರಬೇಕಾದದ್ದನ್ನು ನೋಡಿದರೆ, ಮೇಲಣ ಸಂದರ್ಭದಲ್ಲಿ ಕವಿಗಳು ೞಕಾರ ಘಟಿತವಾದ ಸಂಯುಕ್ತಾಕ್ಷರಗಳಲ್ಲಿಯೂ ೞಕಾರಕ್ಕೆ ಬದಲಾಗಿ ರೇಫವನ್ನೇ ಉಪಯೋಗಿಸುತ್ತಿದ್ದಂತೆ ಊಹಿಸಬಹುದಾಗಿದೆ. (೫) ಉರ್ದು, ಬಿರ್ದು, ನುರ್ಗಿದುದು, ತರ್ಗಿದುದು ಮುಂತಾದ ಶಬ್ದಗಳು ಸರೇಫ ಪದಗಳು (ಉದ್ದು, ಬಿದ್ದು, ನುಗ್ಗಿದುದು, ತಗ್ಗಿದುದು ಇತ್ಯಾದಿಯಾಗಿ ದಕಾರದ್ವಯ ಅಥವಾ ಗಕಾರದ್ವಯ ಘಟಿತವಾದವುಗಳಲ್ಲ) ಎಂದು ಸೂಚಿಸಿದ್ದಾನೆ (ಸೂತ್ರ ೩೬-೩೯). ಇದರಿಂದ ಅವನ ಕಾಲಕ್ಕೆ ಉರ್ದು ಮುಂತಾದ ಶಬ್ದಗಳಲ್ಲಿ ೞಕಾರವು ರೇಫವಾಗಿ ಪರಸವರ್ಣತೆಯನ್ನು (ಉದ್ದು ಇತ್ಯಾದಿಯಾಗಿ) ಪಡೆದಿತ್ತೆಂದು ಸೂಚಿಸಿ ಕೇಶಿರಾಜನು ('ಉೞ್ದು' ಮುಂತಾದ ಪ್ರಾಚೀನರೂಪವನ್ನು ಎತ್ತದೆ,) ತನ್ನ ಕಾಲದಲ್ಲಿ ಬಳಕೆಯಲ್ಲಿದ್ದ 'ಉದ್ದು' ಇತ್ಯಾದಿಗಳನ್ನು ತಪ್ಪೆಂದು ಖಂಡಿಸಿ, 'ಉರ್ದು' ಮುಂತಾದ ಮಧ್ಯಮ ರೂಪಗಳೇ ಸರಿಯೆಂದು ಹೇಳಿದ ಹಾಗಾಯಿತು. ಆದರೆ ಅವನೇ 'ಅೞ್ತಿ ಎಂದು ಪ್ರೀತಿ; ಅದನ್ನರ್ತಿಯೆಂದು ಪೇೞ್ವುದಬದ್ಧಂ' ಎನ್ನುತ್ತಾನೆ,

[1] ನೇಮಿಚಂದ್ರನು ಕೞ್ತಲೆ, ಮಾರ್ತಂಡ, ಸಾರ್ತಂದರ್, ಪೊೞ್ತಱೊಳ್ ಎಂಬ ಶಬ್ದಗಳನ್ನು ಪ್ರಾಸಸ್ಥಾನಗಳಲ್ಲಿ ಪ್ರಯೋಗಿಸಿದ್ದಾನೆ; ಲೀಲಾವತಿ V ೧೧೧.

(ಸೂತ್ರ ೨೩೩; ಪಟ್ಟಿ). ಉದುರ್, ಬಿದುರ್ ಇತ್ಯಾದಿಯಾದ ರೇಫಘಟಿತ ರೂಪಗಳು ಸಾಧುವೆಂದು ಹೇಳಿ ಅದರಂತೆಯೇ ಇರುವ 'ಅರ್ತಿ' ಎಂಬ ರೂಪವು ಅಶುದ್ಧವೆಂದು ಹೇಳಿರುವುದಕ್ಕೆ ಕಾರಣವು ಸ್ಪಷ್ಟವಾಗಿಲ್ಲ. ಪ್ರಾಯಶಃ ಅವನಿಗಿಂತ ಹಿಂದೆ ಇದ್ದ ಕವಿಗಳಲ್ಲಿ ಅವನಿಗೆ ಆ ರೂಪ ಸಿಕ್ಕಲಿಲ್ಲವೆಂದು ತೋರುತ್ತದೆ. ಆದರೆ ಅವನ ಪ್ರಮಾಣದ ಮೇಲೆ, ಈ ರೂಪ ಸಿಕ್ಕುವ ಕಡೆ ಅವನ್ನು ಅಚ್ಚಿ ಎಂದು ತಿದ್ದುವುದು ಸರಿಯಾಗಿ ತೋರಲಿಲ್ಲ. ಧರ್ಮಾಮೃತದ ಲಿಖಿತ ಪ್ರತಿಗಳಲ್ಲಿ ಈ ಶಬ್ದವು ಅರ್ತಿ, ಅರ್ತ್ಥಿ, ಅರ್ಥಿ, ಇತ್ಯಾದಿಯಾಗಿ ರೇಫದೊಡನೆಯೇ ದೊರೆತದ್ದರಿಂದ, ನಯಸೇನನು ತನ್ನ ಕಾಲಕ್ಕೆ ವ್ಯವಹಾರದಲ್ಲಿ ಇದ್ದಿರಬಹುದಾದ ರೇಫಘಟಿತವಾದ 'ಅರ್ತಿ' ಮುಂತಾದ ರೂಪಗಳನ್ನೇ ಉಪಯೋಗಿಸಿರಬೇಕೆಂದು ನಿಷ್ಕರ್ಷಿಸಿ ಇಂಥ ರೂಪಗಳನ್ನೇ ಈ ಗ್ರಂಥದಲ್ಲಿ ಉಪಯೋಗಿಸಿದೆ.

ಕಥಾ ಸಾರಾಂಶ

ಹತ್ತನೆಯ ಆಶ್ವಾಸ.

ಅಹಿಂಸಾವ್ರತದ ಕಥೆ.

ಮಾಳವದೇಶದ ಉಜ್ಜೈನೀ ಪಟ್ಟಣದಲ್ಲಿ ವಿಶ್ವಂಧರ ಮಹಾರಾಜನೆಂಬ ದೊರೆಯು ಆಳುತ್ತಿದ್ದನು. ಅಲ್ಲಿ ಗುಣಪಾಲನೆಂಬ ರಾಜಶ್ರೇಷ್ಠಿ ಇದ್ದನು. ಅವನಿಗೆ ಧನಶ್ರೀಯೆಂಬ ಹೆಂಡತಿಯೂ ಸುಬಂಧುಶ್ರೀಯೆಂಬ ಮಗಳೂ ಇದ್ದರು. ಒಂದು ದಿನ ವಿಶ್ವಂಧರ ಮಹಾರಾಜನು ಆನೆಯ ಮೇಲೆ ಹೋಗುತ್ತ, ಉದ್ಯಾನವನದಲ್ಲಿ ಉಯ್ಯಾಲೆಯಾಡುತ್ತಿದ್ದ ಸುಬಂಧುಶ್ರೀಯನ್ನು ಕಂಡು ಮೋಹಿಸಿ ಅವಳನ್ನು ಮದುವೆ ಮಾಡಿಕೊಡಬೇಕೆಂದು ಗುಣಪಾಲನಿಗೆ ಹೇಳಿ ಕಳುಹಿಸಿದನು. 'ದೊರೆಯು ಅಪೇಕ್ಷಿಸಿ ಹೇಳಿಕಳುಹಿಸಿದ ಮೇಲೆ ಪ್ರತಿ ಹೇಳುವುದಕ್ಕಾದೀತೇ ?' ಎಂದು ಸೆಟ್ಟಿಯು ಹೆಗ್ಗಡೆಗಳೊಡನೆ ಲೋಕಾಭಿರಾಮವಾಗಿ ಮಾತನಾಡಿ ಈ ವಿಚಾರದಲ್ಲಿ ತನ್ನ ಹೆಂಡತಿಯ ಮತ್ತು ಮಗಳ ಅಭಿಪ್ರಾಯವೇನೆಂದು ವಿಚಾರಮಾಡಿದನು. ಅವರು ಐಶ್ವರ್ಯಕ್ಕೋಸ್ಕರ ಮಿಥ್ಯಾದೃಷ್ಟಿಯೊಡನೆ ಮದುವೆಯನ್ನು ಸ್ವಲ್ಪವೂ ಒಪ್ಪಲಿಲ್ಲ. ತನ್ನ ಅಭಿಪ್ರಾಯವೂ ಅದೇ ಆಗಿದ್ದುದರಿಂದ ರಾಜನನ್ನು ಪ್ರತಿಭಟಿಸಿ ನಿಲ್ಲಲಾರದೆ, ತನ್ನ ಧನ ಕನಕ ವಸ್ತು ವಾಹನಗಳನ್ನೆಲ್ಲಾ ಬಿಸಾಟು ಮಗಳನ್ನೂ ಗರ್ಭಿಣಿಯಾಗಿದ್ದ ಹೆಂಡತಿಯನ್ನೂ ತನ್ನ ಪ್ರಾಣಮಿತ್ರನಾದ ಶ್ರೀದತ್ತನೆಂಬವನಲ್ಲಿ ಗೋಪ್ಯವಾಗಿರಿಸಿ ಯಾರಿಗೂ ತಿಳಿಯದಂತೆ ಆ ಊರನ್ನೇ ಬಿಟ್ಟು ಹೋದನು. ಮಹಾರಾಜನು ಈ ವರ್ತಮಾನವನ್ನರಿತು, ಧರ್ಮರಕ್ಷಣೆಗೋಸ್ಕರ ಆಸ್ತಿಯನ್ನೆಲ್ಲಾ ತೊರೆದು ಹೋಗಬೇಕಾದರೆ ಆ ಧರ್ಮವೇ ಶ್ರೇಷ್ಠ

ಮಾದದ್ದಾಗಿಬೇಕೆಂದು ಅದರಲ್ಲಿ ನಂಬಿಕೆ ಹುಟ್ಟಿ ಗುಣಪಾಲನನ್ನು ಹೇಗಾದರೂ ಮಾಡಿ ಹುಡುಕಿ ತರಬೇಕೆಂದು ತನ್ನ ಭಟರಿಗೆ ಅಪ್ಪಣೆ ಮಾಡಿದನು.

ಒಂದು ದಿವಸ ಶಿವಗುಪ್ತರೆಂಬಾಚಾರ್ಯರು ತ್ರಿಗುಪ್ತರೆಂಬ ತಮ್ಮ ಶಿಷ್ಯರೊಡನೆ ಚರಿಗೆ ಮಾಡಿಕೊಂಡು ಬಂದು ಶ್ರೀದತ್ತನ ಮನೆಯಲ್ಲಿ ಉಳಿದರು. ಅವರನ್ನು ಧನಶ್ರೀಯು ನಮಸ್ಕರಿಸಿ ಹೋಗಲು ಅವಳ ಸಲ್ಲಕ್ಷಣಗಳನ್ನೂ ಕಂದಿದ ಮುಖವನ್ನೂ ನೋಡಿ ತ್ರಿಗುಪ್ತರು ತಮ್ಮ ಗುರುಗಳನ್ನು 'ಈಕೆ ಯಾರು ? ಇವಳು ಏಕೆ ಈ ಹೀನಸ್ಥಿತಿಯಲ್ಲಿದ್ದಾಳೆ ?' ಎಂದು ಕೇಳಲು ಶಿವಗುಪ್ತರು ಅವಳ ವೃತ್ತಾಂತವನ್ನು ತಿಳಿಸಿ ಆಕೆಯು ಹೊಟ್ಟೆಯಲ್ಲಿ ಹುಟ್ಟತಕ್ಕ ಮಗನು ಮುಂದೆ ರಾಜನಾಗುವನೆಂದು ಹೇಳಿದರು. ಅಪರ ಕಾಲೊತ್ತುತ್ತ ಅಲ್ಲಿಯೇ ಕುಳಿತಿದ್ದ ಶ್ರೀದತ್ತನು ಇದನ್ನು ಕೇಳಿ 'ಇವಳ ಹೊಟ್ಟೆಯಲ್ಲಿ ಹುಟ್ಟುವ ಮಗನು ಈ ಭೂಮಂಡಲಕ್ಕೆ ಅಧಿಪತಿಯಾಗುತ್ತಾನೆಯೇ ! ಹಾಗಾದರೆ ಅವನನ್ನು ಹೇಗಾದರೂ ನಾಶಮಾಡಿಬಿಡಬೇಕು' ಎಂದು, ಪೂರ್ವವೈರದಿಂದ ದ್ವೇಷವನ್ನು ತಂದುಕೊಂಡು, ಧನಶ್ರೀಗೆ ಪ್ರಸವವಾಗಲು ಆಕೆಗೆ ಗರ್ಭಸ್ರಾವವಾಯ್ತೆಂದು ವರ್ತಮಾನವನ್ನು ಹುಟ್ಟಿಸಿ ಮಗುವನ್ನು ಕದ್ದು ಅದನ್ನು ಕೊಲ್ಲುವಂತೆ ಒಬ್ಬ ಹೊಲೆಯನಿಗೆ ಒಪ್ಪಿಸಿದನು. ಆದರೆ ಆ ಹೊಲೆಯನಿಗೆ ಸುಂದರವಾದ ಮಗುವನ್ನು ಕೊಲ್ಲಲು ಮನಸ್ಸು ಬಾರದೆ ನಿರ್ಜನವಾದ ಕಾಡಿಗೆ ತೆಗೆದುಕೊಂಡು ಹೋಗಿ ಅಲ್ಲಿ 'ತೀಕ್ಷ್ಣವಾದ ಈ ಬಿಸಿಲಿನಲ್ಲಿ ಅದೇ ಸತ್ತು ಹೋಗುತ್ತದೆ. ನಾನೇಕೆ ಕೈಯಾರ ಕೊಂದು ಪಾಪ ಕಟ್ಟಿಕೊಳ್ಳಲಿ !' ಎಂದು ಅದನ್ನು ಮಲಗಿಸಿ ಹೋದನು. ಆ ಕಾಡಿನಲ್ಲಿಯೇ ಶ್ರೀದತ್ತನ ಮೈದುನನಾದ ಇಂದ್ರದತ್ತಸೆಟ್ಟಿಯು ವ್ಯಾಪಾರಕ್ಕೆ ಹೋಗುತ್ತಾ ಬೀಡುಬಿಟ್ಟಿರಲು, ಅವನ ಕಡೆಯವರು ಸೌದೆ ಆರಿಸಿಕೊಳ್ಳುವುದಕ್ಕಾಗಿ ಬಂದು ಈ ಮಗುವನ್ನು ಕಂಡು ಅದನ್ನು ತೆಗೆದುಕೊಂಡು ಹೋಗಿ ತಮ್ಮ ಒಡೆಯನಿಗೆ ಕೊಟ್ಟರು. ಇಂದ್ರದತ್ತನು ಅದನ್ನು ಸಂತೋಷದಿಂದ ಮನೆಗೆ ತಂದು ತನ್ನ ಹೆಂಡತಿ

ಯಾದ ರಾಧೆಯೇ ಆ ಮಗುವನ್ನು ಹೆತ್ತಳೆಂದು ವರ್ತಮಾನವನ್ನು ಹುಟ್ಟಿಸಿ ಆ ಮಗುವನ್ನು ಸಾಕುತ್ತಾ ಬಂದನು.

ಗುಣಪಾಲಸೆಟ್ಟಿಯು ಈ ವರ್ತಮಾನವನ್ನು ಕೇಳಿ ತನ್ನ ತಂಗಿಯಾದ ರಾಧೆಗೆ ಇಷ್ಟು ದಿವಸವೂ ಮಕ್ಕಳಿಲ್ಲದೆ ಈಗ ಮಕ್ಕಳಾದದ್ದಕ್ಕೆ ಆಶ್ಚರ್ಯಪಡುತ್ತಾ ಧನಶ್ರೀಯ ಮಗುವು ಇವರಿಗೆ ಸಿಕ್ಕಿರಬಹುದೇ ಎಂದು ಸಂದೇಹಪಟ್ಟು ತಂಗಿಯ ಮನೆಗೆ ಬಂದು ನೋಡಲು, ಮಗುವು ಗುಣಪಾಲಸೆಟ್ಟಿಯ ಅಚ್ಚೊತ್ತಿದಂತಿತ್ತು. ಆದ್ದರಿಂದ ಅದನ್ನು ಕೊಲ್ಲಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ತಂಗಿಗೆ ಬಹುದಿವಸದ ಮೇಲೆ ಗಂಡು ಮಗುವಾದದ್ದಕ್ಕಾಗಿ ಸಂತೋಷವನ್ನು ನಟಿಸುತ್ತಾ ಅವರಿಂದ ಮಗು ಸಿಕ್ಕಿದ ಬಗೆಯನ್ನು ತಿಳಿದುಕೊಂಡನು. ಅನಂತರ ತಂಗಿಯನ್ನೂ ಅಳಿಯನನ್ನೂ ತನ್ನ ಊರಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ದಾದಿಯ ಸಹಾಯದಿಂದ ಮಗುವನ್ನು ಕದ್ದು, ಅದು ಸತ್ತಿತೆಂಬ ವರ್ತಮಾನವನ್ನು ಹರಡಿ, ಅದನ್ನು ಕೊಲ್ಲುವಂತೆ ಒಬ್ಬ ಮಾದಿಗನ ಕೈಗೆ ಕೊಟ್ಟನು. ಅವನು ಕರೆದುಕೊಂಡು ಹೋಗುತ್ತಾ ಅದರ ಆಟ ಪಾಟಗಳಿಗೆ ಮನಸೋತು ಅದನ್ನು ಒಂದು ಹೊಳೆಯ ದಡದಲ್ಲಿದ್ದ ಮರಳ ದಿಣ್ಣೆಯ ಮೇಲೆ ಮಲಗಿಸಿ ಹೋದನು. ಅಲ್ಲಿ ನೀರು ಕುಡಿಯುವುದಕ್ಕೆಂದು ಬಂದ ಹಸುಗಳು ಆ ಮಗುವನ್ನು ಕಂಡು ಅದರ ಸುತ್ತಮುತ್ತಲೂ ಮುತ್ತಿಕೊಂಡು ಕೆನೆಯುತ್ತಾ ಅದನ್ನು ಬಿಟ್ಟು ಹೋಗದಿರಲು ದನಕಾಯುವವರು ಹಸುಗಳನ್ನು ಹುಡುಕಿಕೊಂಡು ಬಂದು, ಮಗುವನ್ನು ಕಂಡು ಅದನ್ನು ತಮ್ಮ ಒಡೆಯನಾದ ಗೋವಿಂದನೆಂಬ ತುಱುಗಾಱನಿಗೆ ಕೊಟ್ಟರು. ಅವನು ಅದನ್ನು ತನ್ನ ಹೆಂಡತಿಯಾದ ನಂದೆಯ ಕೈಗೆ ಕೊಟ್ಟು ಮಗುವಿಗೆ ಧನಕೀರ್ತಿಯೆಂದು ಹೆಸರಿಟ್ಟು ಸಾಕುತ್ತಾ ಬಂದನು.

ಕೆಲವು ಕಾಲ ಕಳೆಯಿತು. ಆಮೇಲೆ ಒಂದು ದಿನ ಶ್ರೀದತ್ತನು ತನ್ನ ಮಗಳ ಮದುವೆಗಾಗಿ ತುಪ್ಪವನ್ನು ಕೊಳ್ಳಲೆಂದು ತುಱುಪಟ್ಟಿಗೆ ಬಂದು ಅಲ್ಲಿದ್ದ ಧನಕೀರ್ತಿಕುಮಾರನನ್ನು ನೋಡಿದನು. ಕೂಡಲೆ, ಅವನು ಗುಣಪಾಲಸೆಟ್ಟಿಯ ಮಗನೆಂದು ನಿಶ್ಚಯಿಸಿ, ಅವನೊಡನೆ ತನ್ನ

ಮಗನಿಗೆ ಒಂದು ಕಾಗದವನ್ನು ಬರೆದುಕೊಟ್ಟು ಕಳುಹಿಸಿ ಅದರಲ್ಲಿ, ಧನಕೀರ್ತಿಯನ್ನು ಕಂಡಕೂಡಲೆ ಅವನನ್ನು ಕೊಂದು ಮನೆಯ ಹಿತ್ತಿಲಲ್ಲಿ ಹೂಳಬೇಕೆಂದು ತಿಳಿಸಿದನು. ಅವನು ಉಜ್ಜಯಿನಿಗೆ ಬಂದು ಅಲ್ಲಿ ಸಿಂಪಾನದಿಯ ತಡಿಯಲ್ಲಿ ಮಲಗಿರಲು, ಅಲ್ಲಿ ಮೃಗಸೇನೆಯೆಂಬ ಸೂಳೆ ತಿರುಗಾಡುತ್ತ ಬಂದು ಅವನಲ್ಲಿದ್ದ ಓಲೆಯನ್ನು ನೋಡಿ ವ್ಯಸನಪಟ್ಟು, ಅದಕ್ಕೆ ಬದಲಾಗಿ 'ಇವನನ್ನು ಕಂಡ ಕೂಡಲೆ ನಿನ್ನ ತಂಗಿಯನ್ನು ಕೊಟ್ಟು ಮದುವೆ ಮಾಡಿಬಿಡು' ಎಂದು ಬೇರೊಂದು ಓಲೆಯನ್ನು ಬರೆದಿಟ್ಟಳು. ಅದರಂತೆ ಶ್ರೀದತ್ತನ ಮಗನಾದ ಮಹಾಬಲನು ತನ್ನ ತಂಗಿ ಶ್ರೀಮತಿಯನ್ನು ಧನಕೀರ್ತಿಗೆ ಕೊಟ್ಟು ಮದುವೆ ಮಾಡಿದನು.

ಶ್ರೀದತ್ತನು ಹಿಂತಿರುಗಿಬಂದು ತನ್ನ ಪ್ರಯತ್ನವು ವ್ಯರ್ಥವಾದದ್ದನ್ನು ನೋಡಿ, ಒಬ್ಬ ಕ್ರೂರಪುರುಷನನ್ನು ನಾಗಾಲಯದಲ್ಲಿಟ್ಟು 'ಇಲ್ಲಿಗೆ ಬಂದವನನ್ನು ಹಿಂದುಮುಂದೆ ನೋಡದೆ ತಲೆಕತ್ತರಿಸು' ಎಂದು ಗೊತ್ತುಮಾಡಿ ಅಲ್ಲಿಗೆ ಧನಕೀರ್ತಿಯೊಡನೆ ನೈವೇದ್ಯವನ್ನು ಕಳುಹಿಸಿಕೊಟ್ಟನು. ಅವನು ಹೋಗುತ್ತಿದ್ದುದನ್ನು ಮಹಾಬಲನು ಕಂಡು 'ಮದವಣಿಗನ ಕೈಯಲ್ಲಿ ಕೆಲಸಮಾಡಿಸುತ್ತಾರೆಯೇ? ನಾನು ಹೋಗುತ್ತೇನೆ' ಎಂದು ಅದನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋಗಿ ಅಲ್ಲಿ ಘಾತುಕನಿಂದ ಹತನಾದನು. ಇಷ್ಟಾದರೂ ಶ್ರೀದತ್ತನು ಹಿಂತೆಗೆಯದೆ ತನ್ನ ಹೆಂಡತಿಯನ್ನು ಕರೆದು ಅವಳಿಗೆ ನಡೆದ ಸಂಗತಿಯನ್ನೆಲ್ಲಾ ತಿಳಿಸಿ ಧನಕೀರ್ತಿಯನ್ನು ವಿಷಪ್ರಯೋಗದಿಂದ ಕೊಲ್ಲಬೇಕೆಂದು ಹೇಳಿದನು. ಅವಳು ಲಡ್ಡುಗೆಗಳನ್ನುಮಾಡಿ ದೊಡ್ಡವುಗಳಿಗೆ ವಿಷವನ್ನು ಹಾಕಿ ಚಿಕ್ಕವುಗಳನ್ನು ಹಾಗೆಯೇ ಬಿಟ್ಟದ್ದು, ಮಗಳನ್ನು ಕರೆದು ಅವಳ ಗಂಡನಿಗೆ ಬಡಿಸಬೇಕೆಂದು ಹೇಳಿ ಯಾವುದನ್ನೂ ಅರಿಯದಂತೆ ನೆರೆಮನೆಗೆ ಹೋಗಿದ್ದುಬಿಟ್ಟಳು. ಗಂಡನೆಂದು ದೊಡ್ಡ ಲಡ್ಡುಗೆಗಳನ್ನು ಕೊಟ್ಟು ಅವನನ್ನು ಕೊಲ್ಲುವಳೆಂದು ತಾಯಿಯ ಯೋಚನೆ. ಅಷ್ಟುಹೊತ್ತಿಗೆ ಸರಿಯಾಗಿ ತಂದೆಯೂ ಹಸಿದು ಬರಲು

ಇಬ್ಬರಿಗೂ ಬಡಿಸುತ್ತ, ಗಂಡನಿಗೆ ದೊಡ್ಡದನ್ನು ಬಡಿಸಿ ತಂದೆಗೆ ಚಿಕ್ಕದನ್ನು ಬಡಿಸಿದರೆ 'ತಂದೆಗಿಂತ ಇವಳಿಗೆ ಗಂಡನೇ ಹೆಚ್ಚಾದನಲ್ಲಾ' ಎಂದು ಯಾರಾದರೂ ಆಕ್ಷೇಪಿಸ ಬಹುದೆಂಬ ಶಂಕೆಯಿಂದ ಗಂಡನಿಗೆ ಚಿಕ್ಕ ಲಡ್ಡುಗೆಯನ್ನೂ ತಂದೆಗೆ ದೊಡ್ಡ ಲಡ್ಡುಗೆಯನ್ನೂ ಬಡಿಸಿದಳು. ಅದನ್ನು ತಿಂದು ಶ್ರೀದತ್ತನು ಮೃತನಾದನು. ಇದನ್ನು ನೋಡಿ ಅವನ ಹೆಂಡತಿಯಾದ ವಿಶಾಖೆಯು ನಡೆದ ಸಂಗತಿಯನ್ನೆಲ್ಲಾ ಹೇಳಿ, ಧನಕೀರ್ತಿಯು ಗುಣಪಾಲನ ಮಗನೆಂದು ತಿಳಿಸಿ ತಾನೂ ನಂಜಿನ ಲಡ್ಡುಗೆಗಳನ್ನು ತಿಂದು ಸತ್ತುಹೋದಳು.

ಇದೆಲ್ಲಾ ಮಹಾರಾಜನ ಕಿವಿಗೆ ಬೀಳಲು, ಅವನು ಬಂದು ಧನಕೀರ್ತಿಯ ತೇಜಸ್ಸನ್ನು ನೋಡಿ ಮೆಚ್ಚಿ ಅವನನ್ನು ಅರಮನೆಗೆ ಕರೆದು ಕೊಂಡುಹೋಗಿ ಉಪಚರಿಸುತ್ತ ಅವನಿಗೆ ತನ್ನ ಮಗಳಾದ ವಿಶ್ವಾವತಿಯನ್ನೂ ಅರ್ಧರಾಜ್ಯವನ್ನೂ ಕೊಡಬೇಕೆಂದು ಯೋಚಿಸುತ್ತಿದ್ದನು. ಅಷ್ಟು ಹೊತ್ತಿಗೆ ಗುಣಪಾಲನು ಕೌಶಾಂಬಿಯಲ್ಲಿ ಇರುವುದಾಗಿ ವರ್ತಮಾನ ಬಂತು. ಅವನನ್ನು ಕರೆಸಿ ಅವನ ಅನುಮತಿಯಿಂದ ಮದುವೆಯನ್ನು ನೆರವೇರಿಸಿ ಅರ್ಧರಾಜ್ಯವನ್ನು ಅಳಿಯನಿಗೆ ಬಳುವಳಿಯಾಗಿ ಕೊಟ್ಟನು.

ಕೆಲವು ದಿವಸದಮೇಲೆ ಯಶೋಧರರೆಂಬ ಋಷಿಗಳು ಆವೂರಿಗೆ ಬರಲು, ಗುಣಪಾಲನು 'ಧನಕೀರ್ತಿಗೆ ಶ್ರೀದತ್ತನು ತಂದೊಡ್ಡಿದ ಐದು ಕಂಟಕಗಳೂ ಪರಿಹಾರವಾಗಿ ರಾಜ್ಯಪ್ರಾಪ್ತಿಯಾದದ್ದು ಯಾವಪುಣ್ಯದಿಂದ ?' ಎಂದು ಕೇಳಿದನು. ಅದಕ್ಕೆ ಅವರು ಹಿಂದಿನ ಜನ್ಮದ ಕಥೆಯನ್ನು ಹೇಳಿದರು :—

"ಹಿಂದೆ ಮೃಗಸೇನನೆಂಬ ಬೆಸ್ತರವನಿದ್ದನು. ಅವನು ಒಂದುದಿನ ಧರ್ಮಶ್ರವಣಮಾಡಿ ಯಾವುದಾದರೂ ಒಂದು ವ್ರತ ಬೇಕೆಂದು ಗುರುಗಳನ್ನು ಕೇಳಿದನು. ಅದಕ್ಕೆ ಗುರುಗಳು 'ನೀನು ಮೊದಲು ಸಿಕ್ಕಿದ ಮೀನನ್ನು ಬಿಟ್ಟುಬಿಡು ; ಇದೇ ವ್ರತ' ಎಂದು ಹೇಳಿದರು. ಅನಂತರ

ಅವನು ಬಲೆ ಬೀಸುತ್ತಾ ಹೋಗಲು, ಎಲ್ಲೆಲ್ಲಿ ಬಲೆಹಾಕಿದರೂ ಮೊದಲು ಸಿಕ್ಕಿದ ಮೀನೇ ಸಿಕ್ಕುತ್ತ ಇತ್ತು. ಐದುಸಾರಿ ಪ್ರಯತ್ನಮಾಡಿ, ಐದು ಸಾರಿಯೂ ಅದೇ ಮೀನೇ ಬಂದುದರಿಂದ ಅದನ್ನು ಐದುಸಾರಿಯೂ ಬಿಟ್ಟು, ಬರಿಯ ಬಲೆಯನ್ನು ಬೆನ್ನಿಗೆ ಹಾಕಿಕೊಂಡು ಹೋದನು. ಅದನ್ನು ಕಂಡು ಅವನ ಹೆಂಡತಿ ಘಂಟೆ ಯೆಂಬವಳು ಆಕ್ಷೇಪಿಸಲು ಶ್ರಾವಕನಾಗುತ್ತೇನೆಂದು ಮನೆಬಿಟ್ಟು ಬರುತ್ತ ಕತ್ತಲೆಯಲ್ಲಿ ಹಾವು ಕಡಿದು ಸತ್ತುಹೋದನು ; ಘಂಟೆಯೂ ಅವನ ವ್ರತವನ್ನು ಹಿಡಿದೆನೆಂದು ಕೊಂಡು ಅವನೊಡನೆಯೇ ಸತ್ತುಹೋದಳು. ಆಮೇಲೆ ಆ ಮೃಗ ಸೇನನೆಂಬ ಬೆಸ್ತನು ಧನಕೀರ್ತಿಯಾಗಿ ಹುಟ್ಟಿ ಮೀನನ್ನು ಐದುಸಾರಿ ಬಿಟ್ಟ ಫಲದಿಂದ ಶ್ರೀದತ್ತನ ಐದು ಕಂಟಕಗಳಿಂದ ಪಾರಾಗಿ ರಾಜ್ಯ ವನ್ನು ಪಡೆದನು. ಘಂಟೆಯು ಶ್ರೀಮತಿಯಾದಳು. ಆ ಮೀನು ಮೃಗಸೇನೆಯೆಂಬ ಸೂಳೆಯಾಗಿ ಹುಟ್ಟಿತು."

ಇದನ್ನು ಕೇಳಿ ವಿಶ್ವಂಧರ ಗುಣಪಾಲರೂ, ಅವರ ಹೆಂಡಿರೂ ದೀಕ್ಷೆಯನ್ನು ಕೈಕೊಂಡರು. ಧನಕೀರ್ತಿಯು ಬಹುಕಾಲ ರಾಜ್ಯ ವಾಳುತ್ತಿದ್ದು ಒಂದುದಿನ ತನ್ನ ಕೆನ್ನೆಯ ಮೇಲಣ ನರೆಯನ್ನು ನೋಡಿ ವೈರಾಗ್ಯಹುಟ್ಟಲು, ಸುಕೀರ್ತಿಯೆಂಬ ತನ್ನ ಮಗನಿಗೆ ರಾಜ್ಯವನ್ನು ಒಪ್ಪಿಸಿ ತಾನು ಸಂನ್ಯಾಸವನ್ನು ವಹಿಸಿದನು. ಶ್ರೀಮತಿಯೂ ದೀಕ್ಷೆ ಯನ್ನು ತೆಗೆದುಕೊಂಡಳು. ಇವರೆಲ್ಲರಿಗೂ ಒಳ್ಳೊಳ್ಳೆಯ ಲೋಕ ಗಳು ಪ್ರಾಪ್ತವಾದುವು.

ಹನ್ನೊಂದನೆಯ ಆಶ್ವಾಸ

ಸತ್ಯವ್ರತದ ಕಥೆ

ವೆಂಗಿದೇಶದಲ್ಲಿ ಪ್ರತಿಪಾಲಪುರವೆಂಬುದೊಂದು ಪಟ್ಟಣ. ಅಲ್ಲಿ ಧನದಮಹಾರಾಜನೆಂಬ ರಾಜನು ಆಳುತ್ತಿದ್ದನು. ಅವನು ಆ ಪುರಿನಲ್ಲಿದ್ದ ಸಂಘಶ್ರೀ ಎಂಬ ಬೌದ್ಧನ ಮಗಳಾದ ಕಮಲಶ್ರೀ ಎಂಬಾಕೆಯ ರೂಪವನ್ನು ಕೇಳಿ ಮೋಹಗೊಂಡು ಅವಳನ್ನು ಮದುವೆಯಾಗಿ ಸುಖದಿಂದಿರುತ್ತ ಕೆಲವುಕಾಲದ ಮೇಲೆ ತನ್ನ ಧರ್ಮವನ್ನು ಅಲಕ್ಷ್ಯ ಮಾಡಿದ್ದಕ್ಕಾಗಿ ವ್ಯಥೆಪಟ್ಟು ಕಮಲಶ್ರೀಗೆ ಉಪದೇಶಮಾಡಿ ಅವಳನ್ನು ಜೈನಧರ್ಮದ ಕಡೆಗೆ ತಿರುಗಿಸಿದನು. ಅದರಂತೆ ಸಂಘಶ್ರೀಯನ್ನೂ ಬೌದ್ಧಧರ್ಮದಿಂದ ಬಿಡಿಸಿ ಜಿನಧರ್ಮವನ್ನು ಅವಲಂಬಿಸುವಂತೆ ಮಾಡಬೇಕೆಂದು ಅವನಿಗೆ ತನ್ನ ಧರ್ಮವನ್ನು ಪರಿಪರಿಯಾಗಿ ಬೋಧಿಸಿದನು; ಆದರೂ ಅವನು ತನ್ನ ಮಾರ್ಗಕ್ಕೆ ಬರಲಿಲ್ಲ.

ಒಂದುದಿನ ಚಾರಣ ಋಷಿಗಳು ಅಂತರಿಕ್ಷದಲ್ಲಿ ಪ್ರಯಾಣ ಮಾಡುತ್ತಿದ್ದರು. 'ಇದು ಜಿನಧರ್ಮದ ಮಹಿಮೆ, ನೋಡು!' ಎಂದು ಸಂಘಶ್ರೀಗೆ ಅದನ್ನು ತೋರಿಸಿದನು. ಸಂಘಶ್ರೀಯು ಅದನ್ನು ನೋಡಿ ಮನಸ್ಸಿನಲ್ಲಿದ್ದ ಶಂಕೆಯನ್ನು ತೊರೆದು ಜಿನಮತವನ್ನು ನಂಬಿ ಶ್ರಾವಕ ವ್ರತಗಳನ್ನು ಕೈಕೊಂಡು ಸುಖದಿಂದಿದ್ದನು.

ಒಂದುದಿನ ಅವನ ಗುರುವಾದ ಬುದ್ಧಶ್ರೀಯೆಂಬ ಭಿಕ್ಷುವು ಬಂದು ಅವನಿಗೆ ದುರ್ಬೋಧನೆಮಾಡಿ ಪುನಃ ಬೌದ್ಧಮತಕ್ಕೆ ತಿರುಗಿಸಿದನು. ಅದನ್ನು ತಿಳಿದು ಧನದ ಮಹಾರಾಜನು ಪುನಃ ಅವನಿಗೆ ಜೈನಧರ್ಮವನ್ನು ಬೋಧಿಸಲು ಮೊದಲುಮಾಡಿದನು. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಒಂದುದಿನ ನೆರೆದ ಸಭೆಯಲ್ಲಿ ಅವನಿಗೆ ಬೋಧಿಸುತ್ತ 'ನೀನು ಅಂದು ಅಂತರಿಕ್ಷದಲ್ಲಿ ಹೋಗುತ್ತಿದ್ದ ಚಾರಣಋಷಿಯು

ರನ್ನು ನೋಡಿದುದು ಉಂಟೇ ಇಲ್ಲವೇ ? ' ಎಂದು ಕೇಳಲು ಅವನು 'ಇಲ್ಲ' ವೆಂದು ಸುಳ್ಳುಹೇಳಿದನು. ಕೂಡಲೇ ಅಲ್ಲಿಯ ಪುರದೇವತೆಗಳೆಲ್ಲಾ ಬಂದು ಕೋಪದಿಂದ ಅವನ ಎರಡು ಕಣ್ಣುಗಳನ್ನೂ ಕಿತ್ತುಹಾಕಿದರು. ಸಭಿಕರೆಲ್ಲರೂ ಬಾಯಿಗೆ ಬಂದಹಾಗೆ ಬೈದರು. ಹೀಗೆ ಸಂಘಶ್ರೀಯು ಕಣ್ಣು ಕಳೆದುಕೊಂಡು ಅವಮಾನಪಟ್ಟು ಆ ಕೊರಗಿನಲ್ಲಿಯೇ ಸತ್ತುಹೋದನು. ಅವನಿಗೆ ರೌರವನರಕ ಪ್ರಾಪ್ತಿಯಾದದ್ದಲ್ಲದೆ ಅವನ ವಂಶದಲ್ಲಿ ಏಳು ತಲೆಯುವರೆಗೂ ಹುಟ್ಟಿದ ಮಕ್ಕಳೆಲ್ಲವೂ ಕುರುಡಾಗಿದ್ದುವು. ಆ ದೇಶಕ್ಕೆ ಅಂಧಕವಿಷಯವೆಂದು ಹೆಸರು ಬಂತು.

ಧನದ ಮಹಾರಾಜನು ತನ್ನ ಮಗನಾದ ಇಂದ್ರಗುಪ್ತನಿಗೆ ರಾಜ್ಯವನ್ನು ಒಪ್ಪಿಸಿ ತಪಸ್ಸಿನಿಂದ ಕೈವಲ್ಯವನ್ನು ಪಡೆದನು.

ಹನ್ನೆರಡನೆಯ ಆಶ್ವಾಸ

ಅಸ್ತೇಯವ್ರತದ ಕಥೆ

ಅವಂತೀದೇಶದ ಉಜ್ಜಯಿನೀ ಪಟ್ಟಣದಲ್ಲಿ ಧರ್ಮಧರ ಮಹಾರಾಜನೆಂಬ ದೊರೆಯು ಆಳುತ್ತಿದ್ದನು. ಅಲ್ಲಿ ಜಿನದತ್ತನೆಂಬ ರಾಜಶ್ರೇಷ್ಠಿಯಿದ್ದನು. ಅವನ ಹೆಂಡತಿ ಜಿನೇಂದ್ರದಾಸಿ. ಅವರ ಮಗ ಜಿನದಾಸ. ಇವರು ಸುಖದಿಂದ ಜೀವಿಸುತ್ತಿರಲು ಒಂದುದಿನ ಜಿನಪಾಲಿತರೆಂಬ ಋಷಿಗಳು ಆ ಊರಹತ್ತಿರಕ್ಕೆ ಬಂದು ಕತ್ತಲೆಯಾದ್ದರಿಂದ ಮುಂದಕ್ಕೆ ಹೋಗದೆ ಗಂಧವತಿಯೆಂಬ ನದಿಯ ತಡಿಯಲ್ಲಿ ಸ್ಮಶಾನದೊಳಗೆ ಮಲಗಿದರು. ಇತ್ತಲಾಗಿ ಉಜ್ಜಯಿನಿಯಿಂದ ಅದೇ ರಾತ್ರಿ ವಿಡಂಬನೆಂಬ ಸಾಧಕನು ನಿಧಿಸಿಕ್ಷೇಪವನ್ನು ಸಾಧಿಸುವುದಕ್ಕೋಸ್ಕರ ಅಲ್ಲಿಗೆ ಬಂದು ಜಿನಪಾಲಿತ ಮುನಿಯನ್ನು ಹೆಣವೆಂದು ಭಾವಿಸಿ ಅವರ ದೇಹದ ಹತ್ತಿರಕ್ಕೆ ಮತ್ತೆರಡು ಹೆಣಗಳನ್ನು ಎಳೆದು ತಂದುಹಾಕಿ ಆ ತಲೆಗಳನ್ನು ಒಲೆಯ ಗುಪ್ಪುಗಳಾಗಿ ಮಾಡಿಕೊಂಡು ಅಲ್ಲಿ ಬೆಂಕಿಯನ್ನು ಹೊತ್ತಿಸಿ ಚರುವನ್ನು ಮಾಡುತ್ತಿದ್ದನು. ಆದರೆ ಜಿನಪಾಲಿತಮುನಿ ಮಾತ್ರ ಅಲ್ಲಾಡದೆ ಸ್ಥಿರವಾಗಿ ಮಲಗಿದ್ದನು. ಸ್ವಲ್ಪಹೊತ್ತಿಗೆ ತೋಳಿನ ಬುಡವು ಹತ್ತಿಕೊಂಡು ಅಲ್ಲಿದ್ದ ನರಗಳು ಕಿತ್ತುಹೋಗಲು ತೋಳು ತನ್ನ ಷ್ಟಕ್ಕೆ ತಾನೇ ನೆಗೆಯಿತು. ಅದನ್ನು ಕಂಡು ವಿಡಂಬನು ಹೆದರಿ, ಬಿಟ್ಟಿದ್ದನ್ನು ಬಿಟ್ಟು ಹಿಂದುಮುಂದು ನೋಡದೆ ಓಡಿಹೋದನು. ಜಿನಪಾಲಿತಮುನಿಯು ಅವನು ಓಡಿದುದರಿಂದ ಆದ ಪ್ರಾಣಹಿಂಸೆಯನ್ನು ನೆನೆದು ವ್ಯಥೆಪಡುತ್ತಿರಲು ನಗರದೇವತೆಗಳು ಆತನ ಮನಸ್ಸಿನ ಧೈರ್ಯಕ್ಕೂ ಜೀವದಯೆಗೂ ಮೆಚ್ಚಿ ಆತನನ್ನು ಪೂಜಿಸಿ ಸ್ತುತಿಸಿದರು. ಮಾರನೆಯದಿನ ಬೆಳಗ್ಗೆ ಜಿನದತ್ತನು ಆತನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ

ದೇಹಾರದಲ್ಲಿ ಇಳಿಸಿ ತಾನೇ ಔಷಧಿ ಪಥ್ಯಪಾನಗಳನ್ನು ಕೊಡುತ್ತಾ ಸೇವಿಸುತ್ತಿದ್ದನು. ಹುಣ್ಣೆಲ್ಲವೂ ಮಾಯಲು, ಮುನಿಯು ಸಂಚಾರಕ್ಕೆ ಹೊರಟನು. ಜಿನದತ್ತನೂ ಅವನನ್ನು ಅಗಲಲಾರದೆ ಸ್ವಲ್ಪದೂರ ಹಿಂಬಾಲಿಸುತ್ತ ಹೋದನು. ಇದನ್ನು ನೋಡಿದ ಅವನ ಮಗನು ತನಗೆ ಅವಕಾಶ ಸಿಕ್ಕಿತೆಂದು ಬಂಗಾರವನ್ನಿಟ್ಟಿದ್ದ ಕೊಟಡಿಯ ಬಾಗಿಲನ್ನು ತೆಗೆದು ಬಂಗಾರಕ್ಕೆ ಕೈಹಾಕುತ್ತಿರಲು, ಅಷ್ಟುಹೊತ್ತಿಗೆ ಸರಿಯಾಗಿ ಜಿನದತ್ತನು ಬಾಗಿಲಿಗೆ ಬಂದನು. ಜಿನದಾಸನು ತಂದೆ ಬಂದುದನ್ನು ತಿಳಿದು ಚಿನ್ನದ ಹಿಂದೆಯೇ ಅವಿತುಕೊಂಡನು. ತಂದೆಯು ಚಿನ್ನ ಕಡಿಮೆಯಾಗಿದ್ದುದನ್ನು ನೋಡಿ ಕೋಣೆಯನ್ನೆಲ್ಲಾ ಹುಡುಕಿ ಕಳ್ಳರಾರನ್ನೂ ಕಾಣದೆ ಜಿನಪಾಲಿತಮುನಿಯೇ ಕದ್ದುಕೊಂಡಿರಬೇಕೆಂದು ನಿಶ್ಚಯಿಸಿ ಅವನನ್ನು ಒಳ್ಳೆಯಮಾತಿನಿಂದ ಪುನಃ ತನ್ನ ಮನೆಗೆ ಕರೆದುಕೊಂಡು ಬಂದು ದುರ್ಜನನಾಗದಂತೆ ಉಪಾಯದಿಂದ ತನ್ನ ಬಂಗಾರವನ್ನು ಬರಮಾಡಿಕೊಳ್ಳುವೆನೆಂದು ಆತನಿಗೆ ಈ ಕಥೆಯನ್ನು ಹೇಳಲುಪಕ್ರಮಿಸಿದನು—

ವ್ಯಾಘ್ರಖೇಡವೆಂಬುದೊಂದು ಪಟ್ಟಣ. ಅಲ್ಲಿ ದಿನಕರನೆಂಬವನೊಬ್ಬನಿದ್ದನು. ಕರಾಳನೆಂಬ ಅವನ ಮಗನು ಕೆಟ್ಟವರ ಸಹವಾಸಕ್ಕೆ ಬಿದ್ದು ಒಂದುದಿವಸ ಅರಮನೆಗೆ ಕನ್ನವಿಕ್ಕಿ ಹೊನ್ನನ್ನು ಕದ್ದುಕೊಂಡುಹೋಗುತ್ತಿರುವಾಗ, ತಳಾರರು ಅಟ್ಟಿಕೊಂಡು ಬರಲು ಒಬ್ಬ ವರ್ತಕನ ಮರೆಹೊಕ್ಕನು. ಆ ವರ್ತಕನು ಕರುಣೆಯಿಂದ ಅವನನ್ನು ತನ್ನ ಹೊದಿಕೆಯೊಳಗೆ ಸೇರಿಸಿಕೊಂಡು ತಳಾರರಿಗೆ ಅಲ್ಲಿ ಯಾರೂ ಇಲ್ಲವೆಂದು ಹೇಳಿ ಕಳುಹಿಸಿದನು. ಆದರೂ ಈ ಉಪಕಾರವನ್ನು ನೆನೆಯದೆ ಕರಾಳನು ಒಳಗಿದ್ದ ಹಣದ ಚೀಲವನ್ನು ನೋಡಿ ಅದರ ಆಸೆಗೆ ಆ ವರ್ತಕನನ್ನು ಕೊಂದು ಆ ಹಣವನ್ನು ಕದ್ದುಕೊಂಡುಹೋದನು. ಹೀಗೆ ಕೆಲವರು ತಮ್ಮ ದೌರ್ಜನ್ಯವನ್ನೇ ತೋರಿಸುತ್ತಾರೆಯಲ್ಲದೆ ಉಪಕಾರವನ್ನು ಸ್ಮರಿಸುವುದಿಲ್ಲ.

ಜಿನಪಾಲಿತ ಮುನಿಯು ಈ ಕಥೆಯನ್ನು ಕೇಳಿ ಆಶ್ಚರ್ಯಪಟ್ಟು ಬಹುಶಃ ಇವನ ಮನೆಯಲ್ಲಿ ಯಾವುದೋ ಕಳುವಾಗಿದೆ;

ಅದನ್ನು ನಾನು ಕದ್ದಿರಬೇಕೆಂಬ ಭ್ರಾಂತಿಯಿಂದ ಹೀಗೆ ಹೇಳುತ್ತಿರಬಹುದು. ಪಾಪ ! ಇವನೇನು ಮಾಡಿಯಾನು ? ಇದೆಲ್ಲಾ ದುಷ್ಕರ್ಮದ ಫಲ ಎಂದು ನಿರ್ಧರಿಸಿ ಉತ್ತರವಾಗಿ ತಾನೂ ಒಂದು ಕಥೆಯನ್ನು ಹೇಳಿದನು.—

ದ್ವಾರಾವತಿಯೆಂಬ ಪಟ್ಟಣದಲ್ಲಿ ನಾರಾಯಣನೆಂಬ ರಾಜನು ಆಳುತ್ತಿದ್ದನು. ಅಲ್ಲಿಗೆ ದಂಡಕರೆಂಬ ಋಷಿಗಳು ಬರಲು, ಅವರ ದೇಹಸ್ಥಿತಿ ಸರಿಯಾಗಿಲ್ಲದಿದ್ದುದರಿಂದ, ನಾರಾಯಣನು ಅವರನ್ನು ಕರೆದುಕೊಂಡುಹೋಗಿ ಚಾತುರ್ಮಾಸ್ಯವನ್ನು ಅಲ್ಲಿಯೇ ಕಳೆಯಬೇಕೆಂದು ಹೇಳಿ ಒಪ್ಪಿಸಿ, ಔಷಧಿ ಪಥ್ಯಪಾನಾದಿಗಳಿಂದ ಉಪಚರಿಸುತ್ತಿದ್ದನು. ರೋಗ ವಾಸಿಯಾದನಂತರ ವೈದ್ಯನು ಬಂದು ರಾಜನಿಂದ ಸನ್ಮಾನಪಡೆಯಲು 'ತಮ್ಮ ದೇಹಸ್ಥಿತಿ ಈಗ ಅನುಕೂಲವಾದುದಕ್ಕೆ ಸಂತೋಷ' ಎಂದು ಋಷಿಗಳನ್ನು ಕುರಿತು ಹೇಳಿದನು. ಅದಕ್ಕೆ ಅವರು 'ಕರ್ಮದಿಂದ ದುಃಖ ಬರುತ್ತದೆ; ಅದರ ಉಪಶಮದಿಂದ ಇದೂ ಶಾಂತವಾಗುತ್ತದೆ' ಎಂದರು. ಆದರೆ ವೈದ್ಯನಿಗೆ ತನ್ನ ಔಷಧದ ಮಾಹಾತ್ಮ್ಯವನ್ನು ಹೊಗಳದೆ ಹೋದರಲ್ಲಾ ಎಂದು ಕೋಪಹುಟ್ಟಿ ಕೆಲವು ಕಾಲಕ್ಕೆ ಸತ್ತು ಒಂದು ಕೋಡಗದ ಜನ್ಮವನ್ನು ಪಡೆದನು. ದಂಡಕರೂ ಒಂದುದಿವಸ ಆ ಕಪಿಯಿದ್ದ ಕಾಡಿಗೆ ಹೋಗಿ ಒಂದು ಮಾವಿನ ಮರದ ಕೆಳಗಿದ್ದಾಗ ಪೂರ್ವವೈರದಿಂದ ಆ ಕಪಿಯು ಒಂದು ಒಣಗಿದ ಮಾವಿನ ಕೊಂಬೆಯನ್ನು ಕಿತ್ತು ಋಷಿಯ ತೊಡೆಯನ್ನು ಇಬ್ಭಾಗವಾಗುವಂತೆ ಚುಚ್ಚಿತು. ಆದರೆ ಋಷಿಯೇನೋ ಕದಲಲಿಲ್ಲ. ಆ ಧೈರ್ಯವನ್ನು ಕಪಿಯು ನೋಡಿ ಆಶ್ಚರ್ಯಪಟ್ಟು ಮರುಗಿ ಇತರ ಕೋತಿಗಳ ಸಹಾಯದಿಂದ ಆ ಕೊಂಬೆಯನ್ನು ಕಿತ್ತು, ತನಗೆ ವೈದ್ಯಜ್ಞಾನವಿದ್ದುದರಿಂದ ತಕ್ಕ ಚಿಕಿತ್ಸೆಮಾಡಿ, ವ್ರಣವನ್ನು ವಾಸಿಮಾಡಿತು. ಹೀಗೆ ಕೆಲವು ಮೂರ್ಖರು ಅವಿಚಾರಿಗಳಾಗಿ ಸಾಧುಗಳನ್ನು ಸುಮ್ಮನೆ ಕಾಡುವರು.

ಈ ಕಥೆಯನ್ನು ಕೇಳಿ ಜಿನದತ್ತನು ಸ್ವಲ್ಪಹೊತ್ತು ಸುಮ್ಮನಿದ್ದು ಮತ್ತೊಂದು ಕಥೆಯನ್ನು ಹೇಳಿದನು.—

ಭಾನುಪುರವೆಂಬುದೊಂದು ಊರು. ಅಲ್ಲಿ ಕಪಿಲನೆಂಬ ಹಾರುವ ನಿದ್ದನು. ಆತನು ಗಾರುಡವಿದ್ಯೆಯನ್ನು ಕಲಿಯದೆ ಲಾಭವೂ ಕೀರ್ತಿಯೂ ಬರುವುದಿಲ್ಲವೆಂದುಕೊಂಡು ಪೂರ್ವದೇಶಕ್ಕೆ ಹೋಗಿ ಅಲ್ಲಿ ಪ್ರಸಿದ್ಧನಾದ ಒಬ್ಬ ಮಂತ್ರವಾದಿಯಿಂದ ಅದನ್ನು ಕಲಿತು ಬರುತ್ತ ದಾರಿಯಲ್ಲಿ ಒಂದು ಹುಲಿ ಸತ್ತುಬಿದ್ದಿದ್ದುದನ್ನು ನೋಡಿದನು. ಅದು ಹಾವುಕಚ್ಚಿ ಸತ್ತುಹೋಗಿತ್ತೆಂದು ತಿಳಿದು ಮಂತ್ರಹಾಕಿ ಅದನ್ನು ಎಬ್ಬಿಸಿದನು. ಆ ಹುಲಿಯು ಎದ್ದು ತನ್ನ ಪ್ರಾಣವನ್ನು ಕೊಟ್ಟವನೆಂಬ ಉಪಕಾರವನ್ನು ನೆನೆಯದೆ ಅವನನ್ನು ಹಿಡಿದು ಸೀಳಿ ತಿಂದುಹಾಕಿತು. ಇದು ಯಾವ ಧರ್ಮ!

ಈಗ ಜಿನದತ್ತನ ಮನೋವೃತ್ತಿಯು ಸ್ಪಷ್ಟವಾಗಿ ತಿಳಿದು ಮುನಿಯು ಮತ್ತೊಂದು ಕಥೆಯನ್ನು ಹೇಳಿದನು:—

ಕೇಸರೀಪುರವೆಂಬುದೊಂದು ಊರು; ಅಲ್ಲಿ ವಾಸವನೆಂಬ ರಾಜನು ಆಳುತ್ತಿದ್ದನು. ಆ ಪುರಿನ ರಾಜಶ್ರೇಷ್ಠಿಯಾದ ಅಮಲನೆಂಬವನ ಮಗನಾದ ವಿಮಲನೆಂಬ ಹುಡುಗನು ಒಡವೆವಸ್ತುಗಳನ್ನು ಹಾಕಿಕೊಂಡು ತನ್ನ ಮನೆಯ ಅಂಗಳದಲ್ಲಿ ಆಡುತ್ತಿರಲು ನೆರೆಮನೆಯಾಕೆ ಕಂಡು ಒಡವೆಯಾಸೆಗೆ ಆ ಮಗುವನ್ನು ಕೊಂದು ಅದರ ಹೆಣವನ್ನು ಬೀದಿಯಲ್ಲಿ ತಿರುಗುವ ಬಸವನ ಕೊಂಬಿಗೆ ಸಿಕ್ಕಿಸಿದಳು. ಸೆಟ್ಟಿಯು ಮಗನನ್ನು ಕಾಣದೆ ಹುಡುಕುತ್ತ ಬಂದು ಬಸವನ ಕೋಡಿನಲ್ಲಿ ಅವನ ಹೆಣವನ್ನು ಕಾಣಲು ಬಹುದುಃಖವಾಯಿತು. ಅದೇ ಕೊಂದುಹಾಕಿತೆಂಬ ಭ್ರಾಂತಿಯಿಂದ ಊರವರೆಲ್ಲರೂ ಅದನ್ನು ನಾನಾವಿಧವಾಗಿ ಹಿಂಸೆಮಾಡುವುದಕ್ಕೆ ಮೊದಲುಮಾಡಿದರು. ಅದು ಅವರ ಹಿಂಸೆಯನ್ನು ತಡೆಯಲಾರದೆ ಓಡಾಡುತ್ತ ಹೋಗಿ ತನ್ನ ಶುದ್ಧಗುಣವನ್ನು ತೋರಿಸುವುದಕ್ಕೋ ಎಂಬಂತೆ ಕಮ್ಮಾರನ ಮನೆಗೆಹೋಗಿ ಅವನು ಕಾಯಿಸುತ್ತಿದ್ದ ಕಬ್ಬಿಣವನ್ನು ಕಚ್ಚಿ ಗುಂಪಿಗೆ ಇದಿರಾಗಿ ಬಂತು. ಅದನ್ನು ನೋಡಿ ಅವರು ಬೆರಗಾಗಿ 'ಇದು ಎಂದಿಗೂ ಮಗುವನ್ನು ಕೊಂದಿರಲಾರದು. ಯಾರೋ ದುರಾತ್ಮರು ಒಡವೆಯ ಆಸೆಗಾಗಿ ಹೀಗೆ ಮಾಡಿ ತಮ್ಮ

ತಪ್ಪನ್ನು ಬಡ ಬಸವನ ಮೇಲೆ ಹಾಕಿದ್ದಾರೆ. ನಿಜವಾದ ಕಳ್ಳರನ್ನು ಕಂಡುಹಿಡಿಯಬೇಕು' ಎಂದು ತಳಾರನಿಗೆ ನೇಮಿಸಲು ಅವನು ಉಪಾಯದಿಂದ ಆ ಕಳ್ಳಹೆಂಗಸನ್ನು ಕಂಡು ಹಿಡಿದನು. ಪ್ರಜೆಗಳೆಲ್ಲರೂ ಆ ಮೇಲೆ 'ಆ ಬಡ ಪ್ರಾಣಿಯನ್ನು ಅನ್ಯಾಯವಾಗಿ ಹೊಡೆದು ಗೋಳಾಡಿಸಿದೆವಲ್ಲಾ' ಎಂದು ವ್ಯಸನಪಟ್ಟರು. ಆದ್ದರಿಂದ ಅವಿಚಾರಿಗಳಾಗಬಾರದು. ಯಾವುದನ್ನೂ ಸರಿಯಾಗಿ ವಿಚಾರಿಸಿ ಮಾಡಬೇಕು.

ಸೆಟ್ಟಿಯು ಉತ್ತರವಾಗಿ ಮತ್ತೊಂದು ಕಥೆಯನ್ನು ಹೇಳಿದನು:—

ಭಾರತಿ ಎಂಬ ನದಿಯ ತೀರದಲ್ಲಿ ಕಪಾಲಿ ಎಂಬ ಒಬ್ಬ ತಪಸ್ವಿಯಿದ್ದನು. ಒಂದುದಿನ ಆ ಹೊಳೆಯಲ್ಲಿ ಪ್ರವಾಹ ಬಂದು ಅದರಲ್ಲಿ ಒಂದು ಆನೆಯ ಮರಿಯು ಕೊಚ್ಚಿಕೊಂಡು ಬರುತ್ತಿರಲು ಅದನ್ನು ಹಿಡಿದು ಕಟ್ಟಿಹಾಕಿ ಕಾಪಾಡುತ್ತ ಬಂದನು. ಕೆಲವು ದಿವಸಕ್ಕೆ ಅದು ಪಟ್ಟದಾನೆಗಿಂತಲೂ ಚೆನ್ನಾಗಲು ಆ ವರ್ತಮಾನವು ರಾಜನ ಕಿವಿಗೆ ಮುಟ್ಟಿ ಅವನು ಅದನ್ನು ತನಗೆ ಕೊಡಬೇಕೆಂದು ಹೇಳಿಕಳುಹಿಸಿದನು. ತಪಸ್ವಿಯು ಹೆದರಿಕೊಂಡು ಕಳುಹಿಸಿಕೊಟ್ಟನು. ಆದರೆ ಅದು ಅರಮನೆಯಲ್ಲಿರದೆ ಕಾಪಿನವರನ್ನು ಕೊಂದು ತನ್ನ ಮೊದಲಿನ ಸ್ಥಳಕ್ಕೇ ಓಡಿಹೋಯಿತು. ಮತ್ತೆ ತರಿಸಿಕೊಂಡನು; ಮತ್ತೆ ಓಡಿಹೋಯಿತು. ಹೀಗೆ ಹಲವುಸಾರಿ ನಡೆಯಲು ರಾಜನು ಕೋಪಿಸಿಕೊಂಡು 'ನನಗೆ ಕೊಟ್ಟುಬಿಟ್ಟ ಆನೆಯನ್ನು ಕೊಡಲಾರದೆ ತನ್ನ ಮಠದಮೇಲೆ ಅದಕ್ಕೆ ಅಭಿಮಾನವನ್ನು ಹತ್ತಿಸಿದ್ದಾನೆ. ಆದ್ದರಿಂದ ಅವನು ನನ್ನ ದೇಶವನ್ನೇ ಬಿಟ್ಟು ಹೋಗಲಿ!' ಎಂದು ಆಜ್ಞೆಮಾಡಿದನು. ಅದರಂತೆ ಕಪಾಲಿಯು ತನ್ನಮೇಲಣ ಅಪವಾದವನ್ನು ಕಳೆದುಕೊಳ್ಳುವುದಕ್ಕೋಸ್ಕರ ಪುನಃ ಆನೆಯನ್ನು ತಂದು ಒಪ್ಪಿಸಿ ಹಿಂತಿರುಗಿ ಬರಲು ಆನೆಯು ಕೋಪದಿಂದ ಒಂದು ಉಪಕಾರಸ್ಮರಣೆ ಇಲ್ಲದೆ ಅವನನ್ನು ಕೊಂದುಹಾಕಿತು. ಪ್ರಪಂಚದಲ್ಲಿ ನಿರ್ದಯರಾದ ದುರ್ಜನರು ಒಳ್ಳೆಯದನ್ನು ಮಾಡುತ್ತಾರೆಯೇ ?

ಇದನ್ನು ಕೇಳಿ ಜಿನಪಾಲಿತಮುನಿಯು ನಕ್ಕು ಪ್ರತ್ಯುತ್ತರವಾಗಿ ಇನ್ನೊಂದು ಕಥೆಯನ್ನು ಹೇಳಿದನು :—

ದಂತಿಪುರವೆಂಬ ಊರಿನಲ್ಲಿ ಅನಂತಶ್ರೀಯೆಂಬ ಸೂಳೆಯೊಬ್ಬಳಿದ್ದಳು. ಅವಳಿಗೆ ಅವಳ ಸ್ನೇಹಿತಳಾದ ವಾಸವದತ್ತೆ ಯೆಂಬವಳು ಒಂದು ಗಿಣಿಯನ್ನು ತಂದುಕೊಡಲು ಅದನ್ನು ಚಿನ್ನದ ಪಂಜರದಲ್ಲಿಟ್ಟು ಸಾಕುತ್ತಿದ್ದಳು. ಆವೂರಿನ ಮಿಕ್ಕ ಸೂಳೆಯರು ಹೊಟ್ಟೆಯ ಕಿಚ್ಚಿನಿಂದ ವಾಸವದತ್ತೆಗೆ ಹಣದಾಸೆಯನ್ನು ತೋರಿಸಿ ಅನಂತಶ್ರೀಯನ್ನು ಕೊಲ್ಲಲು ಏರ್ಪಡಿಸಿದರು. ವಾಸವದತ್ತೆಯು ವಿಷಬೆರಸಿದ ಮದ್ಯವನ್ನು ಬಹು ಸ್ನೇಹದಿಂದ ತಂದು ಕೊಡಲು ಅನಂತಶ್ರೀಯು 'ಇಲ್ಲಿಟ್ಟು ಹೋಗು. ಸಾಯಂಕಾಲಕ್ಕೆ ಇಬ್ಬರೂ ಪಾನಮಾಡೋಣ' ಎಂದು ಹೇಳಿ ಮಂಚದ ಮೇಲೆ ಮಲಗಿದಳು. ವಾಸವದತ್ತೆಯು ಅದರಂತೆ ಮದ್ಯದ ಬಟ್ಟಲನ್ನು ಮಂಚದ ಕೆಳಗಿಟ್ಟು ಹೊರಟುಹೋದಳು. ಪಂಜರದ ಗಿಳಿಯು ಮದ್ಯವನ್ನು ನೋಡುತ್ತಿದ್ದು ಅದರ ವಾಸನೆಗೆ ಮುತ್ತಿದ ನೊಣಗಳು ಸಾಯುತ್ತಿರಲು ಅದು ವಿಷವೆಂದು ತಿಳಿದು ಆ ಮದ್ಯವನ್ನು ಉರುಟಿಸಿತು. ಕೂಡಲೆ ಅನಂತಶ್ರೀಯು ಮಹಾಕೋಪದಿಂದ ಆ ಗಿಣಿಯನ್ನು ಕೊಂದು ಚೆಲ್ಲಿಹೋದ ಮದ್ಯವನ್ನು ನೋಡುತ್ತಿರಲು ಅದಕ್ಕೆ ಮುತ್ತಿ ಸಾಯುತ್ತಿದ್ದ ನೊಣಗಳು ಕಣ್ಣಿಗೆ ಬಿದ್ದುವು. ಆಗ ಅವಳಿಗೆ ಜ್ಞಾನೋದಯವಾಗಿ 'ಈ ಗಿಣಿಯಿಂದ ನಾನು ಬದುಕಿಕೊಂಡೆ. ಇದನ್ನು ಅನ್ಯಾಯವಾಗಿ ಕೊಂದೆನಲ್ಲಾ!' ಎಂದು ವ್ಯಥೆಪಟ್ಟಳು. ಆದ್ದರಿಂದ ಬುದ್ಧಿವಂತರು ಅವಳ ಹಾಗೆ ಅವಿವೇಕಿಗಳಾಗದೆ ಯಾವುದನ್ನೂ ವಿಚಾರದಿಂದ ಮಾಡಬೇಕು.

ಇದಕ್ಕೆ ಬದಲಾಗಿ ವೈಶ್ಯನು ಮತ್ತೊಂದು ಕಥೆಯನ್ನು ಹೇಳಿದನು :—

ಅವನಿಭೂಷಣವೆಂಬ ಪಟ್ಟಣದಲ್ಲಿ ಒಬ್ಬ ಕುಶಲನಾದ ಬಡಗಿಯಿದ್ದನು. ಅವನು ಒಂದುದಿನ ವಿಂಧ್ಯಪರ್ವತಕ್ಕೆ ಮರ ಕಡಿಯುವುದಕ್ಕೆ ಹೋಗಿ ಮರಗಳನ್ನು ನೋಡುತ್ತಿರುವಾಗ ಒಂದು ಮದದಾನೆಯು ಓಡಿ

ಬರಲು ಒಂದು ದೊಡ್ಡ ಮರವನ್ನು ಹತ್ತಿ ಕುಳಿತುಕೊಂಡನು. ಆನೆಯು ಅವನನ್ನು ಏನೂ ಮಾಡಲಾರದೆ ಅಲ್ಲಿ ಸ್ವಲ್ಪಹೊತ್ತು ಇದ್ದು ಹೊರಟು ಹೋಯಿತು. ಅನಂತರ ಆ ಮರದಿಂದ ಇಳಿದುಬಂದು ಅದು ತನಗೆ ಆಶ್ರಯಕೊಟ್ಟಿತೆಂಬ ಪರಿಜ್ಞಾನವಿಲ್ಲದೆ ಆ ಮರವನ್ನೇ ಕಡಿದುಹಾಕಿ ಬಿಟ್ಟನು. ದುರ್ಜನರು ಸಜ್ಜನರನ್ನು ತೊಂದರೆಗೀಡುಮಾಡುತ್ತಾರೆಂಬು ದೇನಾಶ್ಚರ್ಯ ?

ಇದನ್ನು ಕೇಳಿ ಮುನಿಗಳು 'ಸಂದೇಹಕ್ಕೆ ಸಿಕ್ಕಿರುವ ಇವನಿಗೆ ಹೇಗೆ ನಂಬುಗೆಯುಂಟುಮಾಡುವುದು' ಎಂದು ನಕ್ಕು ಇನ್ನೊಂದು ಕಥೆಯನ್ನು ಹೇಳಿದರು :—

ಅಮರಖೇಟವೆಂಬ ಊರಿನಲ್ಲಿ ಚಂದ್ರದತ್ತನೆಂಬ ಬ್ರಾಹ್ಮಣ ನಿದ್ದನು. ಅವನ ಹೆಂಡತಿ ಯಜ್ಞದತ್ತೆಯೆಂಬಾಕೆ ಒಂದು ಮುಂಗುಸಿ ಯನ್ನು ಸಾಕುತ್ತಿದ್ದಳು. ಒಂದುದಿವಸ ಆಕೆಯು ತನ್ನ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಎಲ್ಲಿಯೋ ಹೋಗಿರಲು ಒಂದು ಹಾವು ಆ ಮಗು ವನ್ನು ಕಚ್ಚುವುದಕ್ಕೆ ಬರುತ್ತಿತ್ತು. ಅದನ್ನು ಕಂಡು ಮುಂಗುಸಿಯು ಹಾರಿ ಬಂದು ಆ ಹಾವನ್ನು ಕೊಂದು ಸಂತೋಷದಿಂದ ತನ್ನ ಒಡತಿಯ ಕಾಲಮೇಲೆ ಬಿದ್ದು ಹೊರಳಾಡುತ್ತಿರಲು ಆಕೆಯು ಮುಂಗುಸಿಯ ಬಾಯ ನೆತ್ತರವನ್ನು ನೋಡಿ ಅದು ಮಗುವನ್ನು ಕೊಂದಿರಬೇಕೆಂದು ಯೋಚಿಸಿ ತನ್ನ ಕೈಲಿದ್ದ ಒನಕೆಯಿಂದ ಅದರ ತಲೆಯನ್ನು ಎರಡು ಪಾಲಾಗುವಂತೆ ಒಡೆದಳು. ಆಮೇಲೆ ಮಗು ಸತ್ತಿತಲ್ಲಾ ಎಂದು ಗೋಳಾಡುತ್ತ ಮನೆಗೆ ಬಂದು ನೋಡಲು ಮಗು ಸುಖವಾಗಿ ನಿದ್ರಿಸು ತ್ತಿತ್ತು. ಅದರ ಹತ್ತಿರ ಹಾವು ಎರಡು ತುಂಡಾಗಿ ಬಿದ್ದಿತ್ತು. ಅದನ್ನು ಕಂಡು 'ನನ್ನ ಮಗುವನ್ನು ಕಾಪಾಡಿದ ಮುಂಗುಸಿಯನ್ನು ಕೊಂಡಾ ಡದೆ ಕೊಂದುಹಾಕಿದೆನಲ್ಲಾ' ಎಂದು ವ್ಯಥೆಪಟ್ಟಳು. ಆದ್ದರಿಂದ ಸತ್ಪು ರುಷರು ಆಕೆಯಹಾಗೆ ಅವಿಚಾರಿಗಳಾಗದೆ ಯಾವುದನ್ನೂ ವಿಚಾರ ಮಾಡಿ ಮಾಡಬೇಕು.

ಅದಕ್ಕೆ ಪ್ರತ್ಯುತ್ತರವಾಗಿ ಸೆಟ್ಟಿಯು ಈ ಕಥೆಯನ್ನು ಹೇಳಿದನು :—

ಕಾಮುಕವನವೆಂಬ ಒಂದು ಕಾಡಿನಲ್ಲಿ ಒಂದು ದೊಡ್ಡ ಹಾಳು ಭಾವಿಯಿತ್ತು. ಅದರೊಳಗೆ ಒಂದು ಹಾವು, ಒಂದು ಹುಲಿ, ಒಂದು ಕೋತಿ ಮತ್ತು ಒಬ್ಬ ಅಕ್ಕಸಾಲೆ ಇವರೆಲ್ಲರೂ ಬಿದ್ದಿರಲು, ಆ ದಾರಿಯಲ್ಲಿ ಕಾಶಿಗೆಂದು ಹೋಗುತ್ತಿದ್ದ ಕೌಶಿಕನೆಂಬ ಬ್ರಾಹ್ಮಣನು ಆ ಭಾವಿಯೊಳಗೆ ನೀರು ಸೇದಬೇಕೆಂದು ಒಂದು ಪಾತ್ರೆಗೆ ಹಗ್ಗಕಟ್ಟಿ ಬಿಟ್ಟನು. ಆ ಹಗ್ಗವನ್ನು ಹಿಡಿದುಕೊಂಡು ಒಂದುಸಾರಿ ಹುಲಿಯೂ, ಆಮೇಲೆ ಹಾವೂ, ಆಮೇಲೆ ಕೋತಿಯೂ ಕೊನೆಗೆ ಅಕ್ಕಸಾಲೆಯೂ ಮೇಲಕ್ಕೆ ಬಂದರು. ಆ ಮೂರು ಪ್ರಾಣಿಗಳೂ ಬ್ರಾಹ್ಮಣನ ಉಪಕಾರಕ್ಕೆ ಕೃತಜ್ಞತೆಯನ್ನು ತೋರ್ಪಡಿಸಿ ಏನಾದರೂ ಕಷ್ಟ ಪ್ರಾಪ್ತವಾದರೆ ಆಗ ತಮ್ಮನ್ನು ಜ್ಞಾಪಿಸಿಕೊಳ್ಳಬೇಕೆಂದು ಹೇಳಿದುವು. ಅಕ್ಕಸಾಲೆಯೂ 'ಈ ಕಾಡಿನ ಹತ್ತಿರವೇ ತಾಮ್ರಕೂಟವೆಂಬ ನಮ್ಮೂರು ಇದೆ. ಅಲ್ಲಿಗೆ ಬರಬೇಕು' ಎಂದು ಕೈಮುಗಿದು ಬೇಡಿಕೊಂಡನು. ಅದಕ್ಕೆ ಬ್ರಾಹ್ಮಣನು 'ನಾನು ಹಿಂತಿರುಗಿ ಹೋಗುವಾಗ ಅವಶ್ಯವಾಗಿ ಬರುತ್ತೇನೆ' ಎಂದು ಉತ್ತರಕೊಟ್ಟು ಹೊರಟುಹೋದನು. ಹಿಂತಿರುಗಿ ಬರುತ್ತ ಮೊದಲು ಕಪಿಯಿದ್ದ ಸ್ಥಳಕ್ಕೆ ಬರಲು ಅದು ಹಣ್ಣು ಹಂಪಲುಗಳನ್ನು ಕೊಟ್ಟು ಉಪಚರಿಸಿತು. ಹುಲಿಯಿರುವ ಕಡೆಗೆ ಬರಲು ಅದು ರತ್ನದ ಆಭರಣಗಳನ್ನು ಕೊಟ್ಟಿತು. ಬ್ರಾಹ್ಮಣನು ಅದನ್ನು ಬಹು ಸಂತೋಷದಿಂದ ಸ್ವೀಕರಿಸಿ ಅಕ್ಕಸಾಲೆಯ ಮನೆಗೆ ಬಂದನು. ಅಲ್ಲಿ ಅವನ ಸತ್ಕಾರವನ್ನು ಕೈಕೊಂಡು ಮರುದಿವಸ ಹುಲಿಯಿಂದ ಬಂದ ಆಭರಣಗಳನ್ನು ಮುಂದಿಟ್ಟು ಅವುಗಳನ್ನು ಕರಗಿಸಿ ಗಟ್ಟಿಮಾಡಿಕೊಡಬೇಕೆಂದು ಅವನ ಕೈಯಲ್ಲಿ ಕೊಟ್ಟನು. ಆದರೆ ಆ ದುರಾತ್ಮನು ಅವುಗಳನ್ನು ತೆಗೆದುಕೊಂಡುಹೋಗಿ ರಾಜನಿಗೆ ಒಪ್ಪಿಸಲು ರಾಜನು ಭಟರನ್ನು ಕರೆಸಿ ಬ್ರಾಹ್ಮಣನನ್ನು ಕೋಳಕ್ಕೆ ಹಾಕಿಸಿದನು. ಆಗ ಬ್ರಾಹ್ಮಣನು ಹಾವನ್ನು ನೆನೆಯಲು ಅದು ಬಂದು ರಾಜನ ಮಗನನ್ನು

ಕಚ್ಚಿತು. ಯಾರು ಏನುಮಾಡಿದರೂ ವಿಷವಿಳಿಯಲಿಲ್ಲ; ಆಗ ಕೌಶಿಕನು ಮಂತ್ರಹಾಕಿ ಆ ವಿಷವನ್ನು ಇಳಿಸಿ ಸನ್ಮಾನಿತನಾಗಿ ನಡೆದ ವೃತ್ತಾಂತವನ್ನೆಲ್ಲಾ ಹೇಳಿದನು. ಅರಸನು ಆಶ್ಚರ್ಯಪಟ್ಟು 'ಈ ಅಕ್ಕಸಾಲೆ ವಿಶ್ವಾಸಘಾತಕ; ಇವನನ್ನು ದೋಚಿಕೊಂಡರೆ ದೋಷವಿಲ್ಲ' ಎಂದು ಅವನ ಆಸ್ತಿಯನ್ನೆಲ್ಲಾ ಕಿತ್ತುಕೊಂಡುಬಿಟ್ಟನು. ಹೀಗೆ ಉಪಕಾರಸ್ಮರಣೆಯಿಲ್ಲದವರು ಕೆಲವರು ಇರುತ್ತಾರೆ.

ಅದಕ್ಕೆ ಪ್ರತಿಯಾಗಿ ಮುನಿಗಳು ಮತ್ತೊಂದು ಕಥೆಯನ್ನು ಹೇಳಿದರು :—

ಅವಂತಿ ದೇಶದ ಉಜ್ಜೈನಿ ಪಟ್ಟದಲ್ಲಿ ಮಹೇಂದ್ರನೆಂಬ ರಾಜನು ಆಳುತ್ತಿದ್ದನು. ಅವನಲ್ಲಿ ಕುಬೇರನೆಂಬುವನು ರಾಜಶ್ರೇಷ್ಠಿಯಾಗಿದ್ದನು. ಅವನಿಗೆ ಯಾರೋ ಒಬ್ಬರು ಬಂದು ಅಪೂರ್ವವಾದ ಮಾವಿನ ಹಣ್ಣನ್ನು ತಂದುಕೊಡಲು ಅದನ್ನು ತಂದು ತನ್ನ ರಾಜನಿಗೆ ಸಮರ್ಪಿಸಿ 'ದೊರೆಯೇ, ಇದನ್ನು ಮುದುಕರು ತಿಂದರೆ ಹುಡುಗರಾಗುವರು, ರೋಗಿಗಳು ತಿಂದರೆ ಅವರ ರೋಗ ವಾಸಿಯಾಗುವುದು' ಎಂದು ಹೇಳಿದನು. ರಾಜನು ಆಶ್ಚರ್ಯಪಟ್ಟು, ಕುಬೇರನಿಗೆ ಸನ್ಮಾನ ಮಾಡಿ, ಆ ಬೀಜವನ್ನು ತನ್ನ ಉದ್ಯಾನವನದಲ್ಲಿ ನೆಡಿಸಿದನು. ಕೆಲವು ಕಾಲಕ್ಕೆ ಅದು ದೊಡ್ಡಮರವಾಗಿ ಹಣ್ಣು ಬಿಟ್ಟಿತು. ಆಗ ಒಂದು ಹದ್ದು ಒಂದು ಹಾವನ್ನು ಕೊಂದು ಕಚ್ಚಿಕೊಂಡು ಅದರಮೇಲೆ ಹಾರಿ ಹೋಗುತ್ತಿರಲು ಒಂದೆರಡು ವಿಷದ ತೊಟ್ಟುಗಳು ಒಂದು ಹಣ್ಣಿನ ಮೇಲೆ ಬಿದ್ದು ಅದು ವಿಷಪೂರಿತವಾಗಿ ತೊಟ್ಟು ಕಳಚಿ ಕೆಳಗೆ ಬಿತ್ತು. ಅದನ್ನು ರಾಜಕುಮಾರನು ತಿಂದು ಪ್ರಾಣಬಿಡಲು, ರಾಜನು ಮಹಾ ದುಃಖದಿಂದಲೂ ಕೋಪದಿಂದಲೂ ಆ ಮರವನ್ನು ಕಡಿಯಿಸಿ ಕುಬೇರನನ್ನು ಸಾಯಬಡಿಸಿ ಅವನ ಸರ್ವಸ್ವವನ್ನೂ ಕಿತ್ತುಕೊಂಡನು. ಇಷ್ಟರೊಳಗೆ ಆ ಊರಿನ ಕುಂಟರು, ಕುರುಡರು, ರೋಗಿಗಳು ಮುಂತಾದವರು ಸತ್ತರೆ ಸಾಕೆಂದು ಆ ಮರದ ಹಣ್ಣುಗಳನ್ನು

ತಿನ್ನಲು ಅವರ ದೇಹಗಳು ಬಂಗಾರದಂತಾದುವು. ದೊರೆಯು ಇದನ್ನು ನೋಡಿ ಆಶ್ಚರ್ಯಪಟ್ಟು ಕುಬೇರನ ಆಸ್ತಿಯನ್ನು ಹಿಂದಕ್ಕೆ ಕೊಟ್ಟು ಅವನ ಕ್ಷಮೆಯನ್ನು ಬೇಡಿಕೊಂಡನು. ಹೀಗೆ ಕೆಲವರು ಅವಿಚಾರತೆಯಿಂದ ಕೆಲಸ ಮಾಡುವರು, ಸಜ್ಜನರಾದವರು ಹಾಗಲ್ಲದೆ ಯಾವುದನ್ನೂ ವಿಚಾರಿಸಿ ಮಾಡಬೇಕು.

ಇದನ್ನು ಕೇಳಿ ವೈಶ್ಯನು ಮತ್ತೊಂದು ಕಥೆಯನ್ನು ಹೇಳಿದನು:—

ಸಾನಂದಗಿರಿಯೆಂಬ ಪಟ್ಟಣದಲ್ಲಿ ಅಮಿತನೆಂಬ ಬೇಡರವನಿದ್ದನು. ಅವನು ಒಂದು ದಿನ ದೈತ್ಯವನವೆಂಬ ಅಡವಿಯಲ್ಲಿ ಬಾಯಾರಿಕೆಯಾಗಿ ಮುಂದೆ ಹೋಗಲಾರದೆ ಕುಳ್ಳಿರಲು ಅವನನ್ನು ಒಂದು ಕೋತಿಯು ಕಂಡು ಅವನಿಗೆ ನೀರಿದ್ದ ಸ್ಥಳವನ್ನು ತೋರಿಸಿತು. ಅಲ್ಲಿ ಅವನು ನೀರು ಕುಡಿದು ಬಾಯಾರಿಕೆಯನ್ನು ತೀರಿಸಿಕೊಂಡು 'ನಾನು ಇನ್ನೂ ಬಹು ದೂರ ಹೋಗಬೇಕಾಗಿದೆ. ಆದ್ದರಿಂದ ನೀರಿದ್ದ ಕಡೆಯಲ್ಲಿಯೇ ಅದನ್ನು ಸ್ವಲ್ಪ ಶೇಖರಿಸಿಕೊಂಡು ಹೋಗಬೇಕು. ಇಲ್ಲದೆ ಮುಂದೆ ಬಾಯಾರಿಕೆಯಿಂದ ಸಾಯಬಾರದು' ಎಂದುಕೊಂಡು ಆ ಕೋತಿಯನ್ನು ಕೊಂದು ಅದರ ತೊಗಲಿನಲ್ಲಿ ನೀರನ್ನು ತುಂಬಿಕೊಂಡು ಹೋದನು. ಹೀಗೆ ಕೆಲವರು ಉಪಕಾರಸ್ಮರಣೆಯಿಲ್ಲದವರುಂಟು.

ಅದನ್ನು ಕೇಳಿ ಮುನಿಗಳು ಈ ಕಥೆಯನ್ನು ಹೇಳಿದರು:—

ಕೌಶಾಂಬಿಯೆಂಬ ಪಟ್ಟಣದಲ್ಲಿ ವಿಶಾಖನಂದನನೆಂಬ ವರ್ತಕನಿದ್ದನು. ಅವನ ಮಗನಾದ ಅಂಗಾರಕನೆಂಬವನು ಮನೆಯ ಹೊರಗಡೆ ಒಂದು ಮಣೆಯ ಮೇಲೆ ಬಟ್ಟೆಯನ್ನು ಹಾಸಿ ಅದರ ಮೇಲೆ ಒಂದು ಪದ್ಮರಾಗಮಣಿಯನ್ನಿಟ್ಟು ನೋಡುತ್ತಿರಲು, ಆ ಮಾರ್ಗವಾಗಿ ಮೇಧಾವಿ ಮುನೀಶ್ವರರೆಂಬ ಒಬ್ಬರು ಮುನಿಗಳು ಬಂದರು. ಅವರನ್ನು ಕಂಡು ನಮಸ್ಕರಿಸಿ ಒಳಗೆ ಕರೆದುಕೊಂಡು ಹೋಗಿ ಬರುವಷ್ಟರೊಳಗೆ ಒಂದು ನವಿಲು ಆ ರತ್ನವನ್ನು ಮಾಂಸವೆಂಬ ಭ್ರಾಂತಿಯಿಂದ ನುಂಗಿ ಹೋಯಿತು. ಹೀಗೆ ಅಂಗಾರಕನು ಮತ್ತೆ ಅಲ್ಲಿಗೆ ಬಂದಾಗ ರತ್ನವಿಲ್ಲದುದನ್ನು ಕಂಡು

ಮೇಧಾವಿಮುನಿಗಳೇ ತೆಗೆದುಕೊಂಡಿರಬೇಕೆಂದು ಯೋಚಿಸಿ ಹಿಂತಿರುಗಿ ಬಂದು ಅವರನ್ನು ಕುರಿತು 'ಸಕಲವಸ್ತುವನ್ನೂ ತೊರೆದ ನಿಮಗೆ ಈ ರತ್ನದ ಮೇಲೇಕೆ ಮೋಹ ? ಕೊಟ್ಟುಬಿಡಿ' ಎಂದು ಅವರನ್ನು ಪೀಡಿಸಿದನು. ಮುನಿಗಳಿಗೆ ಈ ಮಾತನ್ನು ಕೇಳಿ ಆಶ್ಚರ್ಯವಾಯಿತು. ಏನೇನು ಹೇಳಿದರೂ ವರ್ತಕನು ನಂಬಲಿಲ್ಲ. ಆದ್ದರಿಂದ ಅವರು 'ಸುಮ್ಮನಿರುವುದೆ ಲೇಸೆಂದು' ಮೌನದಿಂದಿದ್ದರು. ಮಾತನಾಡಿಸಿದರೂ ಆಡುವುದಿಲ್ಲವೇ ಎಂದು ವೈಶ್ಯನು ಅವರನ್ನು ಸೊಪ್ಪು ಸೊವಡಾಗುವವರೆಗೂ ಹೊಡೆದನು. ಆದರೂ ಅವರು ಅಲ್ಲಾಡದೆ ಶುಕ್ಲಧ್ಯಾನದಲ್ಲಿದ್ದರು. ಆಗ ಕೇವಲಿಪೂಜೆಮಾಡುವುದಕ್ಕೆಂದು ಚತುರ್ವಿಧದೇವತೆಗಳೂ ನೆರೆಯಲು ಅಂಗಾರಕನು ಸುಮ್ಮನಾದನು. ಈ ಮಧ್ಯೆ ಹೊಡೆಯುತ್ತಿರುವಾಗ ಬಂದು ಕೋಲಿನ ತುದಿ ಮುರಿದು ಹಾರಿಹೋಗಿ ಆ ನವಿಲಿನ ಕತ್ತನ್ನು ಕತ್ತರಿಸಿತು. ಅದರೊಳಗಿಂದ ಕೂಡಲೆ ಆ ಮಣಿಯು ಹೊರಕ್ಕೆ ಬಿತ್ತು. ಅದನ್ನು ಕಂಡು ಅಂಗಾರಕನಿಗೆ ಪಶ್ಚಾತ್ತಾಪ ಹುಟ್ಟಿ ವೈರಾಗ್ಯವುಂಟಾಗಲು ಜಿನದೀಕ್ಷೆಯನ್ನು ಪಡೆದನು. ಹೀಗೆ ಅಜ್ಞಾನಿಯಾಗಿ ಕಳ್ಳರಲ್ಲದವರನ್ನು ಕಳ್ಳರೆನ್ನುವುದು ಧರ್ಮವಲ್ಲ.

ಇಷ್ಟಾದರೂ ವೈಶ್ಯನಿಗೆ ನಂಬುಗೆ ಬರಲಿಲ್ಲ. ಆದ್ದರಿಂದ ಸುಮ್ಮನೆ ಬಾಯಿ ನೋಯಿಸಿಕೊಳ್ಳುವುದೇಕೆಂದು ಅವರು ಮೌನವಾಗಿದ್ದುಬಿಟ್ಟರು. ಸೆಟ್ಟಿಗೆ ಅದನ್ನು ನೋಡಿ ಮತ್ತೂ ರೇಗಿತು. ಇದೆಲ್ಲವನ್ನೂ ಕೊಠಡಿಯು ಬಾಗಿಲ ಹಿಂದೆ ನಿಂತು ಕೇಳುತ್ತಿದ್ದ ಜಿನದಾಸನು ತಮ್ಮ ತಂದೆಯ ಲೋಭಕ್ಕೂ ಅವಿವೇಕಕ್ಕೂ ಬೇಸರಗೊಂಡು ಬಾಗಿಲನ್ನು ತೆರೆಯಿಸಿ 'ತಗೊ ನಿನ್ನ ಚಿನ್ನವನ್ನು' ಎಂದು ಅವನ್ನು ತಂದೆಯ ಮುಖದ ಮೇಲೆ ಎಸೆದು ಮುನಿಗಳಿಂದ ಜೈನದೀಕ್ಷೆಯನ್ನು ಕೈಕೊಂಡನು. ಮಗನು ಸಂನ್ಯಾಸ ತೆಗೆದುಕೊಂಡುದನ್ನು ನೋಡಿ ಜಿನದತ್ತಸೆಟ್ಟಿಗೂ ವೈರಾಗ್ಯ ಹುಟ್ಟಲು ಅವನೂ ದೀಕ್ಷೆಯನ್ನು ಪಡೆದು ಮುಂದೆ ಸದ್ಗತಿಯನ್ನು ಹೊಂದಿದನು.

ಹದಿಮೂರನೆಯ ಆಶ್ವಾಸ

ಬ್ರಹ್ಮ (ಚರ್ಯ)ದ ಕಥೆ

ವತ್ಸಕಾವತೀ ದೇಶದ ಕೌಶಾಂಬಿಯೆಂಬ ನಗರದಲ್ಲಿ ದಂತಿಬಲನೆಂಬ ರಾಜನು ಧಾರಿಣೀದೇವಿಯೆಂಬ ಹೆಂಡತಿಯಿಂದಲೂ ಪ್ರಮಾಥನಂದನನೆಂಬ ಮಗನಿಂದಲೂ ಕೂಡಿ ರಾಜ್ಯವಾಳುತ್ತಿದ್ದನು. ಒಂದು ದಿನ ವಸಂತಕಾಲದಲ್ಲಿ ಇವರೆಲ್ಲರೂ ವನವಿಹಾರ ಮಾಡುತ್ತಿದ್ದಾಗ ವಸಂತನೆಂಬ ರಾಜಪುತ್ರನು ತನ್ನ ಹೆಂಡತಿಯಾದ ವಸಂತತಿಲಕೆಗೆ ಮಾವಿನ ಹಣ್ಣುಗಳನ್ನು ನೆಲಕ್ಕೆ ಬೀಳದಂತೆ ಬಾಣ ಪ್ರಯೋಗ ಮಾಡಿ ಕುಯ್ದುಕೊಡುತ್ತಿರಲು ಅದನ್ನು ಪ್ರಮಾಥಿಕುಮಾರನು ತಾನೂ ಧನುರ್ವಿದ್ಯೆಯಲ್ಲಿ ನೈಪುಣ್ಯವನ್ನು ಪಡೆಯಬೇಕೆಂದು ಸಂಕಲ್ಪಿಸಿ ಪಾಟಲಿಪುತ್ರನಗರಕ್ಕೆ ಹೋಗಿ ಅಲ್ಲಿ ದ್ರೋಣಾಚಾರ್ಯರನ್ನು ಪ್ರಾರ್ಥಿಸಿಕೊಂಡನು. ಅವರು ಅನುಗ್ರಹಿಸಲು ಕ್ಷಿಪ್ರದಲ್ಲಿಯೇ ಅವನು ಧನುರ್ವಿದ್ಯೆಯಲ್ಲಿ ಬಹು ಕುಶಲನಾದನು.

ಒಂದು ದಿನ ಆ ಊರಿನ ದೊರೆಯಾದ ಸಿಂಹಸೇನಮಹಾರಾಜನ ಮಗಳಾದ ಚಂದ್ರಲೇಖೆಯು ಊರಹೊರಗಿದ್ದ ಚೈತ್ಯಾಲಯಕ್ಕೆ ಹೋಗುತ್ತಿರಲು ಆಗ ಒಂದು ಮದದಾನೆಯು ಬಂಧನವನ್ನು ಕಿತ್ತುಕೊಂಡು ಎದುರಾಗಿ ಬಂದಿತು. ಎಲ್ಲರೂ ದಿಕ್ಕಾಪಾಲಾಗಿ ಓಡಿ ಹೋಗುತ್ತಿರಲು ಪ್ರಮಾಥಿಕುಮಾರನು ಅದನ್ನು ಹಿಡಿದು ನಿಲ್ಲಿಸಿ ಅದರ ಸ್ಥಳದಲ್ಲಿ ಕಟ್ಟಿಹಾಕಿದನು. ಈ ಧೈರ್ಯ ಶೌರ್ಯಾದಿಗಳನ್ನು ನೋಡಿ ರಾಜಪುತ್ರಿಯು ಅವನನ್ನು ಮನಸ್ಸಿನಲ್ಲಿ ವರಿಸಿದಳು ; ಊರಿನವರೆಲ್ಲರೂ ಹೊಗಳಿದರು. ಇದನ್ನು ಕಂಡು ದ್ರೋಣಾಚಾರ್ಯರ ಮಿಕ್ಕ ಶಿಷ್ಯರಿಗೆ ಸೈರಣೆ ಹುಟ್ಟಲಿಲ್ಲ. ಅದು ದ್ರೋಣಾಚಾರ್ಯರಿಗೆ ತಿಳಿದು ಅವರ ಯೋಗ್ಯತೆಯನ್ನು ಅವರಿಗೆ ತಿಳಿಸುವ ಉದ್ದೇಶದಿಂದ, ಭೂಮಿಗೆ ಬೀಳದಂತೆ ಬಾಣ

ಹೊಡೆದು ತೆಂಗಿನಕಾಯನ್ನು ಇದ್ದ ಕಡೆಗೇ ತರಿಸಬಲ್ಲವರಾರು ನೋಡೋಣವೆಂದು ಒಂದು ಪಂತವನ್ನು ಹೂಡಿದರು. ಅದರಲ್ಲಿ ಮಿಕ್ಕವರೆಲ್ಲರೂ ಸೋತು ಪ್ರಮಾಥಕುಮಾರನೊಬ್ಬನೇ ಜಯಶೀಲನಾದನು. ಇದರಿಂದ ಇತರ ಶಿಷ್ಯರಿಗೆ ಹೊಟ್ಟೆಯಕಿಚ್ಚು ಇನ್ನೂ ಹೆಚ್ಚಾಯಿತು. ಆದುದರಿಂದ ಒಂದು ದಿನ ಮದದಾನೆಯೊಂದು ಎದುರಿಗೆ ಬರುತ್ತಿರಲು ಎಲ್ಲರೂ ಅವನನ್ನು ಉಬ್ಬಿಸಿ ಅದನ್ನು ತಡೆಯುವಂತೆ ಹೇಳಿದರು. ಅದರ ಕಾಲಿಗೆ ಸಿಕ್ಕಿ ಸಾಯುವನೆಂದು ಅವರ ಆಸೆ. ಆದರೆ ಅವನು ಲಕ್ಷ್ಯವಿಲ್ಲದೆ ಹೊಡೆದು ಅಟ್ಟಿದನು ಅಲ್ಲಿಂದ ಅವರು ತಮ್ಮ ಕೀಳುತನವನ್ನು ಬಿಟ್ಟು ಅವನಲ್ಲಿ ಗೌರವವನ್ನು ಇಟ್ಟರು.

ಕೆಲವು ಕಾಲಾನಂತರ ಸಿಂಹಸೇನಮಹಾರಾಜನ ಪ್ರಕಟನೆಯಂತೆ ಚಂದ್ರಕವೇಧವೆಂಬ ಬಾಣಪ್ರಯೋಗವನ್ನು ತೋರಿಸಿ ಅವನ ಮಗಳಾದ ಚಂದ್ರಲೇಖೆಯನ್ನೂ, ಜೊತೆಯಲ್ಲಿ ಅರ್ಧ ರಾಜ್ಯವನ್ನೂ ಸಂಪಾದಿಸಿ ಸುಖವಾಗಿರುತ್ತಿದ್ದು, ಒಂದು ದಿನ, ಕೌಶಾಂಬೀಪುರವನ್ನು ಶತ್ರುಗಳು ಮುತ್ತಿರುವರೆಂದು ಕೇಳಿ ತಾನೂ ತನ್ನ ಹೆಂಡತಿಯೂ ರಥಾರೂಢರಾಗಿ ಹೊರಟರು. ದಾರಿಯಲ್ಲಿ ಒಂದು ಕಾಡು ಸಿಕ್ಕಲು ಅದರೊಳಗೆ ಸುವೇಗನೆಂಬೊಬ್ಬನ ಕೈಗೆಸಿಕ್ಕಿದರು. ಅವನು ಹಿಂದೆ ರಾಜನಾಗಿದ್ದು ದಾಯಾದರು ರಾಜ್ಯವನ್ನು ಕಿತ್ತುಕೊಳ್ಳಲು ಕಾಡಿಗೆ ಬಂದು ಅಲ್ಲಿ ಕಳ್ಳರನ್ನು ಕಟ್ಟಿಕೊಂಡು ಅವರಿಗೆ ಯಜಮಾನನಾಗಿರುತ್ತ ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿಟ್ಟುಕೊಂಡು ಅದರ ಮುಂದೆ ಧನುರ್ವಿದ್ಯೆಯನ್ನು ನಿತ್ಯವೂ ಅಭ್ಯಾಸಮಾಡುತ್ತಿದ್ದನು. ಈಗ ಅವನು ಚಂದ್ರಲೇಖೆಯನ್ನು ನೋಡಿ ಮೋಹಗೊಂಡು ಪ್ರಮಾಥಕುಮಾರನನ್ನು ಅಡ್ಡಗಟ್ಟಿದನು. ಏಟುತಿಂದುಬಂದ ಅವರ ಪರಿವಾರದವರು ಬೇಡವೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಪ್ರಮಾಥಕುಮಾರನಿಗೂ ಸುವೇಗನಿಗೂ ಘೋರವಾದ ಯುದ್ಧವಾಗಿ ಕೊನೆಗೆ ಪ್ರಮಾಥಕುಮಾರನ ಬಾಣಗಳೆಲ್ಲವೂ ಮುಗಿದುಹೋಗಿ ಎರಡು ಮಾತ್ರ ಉಳಿದುಕೊಂಡುವು. ಆಗ ಚಂದ್ರಲೇಖೆಯು ತನ್ನ ಪತಿಯು ಸಾವು ನಿಶ್ಚಯವೆಂದು ಭಾವಿಸಿ ಶತ್ರು

ವಿನ ಕೈಗೆ ಸಿಕ್ಕುವುದಕ್ಕಿಂತ ಸಾಯುವುದೇ ಮೇಲೆಂದು ತಾನು ತನ್ನ ಗಂಡನಿಗೂ ಸುವೇಗನಿಗೂ ಮಧ್ಯೆ ಬಂದು ನಿಂತಳು. ಸುವೇಗನು ಅವಳ ಸೌಂದರ್ಯವನ್ನು ನೋಡಿ ತಬ್ಬಿಬ್ಬಾಗಲು ಆಗ ಪ್ರಮಾಥಿಕುಮಾರನು ಗುರಿನೋಡಿ ಬಾಣಪ್ರಯೋಗ ಮಾಡಿದನು. ಶತ್ರುವಿನ ತಲೆಯು ನೆಲಕ್ಕೆ ಉರುಳಿತು. ಅವನಿಗೆ ನರಕ ಪ್ರಾಪ್ತಿಯಾಯಿತು.

ಅನಂತರ ಕೌಶಾಂಬಿಗೆ ಬಂದು ಮುತ್ತಿಗೆ ಹಾಕಿದ್ದ ಶತ್ರುಗಳನ್ನು ಓಡಿಸಿ ತಾಯಿತಂದೆಗಳ ಕಣ್ಣಿಗೆ ಆನಂದವನ್ನು ಬೀರುತ್ತ ಸೌಂದರ ಮಹಾದೇವಿ ಚಂದ್ರಲೇಖೆಯವರೊಡನೆ ಸುಖವಾಗಿದ್ದನು.

ಹಲವು ಕಾಲ ರಾಜ್ಯವಾಳಿದ ಮೇಲೆ ಒಂದು ದಿನ ತಲೆ ನರೆತುದನ್ನು ನೋಡಿಕೊಂಡು ವೈರಾಗ್ಯ ಹುಟ್ಟಿ ರಾಜ್ಯವನ್ನು ತನ್ನ ಮಗನಾದ ವಿಮಲಕೀರ್ತಿಗೆ ಕೊಟ್ಟು ಸಮಾಧಿಮರಣದಿಂದ ಮುಡಿಪಿ ದೇವಗತಿಯನ್ನು ಪಡೆದನು.

ಹದಿನಾಲ್ಕನೆಯ ಆಶ್ವಾಸ

ಅಪರಿಗ್ರಹದ ಕಥೆ

ಕುರುಜಾಂಗಣದೇಶದ ಶ್ರಾವಂತಿಯೆಂಬ ಪಟ್ಟಣದಲ್ಲಿ ಉಪರಿಚರನೆಂಬ ರಾಜನು ಪದ್ಮಾವತಿ, ಪ್ರಭಾವತಿ, ಸುಪ್ರಭೆ, ಕನಕಪ್ರಭೆಯೆಂಬ ನಾಲ್ಕು ಜನ ಪಟ್ಟದರಸಿಯರೊಡನೆ ಸುಖದಿಂದ ರಾಜ್ಯವಾಳುತ್ತಿದ್ದನು. ಪದ್ಮಾವತಿಯ ಹೊಟ್ಟೆಯಲ್ಲಿ ಅನಂತವೀರ್ಯನೆಂಬ ಮಗನು ಹುಟ್ಟಿದನು.

ಒಂದು ದಿನ ರಾಜನು ತನ್ನ ಹೆಂಡತಿಯರೊಡನೆ ಜಲಕ್ರೀಡೆಯಾಡುತ್ತಿರಲು ವಿಮಾನದಲ್ಲಿ ಹೋಗುತ್ತಿದ್ದ ಮದನವೇಗೆಯೆಂಬ ಖೇಚರಸ್ತ್ರೀಯು ತನ್ನ ಗಂಡನಾದ ವಜ್ರದಾಡನಿಗೆ ಅದನ್ನು ತೋರಿಸಿ 'ಇವರೇ ಪುಣ್ಯವಂತರು ! ನಾವು ಹೆಸರುಮಟ್ಟಿಗೆ ಖೇಚರರು' ಎಂದಳು. ವಜ್ರದಾಡನಿಗೆ ಮಾತ್ಸರ್ಯಹುಟ್ಟಿ ಹೆಂಡತಿಯನ್ನು ಅಲಕಾಪಟ್ಟಣದಲ್ಲಿ ಬಿಟ್ಟು ಬರುತ್ತ, ಒಂದು ದೊಡ್ಡ ಅರೆಯಬಂಡೆಯನ್ನು ಕಂಡು ರಾಜನು ಜಲಕ್ರೀಡೆಯಾಡುತ್ತಿದ್ದ ಕೊಳವು ಕಾಣದಂತೆ ಮುಚ್ಚಿಬಿಟ್ಟನು. ಯಾರು ಏನು ಮಾಡಿದರೂ ಅಷ್ಟು ದೊಡ್ಡ ಬಂಡೆಯನ್ನು ಅಲ್ಲಾಡಿಸುವುದಕ್ಕೂ ಆಗದೆ ಹೋಗಲು ಅರಸಿಯರು ಅದು ಕರ್ಮಫಲವೆಂದು ಶಾಂತರಾದರು. ಆದರೆ ರಾಜನಿಗೆ ಮಾತ್ರ ಆ ವೈರಾಗ್ಯಬುದ್ಧಿಯುಂಟಾಗಲಿಲ್ಲ. ಹೆಂಡಿರು ಎಷ್ಟು ಉಪದೇಶಮಾಡಿದರೂ ಈ ಪ್ರಪಂಚದ ವೈಭವದಮೇಲೇ ಜ್ಞಾನವು ಎಳೆಯುತ್ತ ಸರ್ಪಾಶ್ರಯವೆಂಬ ಗುಹೆಯಲ್ಲಿ ಒಂದು ಹಾವಾಗಿ ಹುಟ್ಟಿದನು. ಅವನ ಹೆಂಡತಿಯರು ಆನಂದ, ಕಾಂತ, ಅಮಿತಕಾಂತ, ಸುಕಾಂತ ಎಂಬ ಸಾಮಾನಿತದೇವರಾಗಿ ಹುಟ್ಟಿದರು.

ಇತ್ತ ಅನಂತವೀರ್ಯನು ಪಟ್ಟಾಭಿಷಿಕ್ತನಾಗಿ ರಾಜ್ಯವಾಳು ತ್ತಿರಲು ಶ್ರಾಂತಿಗೆ ಸಾರಸ್ವತರೆಂಬ ಮುನಿಗಳು ಬಂದರು. ಅವರಿಂದ ತಮ್ಮ ತಾಯಿತಂದೆಗಳ ವಿಚಾರವನ್ನು ತಿಳಿದು ಅವರು ಹೇಳಿದಂತೆ ಹಾವಾಗಿದ್ದ ತಮ್ಮ ತಂದೆಗೆ ಧರ್ಮವನ್ನು ಉಪದೇಶಿಸಿದನು. ಅಷ್ಟು ಹೊತ್ತಿಗೆ ಅವನ ತಾಯಿಯರೂ ದೇವಲೋಕದಿಂದಿಳಿದುಬಂದು ಅಪರಿಗ್ರಹದ ಮಹತ್ವವನ್ನು ಬೋಧಿಸಿದರು. ಅನಂತರ ಸಾರಸ್ವತರು ಬಂದು ಆ ಹಾವಿಗೆ ಅಣುವ್ರತಗಳನ್ನು ಕೊಟ್ಟು ಸಂನ್ಯಾಸನದ ಮಹಿಮೆಯನ್ನು ತಿಳಿಸಿದರು. ಅನಂತವೀರ್ಯನೂ ತಂದೆಗೆ ಸದ್ಗತಿಯಾಗಲೆಂದು ಆ ಹಾವಿನ ಆಯುಸ್ಸಿನಲ್ಲಿ ಇನ್ನೂ ಮಿಕ್ಕಿದ್ದ ಹದಿನೈದುದಿನವೂ ಜಿನಪೂಜಾದಿಗಳನ್ನು ಮಾಡಿಸುತ್ತಿದ್ದನು. ಆದರೂ ಆ ಹಾವು ಸಾಯುವಾಗ ವಜ್ರದಾಡನು ಮಾಡಿದ ಸಾಹಸವನ್ನೇ ನೆನೆಯುತ್ತ ಸತ್ತುದರಿಂದ ಭವನವಾಸಿಗಲೋಕದಲ್ಲಿ ವಿಮಲನೆಂಬ ದೇವನಾಗಿ ಹುಟ್ಟಿತು. ಇದನ್ನು ತಿಳಿದು ಆಶ್ಚರ್ಯಪಟ್ಟು 'ಇದೆಲ್ಲಾ ಅಪರಿಗ್ರಹದ ಫಲ' ಎಂದುಕೊಂಡು ಅನಂತವೀರ್ಯನು ರಾಜ್ಯವನ್ನು ತನ್ನ ಮಗನಾದ ಸುಬಾಹು ಕುಮಾರನಿಗೆ ಕೊಟ್ಟು ತಾನು ದೀಕ್ಷೆಯನ್ನು ಕೈಕೊಂಡು ತಪಸ್ಸಿಗೆ ಹೊರಟುಹೋದನು.

ಇತ್ತಲಾಗಿ ವಿಮಲನು ಭವನವಾಸಿಯಾದ ವಜ್ರದಾಡನನ್ನು ಕಂಡು ಪೂರ್ವ ವೈರದಿಂದ, ಆ ಖಚರನನ್ನು ಹಿಡಿದು ಅವನ ವಿದ್ಯೆಯನ್ನೆಲ್ಲಾ ನಾಶಗೊಳಿಸಿ ಅವನನ್ನು ಅವನ ಹೆಂಡತಿಯರನ್ನು ನೀರಲ್ಲಿ ಮುಳುಗಿಸಿ ಅದ್ದಿ ತೆಗೆದು ತನ್ನ ಹೊಟ್ಟೆಯುಕಿಚ್ಚನ್ನು ತೀರಿಸಿಕೊಂಡನು. ವಜ್ರದಾಡನು ಹೀಗೆ ಹಗೆಯ ಕೈಯಲ್ಲಿ ಸತ್ತು ರೌದ್ರಧ್ಯಾನದಿಂದ ಮೊದಲ ನರಕದಲ್ಲಿ ಹುಟ್ಟಿದನು. ವಿಮಲದೇವನು ಹಸ್ತಿನಾಪುರದ ರಾಜನಾದ ಜಯದತ್ತಮಹಾರಾಜನ ಹೆಂಡತಿ ವಿಜಯಮಹಾದೇವಿಯ ಹೊಟ್ಟೆಯಲ್ಲಿ ಗುರುದತ್ತನೆಂಬ ಮಗನಾಗಿ ಹುಟ್ಟಿ ಕಾಲಕ್ರಮದಲ್ಲಿ ತಂದೆಯ ರಾಜ್ಯಕ್ಕೆ ಬಂದು ಚಂಪಾಪುರದ ಧಾತ್ರೀವಾಹದ ಮಹಾರಾಜನ ಮಗಳಾದ ಅಭಯಮತಿಯನ್ನು ಮದುವೆಯಾಗಿ ಸುಖದಿಂದಿದ್ದನು.

ಇತ್ತ ವಜ್ರದಾಡನು ನರಕದಿಂದ ಬಂದು ನೀಲಗಿರಿಯೆಂಬ ಪರ್ವತದ ಹುಲಿಯಾಗಿ ಹುಟ್ಟಿ ಅದರ ತಪ್ಪಲಲ್ಲಿದ್ದ ಜನರನ್ನೆಲ್ಲಾ ಕಾಡುತ್ತಿದ್ದನು. ಅಲ್ಲಿಯ ಪ್ರಜೆಗಳು ಅದರ ಕಾಟವನ್ನು ತಡೆಯಲಾರದೆ ಗೋಳಿಡಲು ರಾಜನು ಹೋಗಿ ಪೂರ್ವವೈರದಿಂದ ಹುಲಿಯು ಗುಹೆಯತುಂಬ ಪುಳ್ಳೆಗಳನ್ನು ಒಟ್ಟಿಸಿ ಬೆಂಕಿ ಹೊತ್ತಿಸಿದನು. ಹುಲಿಯು ಒಳಗೇ ಬೆಂದು ಸತ್ತು ಪಳ್ಳಖೇಟವೆಂಬ ಊರಿನಲ್ಲಿದ್ದ ಇಳಾಭರಣನೆಂಬವನ ಹೆಂಡತಿ ಕಂಟಕಿಯೆಂಬಾಕೆಯ ಹೊಟ್ಟೆಯಲ್ಲಿ ಹಲಮುಖನೆಂಬ ಮಗನಾಗಿ ಹುಟ್ಟಿತು.

ಗುರುದತ್ತ ಮಹಾರಾಜನು ಅಮೃತಾಶ್ರಯಭಟ್ಟಾರಕರಿಂದ ತನ್ನ ಪೂರ್ವಜನ್ಮ ವೃತ್ತಾಂತವನ್ನು ತಿಳಿದು ವೈರಾಗ್ಯಹುಟ್ಟಿ ತಪಸ್ವಿಯಾಗಿ ತಿರುಗುತ್ತ ಪಳ್ಳಖೇಟಪುರದಲ್ಲಿ ಬಂದು ನಿಂತನು. ಅಲ್ಲಿ ಹಲಮುಖನು ತನ್ನ ಗದ್ದೆಗೆ ಉಳಲೆಂದು ಹೋಗುತ್ತ ದಾರಿಯಲ್ಲಿ ನಿಂತಿದ್ದ ಗುರುದತ್ತಭಟ್ಟಾರಕರನ್ನು ಕುರಿತು 'ಇಲ್ಲಿಗೆ ನನ್ನ ಹೆಂಡತಿ ಅನ್ನವನ್ನು ತೆಗೆದುಕೊಂಡು ಬರುತ್ತಾಳೆ; ಇಲ್ಲಿ ಕೆಸರಾಗಿದ್ದದ್ದರಿಂದ ಪಶ್ಚಿಮದಿಕ್ಕಿನ ಗದ್ದೆಗೆ ಹೋದನೆಂದು ತಿಳಿಸಿ' ಎಂದು ಹೇಳಿಹೋದನು. ಆದರೆ ಹೆಂಡತಿ ಸಾಯಂಕಾಲದವರೆಗೂ ಅನ್ನವನ್ನು ತರಲಿಲ್ಲ; ಅಲ್ಲಿದ್ದ ಋಷಿಗಳು ನನಗೇನೂ ಹೇಳಲಿಲ್ಲವೆಂದು ಸುಳ್ಳುನುಡಿದಳು. ಅವಳ ಮಾತನ್ನು ಕೇಳಿ ಹಲಮುಖನು ಕೋಪಗೊಂಡು ಗುರುದತ್ತನ ಒಟ್ಟೆಗೆ ಎಣ್ಣೆಯನ್ನು ಹುಯ್ದು ಹೊತ್ತಿಸಿದನು. ಆದರೆ ಆತನು ಎಲ್ಲವನ್ನೂ ತೊರೆದು ಕೇವಲ ಜ್ಞಾನಿಯಾಗಿ ನಿಲ್ಲಲು ಚತುರ್ವಿಧ ದೇವತೆಗಳೂ ಕೇವಲಿಪೂಜೆಯನ್ನು ಮಾಡಿ ನಾನಾವಿಧದಿಂದ ಸ್ತುತಿಸಿದರು. ಇದನ್ನು ನೋಡಿ ಹಲಮುಖನು ಹೆದರಿ ತನ್ನ ಹಿಂದಿನ ವೃತ್ತಾಂತವನ್ನೆಲ್ಲ ತಿಳಿದು ವಿರಕ್ತನಾಗಿ ದೀಕ್ಷೆಯನ್ನು ಪಡೆದನು.

ಧರ್ಮಾಮೃತಂ

ದಶಮಾಶ್ವಾಸಂ

ಶ್ರೀದಯಿತೆಗೆ ನಿರ್ವಾಣ
ಶ್ರೀದಯಿತೆಗೆ ದರ್ಶನಾಂಗಮೆಂಟುಂ ಚಿತ್ತಾ ।
ಹ್ಲಾದಕರಮೆಂದು ನಂಬಿದ [1]
ನಾದರದಿಂ ಸುಕವಿನಿಕರಪಿಕಮಾಕಂದಂ ॥ ೧

[ಅಂತು ಮುಕ್ತಿಶ್ರೀಶೀಘ್ರಾಕರ್ಷಣಮಾಗಿಸುವ ದರ್ಶನಾಂಗಮುಮಂ ಲೇಸಾಗಿ ಕೇಳ್ದು ಶ್ರೇಣಿಕಮಹಾರಾಜಂ ವಿಶ್ವಲೋಕೈಕವಂದ್ಯರೆನಿಸಿದ ಗೌತಮಸ್ವಾಮಿಗಳ್ ಪೊಡೆಮಟ್ಟು ಸುಗತಿವನಿತೆಯು ಕಡೆಗಣ್ಣ ಚೆಲ್ಲಮೆನಿಸುವ ಕೊಲ್ಲದ ವ್ರತಮನೆನಗಱಿಪುವುದೆಂದು ಕೈಗಳಂ ಮುಗಿದು ಬೆಸಗೊಳ್ವುದುಂ ॥ ೨

ಮುನಿರತ್ನಂ ಪರಮಜಿನೇ
ಶನ ಮತಮಂ ಸಕಲಜೀವಹಿತಮಂ ಗಂಭೀ ।
ರನಿನಾದದಿಂದೆ[ನುಡಿದರ್]
ಮನದೊಳ್ ಕಡುರಾಗಮೊದವೆ ನಲಿಯೆ ನರೇಂದ್ರಂ] [2] ॥ ೩

ಇಂತೆಂದು ಪೇಳ್ದರ್ ॥ ೪

ಬಕ್ರದಂತೆ (ಕ. ಖ.)

ಕರೆಗೊಯ್ದ ಸೀರೆಯಂತೆ ರಾಶಿಗೆ ಬಂದಾರಂಬದಂತೆ ಪತ್ರಂಸೀಳ್ದ ಸಾಲದಂತೆ ಕೈನೀರೆಱೆದ ಮದುವೆಯಂತೆ ಫಲಮಾದ ತೋಂಟದಂತೆ

---

[1] ಕರನೆನಿಸಿ ಮೆರೆದಿಹ (ಕ. ಖ.)   [2] ಅಂತು ದರ್ಶನಮುಮನೆಂಟಂಗಮುಮಂ ಮನದೆಱಕದಿಂ ಕೈಕೊಂಡು ಮುಂದಣ ಮುಕ್ತಿವನಿತೆಯ ಚಲ್ಲೆಗಂಗಳೆನಿಸುವ ಕೊಲ್ಲದವ್ರತದ ಕಥೆಯುಂ ಬೆಸಸಿಮೆಂಬುದುಂ (ಗ)

ಕೈಗರ್ಚಿದೂಟದಂತೆ ಗೆಲ್ಲಂಗೊಂಡ ಕಾಳಗದಂತೆ ಕಾಲ್ವಿಡಿದ ನಲ್ಲಳಂತೆ
ಮಿಾಸೆಬಂದ ಜವ್ವನದಂತೆ ಪೊತ್ತಿಸಿದ ಸೊಡರಂತೆ ದರ್ಶನದೆಂಟಂಗ
ದೊಳಂ [1] ಮುನ್ನಂ ಸಂಪೂರ್ಣನಾಗಿ ನೆರೆದು, ಮಾಡಿದ ಮನೆಯಂ
ಪುಗುವಂತೆ ಪಣ್ಣಿದಾನೆಯನೇಱುವಂತೆ ಮುಡಿಯನುಡುವಂತೆ ಸಮೆದಾ
ಭರಣಮಂ ತುಡುವಂತೆ ಪರಿದಾಡುವ ಮಗನಂ ಮುದ್ದಾಡುವಂತೆ
ಸಜ್ಜನಳಾದ ಸೂಳೆಯಂ ಸಿಂಗಾರಂಗೆಯ್ದಂತೆ ತನಗಾದೂರಂ ಸೇರು
ವಂತೆ [2] ಹಿತವಂಗೆ ಕಾರ್ಯಮನಱಿಪುವಂತೆ ಬುದ್ಧಿವಂತನಪ್ಪ ಮಗಂಗೆ
ಬಯ್ಕೆಯಂ ತೋಱುವಂತೆ ಕೇಡಿಂಗ[ಂ ಬಡತನಕ್ಕಮ]ಪ್ಪ ಪೆಂಡತಿಗೆ
ಮನೆವಾರ್ತೆಯಂ ನುಡಿವಂತೆ ಕೊಲ್ಲದ ವ್ರತಮಂ ಕೈಕೊಂಡು ॥ ೫

ಮನಮೊಸೆದು ನಡೆದನಪ್ಪೊಡೆ
ಮನಕತಮಂ ನೋವನೆಲ್ಲಿಯುಂ ಪೊರ್ದದೆ ಮೇ ।
ದಿನಿಪೂಜ್ಯನಾಗಿ ಮುಕ್ತ್ಯಂ
ಗನೆಗಾತನೆ ಕಾಮನೆನಿಸಿ ಸೊಗಯಿಸಿ ತೋರ್ಕುಂ ॥ ೬

ಇನ್ನೀ ಸುವ್ರತದೊಳಾದ ಫಲಮೆಂತಪ್ಪುದೆಂದೊಡೆ ॥ ೭

[ಭರತಕ್ಷ್ಮಾವನಿತೆ ಮನೋ
ಹರಮಾಗುಟ್ಟಿರ್ದ (ಪೊಚ್ಚ) ಪೊಸಚೆನ್ನದವೋಲ್ ।
ಕರಮೊಪ್ಪುವುದೊದವಿದ ತ
ತ್ಪುರಂಗಳಂ ಶೋಭೆವೆತ್ತು ಮಾಳವದೇಶಂ] ॥ ೮

ನೆಗೞ್ದ ದಾ ಮಾಳವೋರ್ವೀವಳಯದೊಳಮರಾಧೀಶನಂತಪ್ಪ ಸದ್ಭೋ
ಗಿಗಳಂ ದೇವೇಂದ್ರಧಾತ್ರೀರುಹಮನಿೞಿಸಿ ಕಯ್ವಾರದಿಂದೀವ ಸತ್ತ್ಯಾ
ಗಿಗಳಂ ಶ್ರೇಯಾಂಸನೊಳ್ ಮಚ್ಚರಿಸಿ ಬಿಡದೆ ನಿರ್ಲೋಭದಿಂದೀವ ಸದ್ದಾ
ನಿಗಳಂದುಜ್ಜೈನಿಯೆಂಬಾಪುರವರಮೆಸೆಗುಂ ನಾಡೆಯುಂ ಶೋಭೆಯಿಂ
ದಂ ॥ ೯

---

1 ಮುನ್ನಂ ದರ್ಶನದೊಳ್ (ಗ)   2 ಊರನೆಱೆವಂತೆ (ಗ)

ಆ ಪುರಮನಾಳ್ವಂ ವಿಶ್ವಂಧರಮಹಾರಾಜನಾತನ ರಾಜಶ್ರೇಷ್ಠಿ ಗುಣಪಾಲನೆಂಬನಾತನ ಭಾರ್ಯೆ ಧನಶ್ರೀಯೆಂಬಳ್ ॥ ೧೦

[ಸುರರಾಜನ ಸತಿಗೆ ವಿದ್ಯು
ಚ್ಚರರಾಜನ ಸತಿಗೆ ಕಾಮದೇವನ ಸತಿಗ ।
ಚ್ಚರಿ ಜಿನಭಕ್ತಿಯೊಳಂ ಸುಂ
ದರರೂಪಿನೊಳಂ ಸಹಸ್ರಮಡಿ ಮಿಗಿಲೆನಿಪಳ್ ॥ ೧೧

ಸುರರಾಜಂಗಂ ಖಚರೇ
ಶ್ವರಂಗಮಾರಯ್ದು ನೋೞ್ಪೊಡಿಮ್ಮಡಿ ಮಿಗಿಲು ।
ರ್ವರೆಯೊಳ್ ಜಿನಭಕ್ತಿಯೊಳಂ
ಸಿರಿಯೊಳಮೈಶ್ವರ್ಯದೊದವಿನೊಳಮಾಪರದಂ ॥ ೧೨

ನೆಗೞ್ದಾ ಗುಣಪಾಲಂಗಂ
ಮೃಗನಯನೆಯೆನಿಪ್ಪ ತದ್ಧನಶ್ರೀಗಂ ಕೈ ।
ಮಿಗೆ ರಾಗಂ ಪುಟ್ಟಿದಳು
ರ್ವರ್ಗೆ ಲಕ್ಷ್ಮಿಯೆ ಪುಟ್ಟುವಂತೆ ಕನ್ಯಾರತ್ನಂ] [1] ॥ ೧೩

ಸುಬಂಧುಶ್ರೀಯೆಂಬಳಂತವರ್ ಸುಖ [ಸಂಕಥಾವಿನೋದ] ದಿಂದಿರ್ಪುದುಂ ಒಂದುದಿವಸಂ [ಧನಶ್ರೀ ಬೆಳಗಪ್ಪ ಜಾವದೊಳ್ ಸುರಗಜಮುಂ ಚಂದ್ರನುಮಾದಿತ್ಯನುಂ ತನ್ನಲ್ಲಿಗೆ ಬಂದುದಂ ಕನಸುಗಂಡು ನೇಸಱ್ ಮೂಡುವುದುಮೆೞ್ದು ತುರ್ ಗುಣಪಾಲ ಸೆಟ್ಟಿಗಱಿಪುವುದುಂ ಸೆಟ್ಟಿ ತತ್ಸ್ವಪ್ನಫಲಂಗಳಂ ಋಷಿಯರಲ್ಲಿ ಬೆಸಗೊಳ್ವಮೆಂದು ಪಲವುತೆಱದರ್ಚನೆವೆರಸು ಬಸದಿಗೆ ವಂದು ಜಿನಭವನಮಂ ಮೂಱುಸೂೞ್ಬಲಗೊಂಡು ಒಳಗಂ ಪೊಕ್ಕು ದೇವರನರ್ಚಿಸಿ ಪೊಡೆಮಟ್ಟು ಶ್ರುತಮುಮಂ ಋಷಿಯರುಮಂ ಪೂಜಿಸಿ ಭಕ್ತಿಯಿಂ ವಂದಿಸಿ ವಿನಯದಿಂದಿರ್ವರುಂ ಕೈಮುಗಿದು ಕನಸುಗಳ ಫಲಮಂ ಬೆಸಗೊಳ್ವುದುಂ ಅವರಿಂತೆಂದರ್ ॥ ೧೪

[1] ಆ ಇರ್ವರ್ಗಂ ಪುಟ್ಟಿದ ಮಗಳ್ (ಗ)

ಸರಸಿರುಹನೇತ್ರೆ ಸುರಸಿಂ
ಧುರಮಂ ಕಂಡುದಱಿನಧಿಕಜಿನಭಕ್ತನಮು ।
ರ್ವರೆಪೂಜ್ಯನಂ ಮುನೀಶ್ವರ
ಚರಣಾಂಭೋಜಾತಭೃಂಗನಂ ನೀಂ ಪಡೆವೈ ॥ ೧೫

ಶಶಿಯಂ ಕಂಡುದಱಿಂದಂ
ಶಶಿಮುಖಿ ತತ್ವಜ್ಞನಂ ಮಹಾಪ್ರಭುವಂ ಸಂ ।
ತಸದಿಂದೆ ಪಡೆವೆ ಮಗನಂ
ಕುಸುಮಾಯುಧನಿಭನನುದಿತಧರ್ಮಾನ್ವಿತನಂ ॥ ೧೬

ರವಿಯಂ ಕಂಡುದಱಿಂದಂ
ಧವಳಾಕ್ಷಿ ಜಿನೇಂದ್ರಸಮಯವರ್ಧನನಂ ಮಾ ।
ನವರತ್ನನಂ ಧರಿತ್ರೀ
ಧವನಂ ಪಡೆವೈ ಮನೋಜನಿಭನಂ ಮಗನಂ ॥ ೧೭

ಎಂಬುದುಮವರಿರ್ವರುಂ ಸಂತಸದಂತಮನೆಯ್ದಿ "ಸವಣೋ ಅಮೋಘವಅಣೋ" ಎಂಬ ಋಷಿವಾಕ್ಯಮೆಂತುಂ ತಪ್ಪಲಱಿಯದೆಂದು ನಿಶ್ಚಯಿಸಿ ನಂಬಿ ದೇವರ್ಗಂ ಪುನರ್ನಮಸ್ಕಾರಂಗೆಯ್ದು ಮನೆಗೆ ವಂದು ಮನಮೊಸೆದಿರ್ಪುದುಂ ಕೆಲವುದಿವಸಕ್ಕೆ ಧನಶ್ರೀಗೆ ಗರ್ಭಮಾಗಿ ಜಿನೇಂದ್ರಪೂಜೆಯಂ ಮಾಡಲುಂ ಜಿನೇಂದ್ರ ಪೂಜೆಗಳಂ ನೋಡಲುಂ ಜಿನಾಗಮಮನೋದಲುಂ ಜಿನಮುನಿವರರಂ ಬಂದಿಸಲುಂ ಮಿಥ್ಯಾದೃಷ್ಟಿಗಳ್ಗಂಜಲುಂ ದಿವ್ಯಾಹಾರಮನುಣಲುಂ ಬಸದಿಗೆ ಪೋಗಲುಂ ಪಲರಂ ಪೊಡೆಮಡಿಸಿಕೊಳಲುಂ ಸಿಂಹಾಸನಮನೇಱಲುಂ ಭವ್ಯರಂ ಸದ್ಧರ್ಮಮಂ ಪಕ್ಷಪಾತದಿಂ ರಕ್ಷಿಸಲುಂ ಪ್ರಜೆಗೆಡೆಯಾಗದಂತುಪಕಾರಂ ಮಾಡಲುಂ ಶ್ರಾವಕಗೋಷ್ಠಿಯೊಳಿರಲುಂ ಜಿನಸನ್ನಿಧಾನದೊಳೋಲಗಂಗುಡಲುಂ ಜಿನಸ್ತವನಂಗಳನೆ ಮಾಣದೆ ಪಾಡಲುಂ ತ್ರಿಷಷ್ಟಿಶಲಾಕಾಪುರುಷರ ಕಥೆಗಳಂ ಕೇಳಲುಂ ಬಯಕೆ ತಿಣ್ಣಮಾಗೆ ॥ ೧೮

ತರುಣಿಗೆ ಸಂತಸಮಪ್ಪಂ
ತಿರೆ ಗೀತಾತೋದ್ಯವಾದ್ಯನೃತ್ಯಮನರ್ಹ ।

ತ್ಪರಮೇಶ್ವರನಾಸ್ಥಾನದೊ
ಳಿರುಳುಂ ಪಗಲುಂ ಸುಭೋಗಮಂ ಮಾಡಿಸುವರ್ ॥ ೧೯

ಪಲವುಪಚೀವೆರಸು ಕೆಲದೊಳ್
ಲಲನೆಯರೋಲಗಿಸೆ ಗೀತವಾದ್ಯಂ ಪದೆದೆ ।
ತ್ತಲುಮೆಸೆಯೆ ಜಿನರ ಪೂಜೆಯ
ನಲಂಫ್ಯಗುಣಸರ್ತಿಯಾಗೆ ಪೊಱಮಡಿಸುತ್ತುಂ ॥ ೨೦

ಮೊಸರಿಂ ಪಾಲಿಂ ಘೃತದಿಂ
ಪೊಸಕಬ್ಬಿನ ರಸದಿನಾಗಳುಂ ಜಿನನಾಥಂ ।
ಗೊಸೆದಭಿಷೇಕವನೊಪ್ಪಿರೆ
ಬಿಸರುಹಮುಖಿಗರ್ತಿಯುಪ್ಪಿನಂ ಮಾಡಿಸುವಂ ॥ ೨೧

ಇರವಂತಿಯು ಜಾಜಿಯು ಪಾ
ದರಿಯು ಸರೋರುಹದ ಪೂಗಳಿಂದಾದಿಜಿನೇ ।
ಶ್ವರನಾದಿಯಾದ ತೀರ್ಥಂ
ಕರರಂ ತರಳಾಕ್ಷಿಯು ಬಯಕೆ ಪೋಪಿನಂ ಪೂಜಿಸುವಂ ॥ ೨೨

ಅರಲಿಂ ಕುಂಕುಮದಿಂ ಕ
ರ್ಪೂರದಿಂ ತೀರ್ಥಕರದಿವ್ಯಚೈತ್ಯಾವಳಿಯಂ ।
ಸರಸಿಜನೇತ್ರೆಯು ಮುಂದಾ
ದರದಿಂ ಲೇಸಾಗಿ ಮಾಡುವಂ ಪೂರಣೆಯಂ ॥ ೨೩

ಪಸಿಯಡಕೆಯು ನಾರಂಗದ
ಮಿಸುಗುವ ಸನ್ಮಾದುಫಲದ ಫಲನಿಕರದಿನ ।
ರ್ಚಿಸುತುಂ ಮೃಗೇಂದ್ರಮಧ್ಯೆಯು
ಪೊಸಬಯಕೆಯಲಂಪು ಪೋಪಿನಂ ಜಿನಪತಿಯಂ ॥ ೨೪

ಸರಸಕರಣವೆಳರುಣಂಬಡೆ (?)
ಕರಮೊಪ್ಪುವ ಬಂಧಕರಣವೆಂಬಿವಱಿಂದ ।

ಚ್ಚರಿಯಾಗೆ ಜಿನರ ಕೀರ್ತಿಯ
ನರವಿಂದಾನನೆಯು ಮುಂದೆ ನೆಱೆ ಪಾಡಿಸುತುಂ ॥ ೨೪

ಭರತೇಶ್ವರನಷ್ಟಾಪದ
ಗಿರಿಯೊಳ್ ಲೇಸಾಗಿ ಸಮೆದ ಚೈತ್ಯಾವಳಿಯುಂ ।
ತರಳಾಕ್ಷಿಗೆ ಬಣ್ಣಿಸುತುಂ
ಪುರುಪರಮೇಶ್ವರನ ಚರಿತೆಯುಂ ಕೇಳಿಸುತುಂ ॥ ೨೫

ಜಿನರ ಪ್ರತಿಮೆಗಳಂ ನೆ
ಟ್ಟನೆ ಪೊನ್ನಿಂ ಮಾಡಿ ಪಲವುತೆಱದರ್ಚನೆಯಿಂ ।
ದನವರತಂ ಪೂಜಿಸುತುಂ
ವನಜಾಸ್ಯೆಗೆ ಪಿರಿದು ಸಂತಸಂ ಪುಟ್ಟುವಿನಂ ॥ ೨೬

ಮತ್ತಂ ಜಿನಭವನಂಗಳೊಳ್ ನಾನಾವಿಧರಂಗವಲ್ಲಿಯನಿಕ್ಕುಸುತ್ತುಂ ಪೊನ್ನಿಂ ಸಮೆದ ವಂಶಮಾಲೆಗಳಂ ಕಟ್ಟಿಸುತ್ತುಂ ನಾನಾಧ್ವಜಂಗಳನೆತ್ತಿಸುತ್ತುಂ ಆಹಾರಾಭಯಭೈಷಜ್ಯಶಾಸ್ತ್ರದಾನಮಂ ಮಾಡಿಸುತ್ತುಂ ಧನಶ್ರೀಯ ಬಯಕೆಯನೀಮಾರ್ಗದಿಂ ಸಲಿಸುತ್ತುವಿರ್ಪುದುಮೊಂದುದಿವಸಂ ವಿಶ್ವಂಧರಮಹಾರಾಜಂ ಮಹಾವಿಭೂತಿಯಿಂ ಗಂಧಗಜಾರೂಢನಾಗಿ ವನಕ್ರೀಡೆಗೆ ಪೋಗುತ್ತುಂ ತನ್ನ ಮನೆಯ ಪೆಱಗಣ ನಂದನವನದೊಳ್ ಶೃಂಗಾರಂಗೆಯ್ದು ವಿರಾಜಿಸಿ ವಿಳಾಸಿನೀಜನಪರಿವೃತೆಯಾಗಿ ಪೊನ್ನುಯ್ಯಾಲನಾಡುವ ಸುಬಂಧುಶ್ರೀಯಂ ತೊಟ್ಟನೆ ಕಾಣ್ಬುದುಂ ॥ ೨೭

ನನೆಯಂಬಂ ತೊಟ್ಟು ಕಾಮಂ ಮುಳಿದು ನರಪನಂ ನೋಡಿ ಲೇಸಾಗಿ ಭೋರ್ಭೋ
ರೆನೆ ಕಾಯ್ಪಿಂದಾರ್ದು ಬಾಣಂ ನಡೆ ಗಱಿಯನಗುರ್ವಪ್ಪಿನಂ ಕಚ್ಚಿ ಬೇಗಂ
ಮನದಿಂ ಮೆಯ್ಯಂ ಪಾಯ್ದು ಮತ್ತಂ ತುಱುಗಿ ನಡುವಿನಂ ದೇಹಮಂ ನಾಡೆಯುಂ ಕಾ
ಮಿನಿಯಂ ಶ್ಯಾಮಾಂಗಿಯಂ ಮತ್ತೆನಿಸದೆ ಮಱೆಗೊಂಡಿರ್ದು ತೊಳ್ದುಚ್ಚನಾಗಳ್ ॥ ೨೮

ಅಂತಾಪ್ರೊಸನನೆಯ ಬಿರಿಮುಗುಳ ಕುಸುಮಬಾಣಂಗಳಂ ತೋಡುಂ ಬೀಡುಂ ಕಾಣಬಾರದೆನಿಸಿ ಕಿವಿವರಂ ತೆಗೆದು ನೇರನಱಿದೆಸೆವುದುಂ ವಿಶ್ವಂಭರಮಹಾರಾಜಂ ಝುರ್ಝುರಿತಗಾತ್ರನಾಗಿ ಚಿತ್ರದ ರೂಪಿನಂತೆ ಮಿಟ್ಟನೆ ಮಿಡುಕದೆ ನಿಂದು ವಿರಹಾನಳನಿಂ ಬೆಂದು ಸೈರಿಸಲಾಱದೆ ॥ ೩೦

ತಡೆಯದೀವನಜಾತನೇತ್ರೆಯೊಳಂಗಜಾತನ ಕೈಯ ಕೈ
ಪೊಡೆಯೆನಿಪ್ಪ ವಿದಗ್ಧೆಯೊಳ್ ನೆರೆದಂದು ಕಾಯ್ದುಱಿ ಚುಚ್ಚುವೆ
ನ್ನೊಡಲ ಮನ್ಮಥತಾಪವೋಡುಗುಮಲ್ಲದಂದು ಮನೋಭವಂ
ಗೊಡಲನೊಪ್ಪಿಸಿ ಪೋಗಲೊಲ್ಲದೆ ಬಾಱಬಾರದು ನೋವಿನಿಂ ॥ ೩೧

ಕನ್ನೆಯನೊಯ್ಯನೆ ಮಱೆಗೊಂ
ಡೆನ್ನಂ ಕಯ್ಗಾಯದೆಚ್ಚಪಂ ಮನಸಿಜನೀ ।
ಕನ್ನೆಯನಗಲ್ದು ಬಿರುದಿಂ
ದೆನ್ನಂ ಮೂದಲಿಸಿ ಕಾದಲಾರ್ಪನೆ ಕಾಮಂ ॥ ೩೨

ಅರಲಂಬಂ ಪಿಡಿದೀತಂ
ಸ್ಮರನುರ್ವಿಯ ಜನಮನೆಚ್ಚು ನೋಯಿಸಿ ತವಿಪಂ ।
ಸರಲಂಬಂ ಪಿಡಿದಿಸುವೊಡೆ
ನರರಂ ಝುಷಕೇತು ಕೊಂದು ಕೂಗದೆ ಮಾಣಂ ॥ ೩೩

ತನುವಿಲ್ಲದೆಯುಂ ಲೋಕದ
ಜನಮಂ ಕಯ್ಗಾಯದೆಚ್ಚಪಂ ಕೂಗಿಡಲಿಂ ।
ತನುವುಂಟಪ್ಪೊಡೆ ರತಿನಾ
ಥನ ಕಯ್ಯೊಳ್ ಮಿಡುಕಿ ಪೋಪ ಗಂಡರುಮೊಳರೇ ॥ ೩೪

ಬಿಲ್ಲೊಳ್ ಕೋವಿದರೆನಿಸಿದ
ಬಿಲ್ಲಾಳಪ್ಪವರನಱಿವೆನತನುವ ತೆಱದಿಂ ।
ನಿಲ್ಲದೆ ಮೆಯ್ಯೊಳ್ ಪುಣ್ಣಿನಿ
ಸಿಲ್ಲದೆ ವೇದನೆಯ ಮಾಳ್ಪ ಗಂಡರುಮೊಳರೇ ॥ ೩೫

ಎಂದು ಮನದೊಳ್ ಗುಜುಗುಜುಗೊಂಡು ದಿವಿಜರಂತೆ ಮೆಯ್ಯಿಕ್ಕದೆ ನಿರ್ಜಿತರಾದರಂತೆ ಮಿಡುಕದೆ ಕಣ್ಣುಳ್ಳ ದೈವದಂತೆ ಕಣ್ಣಂ ಬಿಟ್ಟು ಮರನಂ ನಟ್ಟಂಬಿನಂತೆ ದಿಟ್ಟಿಯುಂ ತೆಗೆಯಲಾಱದೆ ಬೇಗೆವೋದ ಬೆಟ್ಟದಂತೆ ಮೆಯ್ಬಿಸುಪನಾಗೆ, ಕಾಳಗದ ನಡುವಾದ ಪಂದೆಯಂತೆ ನಡನಡ ನಡುಗಿ, ಉದ್ದಮೇಱಿದ ಪಸುಗೂಸಿನಂತೆ ಪೋಗಲಱಿಯದೆ, ಒಡೆಯರ ಮನೆಗೆ ಬಂದ ಬಂಟರಂತೆ ಕನ್ನೆಯನೆ ನೋಡಿ, ಕೋಣಂ ಪೊಕ್ಕ ಮಡುವಿನಂತೆ ಮನದೊಳ್ ಕದಡಿ, ಕಿಱಿದಾನುಂಬೇಗಮಿರ್ದು, ವನಕ್ರೀಡೆಗೆ ಪೋಗಲೊಲ್ಲದರಮನೆಗರಸಂ ಮಗುಳ್ದು ಬಂದು ಕಣ್ಣೊಳಂ ಮನದೊಳಂ ಸುಬಂಧುಶ್ರೀಯ ರೂಪೆ ತೋಱೆ ಮತಿಗೆಟ್ಟು ವಿಹ್ವಲೀಭೂತನಾಗಿ ಸೈರಿಸಲಾಱದೆ ॥ ೪೬

ಪೊಸನೀರೇಜದ ನಾಳದಿಂ ನಿಮಿರ್ದ ನೀಳಾಂಭೋಜಪುಷ್ಪಂಗಳಂ
ಪೊಸತಪ್ಪಾಮ್ರಮಹೀಜದಾತಳಿರ್ಗಳಂ [1] ಚೆನ್ನೆಯ್ದಿಲಿಂ ಬಾಳೆಯಿಂ
ದೊಸೆದುಂ ಮಾಡಿದ ಪಾಸಿನೊಳ್ ಪೊರಳುತುಂ ಜೊಂಪಂಗಳೊಳ್ ಪೋಗಿ ಸೇ
ವಿಸುತುಂ ಚಂದನಪಂಕದೊಳ್ ಮುೞುಗುತುಂ ಶೀತಾಂಬುವಂ ಮಿಾಯುತುಂ ॥ ೪೭

ಕಾಮಸಂತಾಪಮನೆಂತುಂ ಮಾಣಿಸಲಾಱದೆ ಪೆರ್ಗಡೆಗಳಂ ಕರೆದು ತನ್ನ ಮನದ ಕಾರ್ಯಮನೆಲ್ಲಮನಿಂಬಾಗೆ ಪೇೞ್ದು ॥ ೪೮

ಆವಾವುಪಾಯದಿಂದಂ
ನೀವಿಂದು ಸುಬಂಧುವಂ ಮನೋಹರಮಪ್ಪಂ ।
ತಾವೆಗಮೆನ್ನೊಳ್ ನೆರೆವುವು
ದಾವೆಗಮಿಾಂ ನೆರೆಪದಂದು ನೋವೆಂ ತಿಬ್ಬಂ ॥ ೪೯

ಎಂದು] [2] ಪೆರ್ಗಡೆಗಳಂ ಗುಣಪಾಲಸೆಟ್ಟಿಯಲ್ಲಿಗೆ ಸುಬಂಧುಶ್ರೀಯುಂ ಬೇಡಿಯಟ್ಟುವುದುಂ [ಅವರ್ ಗುಣಪಾಲಸೆಟ್ಟಿಯ ಮನೆಗೆ

---

1 ಪಂದುತಳಿರಿಂ (ಕ. ಬ.)

2 ವಿಶ್ವಂಭರಮಹಾರಾಜಂ ಸುಬಂಧುಶ್ರೀಯ ರೂಪಂ ಕಂಡು ಸೋಲ್ತು (ಗ)

ವೆರ್ಪುದುಂ ಸೆಟ್ಟಿ ಪೆರ್ಗಡೆಗಳಂ ವಸ್ತ್ರತಾಂಬೂಲಾದಿಗಳಂ ಮನ್ನಿಸಿ ನಿಮ್ಮ ಬಂದ ಕಾರ್ಯಮನೆಮಗಱಿಯೆ ಪೇೞಿಮೆಂಬುದುಮವರಿಂತೆಂದರ್ ॥ ೪೦

ಮದಗಜಗಮನೆಯನಂಬುಜ
ವದನೆಯನಳಿನೀಲಕುಟಿಲಕುಂತಳೆಯೆಂದೆಂ ।
ಬಳ ಹಾವಭಾವಲಾವ
ಣ್ಯದ ನೆಲೆಯಂ ಜಿನಪದಾಬ್ಜಮದಮಧುಕರೆಯಂ ॥ ೪೧

ನಿಮ್ಮ ಮಗಳಪ್ಪ ಸುಬಂಧುಶ್ರೀಯಂ ನಂದನವನದೊಳುಯ್ಯಾಲಾಡುವಳಂ ವಿಶ್ವಂಧರಮಹಾರಾಜಂ ವನಕ್ರೀಡೆಗೆ ನೃಪಕುಮಾರಪರಿವೃಢನಾಗಿ ಪೋಗುತ್ತುಂ ಕಂಡು ಕಣ್ಬೇಟಂಗೊಂಡು ಕಾಮಸಂತಾಪದಿಂ ಕರಮಲ್ಲದೆ ನೊಂದು ರಾಜಮಂದಿರಕ್ಕೆ ಬಂದು ಕುಸುಮಾಸ್ತ್ರನ ಕುಸುಮಶರದ ಕೋಳಂಗಿರಲಾಱದೆಮ್ಮನಿಲ್ಲಿಗೆ ಸುಬಂಧುಶ್ರೀಯಂ ಬೇಡಿಯಟ್ಟಿದಂ; ನೀವುಂ ತಲೆಯೊಡೆಯರ್ಗೆ ತಲೆಸುತ್ತುಂ ಮಾರ್ಕೊಂಡರೆನಿಸಿ ನಗೆಯಂ ಮಾಡಿಕೊಳ್ಳದೆ ಸರ್ವಸ್ವಕ್ಕವೊಡೆಯನಪ್ಪ ಕುಲಸ್ವಾಮಿಗೆ ಮಾರ್ಕೊಳ್ಳದೆ ಕೂಸಂ ಕುಡುವುದೆಂಬುದುಂ ಪೆರ್ಗಡೆಗಳ ಮಾತಂ ಕೇಳ್ದು ಗುಣಪಾಲಸೆಟ್ಟಿ ಬೆಱಗಾಗಿ ಪೆರ್ಗಡೆಗಳಂ ಚಾಟುಕಾರಿಸಲೆಂದು ಕೃತಕವಚನಗಳಂ ನಂಬೆ ನುಡಿದು ಮತ್ತಮಿಂತೆಂದಂ ॥ ೪೨

ಅರಸಂ ಗಡ ಪಿರಿದಪ್ಪಾ
ದರದಿಂ ಗಡ ಮತ್ತನೂಜೆಯಂ ಬೇಡಿ ಪುರಂ ।
ದರವಿಭವನಟ್ಟುವಂ ಗಡ
ನರರೆನ್ನಿಂ ಬಿಟ್ಟು ಧನ್ಯರಾರುರ್ವರೆಯೊಳ್ ॥ ೪೩

ಸ್ಮರತಾಪದಿಂದಮುರ್ವೀ
ಶ್ವರನೆನ್ನ ಪ್ರಿಯತನೂಜೆಯಂ ಕಂಡು ಸವಿ ।
ಸ್ತರದಿಂ ಸೋಲ್ತಂ ಗಡ ಮು
ರ್ವರೆಯೊಳ್ ಮತ್ತನಯೆಯಂತು ನೋಂತವರೊಳರೇ ॥ ೪೪

ಪರದರಮಗವೇಕುವರ್ಗೀ
ವರನೊಲವಿಂ ಬೇಡಿ ನಿಮ್ಮನಟ್ಟುವುದೇಕಾ ।
ದರದಿಂ ಸ್ತ್ರೀಯರ ಸೊಬಗಂ
ನಿರಂತರಂ ಬೇಗಮುೞಿಯರೆಂಬರುಮೊಳರೇ ॥ ೪೫

ಎನಗಂ ಮತ್ತೆನ್ನೊಡವೆಗ
ಮನುನಯದಿಂದೊಡೆಯನೆಂದೊಡೆನ್ನಾತ್ಮಜೆಯಂ ।
ಜನಪತಿ ಕುಡವೇೞ್ಕೆಂದೆಲೆ
ವನಿತೆಗೆಕಣ್ಣ ಬುದ್ಧಿಯುೞಿಯಂಭೂಪಂ ॥ ? ೪೬

ತಾನೆನ್ನಲ್ಲಿಗೆ ಕೂಸಂ ಬೇಡಿಯಟ್ಟಿದನೆಂದೊಡೆನ್ನಿಂ ಬಿಟ್ಟು ಧನ್ಯರುಂ ಪುಣ್ಯವಂತರುಮಿಲ್ಲೆಂದು ಮೆಳ್ವಡೆ ನುಡಿದು ಪೆರ್ಗಡೆಗಳನ ರಮನೆಗೆ] [1] ಕಟಿಪಿ ಸೆಟ್ಟಿ ತನ್ನೊಳಿಂತೆಂದಂ ॥ ೪೭

ಜಿನಪದಸೇವೆಯಿಲ್ಲದನ ರೂಪು ವಿಳಾಸ ಮಹೋನ್ನತಿಕ್ಕೆ ಮೇ
ದಿನಿ ಸೊಬಗೊಳ್ಪು ತೇಜ ಮಹಿಮಾಸ್ಪದಮುದ್ಧತಿ ವಿದ್ಯೆ ಶೌಚಮಾ
ತನ ವಿಭವಂ ಕುಲಂ ದಲಮುಮಾರ್ಪು ಗುಣಾಳಿ ಗಾಡಿ ಯೌ
ವನಮಿನಿತುಂ ಕುಟುಂಬನರಸಗ್ಗಿಯು ತಣ್ಪು ವಿಷಾನ್ನಭೋಜನಂ ॥ ೪೮

ಗಿರಿಶಿಖರಾಗ್ರದಿಂ ಕೆಡೆಯೆ ನೂಂಕುವುದೊರ್ಮೆಯೆ ಕಟ್ಟಿ ತಂದು ನಿ
ಷ್ಠುರಗಜರಾಜಿಯಿಂ ತುಳಿಸಿ ಕೊಲ್ವುದು ಪೆರ್ಗಡಲಲ್ಲಿ ಗಂಟಲಂ
ಮುರಿದು ತಳರ್ಚದಿಕ್ಕುವುದು ಲೇಸು ಕುದೃಷ್ಟಿಗೆ ಸೋಲ್ತು ಕೂಸನಾ
ದರದೊಳ್ ಬೇಗಮೀವುದಱಿನೆಯ್ದೆ ವಿಚಾರಿಸಿ ನೋೞ್ಪೊಡುರ್ವಿಯೊಳ್ ॥

ಮತ್ತಂ ಮಿಥ್ಯಾದೃಷ್ಟಿಯ ಸಿರಿಯನುರಿಯೆಂದು ಬೆಚ್ಚಲುಂ, ಕುದೃಷ್ಟಿಯ ರೂಪು ಸಂತಾಪಮೆಂದು ನಡುಗಲುಂ, ಸದ್ಧರ್ಮದೂಷಕನ ಮುಖಮಂ ಯಮಗಜಾರಿ ಪೊಯ್ದು ಕೊಲ್ವ ನಖಮೆಂದಂಜಲುಂ, ಕುದರ್ಶನಪ್ರೀತನ ಭೋಗಮಂ ನಾಗವಿಷಮೆಂದು ತಲ್ಲಣಿಸಲುಂ, ಕುಮಾ

1 ಸಂತೋಷಮಾನೆ ಪೆರ್ಗಡೆಗಳ್ಗೆ ನುಡಿದು (ಗ)

ರ್ಗಾನುರಾಗಿಯಪ್ಪರಸನಂ ವಿರಸನೆಂದು ಬಗೆಯಲುಂ, ದರ್ಶನದೂರನ ಶೃಂಗಾರಮಂ ಸಂಹಾರಮೆಂದು ಭಯಂಗೊಳಲುಂ, ನಿಶ್ಶ್ರೇಯಸಶ್ರೀಯನೆಯ್ದುವೆನೆಂಬ ಶ್ರಾವಕಂಗೆ ಬೇೞ್ಪುದಿನಿತಲ್ಲದೆ [1] ದುರ್ಮೋಹದಿಂ ಮನದೊಳಲ್ಕಿರ್ತ್ತು ಮಿಥ್ಯಾದೃಷ್ಟಿಯಪ್ಪನ ರೂಪುಮಂ ವಿಳಾಸಮುಮಂ ಪ್ರತಾಪಮುಮಂ ಸಂಪತ್ತುಮಂ ಕಂಡು ರಾಗಿಸಿ ಪೊರ್ದಿ ಕೂಸುಗುಡುವನುಂ ಕೆಳೆಗೊಳ್ವನುಂ ನರಕಕ್ಕೆ ಭಾಜನನಕ್ಕುಮಲ್ಲದೆ ಶ್ರಾವಕನಪ್ಪ [2] ನೇಗೆಯ್ದುಂ ಸುಗತಿಯನೆಯ್ದಲಾಱೆನೆಂದು ಪರಮಾಗಮಮಂ ಭಾವಿಸಿ ಧನಶ್ರೀಯ ಮನದ [ನಿರ್ಮಳಿಕೆಯುಮಂ ಸಮ್ಯಕ್ತ್ವಮುಮನಾರಯಲೆಂದು ಗುಣಪಾಲಸೆಟ್ಟಿ ಯಿಂತೆಂದಂ ॥ ೫೦

ಧರಣೀವಲ್ಲಭನುಗ್ರವೈರಿಹರಣಂ ಬಾಲಾರ್ಕತೇಜಂ ಮಹೀ
ಶ್ವರವಂದ್ಯಂ ಮನವೊಲ್ದು ಸೋಲ್ತು ಪದಪಿಂ ಸದ್ರಾಗದಿಂದಟ್ಟಿದಂ
ಪಿರಿದುಂ ಸ್ನೇಹದಿನಿಂದು ಕೇಳ ಕನಕಾಂಭೋಜಾಕ್ಷಿಯಂ ಬೇಡಿ ನ
ಮ್ಮರಸಂ ನೋಡ ಸುಬಂಧುವಂ ಧರಣಿಯೊಳ್ ನಮ್ಮಂತು ಮುಂ ನೋಂ
ತರಾರ್ ॥ ೫೧

ಪರದರ ಸಿರಿಯಿಂದರಸರ
ಸಿರಿ ಸರಿಯಲ್ಲದೊಡೆ ಕೂಸನಿತ್ತೊಡಾತನ ದೆಸೆಯಿಂ ।
ಪಿರಿದಪ್ಪುದವಿದ ಶೌರ್ಯಂ
ದೊರೆಕೊಳ್ಗುಂ ಮೇಲೆ ರಾಜ್ಯಮುಂ ಕೈಸಾರ್ಗುಂ ॥ ೫೨

ಕುಲಮಂ ಪೇೞ್ವೊಡೆ ರಾಜಪುತ್ರನದಟಂ ತಾನಲ್ಲನಿನ್ನೆಂಬೊಡು
ಜ್ಜ್ವಲಚಂಡಾಂಶುನಿಭಂ ವಿಭೂರ್ಜಿತಯಶಂ ತಾನಲ್ಲನೆಂಬಂದಿಳಾ
ವಲಯಾಧೀಶ್ವರವಂದಿತಕ್ರಮಯುಗಂ ಶ್ರೀಮಂತನಲ್ಲೆಂಬೊಡ
ಗ್ಗಳಮಪ್ಪಿಂದ್ರಸಮಾನನೂರ್ಜಿತಯಶಂ ಗೀರ್ವಾಣಶೈಲಕ್ಷಮಂ][3] ॥

---

1 ನಿಶ್ಶ್ರೇಯಸಶ್ರೀಯನೆಯ್ದಿಸುವ ಗತಿಯನೇಗೆಯ್ದುಂ ಬಿಸಲಾಱೆನೆಂಬುದಿನಿತಲ್ಲದೆ (ಗ) 2 ಶ್ರಾವಕನೆಯ್ದುವ ಸುಗತಿಯ (ಗ)

3 ನಿರ್ಮಳಿಕೆಯನಾರಯಲೆಂದು (ಗ)

ಸುಬಂಧುಶ್ರೀಯುನರಸಂಗೆ ಕುಡುವೆವೆಂಬುದುಂ ಧನಶ್ರೀ ಸೆಟ್ಟಿಯು ಮಾತಿಂಗೆ ವಿಸ್ಮಯಂಬಟ್ಟು ನೀರೊಳಗಿರ್ದ ನಲ್ಲಳ ನೆಳಲಂ ಕಂಡು ನಲ್ಲಳೆಂದು ಮತಿಗೆಟ್ಟು ಪಾಯ್ದು ಸಾವ ಸಾಧುವಿಟನಂತೆ ನಿತ್ಯಮಲ್ಲದ ಸಂಸಾರಸುಖಕ್ಕಮಲ್ಪಶ್ರೀಗವಾಸೆಗೆಯ್ದು ಮಿಥ್ಯಾದೃಷ್ಟಿಗೆ ಕೂಸಂ ಕೊಟ್ಟು ಮಗವಿಂಗಂ ತನಗಂ ಪಿರಿದಪ್ಪ ನರಕದುಃಖಮಂ ಮಾಡಿ ಕೊಂಡಪನೆಂದು ತನ್ನೊಳೆ ಮಱುಗಿ ಸೆಟ್ಟಿಗಿಂತೆಂದಳ್ ॥ ೫೪

[ಪಲಕಾಲಂ ಸಂಸ್ಕೃತಿಯೊಳ್
ನೆಲೆಗೊಳ್ಳದೆ ಪಿರಿದುಪುಣ್ಯದಿಂದಂ ಪಾಪಂ ।
ತೊಲಗಿದೊಡೆ ನಿನಗೆ ಪುಟ್ಟಿದ
ಳಲಂಘ್ಯಗುಣೆ ರಿಪುಗೆ ಬೆರ್ಚಿ ಮರೆವುಗುವವೊಲುಂ] ॥ ೫೫

ಜಿನಧರ್ಮವೆಂಬುದಂ ಮು
ನ್ನನಂತಭವಭವದೊಳಲ್ಲಿಯುಂ ಪೊರ್ದದೆ ತಿ ।
ಱನೆ ತಿರಿದು ಪುಣ್ಯವಶದಿಂ
ವನರುಹಮುಖಿ ತನ್ನ ಕರ್ಮದೊಂದುಪಶಮದಿಂ ॥ ೫೬

ಕಾಕತಾಳನ್ಯಾಯದಿಂ ನಿನ್ನಂತಪ್ಪ ಮಹಾಪುರುಷನ ಬಸಿಱೊಳ್ ಬಂದು ಜಿನಧರ್ಮಮಂ ಪೊರ್ದಿದಳಂತು ಪೊರ್ದಿದ ಮಗಳಂ ಕಳ್ಗಂಗಂಜಿ[ದರಂ ಪುಸಿಗೊಪ್ಪಿಸಿದರೆಂಬಂತಾನುಂ ಸಿಂಹದ ಬಾರಿಯೊಳ್ ಬರ್ದುಂಕಿದವನಂ ಪಿಟ್ಟಮೆಳಸಿದಂತಾನುಂ ಪಗೆವರ ಕೊಲೆಯಂ ಬಂಚಿಸಿ ಪೋಪನಂ ಕರಡಿಯ ಮುಂತಿಕ್ಕಿದರೆಂಬಂತಾನುಂ] [1] ಮಿಥ್ಯಾದೃಷ್ಟಿಯಪ್ಪನ ರಾಜ್ಯಶ್ರೀಯುಮಂ ಸಂಪತ್ತುಮಮುನ್ನತಿಕ್ಕೆಯುಮಂ ಕಂಡು ಶೂನ್ಯಹೃದಯರಂತೆ ಮೇಲಣನಂತಭವದ ದುಃಖಮಂ ಭಾವಿಸದೆ ಪೆರ್ಚಿಂದಂ ಕೂಸಂ ಕುಡುವೆನೆಂಬ ನಿಮ್ಮ ಮರುಳ್ತನಕ್ಕೆನಗೆ ಪಿರಿದುಂ ವಿಸ್ಮಯಮಾದಪುದು ; ನಿಮ್ಮಂತಪ್ಪ ಸದ್ದೃಷ್ಟಿಗಳುಮಿಂತಪ್ಪ ಕಜ್ಜಮಂ ಮನದೆ ಕೊಳ್ವರೆಂದೊಡಿಂ ಮತ್ತಿನಣಶ್ರಾವಕರ ಮತಿಹೀನತೆಗಂ ಕೇಡಿಂಗಮೆಂಬಲಾಗದು ॥ ೫೭

---

[1] ಸೀರ್ಕರಡಿಯ ಮುಂದಿಕ್ಕಿದರೆಂಬಂತಾನುಂ, ಕಿಚ್ಚಿಂಗೆ ತಲ್ಲಣಿಸಿ ಬಂದವನಂ ಕುದಿವೆಣ್ಣೆಯೊಳಿಕ್ಕಿದರೆಂಬಂತಾನುಂ, (ಗ)

ಸಿರಿ ಭಾವಿಪೊಡೆತ್ತಾನುಂ
ದೊರೆಕೊಳ್ಗುಂ ಜೈನದರ್ಶನಂ ಧಾರಿಣಿಯೊಳ್ ।
ದೊರೆಕೊಳ್ಳದದಱಿನಱಿವೊಡೆ
ಸಿರಿಗಂ ಸದ್ದರ್ಶನಕ್ಕಮೇನಂತರಮೋ ॥ ೫೮

[ಪಲವುಭವಕ್ಕೊರ್ಮೆ ಮಹೀ
ತಳದೊಳ್ ಸಾಮ್ರಾಜ್ಯಲಕ್ಷ್ಮಿ ದೊರೆಕೊಳ್ಗುಂ ನಿ ।
ರ್ಮಳಮಪ್ಪ ಜೈನಧರ್ಮಂ
ಮಳರಹಿತಂ ಬೇಗಮಂತೆ ದೊರೆಕೊಂಡಪುದೇ ॥ ೫೯

ಬಲದಿಂ ಕುತ್ಸಿತದಾನದ
ಫಲದಿಂದೆತ್ತಾನುಮೊರ್ಮೆ ಸಿರಿ ಸಮನಿಸುಗುಂ ।
ಫೇಱಲೆನಲಱಿವುದದಕ್ಕಂ
ಪಱಯಿಲ್ಲದ ದರ್ಶನಕ್ಕಮೇನಂತರಮೋ ॥ ೬೦

ಕಿಡುವ ಸಿರಿಗಳಪಿ ಕೆಮ್ಮನೆ
ಕಿಡದ ಸುಖಾಸ್ಪದಮನೀವ ಸದ್ದರ್ಶನಮಂ ।
ಬಿಡುವಾತಂ ಬಿದರ್ಗಟಮ
ನೊಡಬಡದೆ ಗಂಜಿಗುಡಿವ ಮರುಳಂ ಪೋಲ್ಕುಂ ॥ ೬೧

ಅಱಸಿರಿಗಮಲ್ಪಬುದ್ಧಿಗ
ಮಳಪಿ ಸದಾ ಸುಖಮನೀವ ಸದ್ದರ್ಶನಮಂ ।
ತಿಳಿವಿಲ್ಲದೆ ಬಿಡುವಂ ಭೂ
ತಳಮಂ ಬಿಸುಟಳಪಿ ತಿರಿವ ಮರುಳಂ ಪೋಲ್ಕುಂ ॥ ೬೨

ದರಿಯ ಮರಂ ಸಣ್ಣ ಮರಂ
ಸುರಧನು ತಿರಿದುಂಬ ತಿರಿಕರೊಳ್ ಕೂಟಮಿದೊಂ ।
ದರಿಸಿನದ ಬಣ್ಣಮೆನ್ನದೆ
ಸಿರಿ ಶಾಶ್ವತಮೆಂದು ನಂಬಿ ಪದೆವನೆ ಗಾಂಪಂ ॥ ೬೩

ಮರುಳರಸುತನಂ ಮೇಘದ
ನೆರವಿಯು ನೆರೆಪರ್ಕನುಷ್ಣ ಮಳಪನ ಧನಮು ।
ವರ್ಱೆಯೊಳ್ ಸಂಪತ್ತೆನ್ನದೆ
ಕರಮಾದರದಿಂದಮೊಲ್ದು ಪದೆವನೆ ಗಾಂಪಂ ॥ ೬೪

ಸಿರಿಯುಳ್ಳವರಂ ಧನದೊಳ್
ಪಿರಿಯರುಮಂ ಕಾಣಲಪ್ಪುದಿಳೆಯೊಳ್ ಪಲರಂ ।
ದರುಶನಶುದ್ಧರುಮಂ ಸ
ಚ್ಚರಿತರುಮಂ ನೋಡ ಕಾಣಲೇಂ ಬಂದಪುದೇ ॥ ೬೫

ಕಲ್ಲುಂ ಕಬ್ಬುನಮುಂ ನೋ
ಡೆಲ್ಲಿಯುಮೇರಂತೆ ಪಡೆಯಲಪ್ಪುದು ಪೊನ್ನುಂ ।
ಸಲ್ಲಲಿತಮಪ್ಪ ರತ್ನಮ
ನೆಲ್ಲಿಯುಮೇರಂತೆ ಪಡೆಯಲಪ್ಪುದೆ ಧರೆಯೊಳ್] । ೬೬

ಅಂತು ಪಡೆಯಲ್ಬಾರದಪೂರ್ವಮಪ್ಪ ದರ್ಶನಮುಮಂ ಸದ್ಧರ್ಮಮುಮಂ ಪಿರಿದಪ್ಪ ಪುಣ್ಯದಿಂದಲ್ಲದೆ ಸಮನಿಸವಂತಪ್ಪ ದರ್ಶನಮುಮಂ ಸದ್ಧರ್ಮಮುಮಂ [ಔದಾಸೀನ್ಯಂಗೆಯ್ದು ಬಿಟ್ಟು, ಸಂಸಾರದೞಸಿರಿಗಂ ಮರುಳಿಲ್ಲದ ಸಂಪತ್ತಿಗಮಳಪಿ, ಪಾದರಿಗಗಂಡನಂ ನಂಬಿ ಮನೆಯ ಗಂಡನಂ ಬಿಡುವಂತೆ ಸಜ್ಜನವೆಂಡತಿಯನೊಲ್ಲದೆ ಗಾಳುಮಪ್ಪ ಸೂಳೆಯಂ ಮಚ್ಚುವಂತೆ] ಮೂಱುದಿನದ ಪಗರಣಕ್ಕೆ ಗಡ್ಡಮೀಸೆಮಂಡೆಯಂ ಬೋಳಿಸಿಕೊಳ್ವಂತೆ ಮುಂದಿರ್ದ ಕೆಱೆಯನೆಯ್ದಲಾಱದಲಸಿ ಕೆಸಱ ನೀರಂ ಕುಡಿವಂತೆ ಸ್ವರ್ಗಮೋಕ್ಷದೊಳಪ್ಪನಂತಸುಖಮಂ ನೀರೊಳೞ್ದುನರಕತಿರ್ಯಗ್ಗತಿಗಳೊಳ್ ತಿಱನೆ ತಿರಿವ ಕಜ್ಜಮನೆತ್ತಿಕೊಳ್ವೊಡೆ ನೀಮಱಿವಿರ್ ; ನಿಮಗಾದಿತ್ಯಂಗೆ ಸೊಡರಂ ತೋಱಿಸಿದರೆಂಬಂತೆ [ತೊಱೆಗೆ ನೀರನಡುಕಿದರೆಂಬಂತೆ] ಎನ್ನಂತಪ್ಪ ಜಡಮತಿಗಳ್ ಬುದ್ಧಿವೇೞ್ವುದುಚಿತಮಲ್ಲದು ; ಗಂಡನಿದಿರೊಳ್ ಪೆಂಡತಿ ನುಡಿಯಲಾಗದು ; ಮಾಱಿ ಕೊಟ್ಟರಪ್ಪೊಡೆಮಗೆ ಬಸದಿಯೆ ಶರಣೆಂದು ಧನಶ್ರೀ ನುಡಿದು ಮಾಣ್ಬುದುಂ ॥ ೬೭

[ಸರಸೀರುಹಮುಖಿಯರ್ಹ
ತ್ಪರಮೇಶ್ವರಪಾದಪಂಕಜಭ್ರಮರೆಯ ಮಾ |
ತೆರಡಿಲ್ಲಮೆಂದು ಚಿತ್ತಮೆ
ನುರುಮುದದಿಂ ನಚ್ಚಿ ಪೆರ್ಚೆ ವನಿತೆಯ ಮೊಗಮಂ] ॥ ೬೮

ಆದರದಿಂದಂ ಹೃದಯಾ
ಹ್ಲಾದದಿನಚ್ಕಿರ್ತು ನೋಡಿ ದರ್ಶನದೊಳ್ ಮು |
ನ್ನಾದಿಯ ಸೀತೆಗೆ ರಂಭೆಗೆ
ಮೇದಿನಿಯೊಳಗೀಕೆ ನೋಡೆ ಪಾಸಟಿಯಪ್ಪಳ್ ॥ ೬೯

[ಸಿರಿಯೇವುದೊ ಧನಮೇವುದೊ
ಪಿರಿದಪ್ಪೈಶ್ವರ್ಯಮೇವುದವನೀತಳದೊಳ್ |
ದರುಶನಮಿಲ್ಲದ ಪೆಂಡತಿ
ದೊರೆಕೊಂಡ ನರಂಗೆ ರಾಜ್ಯಮೇವುದೊ ಧರೆಯೊಳ್ ॥ ೭೦

ದರುಶನಮಿಲ್ಲದ ಪೆಂಡಿರ
ವರಭೋಗಂ ನರಕಗತಿಯ ಪೆರ್ಬಟ್ಟೆ ಮಹಾ |
ದುರಿತದ ನೆಲೆ ದುರ್ಗುಣದಾ
ಗರ ಮದದಿಂದಡಸಿ ಪೊಯ್ವ ಪೆರ್ಬುಲಿಯ ನಖಂ ॥ ೭೧

ಒದವಿದ ಧರ್ಮಬುದ್ಧಿ ತನಗಿಲ್ಲದ ಗಂಡನ ಮಾತನೊಲ್ದು ಕೇ
ಳದ ಜಿನಪಾದಮಂ ನೆನೆದು ಪೂಜಿಸಿ ನೋಡುವ ಚಿತ್ತವೃತ್ತಿಯಿ
ಲ್ಲದ ಮುನಿಗನ್ನಮಂ ಕುಡುವುದಾರತೆಯಿಲ್ಲದ ನಿರ್ಮಳಕ್ಕೆಯಿ
ಲ್ಲದ ಮುನಿಭಕ್ತಿಯಿಲ್ಲದ ಕುಲಾಂಗನೆಯೇಂ ಸತಿಯೆಂಬ ಲೆಕ್ಕಮೋ ॥ ೭೨

ವಿದಿತಮೆನಿಪ್ಪ ಸಚ್ಚರಿತಮಿಲ್ಲದ ನಿರ್ಮಳಜೈನಭಕ್ತಿಯಿ
ಲ್ಲದ ಪತಿಗಂಜಿ ಬೆರ್ಚಿ ಬೆಸಕೆಯ್ಯದ ದಾನದೊಳರ್ತಿ ತಿಣ್ಣಮಿ
ಲ್ಲದ ಪತಿಯೆಂದುದಂ ಪದೆದು ಕೇಳದ ಪಾಪಿಗಳಪ್ಪವರ್ಗೆ ಬೆ
ಚ್ಚದ ಪತಿಯರ್ಥಮಂ ಕಳುವ ಪೆಂಡತಿಯುಂ ಸತಿಯಾಗಿ ಸಲ್ವಳೇ ॥ ೭೩

ಎಂದು ಕುಲಾಂಗನೆಯೊಳಾದ ವಿಪರೀತಭಾವನೆಯುಂ ಭಾವಿಸಿ ನೋಡಿ ದರ್ಶನಮುಂ ಧರ್ಮಬುದ್ಧಿಯುಮಿಲ್ಲದ ಪೆಂಡತಿಗಳಪಿ ಮೋಹದಿಂ ದಿರ್ದವಂ ಪಱಿದ ಪಱುಗೊಲನೇಱಲಾ ಪಱುಗೋಲುಂ ತಾನುಂ ತೊಱೆಯೊಳದ್ದು ಸಾಯುವಂತೆ ಪೆಂಡತಿಯುಂ ತಾನುಮೊಡನೆ ನರಕಕ್ಕೆಯ್ದು ದುಃಖಮಂ ಪೊರ್ದುಗುಂ ; ದರ್ಶನಶುದ್ಧಿಯುಂ ಸದ್ಧರ್ಮಸಮೇತೆಯು ಮಪ್ಪ ಪೆಂಡತಿಯುಂ ನಚ್ಚಿ ಕೂರ್ತು ಕೈಕೊಂಡಾತಂ ಬಲ್ಪೆತ್ತ ಮನೇಱಿದವನೆಂತು ಸಮುದ್ರದೊಳಾಳದೆ ಸುಖದಿಂ ಸಮುದ್ರದ ತಡಿಯನೆಯ್ದುಗುಮಂತೆ ಪೆಂಡಿರುಂ ತಾನುಂ ಸ್ವರ್ಗಮೋಕ್ಷಮನೆಯ್ದಿ ಪಿರಿದಪ್ಪ ಸುಖಮನೆಯ್ದುವೆರದಱಿಂ ॥ ೭೪

ಈವನಿತೆಯನಮಳಾಂಗಿಯ
ನೀವನಿತಾಜನವಿನೂತರತ್ನಿಯನಖಿಳೋ ।
ರ್ವೀವಳಯಸ್ತುತೆಯಂ ಪಡೆ
ದೀವಿಭವಮಿದೆನಗೆ ಪುಣ್ಯದಿಂ ಸಮನಿಸಿತೋ ॥ ೭೫

ಮನದೊಳ್ ರಾಗಿಸಿ ಕೂಸಂ
ಜನನಾಥಂಗಿತ್ತು ಧರೆಯನಾಳ್ವಂ ಸುಖಮಂ ।
ಬಿನಿತಂ ಬಗೆಯದೆ ಮೇಲ
ಪ್ಪನಿತಂ ಮುಕ್ತಿಯನೆ ಬಗೆದಳಂತಿದು ಚೋದ್ಯಂ ॥ ೭೬

ಧನಮಂ ಗಳಿಸುವ ಗಂಡನ
ಧನಮಂ ಕಳ್ದೀವಿ ತಮ್ಮವಗೀವ ಗುಣಂ ।
ವನಿತೆಯರ್ಗೆ ಸಹಜಮಿಂತೀ
ವನಿತೆಗಮಾಕಷ್ಟೆಯರ್ಗಮೇನಂತರಮೋ ॥ ೭೭

ಮುಱಿಕಿಸುವ ಧರ್ಮಮೆಂದೊಡೆ
ಗುಱುಗುಱಿಸುವ ಗಂಡನಿದಿರೊಳದ್ದಾಡುವ ಬೇ ।
ಳ್ವಱಿಸುಗಳಂ ಕಿಸುಗುಳೆಯರ
ನೞಿವೊಡೆ ಪೋಲಿಪುದೆ ಧರ್ಮರತ್ನಾಕರೆಯಂ] ॥ ೭೮

ಎಂದು ಮನದೊಳ್ ಪೊಗೞ್ದು ಧನಶ್ರೀಯ ಸಮ್ಯಕ್ತ್ವದೊಳಾದ ನಂಬುಗೆಗೆ ಕರಂ ಮೆಚ್ಚಿ ಸಂತೋಷಂಬಟ್ಟು ಮುಯ್ಪಂ ನೋಡಿ ಕರ್ಮರಾಜನೊಡ್ಡನಿೞಿಯಲ್ ನೆರಂಬಡೆದೆನೆಂದು ಪೆರ್ಚಿ ಸುಬಂಧುಶ್ರೀಯ ಸಮ್ಯಕ್ತ್ವಮುಮಂ [ಜಿನಭಕ್ತಿಯುಮಂ] ಆರಯಲೆಂದು ಮಗಳಂ ಕರೆದು ತೊಡೆಯನೇಱಿಸಿಕೊಂಡು [ಕದಪಂ ಕರ್ಚಿ ತಂಬುಲಮನಿಕ್ಕಿ ಮೊಗಮಂ ನೋಡಿ ಕಿಱಿಮುಬೇಗಂ ಮಗಳ ಮುದ್ದುನುಡಿಗಳಂ ಕೇಳ್ದು ಹರ್ಷಚಿತ್ತನಾಗಿ] ಗುಣಪಾಲಸೆಟ್ಟಿ ಮೆಲ್ಲನಿಂತೆಂದಂ ॥ ೭೮

ನಿನ್ನಂತು ಮಗಳ್ ಪುಣ್ಯ
ಕ್ಕನ್ನೋಂತವರಾರೊ ಮಾಳವೇಶ್ವರನದಟಿಂ ।
ಸನ್ನುತ ಗುಣಗಣನಿಳಯಂ
ನಿನ್ನಂ ತನಗರಸಿಮಾಡಿದಪ್ಪಂ ಪದೆಪಿಂ ॥ ೭೯

ನೀನರಸಿಯಾದೆಯಪ್ಪೊಡೆ
ಮಾನವಪತಿ ನಿನಗೆ ಮುಖ್ಯಪದಮಂ ಕುಡುಗುಂ ।
ಶ್ರೀನಿಳಯೆಯಾಗಿ ಸುಖದಿಂ
ನೀನಿರ್ಪ್ಪೆ ರಾಜ್ಯಲೀಲೆಯಿಂ ಕ್ರೀಡಿಸುತುಂ ॥ ೮೦

[ನೀಂ ಪಟ್ಟದರಸಿಯಾದೊಡೆ
ಪೆಂಪಿಂದಂ ನಿನಗೆ ಪುಟ್ಟಿದಾತಂಗಿಳ್ ಸಾ ।
ಗರ್ಂ ಪಡಿಮಾತೊಯ್ಯನೆ ರಾ
ಜ್ಯಂ ಪೆಱತೇನಕ್ಕ ನಮಗೆ ಸಾಗರ್ಂ ಕ್ರಮದಿಂ ॥ ೮೧

ಪರದಂಗೆ ಪುಟ್ಟಿ ನಿನ್ನಂ
ತರಸುತನಕ್ಕಂ ಮಹಾವಿಭೂತಿಗಮುರ್ವೀ ।
ಧರನ ಕಡುಗೂರ್ಮೆಗಂ ವಿ
ಸ್ತರದಿಂ ರಾಜ್ಯಾಸ್ಪದಕ್ಕಮಿಂ ನೋಂತವರಾರ್] ॥ ೮೨

ಎಂಬುದುಂ ಸುಬಂಧುಶ್ರೀ ತಂದೆಯ ಮಾತಿಂಗೆ ನಕ್ಕು ನಿಮ್ಮಂತಪ್ಪ ಮಹಾಪುರುಷರಿಂತಪ್ಪ ನಿರ್ಬುದ್ಧಿತನಮಂ ಮಾಡಲಾಗದೀಶ್ರೀಗೆಱಗಿ ಧರ್ಮಮಂ ಬಿಡುವುದಾವ ಬುದ್ಧಿ [1]; ಕಾಂಚನಂ ಬಿಟ್ಟೋಡಂ ಪಿಡಿವ, ತಾಯುಂ ಬಿಟ್ಟು ರಕ್ಕಸಿಯುಂ ಪೊರ್ದುವ, ಭೂಪರಂ ಬಿಟ್ಟು ಪೊಲೆಯರಂ ಕೆಳೆಗೊಳ್ವ, ನಂಟರಂ ಬಿಟ್ಟು ಪಗೆಯುಂ ಕೂಡುವ, ಕುದುರೆಯನೊಲ್ಲದೆ ನಾಯನೇಱುವ, ಪಟ್ಟದಾನೆಯುಂ ಕೊಟ್ಟು ಕೋಡಗಮಂ ಕೊಳ್ವ, ಪಾಲನೊಲ್ಲದೆ ನಂಜುಂ ಕುಡಿವ, ಸಕ್ಕರೆಯನೊಲ್ಲದೆ ಮಳಲಂ ಮೆಲ್ವ, ಕಂಕಣಮನೊಲ್ಲದೆ ಬಳೆಯುಂ ತುಡುವ, ಧಾನ್ಯಮಂ ಕೊಟ್ಟು ಪೊಳ್ಳಂ ಕೊಳ್ವ, ನೆಲೆವಾೞಿಂ ಬಿಟ್ಟು ತಿರಿದುಂಬ, ಮರುಳಂ ಪೋಲ್ಕಂ; ಬೆಕ್ಕು ಪಾಲಂ ಕಾಣ್ಬುದಲ್ಲದೆ ಮೇಗೆ ಬಂದಡಸುವ ಬಡಿಗೆಯುಂ ಕಾಣದಂತೆ ಮೂರ್ಖರಪ್ಪರುಮಿಲ್ಲಿಯ ಸುಖಮನೆ ಶಾಶ್ವತಮಾಗಿ ಕಾಣ್ಬರಲ್ಲದೆ ಮೇಗಣ ನರಕದೊಳಾದ ಮಹಾದುಃಖಮನಱಿಯರೆನಗಿಂತಪ್ಪ ಮಾಯಾವಚನಂಗಳಿಂ ಮಕ್ಕಳ ಕೈಯ ಮಾಣಿಕಮಂ ಗುಗ್ಗುರಿಯುಂ [2] ತೋಱಿ ನಂಬಿಸಿ ಕೊಳ್ವಂತೆ ಸುದರ್ಶನಮಂ ಬಿಡಿಸಿ ಕಿಡುವ ಕಜ್ಜಮಂ ಪೇೞ್ವ ಈ ಶ್ರೀಯುಮನಲ್ಪಸುಖಮುಮಂ ತೋಱಿ ಟಕ್ಕಿಕ್ಕಿ ಮಾತಾಡವೇಡ ॥ ೧೩

ಜಿನಧರ್ಮಂ ಪ್ರಾಣಿಗಾರ್ಮಂ ತ್ರಿಭುವನತಿಲಕಂ ಸರ್ವಲೋಕೈಕಪೂಜ್ಯಂ
ಮನುಜೇಂದ್ರಶ್ರೀವಿಲಾಸಂ ವಿಬುಧಪತಿನುತಶ್ರೀವಧೂಕರ್ಣಪೂರಂ ।
ಘನಮುಕ್ತಿಶ್ರೀರಮಾಂಗೀವಿಮಳಮುಖಲಸದ್ದರ್ಪಣಂ ಖೇಚರಶ್ರೀ
ವನಿತಾಲಂಕಾರಮಾದ್ಯತ್ಸಕಲಸುಖನುಮಂ ಬೇಗಮೀವಿಂದ್ರಭೂಜಂ ॥

ಆಸದ್ಧರ್ಮಂ ಪುಣ್ಯನಿ
ವಾಸಿಗೆ ದೊರೆಕೊಳ್ಗುಮಘಸಮೇತಂಗನ್ಯತಾ ।

---

1 ಮಾತಿನಂದಕ್ಕೆ ಮುಗುಳ್ನಗೆಯುಂ ನಕ್ಕು ನಿಮ್ಮಂತಪ್ಪ ಮಹಾಪುರುಷರಿಂತಪ್ಪ ಮಾತುಗಳಂ ನಿರ್ಬುದ್ಧಿತನದಿಂ ಮಾತನಾಡಲಾಗದಳಿಶ್ರೀಗೆಱಗಿ ಧರ್ಮಮಂ ಕೆಡಿಸುವುದಾವುದು ಕಜ್ಜಂ (ಗ).

2 ಗುರುಗುಂಜೆಗಳಂ (ಗ).

ವಾಸಂಗೆ ಮಿಕ್ಕ ಪುರುಷಾ
ಭಾಸಂಗಸುಖಾವಹಂಗೆ ದೊರೆಕೊಂಡಪುದೇ ॥ ೮೫

ವಿಮಳಮಿದೆನಿಸುವ ಜೈನಾ
ಗಮಮಂ ನೀಮಱಿದುಮಱಿಯದೆಗ್ಗರ ತೆಱದಿಂ ।
ರಮಣೀಯಮೆಂದು ರಾಜ್ಯ
ಕ್ರಮಕ್ಕೆ ಬೆಚ್ಚಿಲ್ಲದೆಳಸಲಪ್ಪುದೆ [1] ಮನದೊಳ್ ॥ ೮೬

ಅಂತಲ್ಲದೊಡಂ ಕರ್ಮರಾಜನೆಂಬ [ವ್ಯಾಧರಾಜಂ ಕೋಪಮೆಂಬ ತೀವ್ರಾಯುಧಮನುರ್ಚಿಕೊಂಡು ಮಿಥ್ಯಾತ್ವರುಚಿಯೆಂಬ ಕುದುರೆಯನೇಱಿ ಮಾಯೆಯೆಂಬಡ್ಡಣಮಂ ಪಿಡಿದು ಮೋಹಮೆಂಬ ಸುರಿಗಿಯುಂ ಕಟ್ಟಿ ಲೋಭಮೆಂಬ ಸವಂಗಮಂ ತೊಟ್ಟು ಮಾಣದಷ್ಟಮದಮೆಂಬ ಭುಂಭುಕಮನಿಕ್ಕಿ ರಾಗದ್ವೇಷಮೆಂಬ ಕೀಱಂ ಪಿಡಿದು ತ್ರಿದಂಡಮೆಂಬ ನೋಟಂಬೆರಸು ಶಂಕಾದ್ಯಷ್ಟಮಳಮೆಂಬ ಮೇಳದಾಳ್ವೆರಸು ಆರ್ತರೌದ್ರಧ್ಯಾನಮೆಂಬ ಮುಂಗೂಳೆಯದ ನಾಯಕರ್ವೆರಸು ದುರ್ಜನರ ಕೂಟಮೆಂಬ ಪಿಂಗೂಳೆಯದ ವೀರರ್ವೆರಸು ಕುದಾನಪ್ರೀತಿಯೆಂಬ ಪೊಣ್ಕೆಯಾಳ್ವೆರಸು ದುರ್ಬುದ್ಧಿಯೆಂಬ ಪೊಲಂಬಿಗರ್ವೆರಸು ನಿಲ್ಲದೆಲ್ಲಿಯುಂ ಬೆನ್ನಟ್ಟಿ ತಗುಳ್ದು ಸದ್ದರ್ಶನಾಂತರಾಯಮೆಂಬೇಱುಗಳಂ ಋಷಿದೂಷಣಮೆಂಬ ಬಡಿಗಳಂ ಕೆಡೆಯೆ ಮೋದುತ್ತುಂ ಸುತತ್ತ್ವಭೀತಿಗಳೆಂಬಂಬುಗಳಿಂದಂ ಮೆಯ್ಗಾಣದೆ ಸುಯ್ಯುತ್ತುಂ] [2] ಬಿೞ್ದರ ಮೊಗದೊಳ್ ನೀರಂ ತಳಿದು ಬೀಸಿ ಚೇತರಿಸಿದಾಗಳ್ ಮತ್ತಂ ದಂಡಣೆಗಳಂ ಮಾಡುವಂತೆ ಕೋಟಿಕೋಟಿ ಸಾಗರೋಪಮಕಾಲಕ್ಕೊರ್ಮೆ ಹೀನರಾಜ್ಯಮುಮನಲ್ಪಶ್ರೀಯುಮನಱುಸುಖಮುಮಂ ತೋಱಿ ನರಕದೊಳಂ ತಿರಿಕದೊಳಮೆಡೆಯಱಿಯದೆ ನಿಷ್ಕರುಣನಾಗಿ ಮೆಚ್ಚಿದ ಕೊಲೆಗಳಂ ಕೊಲ್ವಾತನಂ ಕಂಡು ಬೆಚ್ಚಿ ಶರಣರಪ್ಪರೊರ್ವರುಮಿಲ್ಲದೊಳಱ

---

1 ಎಳಸದಿರ್ಪುದು (ಗ).

2 ಚಕ್ರವರ್ತಿ ಮಿಥ್ಯಾತ್ವಮೆಂಬಕುದುರೆಯನೇಱಿ ರಾಗದ್ವೇಷಮೆಂಬ ಕೀಳಂ ಪಿಡಿದು ಬಹುಕಾಂಕ್ಷೆಯೆಂಬ ಕವಣೆಯಂ ಮೆಟ್ಟಿ ಸದ್ಧರ್ಮದ್ವೇಷಮೆಂಬ ಮುರಗೋ

[ಪೆಳಱಿ] ಬಾಯ್ವಿಟ್ಟಂತಾನುಮೆನ್ನ ಭಾಗ್ಯದಿಂ ಸದರ್ಮಸಮೇತನಪ್ಪ ನಿನ್ನಂ ಶರಣ್ಬುಗುವಂತೆ ಪುಟ್ಟಿದೆನ್ನಂ ರಕ್ಷಿಸದೆ ಕರ್ಮರಾಜಂಗೆ ಮಗುಳ್ ಪಿಡಿದೊಪ್ಪಿಸುವುದು ಪಾಱಿಯಲ್ಲದೆಂತುಂ ನಿಮಗೆನ್ನ ಮೇಲೆ ಮುಳಿಸುಳ್ಳೊಡೆ ನಿಮ್ಮ ಮೆಚ್ಚಿದ ದಂಡನೆಯುಮಂ ಮಾಡಿಮೇಗೆಯ್ದುಂ ಮಿಥ್ಯಾವೃಷ್ಟಿಗೆ ಕುಡುವೆವೆಂಬ ಬಗೆಯಂ ಮಾಣ್ಬುದೆಂದು ಕಣ್ಣನೀರಂ ನೆಗಪುವುದುಂ ಮಗಳ ಮನದ ಸ್ವಚ್ಛತೆಗಂ ಸವ್ಯಕ್ತ್ವದೊಳಾದ ನಂಬುಗೆಗಂ ಗುಣಪಾಲಸೆಟ್ಟಿ ಮನದೊಳಬಿಕ್ಕತರ್ ॥ ೮೭

ಎನ್ನ ಗುಣಕ್ಕಂ ಬಗೆವಂ
ದೆನ್ನವಧೂಟಿಯ ಗುಣಕ್ಕಮಿಾಕೆಯ ಗುಣಮ ।

ಡಂ ಮಲಗಿ ಜಿನದೂಷಣೆಯೆಂಬ ಖಡ್ಗಂಬೆರಸು ಋಷಿವೈರವೆಂಬ ಚಮ್ಮಟಿಗೆವೆರಸು ಕೋಪವೆಂಬ ಸಬಳವುಂ ಪಿಡಿದು, ಮಾನವೆಂಬ ಖಡ್ಗಮುಂ ಪಿಡಿದು ಮಾಯೆಯೆಂಬ ಸುರಗಿಯುಂ ಕಟ್ಟಿ ಲೋಭವೆಂಬ ಸವಗಮಿಕ್ಕಿ ಮೋಹವೆಂಬಸಿಕಮನಿಕ್ಕಿ ಶಲ್ಯತ್ರಯವೆಂಬ ಕಾಲ್ಗಪಿನಾಳ್ವೆರಸು ಕುಲಮದವೆಂಬ ರಥಂಬೆರಸು ಜಾತಿಮದವೆಂಬ ಕೊಂತದಾಳ್ವೆರಸು ಅಜ್ಞಾನಮದವೆಂಬ ಕಡಿತಲೆವೆರಸು ಐಶ್ವರ್ಯಮದವೆಂಬ ಬಿಟ್ಟೇಱುಕಾಱರವೆರಸು ಬಲಮದವೆಂಬ ಕಟ್ಟುಗೆಕಾಱರವೆರಸು ರೂಪುಮದವೆಂಬ ಕುದುರೆಯದಳಂ ಬೆರಸು ತಪೋಮದವೆಂಬ ಸೂಱೆಕಾಱರ್ವೆರಸು ವಿಜ್ಞಾನಮದವೆಂಬ ಪೂಣ್ಕೆಯಾಳ್ವೆರಸು ಹಿಂಸಾನಂದವೆಂಬ ಮುಂಗುಡಿಯಾಳ್ವೆರಸು ಅನೃತಾನಂದವೆಂಬ ಬಾಂಗುಳಾಳ್ವೆರಸು ಸ್ತೇಯಾನಂದವೆಂಬ ಮನ್ನೆಯಾಳ್ವೆರಸು ಸಂರಕ್ಷಣಾನಂದವೆಂಬ ನಾಯಕರ್ವೆರಸು ಪರವನಿತಾರತಿಯೆಂಬ ನಂಬುಗೆಯಾಳ್ವೆರಸು ಶಂಕಾದ್ಯಷ್ಟಗುಣಂಗಳೆಂಬ ಕರಿಘಟೆಗಳ್ವೆರಸು ಸಪ್ತವ್ಯಸನಮೆಂಬ ಜೀವಿತದಾಳ್ವೆರಸು ಕುದಾನಪ್ರೀತಿಯೆಂಬ ಮೇಳದಾಳ್ವೆರಸು ನಿರ್ದಯಮೆಂಬ ಬಿಲ್ಪಡೆವೆರಸು ದುರಾಚಾರವೆಂಬ ಕಳ್ವಾಳ್ವೆರಸು ರೌದ್ರಧ್ಯಾನವೆಂಬ ಗುಪ್ತನಡೆವೆರಸು ಆರ್ಥಧ್ಯಾನವೆಂಬ ಮನ್ನಣೆಯರ್ವೆರಸು ದುಷ್ಟಗೋಷ್ಠಿಯೆಂಬ ಸಾಮಂತರ್ವೆರಸು ದುರ್ಬುದ್ಧಿಯೆಂಬ ಪೊಲಂಬಿಗರ್ವೆರಸು ನಿಲ್ಲದೆಲ್ಲಿಯುಂ ಬೆನ್ನಟ್ಟಿ ತಗುಳ್ದು ದರ್ಶನಾಂತರಾಯಮೆಂಬ ಬೇಱುಗಳಿಂ ಸದ್ಧರ್ಮವಿಘ್ನವೆಂಬ ಪೊಯ್ಲ್ಗಳಿಂ ಸನ್ಮುನಿನಿಂದೆಯೆಂಬ ಯೀಡುಗಳಿಂ ಸತ್ಪೂಜಾಭಂಗವೆಂಬ ಬಯ್ಗುಳಿಂ ಸದ್ದರ್ಶನಾಲಸ್ಯವೆಂಬ ಕೊಂತಂಗಳಿಂ ತತ್ವಭೀತಿಯೆಂಬ ತಿವುಗಳುಗಳಿಂ ಸದ್ಗೋಷ್ಠಿದೂರವೆಂಬ ಕಡಿಖಂಡಂಗಳಿಂ ಬೀಳೆ ಮೋದುತ್ತುಂ ದಂಡಣೆಯುಂ ಮಾಡುತ್ತುಂ. (೧)

ತ್ಯನ್ನ ತಪೊನಿಸಿದುದದಱಿಂ
ದೆನ್ನಂತಾರ್ ಪುಣ್ಯವಂತರವನೀತಳದೊಳ್ ॥ ೮೮

[ಬದರೀಕಂಟಕರೆಂದೆನಿ
ಸದೆ ಪಂದೆಯು ಯುದ್ಧದಂತೆ ಸದ್ಧರ್ಮಕ್ಕಂ ।
ಜಿದರಿವರೆನಿಸದೆ ಸವ್ಯ
ಕ್ತ್ರವದೊಳಂತಿವರಿರ್ವರಂತೆ ನೇರಿದರೊಳರೇ ॥] ೮೯

ದುರಿತಾರಿಯನದಟಲೆದೋ
ಸರಿಸದೆ ಮೋಕ್ಷಕ್ಕೆ ಸಲ್ವ ಜೀವಾದಿಗಮುಂ ।
ಮೆರೆಯೊಳ್ ಸುತತ್ತ್ವರುಚಿ ತಾಂ
ಸಿರಿಖಂಡದ ಕಂಪಿನಂತೆ ಸಹಜಮೆನಿಕ್ಕುಂ ॥ ೯೦

ದುರಿತಯುತನಾಗಿ ಗಮ್ತ್ರನೆ
ನರಕಕ್ಕಿೞಿಯಲ್ಕೆ ಬಗೆವ ಜೀವಾಳಿಗಮುಂ ।
ಮೆರೆಯೊಳ್ ಕುತತ್ತ್ವರುಚಿ ತಾಂ
ದೊರೆಕೊಳ್ಗುಂ ಪೇಳ್ಗೆ ಪುಟ್ಟುವಂತಸುಗಂಧಂ ॥ ೯೧

[ಮತ್ತಂ ಕತ್ತುರಿಕರ್ಪೂರಶ್ರೀಖಂಡಾದಿದ್ರವ್ಯಂಗಳಂ ಸೋಂಕಿ ಪರಿವ ಗಾಳಿ ಗಂಪುಪ್ಪಂತೆ ಪಾಪದೊಳ್ ಪೊರ್ದದ ಪೊಲ್ಲಮೆಯೊಳೊಂದದ ಜಿನೇಂದ್ರಧರ್ಮಮಂ ಪೊರ್ದಿದ ಮಹಾತ್ಮಂಗೆ ಸುತತ್ತ್ವವಿಚಾರಮುಂ ಮಿಥ್ಯಾತ್ವಭೀರುತ್ವಮುಂ ಸಹಜಮಕ್ಕುಂ ; ಅಮೇಧ್ಯಕಳ್ ಮಾಂಸಾದಿ ದುರ್ಗಂಧಮುಪ್ಪಂತೆ ಲೋಲತೆಯೊಳ್ ಪೊರ್ದಿದ ಪೊಲ್ಲಮೆಯೊಳೊಂದಿದ ಮಿಥ್ಯಾದರ್ಶನಂಗಳಂ ಪೊರ್ದಿದ ದುರಾತ್ಮಂಗೆ ಕುಮಾರ್ಗಾನುರಾಗಮುಂ ಕುತತ್ತ್ವರುಚಿಯುಂ ಮಿಥ್ಯಾತ್ವಪ್ರೀತಿಯುಂ ಸಹಜಮೊಂದು ತನ್ನೊಳ್ ವಿಚಾರಿಸಿ ಧನಶ್ರೀಯ ಗುಣಂಗಳಂ ಮನದೊಳ್ ಪೊಗೞ್ದು ತನ್ನ ಮನದ ಕಾರ್ಯಮನಿವರ್ಗಂ ತಿಳಿಯೆ ಪೇೞ್ದು ॥ ೯೨

ತಡೆದಿಲ್ಲಿ ನಿಂದೆನಪ್ಪೊಡೆ
ಕುಡವೇೞ್ಕುಂ ಭೂಭುಜಂಗೆ ಮಗಳಂ ಕೂಸಂ ।

ಕಡುಗೊರ್ತು ಕೊಟ್ಟೆನಪ್ಪೊಡೆ
ಕಿಡುಗುಂ ಮೇಲಪ್ಪ ನಮ್ಮ ಮೋಕ್ಷದ ಸೌಖ್ಯಂ] ॥ ೯೩

ಎಂದಾಲೋಚಿಸಿ [1] ಧನಶ್ರೀ ಗರ್ಭಿಣಿಯಪ್ಪ ಕಾರಣದಿಂ [ದೊಡಗೊಂಡು ಪೋಗಲೊಲ್ಲದೆ] ತನ್ನ ಪ್ರಾಣಮಿತ್ರನಪ್ಪ ಶ್ರೀದತ್ತನೆಂಬ ಪರದನ ಮನೆಯೊಳ್ ಗುಪ್ತದಿಂದಿರಿಸಿ ನೂಱೆಂಟುಕೋಟಿ ಪೊನ್ನುಮಂ ನಿರ್ವಾಹಮುಮಂ ಬಿಸುಟ್ಟು ॥ ೯೪

ಮಗಳನೊಡಗೊಂಡು ಪುರದಿಂ
[ಬಗೆಯದೆ ಪೆಱಪೆಱತನಳಿಪದೊಂದಕ್ಕಂ ಕೈ ।
ಮಿಗೆ ಜೈನಧರ್ಮವಾರಿಧಿ
ಮೃಗಾಂಕನನುಪಮಗುಣಾಂಬುನಿಧಿ ಪೊಱಮಟ್ಟಂ ॥ ೯೫

ಅಂತು] ಪೊಱಮಟ್ಟು ಕತಿಪಯಪ್ರಯಾಣಂಗಳಿಂ ಕೌಶಾಂಬಿಯೆಂಬ ಪುರಮನೆಯ್ದಿ ॥ ೯೬

ಸಿರಿಯಂ ಚಿಂತಿಸಿ ಕಂದಿ ಕುಂದಿರದೆ ನಿರ್ವಾಹಕ್ಕೆ ಕೇಡಾದುದೆಂ
ದಿರುಳೆಲ್ಲಂ ಮತಿಗೆಟ್ಟು ಬಾಯ್ವಿಡದೆ ದೇಶತ್ಯಾಗಮಾಯ್ತೆಂದು ನಿ
ಷ್ಠುರದುಃಖಕ್ಕೆಡೆಯಾಗದುತ್ತಮಗುಣಂ ಚಾರಿತ್ರಪಾರಾಯಣಂ
ಪಿರಿದುಂ ಸಂತಸದಿಂದಮಿರ್ದನಮಳಶ್ರೀಧರ್ಮರತ್ನಾಕರಂ [2] ॥ ೯೭

[ಅಂತಿರ್ಪುದುಮಿತ್ತಲರಸಂ ಗುಣಪಾಲಸೆಟ್ಟಿ ಪೆಂಡಿರ ಮಕ್ಕಳ ಕೈಯಂ ಪಿಡಿದು ಪಿರಿದಪ್ಪ ಧನಮುಮಂ ನಿರ್ವಾಹಮುಮಂ ನೀಡಾಡಿ ಪೋದನೆಂಬುದಂ ಕೇಳ್ದು ಬೆಱಗಾಗಿ ಪ್ರಧಾನರ ಮೊಗಮಂ ನೋಡಿ ॥ ೯೮

ತನ್ನ ತನೂಜೆಯುನೆನಗಿ
ತ್ತುನ್ನತಿಯಿಂದಿರದೆ ಬಿಟ್ಟು ನಿರ್ವಾಹಮುಮಂ ।
ಪೊನ್ನುಮನೋಡುವ ಮರುಳವ
ನನ್ನರ್ ಅರೊಳರೆ ಬಗೆವೊಡುರ್ವೀತಳದೊಳ್ ॥ ೯೯

---

[1] ಎಂದು ಮಚ್ಚಿ (ಗ) [2] ನೋಲಪಿಂ ವಾತ್ಸಲ್ಯರತ್ನಾಕರಂ (ಗ)

ತಾನಪ್ಪೊಡೆ ವೈಶ್ಯಾತ್ಮಜ
ನಾನಪ್ಪೊಡೆ ರಾಜಪುತ್ರನೆಂದೊರೆಯುಲ್ಕಂ ।
ದೇನಿರದೆ ಪೋದನಪ್ಪೊಡ
ಮೇನೆಂತರವಣ್ಣ ನೋಟಪ್ಪೊಡೆನಗಂ ತನಗಂ ॥ ೧೦೦

ಸುತೆಯುಂ ಕೊಟ್ಟೆನಗಖಿಳ
ಕ್ಷಿತಿಯುಮನಾಳ್ದರದೆ ಸುಖದಿನತಿಚಪಳಂ ದು ।
ರ್ಮತಿಯಾಗಿ ಬೆಚ್ಚಿ ಪೋಪೊಂ
ದತಿಶಯಮೇಕಿಂತು ಪುಣ್ಯಹೀನರುಮೊಳರೇ ॥ ೧೦೧

ಎಂದು ಹಾಸ್ಯಂಮಾಡಿ ನಗುವರಸಂಗೆ ಪೆರ್ಗಡೆಗಳಿಂತೆಂದರ್ ॥ ೧೦೨

ದೇವಲೋಕವಿಭೂತಿಗಂ ವರಚಕ್ರವರ್ತಿಯ ಲಕ್ಷ್ಮಿಗಂ
ಭಾವಿಸಂದಪವರ್ಗಲಕ್ಷ್ಮಿಯ ಕೂರ್ಮೆಗಂ ಪಿರಿದಪ್ಪ ವಾ
ಕ್ಶ್ರೀವಧೂಪ್ರಿಯನಲ್ಮೆಗಂ ಸುಖದೊಂದು ಪತ್ತುಗೆಗಂ ಜಯ
ಶ್ರೀವಧೂವರಮಪ್ಪ ವೈಮೆಗಮುನ್ನತಿಕ್ಕೆಗಮಾಜ್ಞೆಗಂ ॥ ೧೦೩

ಕೊಲೆಯೊಳ್ ಪೊರ್ದದಿರ್ದ ಸದ್ಧರ್ಮಮೆ ಮುಖ್ಯಮಪ್ಪುದಱಿಂ
ಧರ್ಮದ ಮೋಹದಿಂ ಶ್ರೀಯುಮಂ ಸಂಪತ್ತುಮನುದಾಸೀನಂಮಾಡಿ
ದೇವ ನೀಂ ಶ್ರಾವಕನಲ್ಲಮಪ್ಪುದಱಿಂ ಮಿಥ್ಯಾತ್ವಕ್ಕಂ ಮೇಲೆ ಬರ್ಪ
ನರಕದುಃಖಕ್ಕಂ ಭಯಸ್ಥನಾಗಿ ಕುಡಲೊಲ್ಲದೆ ಪೋದನೆಂಬುದಂ] [1]
ವಿಶ್ವಂಧರಮಹಾರಾಜಂ ಚೋದ್ಯಂಬಟ್ಟು ॥ ೧೦೪

ಸಿರಿಯುಂ ಬಿಟ್ಟು ವಿಭೂತಿಯುಂ ತೊಱೆದು ನಿರ್ವಾಹಕ್ಕೆ ತಚ್ಚಿತ್ತದೊಳ್
ಪಿರಿದುಂ ಮೋಹಿಸಲೊಲ್ಲದಂಜೆ ಮಗಳಂ ವೈಶ್ಯಾತ್ಮಜಂ ಸಂತಸಂ
ಬೆರಸುತ್ಸಾಹದಿನೀಯದೆನ್ನ ಸಿರಿಯುಂ ಪೆಂಪುಂ ಮನಂಗೊಳ್ಳದಾ
ದರಮಂ ಧರ್ಮದೊಳುಂಟುಮಾಡಿ ಪೋಱಮಟ್ಟೇದೇಶದಿಂದೋಡಿದಂ ॥

---

1 ಅಂತಿರ್ಪುದುಮಿತ್ತಲ್ ಗುಣಪಾಲಸೆಟ್ಟಿಯ ಪೋಗು ಕೇಳ್ದು (ಗ)

ಅದಱಿಂದಾತಂ ನಂಬಿ
ದುರ್ಗದೆ ದೈವಂ ವೈಶ್ಯವಂಶತಿಳಕಂ ಪಿಡಿದಿ ।
ದುರ್ಗದೆ ಧರ್ಮಮೊಂದು ನಚ್ಚಿದ
ನುದಿತೋದಿತಕೀರ್ತಿಮಾಳವೋರ್ವೀನಾಥಂ ॥ ೧೦೬

[ಪಿರಿದಪ್ಪ ಸಿರಿಯನೊಲ್ಲದೆ
ಪರತ್ರೆಯನೆ ನಂಬಿ ಪಿಡಿದನೆಂದಂದಿಂತೀ ।
ಧರೆಯೊಳಗಾವೈಶ್ಯಾಂಬರ
ತರಣಿಯ ನಚ್ಚಿದ ಧರ್ಮಮದುವೆ ಸುಧರ್ಮಂ ॥ ೧೦೭

ಎಂದಾಜಿನಧರ್ಮದೊಳ್ ಪ್ರೀತಿಯುಂ ಕುಧರ್ಮದೊಳ್ ಭೀತಿಯುಂ ಪುಟ್ಟೆ ಗುಣಪಾಲಸೆಟ್ಟಿಯಮೇಲೆ ಮೋಹಮುಂ ಸ್ನೇಹಮುಮಾಗೆ ಮನೆಗಂ ಭಂಡಾರಕ್ಕಂ ಕಾಪಂ ಪೇೞ್ದು ಜಿನಸಮಯವಾರ್ಧಿವರ್ಧನಚಂದ್ರನನೆಲ್ಲಿಯುಮಟ್ಟಿಯಱಸಿ ತನ್ನಿಮೊಂದು ದೆಸೆದೆಸೆಗೆ ಪರಿಚಾರಕರನಟ್ಟಿದನಿತ್ತ ಧನಶ್ರೀ ॥ ೧೦೮

ಗುಣಪಾಲಸೆಟ್ಟಿಯುಪ್ಪೊಡೆ
ಗುಣಾಢ್ಯನವಿನೀತನಲ್ಲನಾರ್ಗಂ ವೈಶ್ಯಾ ।
ಗ್ರಣಿ ಪುಣ್ಯನಿಳಯನಾಯದ
ಕಣಿ ಸತ್ಯನಿಧಾನನೆಲ್ಲಿಯುಂ ಕೆಟ್ಟಪನೇ ॥ ೧೦೯

ವಾತ್ಸಲ್ಯರತ್ನಾಕರನಪ್ಪೊಡಧಿಕಪುಣ್ಯನುಂ ವಣಿಗ್ವಂಶಾಗ್ರಗಣ್ಯನುಮಪ್ಪನೆಲ್ಲಿ ಪೊಕ್ಕೊಡಮಾಪತ್ತುಮೆಡರುಮಿಲ್ಲೆಂದು][1] ಮನಮಂ ಸಂತೈಸಿಕೊಂಡು [ಸುಖದಿಂ] ಕೆಲವುದಿವಸಮಿರ್ಪುದುಮೊಂದುದಿವಸಂ ಶಿವಗುಪ್ತರೆಂಬಾಚಾರ್ಯರ್ ತ್ರಿಗುಪ್ತರೆಂಬ ತಮ್ಮ ಶಿಷ್ಯರ್ವೆರಸು [ಚಂದ್ರಗತಿಯಿಂ ಚರಿಗೆಗೆವರ್ಪುದುಂ ಶ್ರೀದತ್ತಸೆಟ್ಟಿ ಕಂಡು ॥ ೧೧೦

---

1 ಅಂತು ಮೆಚ್ಚಿ ಗುಣಪಾಲಸೆಟ್ಟಿಯನೊಡಗೊಂಡು ಬರ್ಪುದೆಂದು ದೆಸೆದೆಸೆಗೆ ಚರರನಟ್ಟಿ ಮನೆಗೆ ಕಾಪಂ ಪೇಳ್ದನಿತ್ತಲ್ ಧನಶ್ರೀ (ಗ)

ಕರಮಾದರದಿಂದಾಮುನಿ
ವರರಂ ಸದ್ಭಕ್ತಿಪೂರ್ವಕಂ ನಿಲಿಸಿ ದುರಂ |
ತರಚರಿತರಂ ಮಹಾಗುಣ
ನಿರತರನಘನಿಕರತೀವ್ರವಜ್ರಾಯುಧರಂ || ೧೧೧

ಬಳಿಗಣ್ಣಿದಿರ್ಗೊಂಡೊಯ್ಯನೆ
ಬಳಸಿದ ವಿಷ್ಟರದೊಳಿರಿಸಿ ಕಾಲಂ ಚಿತ್ತೋ |
ಜ್ಜ್ವಲನಾಗಿ ಕರ್ಚಿ ತಾಂ ತ
ಜ್ಜಳಮಂ ಪುಸ್ತಕದೊಳಾಂತು ಪೂಜಿಸಿ ಪದಮಂ || ೧೧೨

ಪದಪಿಂ ಶುದ್ಧಾನ್ನಮನೀ
ವುದುಮುಂಡು ಮುನೀಂದ್ರರಿರ್ವರುಂ ಕುಳ್ಳಿರೆ ಸಂ |
ಮದದಿಂ ಮುನೀಂದ್ರವಂದ್ಯನ
ಪದಯುಗಳಮನೊತ್ತುತಿರ್ದನಿರ್ಪನ್ನೆವರಂ || ೧೧೩

ಧನಶ್ರೀ ವಂದಿಸಿ ಪೋಪುದುಂ ತ್ರಿಗುಪ್ತಮುನೀಂದ್ರಂ ಧನಶ್ರೀಯುಂ ಕಂಡು ಮನದೊಳ್ ವಿಸ್ಮಯಂಬಟ್ಟು ಶಿವಗುಪ್ತಭಟ್ಟಾರಕರ್ಗೆ ಪೊಡೆಮಟ್ಟು ಕೈಗಳಂ ಮುಗಿದು ವಿನಯದಿಂದಿಂತೆಂದಂ || ೧೧೪

ಈವನಜಾಸ್ಯೆಗುತ್ತಮಗುಣಾನ್ವಿತೆಗಗ್ಗಳಭದ್ರಲಕ್ಷಣಂ
ತೀವಿದುವೈದೆ ಭಾವಿಸುವೊಡೆಲ್ಲೆಡೆಯುಂ ನೆರೆದೊಪ್ಪೆ ಚೆಲ್ವಿನಿಂ
ಶ್ರೀವಧುವನ್ನಳನ್ನಳನಿಪೀವಧುವುಂ ಕಡುಕಂದಿ ಕುಂದಿ ಸ
ದ್ಭಾವಮನೊಕ್ಕು ಹೀನರವೊಲನ್ಯನಿವಾಸದೊಳಿರ್ಪುದಾರಿದೇಂ || ೧೧೫

ಸಂಸಾರದೊಳ್ ಬಿಟ್ಟು ಪೆಱತೊಂದು ಕಷ್ಟಮಿಲ್ಲೆಂಬುದುಂ ಶಿವಗುಪ್ತಭಟ್ಟಾರಕರಿಂತೆಂದರ್ || ೧೧೬

ಅಂತೆನವೇಡ ಧಾರಿಣಿಯೊಳೀಲಲಿತಾಂಗಿಯೆ ಪುಣ್ಯವಂತೆ ಭೂ
ಕಾಂತನಡರ್ತು ತನ್ನ ಮಗಳಂ ಕುಡವೇಟ್ಕೆನಲೀಕೆಯಾಣ್ಮನೋ

ರಂತೆ ಜಿನೇಂದ್ರಧರ್ಮಯುತನಲ್ಲದವಂಗೆ ಮಹೋತ್ಮಜಾತೆಯಂ
ಸಂತತಮೀಯೆನೆಂದು ಬಿಸುಟಗ್ಗದ ಧಾನ್ಯಧನಂಗೃಹಂಗಳಂ ॥ ೧೧೮

ಪೋಗುತ್ತುಮೀವನಿತೆ ಗರ್ಭಿಣಿಯಪ್ಪುದಱಿಂದೊಡಗೊಂಡು ಪೋಗಲೊಲ್ಲದೆ ಶ್ರೀದತ್ತಸೆಟ್ಟಿ ತನಗಿಷ್ಟನಪ್ಪುದಱಿಂದಿಲ್ಲಿ ಗುಪ್ತದೊಳಿರಿಸಿ ಪೋದನದಱಿಂದೀಧನಶ್ರೀ ಕಂದಿ ಕುಂದಿದಳೆಂಬುದುಂ, ಇಂತೀಧನಶ್ರೀಯ ಗರ್ಭದ ಕೂಸೀಮಂಡಳಕ್ಕೆಲ್ಲಮೊಡೆಯನಕ್ಕುಮೆಂದು ತಮ್ಮೊಳ್ ನುಡಿದು ಪೋಪುದುಂ ಶ್ರೀದತ್ತಸೆಟ್ಟಿ ಕೇಳ್ದು ಕಾರಣಮಿಲ್ಲದೆ ಮುಳಿದು ॥

ಈಸಸಿವದನೆಯ ಗರ್ಭದ
ಕೂಸೀದೇಶಕ್ಕೆ ಮುಖ್ಯನಪ್ಪಂ ಗಡ ನಾ ।
ನಾಸಿಸುವನುಪಾಯದೊಳ್ ವಿ
ನಾಶಂಮಾಡಲ್ಕೆವೇಱ್ಕುಮೆಂದತಿಮುಳಿಸಿಂ ॥ ೧೧೯

ಪೂರ್ವವೈರಮುಂಟಪ್ಪುದಱಿಂ ಮಸಗಿ ಕೃತಕದಿನಿರ್ವರ್ ತೊೞ್ತಿರನೀಧನಶ್ರೀ ಪೆಱಲೊಡಮೆಮಗಱಿಪಿಮೆಂದು ಬೇರೇಕಾಂತದೊಳ್ ಕಲಿಸಿ ಕೂರ್ಪರಂತೀ ಧನಶ್ರೀಗೆ ಸಂಘಾತಮಾಗಿರಿಮೆಂದಿರಿಸುವುದುಂ ಧನಶ್ರೀ ನವಮಾಸಂ ನೆಱೆದು ಗಂಡುಗೂಸಂ ಪೆಱುವುದುಂ ಮುನ್ನಮಿರಿಸಿದ ತೊೞ್ತಿರ್ಗರುಂ ಪರಿತಂದು ಶ್ರೀದತ್ತಸೆಟ್ಟಿಗಱಿಪುವುದುಂ ॥ ೧೨೦

ಮುನಿಸೊದವೆ ಕೊಲ್ವೆನೆಂಬೀ
ಮನದಿಂ ಪರಿತಂದು ನೋಡಿ ಕೂಸಂ ಕಂಡೊ ।
ಯ್ಯನೆ ಕೂರ್ಪರಂದದಿಂದಂ
ವನಿತೆಯನಚ್ಚುಕರ್ತು ತಡವಿ ಕೃತಕದಿನಾಗಳ್] [1] ॥ ೧೨೧

---

1 ಶ್ರೀದತ್ತಸೆಟ್ಟಿಯ ಮನೆಯೊಳ್ ನಿಂದು ತ್ರಿಗುಪ್ತಿಭಟ್ಟಾರಕರಿಂತಪ್ಪ ಭದ್ರಲಕ್ಷಣ ಬಡವಟ್ಟಂತೇಕೆ ಇರ್ದಪಳೆಂದು ಶಿವಗುಪ್ತಭಟ್ಟಾರಕರಂ ಬೆಸಗೊಳ್ವುದುಂ ತತ್ಪ್ರಪಂಚವೆಲ್ಲಮಂ ಪೇಳ್ದೀಧನಶ್ರೀ ಪುಣ್ಯಾಂಗನೆ ಯೀಕೆಯ ಗರ್ಭದ ಕೂಸು ಈ ಮಾಳವದೇಶಕ್ಕಧಿಪತಿಯಕ್ಕುಮೆಂಬುದುಂ ಶ್ರೀದತ್ತಸೆಟ್ಟಿ ಕೇಳ್ದು ಕಾರಣಮಿಲ್ಲದೆ ಮುನಿದು ಕೊಲ್ವ ಮನಕದಿಂದಿರ್ದ ಧನಶ್ರೀ ಪ್ರಸೂತೆಯಾಗಲೊಡನೆ (ಗ)

ಕುವಳಯನೇತ್ರೆಗೆ ಗರ್ಭ
ಸ್ರವಮಾದುದು ಕೆಟ್ಟೆನೆನಗೆ ಕೈಲೆಡೆ [1] ಯೆಂದೀ ।
ಧವಳಾಕ್ಷಿಯನಣ್ಣೊ [2] ವಣಿ
ಗ್ಭವನಿರಿಸಿದನಕಟ ಪೊಲ್ಲದಾಯ್ತೆಂದಾಗಳ್ ॥ ೧೨೨

ಧನಶ್ರೀಯುಂ ಪಾಸಿನಮೇಲೆ ಪಟ್ಟರಿಸಿ ಕೂಸಿನ ಪೊರೆಯೊಳಿರ್ದವರೆಲ್ಲರುಮಂ ಪೊಱಮಡಿಸಿ ಕಳೆದು ಕೂಸು ಸತ್ತುದೆಂದು ಪುಸಿದು ಪೊಱಗಣ್ಗೆ ಕೂಸನೊಯ್ದು ಮೆಲ್ಲನೇಕಾಂತದೊಳೊರ್ವ ಕ್ರೂರನಪ್ಪ ಪೊಲೆಯಂಗೆ ಸಾಲ್ವನಿತು ಪೊನ್ನಂ ಕೊಟ್ಟು ಮುನ್ನಮೆ ಸಮಕಟ್ಟಿ ಕೊಲ್ಲೆಂದಾತನ ಕಯ್ಯೊಳ್ ಕೊಟ್ಟು ಕಳೆದಿತ್ತಲ್ ॥ ೧೨೩

[ಸಾವಿಲ್ಲದೊಡೀಕೂಸಿನ
ಭಾವಮುಮೀಶಿಶುವಿನೋಜೆಯುಂ ಗುಣಮುಂ ಸ ।
ದ್ಭಾವಮುಮೊಳ್ಪುಂ ಸಕಳೋ
ರ್ವೀವಳಯಮುಮನೆಱಗಿಪ್ಪುದಿದು ಸಂದೆಯಮೇ] ॥ ೧೨೪

ಎನ್ನನೆ ನಂಬಿ ತನ್ನ ಸತಿಯಂ ಗುಣಪಾಳನುದಾತ್ತವೈಶ್ಯವಂ
ಶೋನ್ನತನಕ್ಕಱಿಂದಿರಿಸಿ ಪೋದನವಂಗೆ ಮನೋನುರಾಗದಿಂ
ದೆನ್ನ ಸಖಿತ್ವಮಂ ಮೆಱೆದು ಕೂಸುಮನೀಕೆಯುಮಂ ಸಮಂತು ಸಂ
ಪನ್ನತೆಯಿಂದಮೊಪ್ಪಿಸುವ ಭಾಗ್ಯಮನಾಂಪಡೆಯೆಂದುರಾತ್ಮನಂ ॥ ೧೨೫

[ಪೊಂಗಂ ಮುದದಿಂದಾದಿ
ತ್ಯಂಗಂ ಪುಟ್ಟಿದವೊಲಧಿಕತೇಜಂ ಚೆಲ್ವಿಂ ।
ಗಂಗಜನನಿೞಿಪ ರೂಪು ಬೆ
ಡಂಗುಂ ಸತ್ತೆನಗೆ ಪೊಲ್ಲದಾಯ್ತೆಂದತ್ತಿಂ] ॥ ೧೨೬

ಎಂದು ಧನಶ್ರೀಯು ಮನದ ಸಂಕಲ್ಪಂ ಪೋಪಂತಾಗೆ ಮಾಯಾವಿ ಪ್ರಳಾಪಂಗೆಯ್ಯೆ ಧನಶ್ರೀ ಅವನ ಮನದ ಕಪಟಮನಱಿಯದೆ ನಿಶ್ಚಯಮತ್ತಪನೆಂದು ನಂಬಿ ದುಃಖಮನಾಱಿಸಲೆಂದಿಂತೆಂದಳ್ ॥ ೧೨೭

---

1 ಕೈಯೆಡ (ಬ. ಕ.)   2 ನೋಡ (ಕ. ಬ.)

ಕಱಿದವರ್ಗೇಕೆ ಪಂಬಲಿಪುದೇಕೆ ಪಲುಂಬುವುದೇಕೆ ಚಿತ್ತದೊಳ್
ಕೊಱೆವುದದೇಕೆ ಚಿಂತಿಸುವುದೇಕೆ ಬೞಲ್ವುದದೇಕೆ ದುಃಖದೊಳ್
ಮುಱುಗುವುದೇಕೆ [1] ಬಾಯ್ವಿಡುವುದೇಕೆ ಕನಲ್ವುದದೇಕೆ ಶೋಕದೊಳ್
ಪಳಯಿಸುತಿರ್ಪುದೇಕೆ ಬಗೆಗೆಟ್ಟು ಬೞಲ್ವುದದೇಕೆ ನೋವುದೋ ‖ ೧೨೮

ಬೇಡೆಂದು ಮಾಣಿಸುವುದುಂ ಮಾಯಾವಿಪ್ರಳಾಪಮಂ ಮಾಣ್ದು [ಋಷಿಯರ ವಚನಮಂ ಪುಸಿಮಾಡಿದೆರ್ದೆಯುಂ ನೀವಿಕೊಂಡು ಮಗವು ಸತ್ತುದೆಂದು ರಾಗಿಸಿ] ರ್ದನಿತ್ತಲ್ ಪೊಲೆಯಂ ಪಸುಗೂಸಂ ನಿರ್ಮಾನುಷ್ಯಮಪ್ಪಡವಿಗೊಯ್ದು ಗಂಟಲಂ ಮುಱಿದು ಕೊಲ್ವೆನೆಂದು ಮಗವಂ [ನೋಡುವುದುಂ ‖ ೧೨೯

ಅರುಣತೆಯಿಂದಮೊಪ್ಪುವಧರಂ ಕನಕಚ್ಛವಿ ನೀಳ್ದ ಬಾಹು ಪಂ
ಕರುಹಮುಖಂ ನಿಮಿರ್ಕೆವಡೆದೊಪ್ಪುವ ನಾಭಿ ನೊಸಲ್ ಪೊದಳ್ದ ಭಾ
ಸುರತರಕೆಂಪಿನಿಂದೆಸೆವ ಪಾಣಿತಳಂ ನಸುಗೆಂಪನಾಳ್ವ ಸ
ತ್ತರಳವಿಲೋಚನೋದಯಮುಗಲ್ದರಮುನ್ನತಿವೆತ್ತ ಮಸ್ತಕಂ ‖ ೧೩೦

ಸೊಗಯಿಸಿ ತೋಱಿ ಕರಂ ಮಿಗೆ
ಮೊಗಮಂ ನೋಡುತ್ತೆ ನಲಿವ ಶಿಶುವಂ ಪೊಲೆಯಂ ।
ಮಿಗೆ ನೋಡಿ ನೋಡಿ ತನ್ನೊಳ್
ಬಗೆದಂ ದಯೆ ಪುಟ್ಟೆ ಮೋಹಮೊದವಿರೆ ಮನದೊಳ್] [2] ‖ ೧೩೧

ಕೊಲೆಯನುಡುಗಿ ಬಂದು ಪಳ್ಳದೊಳ್ ಮಳಲಂ ಬಗೆದು ಮಾವಿನೆಳದಳಿರ್ಗಳಂ ಪಾಸಿ ಕೂಸನಲ್ಲಿ ಪಟ್ಟಿರಿಸಿ ಸುರರಾಜನಿಭನಪ್ಪೀತನೀತೀವ್ರಮಪ್ಪ ಬಿಸಿಲೊಳ್ ತಾನೆ ಹುಡುಹುಡನೆ ಮಗ್ಗಿ ಮಿಡುಮಿಡು ಮಿಡುಕಿ ಸಾಯದೆ ಮಾಣನಾನೇಕೆ ಪಾಪಮಂ ಮಾಡಿಕೊಳ್ವೆನೆಂದುಸಿರದೆ ಪೋದನನ್ನೆಗಮಿತ್ತಲಾತನ ಪುಣ್ಯಮೆ ಬರ್ಪಂತೆ ಖಲ್ವಬಿಲ್ವಸಂಯೋಗದಿಂ ಶ್ರೀದತ್ತಸೆಟ್ಟಿಯ ಮೈದುನನಪ್ಪಿಂದ್ರದತ್ತಸೆಟ್ಟಿ ಪರದುವೋಗುತ್ತುಮಲ್ಲಿ

---

1 ಕೊಲೆವುದದೇಕೆ ಚಕ್ಕನೆ ಮನಂ ಮುಱಿದಿರ್ಪುದದೇಕೆ ಮಲ್ಕಲು ಮಱುಗುತ ಮತ್ತೆ (ಗ)

2 ನೋಡಿ ಚೆಲುವನಪ್ಪ ಕೂಸಂ ಕಂಡು (ಗ)

[ಬಿಟ್ಟಿರ್ಪುದುಮಂ, ಆತನ ಬೀಡಿನವರಿಂಧನಾರ್ಥಮೆತ್ತಿತ್ತ ತೊಳಲುತ್ತು
ಮೆಳದಳಿರಮೇಲೆ ಪಟ್ಟಿರ್ದು ನಲಿವ ಶಿಶುವಂ ಕಂಡು ‖ ೧೩೨

ಕರವೊಳ್ಳಿತಾಯ್ತು ಸೆಟ್ಟಿಗೆ
ಪಿರಿದುತ್ಸವಮಾಗೆ ರಾಗದಿಂ ಶಿಶುವಂ ನಾಂ ।
ತ್ವರಿತದಿನೆಯ್ದೊಪ್ಪಿಸಿ ಕೊಡೆ
ಪಿರಿದಪ್ಪೊಂದರ್ಥಲಾಭಮುಂ ನಮಗಕ್ಕುಂ ‖ ೧೩೩

ಎಂದು ಕೂಸಂ ನಿಧಾನಮನೆತ್ತುವಂತೆತ್ತಿ ಕೊಂಡು ಬಂದಿಂದ್ರ ದತ್ತಸೆಟ್ಟಿಗೊಪ್ಪಿಸುವುದುಂ ತನಗೆ ಮಕ್ಕಳಿಲ್ಲದುದಱಿಂ ಬಡವಂ ಕಡಾರದ ಪೊನ್ನಂ ಕಂಡಂತೆ ಪೆರ್ಚಿ ತನ್ನ ಭಾರ್ಯೆ ಶ್ರೀದತ್ತನ ತಂಗೆಯುಪ್ಪ ರಾಧೆಯುಂ ಕರೆದು ನಿನಗೆ ಪುತ್ರಲಾಭಮಾಯ್ತೆಂದು ಬಾಲಾರ್ಕಸನ್ನಿಭ ಶಿಶುವಂ ಕೊಟ್ಟು ಕೂಸಂ ತಂದವರ್ಗೆ ಗುಪ್ತದಿಂ ಬೇಟ್ಪನಿತು ಪೊನ್ನಂ ಕೊಟ್ಟು ಸೆಟ್ಟಿತಿ ಗೂಢಗರ್ಭದಿಂ ಗಂಡುಗೂಸಂ ಪೆತ್ತಳೆಂದೊಸಗೆಯುಮಂ ಜಿನಾಭಿಷೇಕಪೂಜೆಯುಮಂ ಮಾಡಿ ಸಂತೋಷದಿಂದಿರ್ಪುದುಂ ‖ ೧೩೪

ಪಡೆದನೊಪ್ಪುವ ಪುತ್ರನಂ ಸುರರಾಜಸನ್ನಿಭನಂ ಮನಂ
ಬಿಡೆ ಮನೋಭವರೂಪನಂ ಪಡೆದಿಂದ್ರದತ್ತವಣಿಗ್ವರಂ
ತಡೆಯುದೆಂಬುದನಯ್ದೆ ತೊಟ್ಟನೆ ಕೇಳ್ದು ವಿಸ್ಮಯಮಾದುದೆಂ
ದುಡಗದಾವಚನಕ್ಕೆ ನಾಡೆಯುಮಳ್ಕಿ ಬಳ್ಕಿ ನಿರಂತರಂ][1] ‖ ೧೩೫

ಎನ್ನ ತಂಗೆಯುಪ್ಪ ರಾಧೆಗೆ ಗರ್ಭಮಿಂದುವರಮಿಲ್ಲೆಂಬುದನಿಂಬಾಗಿ ಬಲ್ಲೆಂ ಭೋಂಕನೆ ಮಗನಂ ಪಡೆದಳೆಂಬ ಮಾತಾದುದು ಧನಶ್ರೀಯ ಮಗನಕ್ಕುಮೋ ವಿಪರೀತಮಿದನಾರ್ಸೈವೆನೆಂದು ಬೆಗಡುಗೊಂಡು ತಂಗೆಯ ಮನೆಗೆ ವಂದು [ಗುಣಪಾಲಸೆಟ್ಟಿಯೊಳಚ್ಚೊತ್ತಿದಂತಪ್ಪ ಶಿಶುವಂ ಕಂಡಱಿದು ಬೆರ್ಚಿ][2] ಕಲ್ಲಂ ತಾಗಿದ ಮಿಂಟೆಯಂತೆ ಮುಟ್ಟು

[1] ಬಿಟ್ಟು ಕೂಸಂ ಕಂಡು ತನ್ನ ಪೆಂಡತಿಯುಪ್ಪ ರಾಧೆಗೆ ಕೊಟ್ಟು ಗೂಢಗರ್ಭದಿಂ ಗಂಡುಗೂಸಂ ಪೆತ್ತಳೆಂದು ತನ್ನ ಪುರಕ್ಕೆ ಪೋಗಿ ರಾಗದಿಂದಿರ್ಪುದುಮದಂ ಶ್ರೀದತ್ತಸೆಟ್ಟಿ ಕೇಳ್ದಿಂತು (ಗ) [2] ಕೂಸಂ ನೋಡಿ (ಗ)

ಗೆಟ್ಟು ಪೆಂಡಿರ ಪೊಲ್ಲಮೆಯುಂ ಕಂಡ ಗಂಡನಂತೆ ಮನಂಮುಱಿದು ಬೇಸ ಗೆಯೊಳುಪ್ಪಂ ತಿಂದನಂತೆ ಮಲ್ಮಲಂ ಮಱುಗಿ ಮತ್ತಂ ಕೊಲ್ವೆನೆಂಬ ಬಗೆಯಂ ತಂದುಪಾಯದಿಂ [ಶ್ರೀದತ್ತಸೆಟ್ಟಿ ಪುಸಿಗೂರ್ಮೆಯಿಂದಿಂದ್ರ ಸೆಟ್ಟಿಯನಿಂತೆಂದಂ ॥ ೧೩೬

ಅನುಜೆಗೆ ಪುತ್ರರಿಲ್ಲ ಸಿರಿಯುಂ ಧನಮುಂ ವ್ಯಥೆಯಾದುದೆಂದು ಮ
ನ್ಮನದೊಳಗಾಗಳುಂ ಮಱುಗುತಿರ್ದೆನಿಳಾವಳಯೈಕವಂದ್ಯನಂ
ತನಯನನೀಗಳರ್ತಿವೆರಸಾದರದಿಂ ನೆಱೆ ಕಂಡು ಸಂತಸಂ
ಮನದೊಳುದಾತ್ತಮಾದುದೆಲೆ ಪೋದುದು ಚಿಂತೆಯುಮೆನ್ನ ದುಃಖ
ಮುಂ॥ ೧೩೭

ಎಂದು ಚಾಟುಕಾರವಚನಂಗಳಿಂ ನಂಬೆ ನುಡಿದು ತಂಗೆಯ ಮೈದುನನ ಮೊಗಮಂ ನೋಡಿ ಮುನ್ನಪ್ಪೊಡಿನಿತುಕಾಲಮಱಿಯದ ನಲ್ಲಂ ರಾಧೆಗೆ ಗರ್ಭಮಿಲ್ಲೆಂಬುದಂ ಬಲ್ಲೆನಿದೆನಗಾಶ್ಚರ್ಯಮಾದ ಪುದಿದನೆನಗಱಿಪಂತಾಗೆ ಪೇೞಿಮೆನೆ ದಿಟಮಾತನೆನಗೆ ಕೂರ್ಪನೆಂದು ಕೂಸಿನ ವೃತ್ತಾಂತಮೆಲ್ಲಮಂ ಪೇೞೆ ರಾಧೆಯ ಮಾತಂ ಕೇಳ್ದು ಕೃತಕದಿಂ ರಾಗಿಸಿ ॥ ೧೩೮

ಬಸಗೆಯನಿಂಬಾಗಿರೆ ಸಂ
ತಸದಿಂ ಮಾಡಿಸನೆ ಗೆವುವುಗೇನೊಪ್ಪಿರೆ (?) ಕ ।
ಟ್ಟಸನೆ ಬಯಕೆಯುಮನೀಯೆನೆ
ಪೊಸತಾಗಿರೆ ನಂಟರಕ್ಕಱಿಂ ನೋಡುವಿನಂ ॥ ೧೩೯

ಬಡವರ ಮಕ್ಕಳಂತೆ ಹೀನೋತ್ಸಾಹಮಂ ಮಾಡದೆನ್ನ ತಂಗೆಯುಮನೆನ್ನಳಿಯನುಮನೆನ್ನೂರಿಂಗೊಡಗೊಂಡು ಪಿರಿದಪ್ಪುತ್ಸಾಹಮಂ ಮಾಡವೇೞ್ಪುದೆಂದಿಂದ್ರದತ್ತಸೆಟ್ಟಿಯುಮನೊಡಂಬಡಿಸಿ ರಾಧೆಯುಮಂ ಕೂಸುಮನುಜ್ಞಯಿನಿಗೊಡಗೊಂಡು ಬಂದು ಕಪಟೋತ್ಸಾಹಮಂ ಮಾಡಿ ಕೆಲವುದಿವಸಂಬಱಿಕ್ಕೆ ನಿಷ್ಠುರನಪ್ಪೊರ್ವ ಮಾದೆಗಂಗೆ ಪಿರಿದ

ಸ್ಪರ್ಧೆಯುಮಂ ಕೊಟ್ಟೊಡಂಬಡಿಸಿ ಕೂಸಂ ನಡಪುವ ದಾದಿಯನೊಡಂಬಡಿಸಿ ಕೂಸು ಸತ್ತಿತೆಂದು ಮಾಡಿ ಪೊರಗಣ್ಗೊಯ್ದು ಮಾದಿಗನ ಕೈಯೊಳ್ ಕೊಲ್ಲೆಂದು ಕೊಟ್ಟಟ್ಟಿ ರಾಧೆಯುಮಂ ತನ್ನ ಪೆಂಡತಿಯಪ್ಪ ವಿಶಾಖೆಯುಮಂ ತನ್ನ ಮಗನಪ್ಪ ಮಹಾಬಳನುಮಂ ನಂಬಿಸಲ್ವೇಡಿ ಮಾಯಾಪ್ರಳಾಪಮಂ ಪಣ್ಣಿ ॥ ೧೪೦

ಪಿರಿದಸ್ಪರ್ಧೆವನೀವೆನೆನ್ನ ಮಗಳಂ ಕೂರ್ತೀವೆನಕ್ಕೃತರ್ ಮಾ
ಣ್ದಿರದುತ್ಸಾಹಮನೀಪುರಕ್ಕೆ ವಿಭವಂ ತಾನಾಗೆ ಮಾಪ್ಪೆಂ ನರೇ
ಶ್ವರನಂ ಮಾಣಿಸಿ ಭೂಷಣಾವಳಿಗಳಂ ಚೆಲ್ವಾಗಿ ಮುಂದಿರ್ದ ಚೆ
ಚ್ಚರದಿಂ ಮಾಡಿಸಿ ಕೂರ್ಮೆಯಿಂ ಕುಡುವೆನೆಂದಿರ್ದಂ ಮಹೋತ್ಸಾ
ಹದಿಂ ॥ ೧೪೧

ಎನ್ನ ಪಡೆದೊಡಮೊಗಂ ವೈ
ಶ್ಯೋನ್ನತನೆನಿಸಿರ್ದ ನಿನ್ನ ತಂದೆಯು ಪಡೆದಾ ।
ಪೊನ್ನಿಂಗೆ ನೀನೆ ಮುಖ್ಯನೆ
ನಿಕ್ಕಂ ನಿನ್ನಂತು ಭಾಗ್ಯಹೀನರುಮೊಳರೇ] [1] ॥ ೧೪೨

ಅನಿಮಿಷಸನ್ನಿಭನಂ ಚಂ
ದ್ರನನಿಱುಸುವ ಸೌಮ್ಯರೂಪನಂ ಪಡೆದುಂ ನಂ ।
ದನನಂ ಪಡೆಯದ ತೆಱದಿಂ
ನಿನಗಾದುದು ದುಃಖಮಕ್ಕ ಪಾಪೋದಯದಿಂ ॥ ೧೪೩

ಕಂದರ್ಪನಿಭಂ ತಂಗೆಗೆ
ನಂದನನುದಯಾರ್ಕತೇಜನಾದಂ ಲೇಸಾ ।
ಯ್ತೆಂದಿರ್ದೆನೆನ್ನ ತನು ದ
ಳ್ಳೆಂದುರಿದಪುದೀಗಳೆತ್ತ ಪೋಪೆನೊ ಕಱುವೇ ॥ ೧೪೪

---

1 ತನ್ನ ತಂಗಿಯಪ್ಪ ರಾಧೆಯುಮಂ ಕೂಸುಮಂ ತನ್ನ ಮನೆಗೊಡಗೊಂಡು ಬಂದು ಕೆಲವುದಿವಸಮಿರಿಸಿ ಕೃತಕದಿಂ ಮುನ್ನೊರ್ವ ಮಾದಿಗನನೊಡಂಬಡಿಸಿ ಕೂಸು ಸತ್ತುದೆಂದು ಮಾಡಿ ಪೊಱಗೊಯ್ದು ಮಾತಂಗನ ಕಯ್ಯೊಳ್ ಕೊಲ್ಲೆಂದು ಕೊಟ್ಟಟ್ಟಿ ರಾಧೆಯುಮಂ ತನ್ನ ಪೆಂಡತಿಯಪ್ಪ ವಿಶಾಖೆಯುಮಂ ತನ್ನ ಮಗನಪ್ಪ ಮಹಾಬಳನುಮಂ ನಂಬಿಸಲ್ವೇಡಿ ಮಾಯಾಪ್ರಲಾಪಮಂ ಪಣ್ಣಿ (ಗ)

ಎಂದು ತಂಗೆಯನೇಱಲುಮಿೞಿಯಲುಂ ನೋಡಿ ಕೃತಕದಿಂ ಪ್ರಳಾಪಂಗೆಯ್ಯುತಿರ್ದನಿತ್ತಲ್ ಮಾದೆಗಂ ಕೂಸನಡವಿಗೊಯ್ದು ಗಂಟಲಂ ಮೆಟ್ಟಿ ಕೊಲ್ವೆನೆಂದು ಕೂಸಂ ಪೆಗಲಿಂ ನೆಲಕ್ಕಿೞಿಪುವುದುಮಿೞಿಯಲೊಲ್ಲದೆ ಮಾದೆಗನ ಪಱಿಗಡ್ಡಮನೆಡಗಯ್ಯೊಳ್ ಪಿಡಿದು ಬಲದ ಕಯ್ಯೊಳ್ ಮೊಗಮಂ ಪೊಯ್ಯುತ್ತುಂ ಕುಂಕುಮದುರುಳಿಯನನುಕರಿಸಿರ್ಪ ಮಡಂಗಳಿಂದೆರ್ದೆಯನೊದೆಯುತ್ತುಮಿರೆ ದುರಾತ್ಮಂ ಶಿಶುವಿನ [ರೂಪುಮಂ ಗಾಡಿಯುಮಂ ವಿಳಾಸಮುಮಂ] ಮುದ್ದಾಟಮುಮಂ ನೋಡಿ ಕರುಣಮುಂ ಸ್ನೇಹಮುಂ ತಿಣ್ಣಮಾಗೆ ಕೊಲಲಾಱದೆ ತೊಱೆಯ ಪುಳಿನಸಳದೊಳ್ ಮಳಲ ಪಾಸಂ ಮಾಡಿ ಮೆಲ್ಲನಲ್ಲಿ ಪಟ್ಟಿರಿಸಿ ನಿನ್ನ ಮೆಚ್ಚಿದಂತಾಗೆಂದು ಪೋದನನ್ನೆಗಂ ॥ ೧೪೫

ತೊಱೆಯೊಳ್ ನೀರುಣಲೆಂದು ಬಂದು ತುಱುಗಳ್ ಪಟ್ಟಿರ್ದ ಪೂರ್ಣೇಂದುಮಂ
ನೆಱೆ ಪೋಲ್ತುನ್ನತನಂ ಸುರೇಂದ್ರನಿಭನಂ ತದ್ಬಾಲನಂ ಕಂಡು ಮೂ
ಗಿಱಿಯುತ್ತುಂ ಕುಡಿವಾಲಮೆತ್ತಿ ಕೆನೆಯುತ್ತಾನಂದದಿಂ ಸುತ್ತಿ ಮು
ತ್ತಿಱಿದತ್ತಿತ್ತಲಮುಂಕಿ ಪೋಗದಿರೆ ಕಂಡೆಯ್ತಂದು ಗೋಪಾಲಕರ್ ॥ ೧೪೬

[ಇದೇನಾನೊಂದಾಶ್ಚರ್ಯಮಾಗಲೆವೇೞ್ಕುಮೆಂದು ಬಳಸಿರ್ದ ಜೀವಧನಂಗಳಂ ತೊಲಗಬಡಿದು ನೋೞ್ಪುದುಂ ॥ ೧೪೭

ಲೀಲೆಯೊಳ ಮಳಲ ಜಗಲಿಯ
ಮೇಲ್ ಸರೋಜಾತಸಖಗೆ ಮಿಗಿಲೆನಿಸುವ ಸ ।
ಲ್ಲೀಲೆಯ ತೇಜೋಧಿಕನಂ
ಬಾಲಕನಂ ನಲಿಯುತಿರ್ದನಂ ಕಂಡಾಗಳ್ ॥ ೧೪೮

ಈತಂ ಭಾವಿಸಿ ನೋೞ್ಪೊಡೆ
ಭೂತಳನಾಥಂಗೆ ಪುಟ್ಟಿದನ್ನಂ ಧರಣೀ ।
ಖ್ಯಾತಂ ಕೇವಲಮಲ್ಲಂ
ಪ್ರೀತಿಯಿನೀಶಿಶುವನೊಯ್ದು ಕರಮುತ್ಸವದಿಂ ॥ ೧೪೯

ನಮ್ಮಾಳ್ದಂಗೆ ಕುಡುವೆನೆಂದು ಗೋಪಾಲರಾಶಿಶುವನೆತ್ತಿಕೊಂಡು ಬಂದು ಗೋವಿಂದನೆಂಬ ತುಱುಗಾಱಂಗೆ ಕುಡುವುದುಮಾತಂ ಕರಮೊಸೆದು ಗೋಪಾಲರ್ಗೆ ಮುಚ್ಚುಗೊಟ್ಟು ತನ್ನ ಪೆಂಡತಿಯಪ್ಪ ನಂದೆಯೆಂಬ ತುಱುಗಾತಿಯುಂ ಕರೆದು ಪುತ್ರಲಾಭಮಾದುದೆಂದು ಮಗನಂ ಕೊಟ್ಟು ತುಱುಪಟ್ಟಿಯೊಳ್ ಉಸಗೆಯುಂ ಮಾಡಿ ಕೂಸಿಂಗೆ ಧನಕೀರ್ತಿಯೆಂದು ಪೆಸರಿಟ್ಟು ಕೊಂಡಾಡಿ ನಡಪುತ್ತುಮಿರ್ಪುದುಂ ಶುಕ್ಲಪಕ್ಷದ ಚಂದ್ರನಂತೆ ಬಳೆದು][1] ॥ ೧೫೦

ಧನಕೀರ್ತಿಕುಮಾರಂ ಕಾ
ಮನಿಭಂ ತುಱುಪಟ್ಟಿಗರಸನಾಗಿರ್ಪಿನೆಗಂ ।
ಮನವೊಲ್ದೊಂದುದಿನಂ ವೈ
ಶ್ಯನುತಂ ಶ್ರೀದತ್ತಸೆಟ್ಟಿ ಕರಮಾದರದಿಂ ॥ ೧೫೧

ತನ್ನ ಮಗಳಪ್ಪ ಶ್ರೀಮತಿಯ ಮದುವೆಯುಂ ಮಾಳ್ಪೆನೆಂದು ತುಪ್ಪಮಂ ಕೊಳಲೆಂದು ಪಲಂಬರ್ ಭೃತ್ಯರ್ವೆರಸು ತುಱುಪಟ್ಟಿಗೆವಂದು ಗೋಪಾಲಪರಿವೃಢನಾಗಿರ್ದ ಧನಕೀರ್ತಿಕುಮಾರನಂ ಕಂಡು ಗುಣಪಾಲಸೆಟ್ಟಿಯ ಮಗನಪ್ಪನೆಂದು ನಿಶ್ಚಯಿಸಿ [ಮನದೊಳ್ ಬೆಗಡುಗೊಂಡು ॥ ೧೫೨

ಪಿಂಗದೆ ನಾನಾಮಾದೀ
ಗಂಗೆ ಮಹಾಸಿನ್ಧುರಂಗೆ ಪಲವಂ ಪೊನ್ನಂ ।
ಭಂಗಿಯೊಳ್ ಕೊಟ್ಟು ಮತ್ತೊಂ
ದಂ ಗಡ ಬಗೆದಳಿಪದೊಯ್ದು ಬೇಗಂ ಶಿಶುವಂ ॥ ೧೫೩

ಕೊಲ್ಲೆಂದಟ್ಟಿದೊಡಾತಂ
ಕೊಲ್ಲದೆ ಕಡುಕಷ್ಟನಾಗಿ ತುಱುಗಾಱಂಗಿ ।

1 ಕಂಡು ತಮ್ಮಾಳ್ದನಪ್ಪ ಗೋವಿಂದನೆಂಬ ತುಱುಗಾಱಂಗಱಿಪುವುದುಮಾತಂ ಶಿಶುವಂ ಮನೆಗೊಯ್ದು ಧನಕೀರ್ತಿಯೆಂಬ ಪೆಸರನಿಟ್ಟು ನಡಪುವುದುಂ (ಗ)

ತ್ತಲ್ಲಿಯುಮರ್ಥವನೋವದೆ
ಮೆಲ್ಲನುಪಾರ್ಜಿಸಿದನಕ್ಕುಮತಿಲೋಭತೆಯಿಂ ॥ ೧೫೪

ಆದೊಡಮೇನಾಯ್ತು ಭುಜಂಗನ ಕಷ್ಟತಿಕ್ಕೆಯಲ್ಲದೆ ಸೂಳೆ ಗಂಡರಿಲ್ಲದಿರಳೆಂಬಂತೆ ಮಾದಿಗನ ಕಷ್ಟತಿಕ್ಕೆಯುಕ್ಕುಮಲ್ಲದಾನೆಂತುಮಿವನಂ ಕೊಲ್ಲದೆ ಮಾಣೆನೆಂದು ತನ್ನೊಳ್ ಗುಜುಗುಜಿಸಿಕೊಂಡು ತುಱುಗಾಱನಂ ವಸ್ತ್ರತಾಂಬೂಲಭೋಜನಾದಿಗಳಿಂ ತನಗೆ ವಶಗತಂಮಾಡಿ ಕೆಳೆಗೊಂಡು ಪತ್ತೆಂಟುದಿವಸಮಲ್ಲಿರ್ದೊಂದು ದಿವಸಂ ಗೋವಿಂದನಂ ಬರಿಸಿ ತಾಂಬೂಲಮಂ ಕೊಟ್ಟು ಶ್ರೀದತ್ತನಿಂತೆಂದಂ ॥ ೧೫೫

ಪಿರಿದಪ್ಪವಸರಮಾದುದು
ಭರವಶದಿಂದೆನ್ನ ಪುತ್ರನಲ್ಲಿಗೆ ಬೇಗಂ ।
ಬರೆದೋಲೆಯುನೀಗಳ ಚ
ಚ್ಚರದಿಂದಂ ಪೋಗಿ ಕುಡುವನಂ ತತ್ಕ್ಷಣದಿಂ ॥ ೧೫೬

ನೀಂ ಪೇೞ್ವುದೆಂಬುದುಂ ಗೋವಿಂದಂ ತನ್ನ ಮಾನಿಸರ ಮೊಗಮಂ ನೋಡಿ ಪೇೞಲೆಂದಿರ್ಪುದುಂ ಶ್ರೀದತ್ತನಿಂತೆಂದಂ ॥ ೧೫೭

ಮತ್ತಿನ ಬಂಟರೊಳಾಗದು
ಚಿತ್ತಜನಿಭನೆನಿಪ ನಿನ್ನ ಮಗನಂ ಸೌಂದ ।
ರ್ಯೋತ್ತಮನಂ ಧನಕೀರ್ತಿಯು
ನುತ್ತಮಗುಣಗಣನನಟ್ಟವೇೞ್ಪುದು ಬೇಗಂ ॥ ೧೫೮

ಎಂಬುದುಂ ಗೋವಿಂದಂ ಶ್ರೀದತ್ತಂ ಮುಂ ಕೂರ್ತು ಕೊಟ್ಟ ದ್ರವ್ಯಾದಿಗಳಂ ನೆನೆದು ಮಱುಮಾತನೀಯದೆ ತನೂಜನಂ ಪೋಗವೇೞ್ವುದುಂ ತತ್ಕ್ಷಣದಿಂ ॥ ೧೫೯

ಧನಕೀರ್ತಿಗೆ ಕೂರ್ಪಂತೊ
ಪ್ಪನೆ ಮಾಯಾಪುಂಜನಿತ್ತು ತಾಂಬೂಲಮುಮಂ ।

ಧನಮುಮನಾತನ ಚಿತ್ತ
ಕ್ಕನುನಯಮುಮಪ್ಪಂತು ಮಾಡಿ ಕೃತಕದಿನಾಗಳ್ ‖ ೧೬೦

ತನ್ನ ಪಂಕ್ತಿಯೊಳಾಣಲಿಕ್ಕಿಸಿ ಚಿತ್ತೋತ್ಸಾಹಮಂ ಮಾಡಿ ತನ್ನ ಪಾಸಿನ ಕೆಲದೊಳ್ ಮತ್ತೊಂದು ಪಾಸನಿಕ್ಕಿಸಿ ನೀನಿಲ್ಲಿ ಪಟ್ಟಿರೆಂದೇಕಾಂತಕ್ಕೆ ಪೋಗಿ ‖ ೧೬೧

ಎನಗೆ ಕೂರ್ಪೊಡೆ ಬೇಗದಿಂ ತಡವಿಲ್ಲದಿಂದೆ ಮಹಾಬಲಾ
ಮನೆಯ ಪಿತ್ತಿಲೊಳೀತನಂ ಪಿಡಿದೊಯ್ದು ಭೋಂಕನೆ ಕೊಂದು ನೆ
ಟ್ಟನೆ ಪೆಱರ್ಗನುರಾಗದಿಂದಮೆ ಪೇೞದೊರ್ಮೆಯೆ ಗುಪ್ತದಿಂ
ಮನದೆಗೊಂಡುಱೆ ಪೂೞ್ವುದೆಂದು ಕಷಾಯದಿಂ ಬರೆದೋಲೆಯಂ‖ ೧೬೨

ಮುದ್ರಿಸಿ ಬೆಳಗಪ್ಪ ಜಾವದೊಳ್ ಧನಕೀರ್ತಿಯ ಕೈಯೊಳ್ ಕೊಟ್ಟು ಪೋಗೆಂದಟ್ಟುವುದುಂ] [1] ಆತಂ ಪೊಱಮಟ್ಟು ಪವನವೇಗದಿಂ ದುಜ್ಜಯಿನಿಗೆ ಬಂದು ಪಥಶ್ರಾಂತನಾಗಿ ಬೞಲ್ದು ಸಿಂಪಾನದಿಯಂ ಪೊಕ್ಕು ಮೆಯ್ಯಂ ಕರ್ಚಿಕೊಂಡು ತೃಷೆ ಪೋಪಿನಂ ನೀರಂ ಕುಡಿದು ತನ್ನ ದೀರ್ತೀರದೊಳೊಪ್ಪುವ ಕೆಂದಳಿರ ಮಾವಿನ ಕೆಳಗೆ ಪಟ್ಟಿರ್ದನನ್ನೆಗಮಿತ್ತಲ್, ಮೃಗಸೇನೆಯೆಂಬ ಸೂಳೆ ಪೊತ್ತುವೋಗಿಂಗೆ ಕೆಳದಿಯರ್ವೆರಸು ಪೊೞಲಿಂ ಪೊಱಮಟ್ಟು ಸಿಂಪಾನದಿಯ ತಡಿವಿಡಿದು ಬರುತ್ತುಂ‖ ೧೬೩

ಕೆಂದಳಿರೋಳಿಯಿಂ ಮೆಱೆವ ತುಂಬಿಗಳಿಂ ನೆರೆದಿರ್ದ ಕೋಕಿಲಾ
ನಂದದಿನೊಪ್ಪಿ ಮನ್ಮಥಮಹೀಶ್ವರನೋಲಗಶಾಲೆಯಂತಿರಾ
ನಂದದಿನಿರ್ದ ಮಾಮರದ ಚೆಲ್ವ ಲತಾಂಗಿಯ ಕಣ್ಗೆ ಸೋಲಮಂ
ಕುಂದದೆ ಮಾಡೆ ಬಣ್ಣಿಸುತೆ ಮಾಮರನಲ್ಲಿಗೆ ಮೆಲ್ಲನರ್ತಿಯಿಂ ‖ ೧೬೪

---

[1] ಮತ್ತಂ ಕೊಲುವ ಕಜ್ಜಮನೆತ್ತಿಕೊಂಡು ಗೋವಿಂದಂ ತನಗೆ ಪಂನಿಗನಪ್ಪುದಱಿಂದಿವನನೊಂದು ಕಾರ್ಯಕ್ಕಟ್ಟಿದಪೆನೆಂದೊಡಂಬಡಿಸಿ ಮಹಾಬಳಂಗೀತನಂ ಬೇಗಂ ಕೊಲ್ವುದೆಂದೋಲೆಯಂ ಬರದು ಧನಕೀರ್ತಿಯ ಕಯ್ಯೊಳ್ ಕೊಟ್ಟಟ್ಟುವುದುಂ (ಗ)

ಮೃಗಸೇನೆ ಬಂದು ತಚ್ಛತ್ರಮಹೀಜಾತದ ಕೆಳಗೆ ಪಟ್ಟಿರ್ದ ಜಿನಸಮಯವಾರ್ಧಿವರ್ಧನಚಂದ್ರನಂ ಕಂಡು ಕಳೆದ ಭವಮಂ ಕಣ್ಣಾಱಿದುದೆಂಬ ಮಾತಂ ದಿಟಂಮಾಡಿ ॥ ೧೬೫

ತಂದೆಯುಮನೆ ಕಂಡ ತೆಱದಿಂ
ದಿಂದೀವರನಯನೆ ಮನದೊಳಚ್ಚಿಕ್ರತರ್ಮ ಮಹೀ |
ವಂದಿತನಂ ಗುಣನಿಳಯನ
ನಂದಾಗಳ್ ನೋಡಿ ಪೋಗಲಾಱದೆ ಪದೆಪಿಂ ॥ ೧೬೬

ಸಾರೆ ಕುಳ್ಳಿರ್ದು ॥ ೧೬೭

ತಳಿರನಿೞಿಸುವ ಪಾದಮಂ ಬಾಳೆಯ ಕಂಬದಂತೊಪ್ಪುವ ನೀಳ್ದೊಡೆಗಳಂ
ಪೊಳೆವ ನಯನಮಂ ನಿಡಿದೋಳನುನ್ನತಿವೆತ್ತ ಲಲಾಟಮಂ ಬಾಯ್ದೆರೆಯಂ
ಕುಲಿಶಚಕ್ರಾದಿಲಕ್ಷಣಾಂಕಿತಮಪ್ಪ ಕೆಂದಳದೊಳೊಪ್ಪುವ ರೇಖೆಗಳಂ
ಜಲರುಹಾನನೆ ಮನವೊಸೆದುನೋಡುತುಂ ಬಂಬಳಬಾಡುತುಂ ಸ್ನೇಹದಿಂದಂ ॥ ೧೬೮

ಅಂತಿರ್ದು ತೊಟ್ಟನೆಕೊಳ ಸೋಗಿಲೊಳಿರ್ದೋಲೆಯಂ ಕಂಡು ತಾಂ ಜಾಣೆಯುಂ ಸಕಲಶಾಸ್ತ್ರಪ್ರವೀಣೆಯುಮಪ್ಪುದಱಿಂ ಕಳೆದು ಕೊಂಡು ಮುದ್ರೆಯನೊಡೆದು ವಾಚಿಸಿ ನೋಡಿ ಚಿಂತಾಕ್ರಾಂತೆಯಾಗಿ ತನ್ನೊಳಿಂತೆಂದಳ್ ॥ ೧೬೯

ಮನಸಿಜರೂಪನಂ ಸುರಸಮಾನನನುನ್ನತಸೂರ್ಯತೇಜನಂ
ಮುನಿನುತನಂ [1] ಸಮಸ್ತಶುಭಲಕ್ಷಣಯುಕ್ತನನಿಂತು ಕೊಲ್ವೆನೆಂ
ದಿನಿತನೊಡರ್ಚಿ ಕೊಲ್ವ ಬಗೆದಂದನೊ ತೊಟ್ಟನೆ [2] ಪಾಪಕರ್ಮನಂ
ದನುಪಮಚಿತ್ತೆ ನೊಂದು ಸುರಿದಳ್ ಬಸಮಲ್ಲದ ಕಣ್ಣ ನೀರ್ಗಳಂ ॥ ೧೭೦

---

1 ಮನುನಿಭನಂ (ಗ)   2 ಬಗೆದಂದಪನೇಕೆ (ಗ)

ಅಂತಾಮನದ ನೋವಿಂದಿರಲಾಱದೆ ಸ್ವೈರಣೆಗೆಟ್ಟು ಕಣ್ಣ ನೀರನಿಕ್ಕಿ ಕುಮಾರನ ಮೋಹದಿಂ ಶ್ರೀದತ್ತನಟ್ಟಿದೋಲೆಯಂ ಸೀಳ್ದು ಸಿಂಪಾನದಿಯೊಳಿಕ್ಕಿ ಕಳದಿಯನಟ್ಟಿ ಮನೆಯಿಂದೋಲೆಯುಮಂ ಕಂಠ ಮುಮಂ ತರಿಸಿ ಮಹಾಬಲ ನನಗೆ ಕೂರ್ಪನಪ್ಪೊಡೆ ಈವೋಲೆಗಂಡಾ ಕ್ಷಣದೊಳ್ ಶೀಘ್ರಂ ತನ್ನ ತಂಗೆಯಪ್ಪ ಶ್ರೀಮತಿಯುನೀತನೊಳ್ ತಡೆಯ ದಿಂದೆ ನೆರೆಪುವುದು, ನರಪದೊಡೆನ್ನಾಣೆ ಕಡೆಗಣಿಸವೇಡೆಂದು ಬರೆದು ಮುನ್ನಿನಂತೋಲೆಯಂ ಮುದ್ರಿಸಿ ಧನಕೀರ್ತಿಯ ಸೋಗಿಲೊಳಿಕ್ಕಿ ತನ್ನ ವಾಸಕ್ಕೆ ಪೋದಳನ್ನೆಗಮಿತ್ತಲ್ ಕುಮಾರನೆಚ್ಚತ್ತು ॥ ೧೭೧

ಪೊಟಲೊಳಗೆ ಬಂದು ವೈಶ್ಯನ
ನಿಳಯಮನಾರಯ್ದು ಪೊಕ್ಕು ವೈಶ್ಯಾತ್ಮಜನಂ ।
ಬಲಯುತನಂ ಕಂಡು ಮಹಾ
ಬಲನಂ ಮಾತಾಡಿ ಮುನ್ನ ಮುಖವಾರ್ತೆಗಳಂ ॥ ೧೭೨

ಶ್ರೀದತ್ತನಟ್ಟಿದೋಲೆಯ
ನಾದರದಿಂದೀಯೆ ಕಳೆದುಕೊಂಡಂತವನ ।
ತ್ಯಾದರದಿಂ ಪೊಡೆಮಟ್ಟು
ಶ್ರೀದಯಿತಂ ಬಿಟ್ಟು ನೋಡಿ ಸಂತಸದಿಂದಂ ॥ ೧೭೩

ಕರವೊಳ್ಳಿಕೆಯ್ದನಯ್ಯಂ
ಸ್ಮರಸದೃಶನನಿವನನೆನ್ನ ತಂಗೆಗೆ ವರನಾ ।
ಗಿರೆ ಮಾಡಿ ಬಗೆವೊಡೀಕೆಗೆ
ವರನೀತನೆ ತಕ್ಕನುಟದವರ್ ತಗರಿಳಯೊಳ್ ॥ ೧೭೪

ಎಂದು ಪೆರ್ಚಿ ಮಹಾಬಲಂ ತನ್ನಯ್ಯಂಗತಿಭಕ್ತನಪ್ಪುದಱಿಂದಿ ದನೇಱಿಸಿರಲಾಗದೆಂದು ತಮ್ಮಬ್ಬೆಯಪ್ಪ ವಿಶಾಖೆಗಱಿಪಿ ಮೌಹೂರ್ತಿ ಕರು ಕರೆದು ಶ್ರೀಮತಿಯ ಮದುವೆಗೆ ದಿವಸಮಂ ಬೆಸಗೊಳ್ವುದುಂ ಅವರಿಂತೆಂದರ್ ॥ ೧೭೫

ಇಂದೀಮಗವಿನ ಮದುವೆಯು
ನೊಂದುಂ ಭಯಮಿಲ್ಲದುತ್ಸವಂಬೆರಸು ಧರಾ ।
ವಂದಿತ ಮಾಡಿದೆಯಪ್ಪೊಡೆ
ಮುಂದೀಯಾಣ್ಮಂ ಧರಾತಳಾಧಿಪನಕ್ಕುಂ ॥ ೧೨೬

ಈಲಗ್ನದೊಳ್ಮಹಾಬಲ
ಮೇಲೆನಿಸುವ ನಿನ್ನ ತಂಗೆಗುತ್ಸವದಿಂದಂ ।
ಲೀಲೆಯೊಳ್ ಮದುವೆಮಾಡಿದೊ
ಡಾಲಲನೆಯ ಗಂಡನಿಳೆಗೆ ವಲ್ಲಭನಕ್ಕುಂ ॥ ೧೨೭

[ಮತ್ತಮಿಂದಿನ ದಿನಶುದ್ಧಿಯುಮಂ ಲಗ್ನದ ಫಲಮುಮಂ ಪೇಳ್ದೊಡೀ ಕನ್ನೆಯುಮೀಕೆಯ ವಲ್ಲಭನುಂ ಜಿನಸಮಯವಜ್ರಪ್ರಾಕಾರರುಂ, ಮಾಳವದೇಶಾಧೀಶ್ವರರುಂ ಸದ್ಧರ್ಮರಾಗಿಗಳುಮಪ್ಪರೆಂದಾದೇಶಂಗೆಯ್ವುದುಂ] [1] ನೈಮಿತ್ತಿಕರ ಮಾತಂ ಮಹಾಬಲಂ ಕೇಳ್ದು ಸಂತೋಷಂಬಟ್ಟು [ಮೆಚ್ಚಿ ಮೆಚ್ಚುಗೊಟ್ಟು ಎಮ್ಮಯ್ಯಂ ದಿನಮೊಳ್ಳಿತಪ್ಪ ಕಾರಣದಿಂದವಧಿಮಾಡಿ ವರನನಟ್ಟಿದ ಕಾರ್ಯಮನೇಱಿಸಲಾಗದೆಂದು] ॥ ೧೨೮

ಸರಸಿಜನೇತ್ರೆಯರ್ ನೆರೆದು ಮಂಗಳಮಂ ಮನಮೊಲ್ದು ಪಾಡೆ ಭೋ
ರ್ಗರೆಯೆ ಸಮುದ್ರದಂತೆ ಪಱೆಗಳ್ ಪಲವುಂ ಪಸುರ್ವಂದರೊಪ್ಪೆ ಚಾ
ಮರಮನನಂಗಜಂಗಮಲತಾಂಗಿಯರಿಕ್ಕೆ ಮನೋನುರಾಗದಿಂ
ಪರಸಿ ಸಮಸ್ತಬಂಧುತತಿ ಸೇಸೆಯನಿಕ್ಕೆ ಮಹೋತ್ಸವಂಗಳಿಂ ॥ ೧೨೯

ಶ್ರೀಮತಿಗಂ ಧನಕೀರ್ತಿಗಂ ಪಾಣಿಗ್ರಹಣಂಮಾಡಿ ಸುಖಮಿರ್ಪುದುಂ ಶ್ರೀದತ್ತಸೆಟ್ಟಿ ಧನಕೀರ್ತಿಯನುಪಾಯದಿಂ ಮಗ್ಗಿಸಿದೆನೆಂದು ತನ್ನ ಬುದ್ಧಿಗಂ ಚಾತುರ್ಯಕ್ಕಂ ಮೆಚ್ಚಿ ತುಱುಪಟ್ಟಿಯೊಳೆರಡು ಮೂಱುದಿವಸಂಬರಮಿರ್ದು ತುಱುಪಟ್ಟಿಯುಮಂ ಪೊಱಮಟ್ಟುಜ್ಜಯಿನಿಗೆ ವಂದು ತನ್ನ ಮನೆಯುಮಂ ಪೊಕ್ಕು ತನ್ನ ಮಗಳ್ಗೆ ಮದುವೆಯಾದ ಧನಕೀರ್ತಿಯುಮಂ ಕಂಡು ಬೆಱಗಾಗಿ ॥ ೧೩೦

---

1 ಎಂಬುದುಂ (ಗ)

[ಇಂತಲ್ಲದೆ ಕೊಲಬಾರದು
ಸಂತತವಿಶಾಖನನೆಂದುಪಾಯದೊಳಾನೇ ।
ಕಾಂತದೊಳ್ ಲೀಲೆಯನಟ್ಟಿದೊ
ಡಿಂತಾದುದು ಪುಣ್ಯಮುಳ್ಳವರ್ ಸತ್ತಪರೇ ॥ ೧೮೧

ಬಳಗಿಱಿಯಲೆಂದು ಪೊಕ್ಕು ತಾಂ ಮೂಗರಿಯಪಟ್ಟನೆಂಬಂತೆ ಕಳಲೆಂದು ಪೋದಾತನುಟ್ಟುದಂ ... ಮುನಿದಿಂತಲ್ಲದೆ ಸಾಯನೆಂದು ಬಗೆದಿಲ್ಲಿಗಟ್ಟಿದೊಡಂ ಸಾವು ತಪ್ಪಿ ತನೂಜೆಗೆ ಮದವಣಿಗನಾಗಿರ್ದನೆಂದು ಚಿಂತಿಸಿ ಪೊಲೆಯರೊಳಂ ಕೆಟ್ಟುದಂ ಕೇಳಿಯುಂಗಮೆಱಿಸಲಾಗೆಂಬ ನಾಣ್ಣುಡಿಯನವಧಾರಿಸಿ ತನ್ನ ಬಗೆಯನೊರ್ವಂಗಪ್ಪೊಡಮಱಿಪಲೊಲ್ಲದೆನ್ನ ಮುನಿಸಿಂತಲ್ಲದೆ ಪೋಗದೆಂದು ಶ್ರೀಮತಿ ರಂಡೆಯಾದೊಡಮಕ್ಕೆಂದು ಮತ್ತಂ ಧನಕೀರ್ತಿಯುಂ ಕೊಲ್ವ ಕಜ್ಜಮನೆತ್ತಿಕೊಂಡು ಮತ್ತಂ॥೧೮೨

ಕ್ರೂರನಪ್ಪನನೊರ್ವನಂ ಕ್ಷಣದಿಂ ತಳಱಿನ ನಂಟನಂ
ಬೀರನಂ ಕರೆದೊಯ್ದನಾತನ ಬೇಡಿದರ್ಥಮನಿತ್ತು ಸಂ
ಹಾರಿಸಿಂದುರಗಾಲಯಕ್ಕೆ ನಿವೇದ್ಯಮುಂ ಶುಚಿಯಾಗಿ ವಿ
ಸ್ತಾರದಿಂದಿರುಳಣ್ಣ ತಂದವನಂ ವಿಚಾರಿಸದಾಕ್ಷಣಂ ॥ ೧೮೩

ಎಂದು ಸಮಕಟ್ಟಿ ನಾಗಾಲಯದೊಳಾತನನಿರಿಸಿ ಬಂದು ಮನೆಯವರನಱಿಯಲೀಯದೆ ಅಳಿಯನಪ್ಪ ಧನಕೀರ್ತಿಯಂ ಬೇರೆ ಕರೆದು ನಿನಗಂ ಶ್ರೀಮತಿಗಂ ವಿಘ್ನಮಿಲ್ಲದೆ ವಿವಾಹಮಾಗೆ ನಾಗೇಂದ್ರಂಗೆ ನಿನ್ನಿಂದವೆ ಚರುವನಿಡಿಸುವೆನೆಂದು ಪರಸಿದೆನದಂ ಪುಸಿಮಾಡಲಾಗದು ಭಯಮಿಲ್ಲದೀನಾಗಾಲಯದ ಧರಣೇಂದ್ರಂಗೆ ತೋಱಿ ಪೊಡೆಮಟ್ಟು ಬಾಯೆಂದು ಬೇರೊಂದು ಮನೆಯೊಳಿರಿಸಿದ ಚರುಗಮಂ ಕುಡುವುದುಂ] [1] ॥ ೧೮೪

---

[1] ಸುಯ್ದು ಧನಕೀರ್ತಿಯನೇಕಾಂತಕ್ಕುಯ್ದು ನೀನೀಚರುವಂ ನಾಗಾಲಯಕ್ಕುಯ್ದು ನಾಗೇಂದ್ರಂಗೆ ತೋಱಿಬಾಯೆಂದಟ್ಟಿ ಪೆಱಗೊರ್ವ ಕ್ರೂರನಂ ಕೊಲ್ವುದೆಂದಟ್ಟುವುದುಂ ಅವಂ ಮುನ್ನಮೆ ಪೋಗಿರ್ದನನ್ನೆಗಂ ಚರುವನೊಯ್ವಾತನಂ ಮಹಾಬಳಸಿದಿರೊಳ್ ಕಂಡು ಎಲ್ಲಿಗೆ ಪೋದಪೆಯೆಂದು ಬೆಸಗೊಳ್ವುದುಂ ಧನಕೀರ್ತಿಯಿಂತೆಂದಂ (ಗ)

ಉರಗಾಲಯಕ್ಕೆ ನೀನೀ
ಚರುವಂ ಕೊಂಡೊಯ್ದು ನಾಗರಾಜಂಗಿತ್ತು ।
ದರದಿಂ ತೋಱಿ ಬಱಿಕ್ಕಾ
ದರದಿಂ ಪೊಱಮಟ್ಟು ಬರ್ಪುದೆಂದಿರದೆನ್ನಂ ॥ ೧೮೫

ಎಂದು ಮಾವಂ ಬೆಸಸಿದೊಡೆ ಪೋದಪೆನೆಂಬುದುಂ ಮಹಾಬಲಂ ತಮ್ಮಯ್ಯಂಗೆ ಮುನಿದು ॥ ೧೮೬

[ಮರುಳೀಮದವಣಿಗನನಾ
ದರಿಸದೆ ದೇಸಿಗನನಟ್ಟುವಂತಿರೆ ಮತ್ತೋ ।
ವರನಟ್ಟಿದಿವನ ಕಯ್ಯೊಳ್
ಚರುವಂ ಕೊಟ್ಟಟ್ಟೆ ಪೊಲ್ಲಗೆಯ್ದಂ ಮೂರ್ಖಂ ॥ ೧೮೭

ಎಂದು ತಮ್ಮಯ್ಯನ ಕಪಟವೃತ್ತಿಯನಱಿಯದೆ ಬಯ್ದು] ಮೈದುನನ ಕಯ್ಯ ಚರುವಂ ಕಳದುಕೊಂಡು ಧನಕೀರ್ತಿಯಂ ಮನೆಗೆ ಪೋಗೆಂದಟ್ಟಿ ನಾಗಾಲಯಕ್ಕೆ ಮಹಾಬಲನೊರ್ವನೆ ಬಂದು ಭಯಮಿಲ್ಲದೆ ಪುಗುವುದುಂ ॥ ೧೮೮

ಅವರಿವರೆಂದು ಭಾವಿಸದೆ ನೋಡದೆ ಭೋಂಕನೆ ಬಾಗಿಲಲ್ಲಿ ನಿಂ
ದವನನಮರ್ದೊತ್ತಿ ಸಾರ್ಚಿ ತಲೆಯಂ ಪಿಡಿದೊತ್ತಿ ಧರಿತ್ರಿಗಿಕ್ಕಿ ಮ
ತ್ತವಯವದಿಂ ಕಱುತ್ತಿಱಿದು ಕೊಂದು ಮಹಾಬಲನಂ ತಳಾಱನಂ
ತವಿತಥಮಪ್ಪ ಪನ್ನಗನಿವಾಸದಿನೋಡಿದನಂಜಿ ನಿರ್ದಯಂ ॥ ೧೮೯

ಅಂತು ಮಹಾಬಲಂ ಪರಲೋಕಪ್ರಾಪ್ತನಪ್ಪುದುಮತ್ತಲ್ ಧನಕೀರ್ತಿಯಂ ಶ್ರೀದತ್ತಸೆಟ್ಟಿ ಮನೆಯೊಳ್ ಕಂಡು ವಿಸ್ಮಯಂಬಟ್ಟು ಸಾರೆವಂದು ಚರುವನೇಗೆಯ್ದೆಯೆಂದು ಬೆಸಗೊಳ್ವುದುಂ ಧನಕೀರ್ತಿಯಿಂತೆಂದಂ ॥ ೧೯೦

ಎಮ್ಮ ಭಾವನುದಾರಗುಣಂ ನಾಗಾಲಯದಲ್ಲಿಗೆ ಭಕ್ತಿಯಿಂ
ನಿಮ್ಮ ಪೇೞ್ಕೆಯಿನುತ್ಸವದಿಂ ಪೋಪೆನ್ನನಿದೆಲ್ಲಿಗೆ ಪೋದಪೈ
ಕೆಮ್ಮನೆಂಬುದುಮಾಂ ಭಯದಿಂ ನೀಮೆಂದುದನೆಂದೊಡೆ ಕೋಪದಿಂ
ನಿಮ್ಮನೋವದೆ ಬಯ್ದು ಮಗುೞ್ಚೆನೆಂದು ಮಗುೞ್ಚೆ ನಿವೇದ್ಯಮಂ॥ ೧೯೧

[ಎನ್ನ ಕಯ್ಯ ಚರುವಂ ಕಳೆದುಕೊಂಡು ನಾಗಾಲಯಕ್ಕೆ ಪೋದನೆಂಬುದುಂ] [1] ಪಾಲ್ವಿಸಿಲೊಳ್ ಸಾಸವೆಯುಂ ಕುಡಿದರಂತೆ ಮಱುಗಿ ಸುಂಟಿತಿಂದ ಬಾಯೊಳ್ ಬಿಸಿನೀರಂ ಕುಡಿದರಂತೆ ಮಿಡುಮಿಡು ಮಿಡುಕಿ ನಾಗಭವನಕ್ಕೊರ್ವನೆ [ಪರಿತಂದು ಕಡಿಖಂಡಮಾಗೆ ಪೊಯ್ಸಿಕೊಂಡು ಸತ್ತಿರ್ದ ಮಗನ ಪೆಣನಂ ಕಂಡು ಮಹಾದುಃಖಿತನಾಗಿ ಮನೆಗೆವೆಂದು ನಗರಜನಕ್ಕಂ ಕಳ್ಳರೆನ್ನ ಮಗನಂ ಕೊಂದರೆಂದು ಕೃತಕದಿಂ ಸಾವಂ ಪ್ರಕಟಂಮಾಡಿ ಪೆಣನಂ ಮನೆಗೆ ತಂದು ಮಱುದಿವಸಂ ಸಂಸ್ಕರಿಸಿ ನೀರಿೞಿದು ಲೌಕಿಕಕ್ರಿಯೆಯೆಲ್ಲಮಂ ನೆಱೆಯೆ ತೀರ್ಚಿ ॥ ೧೯೨

ಮಗನಂ ನೆನೆನೆನೆದಿರುಳುಂ
ಪಗಲುಂ ಪಂಬಲಿಸಿ ಮಱುಗಿ ಕಳ್ಳನ ತಾಯುಂ ।
ತಗಣಿತದುಃಖದಿನೊಳಗೊಳ
ಗೊಗೆದ ಮಹಾಶೋಕದಹನದಿಂ ಬೇಯುತ್ತುಂ ॥ ೧೯೩

ಈತನಂ ಕೊಲಲೆಂದತಿಧೂರ್ತರ್ಗಗ್ಗದ ನಿಷ್ಠುರರಪ್ಪವ
ಗೋರ್ತು ಮಾಣದೆ ಮೂರ್ಖನೆನಾನಂದರ್ಥಮನಿತ್ತೊಡವೆಲ್ಲರುಂ
ಪ್ರೀತಿಯಿಂ ಕೊಲಲೊಲ್ಲದೆ ಪೋದರ್ ನಾನೆ ದರಿದ್ರನೆನಾದೆನು
ರ್ವೀತಳಸ್ತುತನಪ್ಪ ಮಗಂಗೆ ಕೇಡಿನಿತಾದುದು ಪಾಪದಿಂ ॥ ೧೯೪

ಪಣ್ಣಿಂಗಿಟ್ಟೊಡೆ ಕಾಯ್ ಬಿದಿರ್ದೆಂಬ ನಾಣ್ಣುಡಿನುಡಿವರ ಮಾತೆ ನಗಾದುದೆಂದು ಮೊಗಕ್ಕೆಯುಂಬುತ್ತು] [2] ಧನಕೀರ್ತಿಯುಮೇಲೆ ತೀವ್ರಮಪ್ಪ ಮುನಿಸಾಗಿ ॥ ೧೯೫

ಎನ್ನ ಕಂದನುದಾರಗುಣಂ ಮತ್ತೀತನ ಕಾರಣದಿಂದೆ ಸ
ತ್ತೆನ್ನನಾಱಡಿಗೊಂಡನಿದಂ ನಾಂ ಚಿಂತಿಸಿ ಸಾಯದೆ ಬುದ್ಧಿಯಿಂ
ದೆನ್ನ ವೈರಿಯನೀತನನಾನಿಂದಿಲ್ಲಿಯೆ ಮೆಲ್ಲನೆ ಕೊಂದು ಕೇ
ಳನ್ನ ಚಿತ್ತದೊಳಾದಱಲಂ ನೋವಂ ಚಲದಿಂದಮ ತೀರ್ಚುವೆಂ ॥ ೧೯೬

---

1 ತಾನೊಯ್ದನೆಂಬುದುಂ (ಗ)

2 ಪರಿದು ನೋಡಿ ಸತ್ತ ಮಗನಂ ಕಳ್ಳರ್ ಕೊಂದರೆಂದು ಸಂಸ್ಕಾರಿಸಿ (ಗ)

ಎಂದು ಮನದೊಳಾಲೋಚಿಸಿ ವಿಶಾಖೆಯುಂ ಕರೆದು ಏಕಾಂತದೊಳ್ ಧನಕೀರ್ತಿಯ ಪ್ರಪಂಚಮನೆಲ್ಲಮನಱಿಪಿ ನೀನೀತನಳಿಯನೆಂದು ಮೋಹಿಸದೆನಗೆ ಕೂರ್ಪೊಡೆನ್ನ ಮಾತನಂತಿಂತೆನ್ನದುದಾಸೀನಂಮಾಡದೆನ್ನ ಮನದಱಲುಂ ಮಹಾಬಲನ ಪಗೆಯುಂ ಪೋಪಂತು ವಿಷಪ್ರಯೋಗದಿಂದೊರ್ವರುಮಱಿಯದಂತಿಂದುನಾಳಿನೊಳಗೆ ತಡೆಯದೆ ಕೊಲಲ್ವೇಟ್ಕೆಂದು ಕಯ್ಯಂ ಮುಗಿದು ಪ್ರಾರ್ಥಿಸುವುದುಂ ॥ ೧೯೭

[ಸರಸಿಜಾಕ್ಷಿ ವಿಶಾಖೆ ಗಂಡನ ಮಾತನೇಳಿಸಲಾಗದೆಂ
ದುರಗರಾಜಸಮಾನಭೋಗಿಯುನಿಂದು ಮೋಣದೆ ಕೊಲ್ವೆನಂ
ದಿರದೆ ದೊಡ್ಡಿದುಮಪ್ಪ ಲಡ್ಡುಗೆಯಲ್ಲಿ ತೀವ್ರದ ನಂಜನೋ
ಸರಿಸದಿಕ್ಕಿ ಮಗಳ್ಗ ನಿನ್ನ ವರಂಗೆ ನೀನನುರಾಗದಿಂ ॥ ೧೯೮

ತಡೆಯದಿಕ್ಕುವುದೆಂದು ಪೇಳ್ದು ವಿಶಾಖೆ ನೆರೆಮನೆಗೆ ಪೋಗಿ .ದೂರ್ತಿಂದಱಿಯದವಳಂತಿರ್ಪುದುಂ ಶ್ರೀಮತಿ ಧನಕೀರ್ತಿಯ ಕಾಲಂ ಕರ್ಚಿ ವಿನಯದಿಂದೊಳಗಣ್ಗ ಕರೆದು ಪ್ರಿಯದಿಂದೇಱಲಿಕ್ಕಿ ತಳಿಗೆಯಲಿಕ್ಕುವುದುಂ] [1] ಆ ಪ್ರಸ್ತಾವದೊಳ್ ॥ ೧೯೯

ಹಿಂಸಾವಿರಹಿತನೈ ನೀ
ನಿಂ ಸಲೆ ಬಾಪ್ ಪಾಪಕರ್ಮನೆಂ ಪೆಱರಱಿವಂ ।
ಹಿಂಸೆಯನೆ ಬಯಸಿ ಮಱುಗುವ
ನಾಂ [2] ಸತ್ತಪೆನೆಂದು ಪೂಣ್ದು ಬರ್ಪನ ತೆಱದಿಂ ॥ ೨೦೦

ಶ್ರೀದತ್ತಸೆಟ್ಟಿಯುಂ ಪಸಿದು ಬರ್ಪುದುಂ ಇದಿರಾಗಿ ಪರಿತಂದಾ ಶ್ರೀಮತಿ ಕಾಲಂ ಕರ್ಚಿ ಬೇಗಮೊಳಗಣ್ಗೆ ಕರೆದು ವಿಸ್ತಾರಮಪ್ಪ ವಿಷ್ಟರಮನಿಕ್ಕಿ ಪಿರಿಯಡ್ಡಣಿಗೆಯುಮಂ ಪರಿಯಣಮುಮನಿಟ್ಟು ॥ ೨೦೧

---

1 ಲಡ್ಡುಗೆಯೊಳ್ ವಿಷವ ಸಿಕ್ಕಿ ನಿನ್ನ ಮದವನಿಗಗಿವನಿಕ್ಕೆಂದು ಶ್ರೀಮತಿಗೆ ಪೇಳ್ವುದುಂ (ಗ)   2 ಬಯಸಿ ಸಲೆ ಕುದಿದಾಂ (ಗ)

ದ್ದೊದುವಾಗಿ ನುಣ್ಪಿಸೆದು ಸರ್ಕರೆಯೊಳ್ ಸಮನಪ್ಪ ಪೆಂಪಿನಾ
ಲಡ್ಡುಗೆಯುಂ ಮನೋಮುದದಿನನ್ನವರಂಗಳಪಿಂನೆ ಮುನ್ನವಾರಿ
ಬಡ್ಡಿಸಿದಂದು ನೋಡ ಪದೆದೀಗಳ ಡೊಂಬಿತಿ ಜೋಡೆ ಸೋಲದಿಂ
ಬಡ್ಡಿಸಿದಪ್ಪಳೆಂದು ನೆಱೆ ದೂರುವರೆನ್ನನವಜ್ಞೆಯಿಂ ಪೆಱರ್ ॥ ೧೦೨

ಎಂದು ಕಿಱಿಯುವಪ್ಪ ಲಡ್ಡುಗೆಗಳಂ ಧನಕೀರ್ತಿಗಿಕ್ಕಿ ವಿಷದೊಳ್ ಪುದಿದಿರ್ದ ದೊಡ್ಡಿದುವಪ್ಪ ಲಡ್ಡುಗೆಗಳಂ ತಂದೆಗೆ ಬಡಿಸುವುದುಮಿರ್ವರುಂ ರುಚಿಕರಮಾದುದೆಂದು ಬಾಯ್ಸವಿಗೆ ಸೋಲ್ತು ಮೆಲ್ವುದುಂ ಶ್ರೀದತ್ತಂ ವಿಷಮಾವರಿಸಿ ನಿಲಲಾಱದೆ ಕಣ್ಗಿರಿದು ನೆಲಕ್ಕೆ ಬಿರ್ದು ನಿಶ್ಶಕ್ತನಾಗಿ ಮೆಯ್ಯಱಿಯದೆ ಬೆಸುತುಂ ॥ ೧೦೩

ಪೆಱರೞಿವಂ ಬಯಸುವರೀ
ತೆಱದಿಂ ಮತಿಗೆಟ್ಟು ಸಾವರೆಂದೆಲ್ಲರ್ಗಂ ।
ನೆಱೆ ಸಾಱಿ ತೋಱಿ ಬೀಗದಿ
ನೞಿಪುವವೊಲ್ ಯಮಪುರಕ್ಕೆ ಸಂಗ ಕುಟಿಲಂ ॥ ೧೦೪

ತಂದೆಯ ನೋವಂ ತೊಟ್ಟನೆ
ನಂದನೆ ಕಂಡಳ್ತು ಬೆರ್ಚಿ ಬಾಯ್ವಿಟ್ಟು ಮನಂ ।
ಗುಂದಿ ಪಿರಿದಪ್ಪ ತಲ್ಲಣ
ದಿಂದಂ ಮೆಯ್ಯಱಿಯದಯ್ಯನಂ ನೋಡುತ್ತುಂ ॥ ೧೦೫

ಇರೆ ಮದವಣಿಗಂ ಮಾವನ
ಮರಣಕ್ಕತಿದುಃಖಮಾಗೆ ಮನದೊಳ್ ಮಱುಗು ।
ತ್ತಿರೆ ಮನೆಯವರೆಲ್ಲಂ ಭೋ
ರ್ಗರೆದೞುತುಂ ನೊಂದು ಬೆಂದು ಪಱಿವಿಸುತಿರ್ದರ್ ॥ ೧೦೬

ಅಂತವರ ಹಾಹಾಕ್ರಂದನಮಂ ನೆರೆಮನೆಯೊಳಿರ್ದ ವಿಶಾಖೆ ಕೇಳ್ದು ಧನಕೀರ್ತಿ ಸತ್ತನೆಂದು ಗಂಡನ ಸಾವನಱಿಯದೆ ರಾಗಿಸಿ ಶ್ರೀದತ್ತಸೆಟ್ಟಿಬೇಳಾಗಿತನ್ನರ್ಥಮಂ ಪಲವುಸೂಳ್ ಕ್ರೂರರಪ್ಪವರ್ಗೆ ಕೊಟ್ಟು

ಕೊಲಲಾಱನಂತಪ್ಪ ಧನಕೀರ್ತಿಯುಂ ಕಿವಿಗೇಳದಂತಱಿಯದಂತಪಯ ವದಿಂದೊರ್ಮೆಯೆ ಘಮ್ಮನೆ ಕೊಂದೆವೆಂದು ಪೆಟ್ಟುವೆರ್ಚೆ ಪೆಱರಂ ನಂಬಿ ಸಲ್ವೇಡಿ ಹಾಹಾಶೋಕಮುಂ ಪಣ್ಣೆ ಕೇಳ್ದು ಕೆಟ್ಟೆನಱದೆನೆಂದು ಪುಯ್ಯಲಿ ಟ್ಟೞುತ್ತುಮಱಿಯದಂತೆ ಬಂದೊಳಗೆ ಪೊಕ್ಕು ಸತ್ತಿರ್ದ ಗಂಡನುಮಂ ಕೆಲದೊಳ್ ಕುಳ್ಳಿರ್ದಳಿಯನುಮಂ ಕಂಡು ॥ ೧೦೩

ಬೇಱಾಗಿ ತಳೋದರಿ ಮೆ
ಯ್ಯಱಿಯದೆ ನಿಲಲಾಱದೆೞ್ದು ಗೋಳಿಟ್ಟೞುತುಂ ।
ಮಱುಕದಿನಾಣ್ಮನ ಪೆಣನಂ
ಪೆಱೆಮುಖಿ ತಕ್ಕೈಸಿಕೊಂಡು ಕೆಟ್ಟೆನೆನುತ್ತುಂ] [1] ॥ ೧೦೪

ಆನೊಂದಂ ಬಗೆಯಲ್ ಬಿದಿ
ತಾನೊಂದಂ ಬಗೆದು ವಾರ್ಧಿಗರ್ದಿದುದೆನ್ನಂ ।
ನೀನಱಿವೆಯೆಂದು ಮಾಡಿದೊ
ಡಾನೞಿದೆಂ ಮಗಳ್ ನಿನ್ನ ಪುಣ್ಯಂ ಕಿಱಿದೇಂ ॥ ೧೦೫

[ಕುಂದದೆ ಕಿಱಿಯಂದಿಂತೊ
ಟ್ಟಂದುವರಂ ನಿನ್ನನಱಿಪುಪಾಯಮನದಱಿಂ ।
ಸಂದಿಸಿ ಮಾಡಿದ ಫಲಮಂ
ಸಂದೆಯಮಿಲ್ಲಣ್ಣ ತಾನೆ ಕಂಡಂ ತುದಿಯೊಳ್] ॥ ೧೦೬

ಕೊಲೆಯಿಲ್ಲದ ಜಿನಧರ್ಮದ
ಫಲದಿಂ ನೀನುಗ್ರಮಪ್ಪ ಕಂಟಕಮಂ ಮುಂ ।
ಪಲವಂ ನೀಗಿದೆ ಹಿಂಸೆಯ
ಫಲದಿಂದೆನ್ನಾಣ್ಮನೆಯ್ದಿದಂ ಯಮಪುರಮಂ ॥ ೧೦೭

ಮುನಿವರರೆಂವ ದಿವ್ಯವಚನಂ ಪುಸಿಯಪ್ಪುದೆ ಕಂದ ಮಾಳವಾ ವನಿಪತಿಯಾಗಿ ಜೈನಸಮಯಾಂಬುಧಿಗಗ್ಗದ ಚಂದ್ರನಾಗಿ ಮೋ

1 ಅಂತು ಸಾವುದುಂ ವಿಶಾಖೆ ಕಂಡು (ಗ)

ದಿನಿಪತಿವಂದ್ಯನಾಗಿ ಪರಮಾಂಡಳಿಕರ್ ಬೆಸಕೆಯ್ಯೆ ರಾಜ್ಯಗೋ
ಮಿನಿಧರನಪ್ಪ ನಿನ್ನನಘವಿಂಶ್ರಿತರಿನ್ನುಱುಮಲ್ಕೆ ಬಕರ್ುವೋ ॥ —೧೧೨

ಎಂದಳಿಯನ ಮೊಗಮಂ ನೋಡಿ ಬಸಿಱಂ ಬಡಿದುಕೊಂಡಟ್ಟು ॥ —೧೧೩

ನರಪತಿಪೂಜ್ಯನಪ್ಪ ಧನಕೀರ್ತಿಗೆ ಪೆಂಡತಿಯಾಗಿ ಪುಣ್ಯದಿಂ
ಧರಣಿಯನಾಳ್ದು ಬೆರ್ಚೆ ಬೆಸಕೆಯ್ಯೆ ವಿಳಾಸಿನಿಯರ್ ವಿಳಾಸದಿಂ
ಪರಮವಿಭೂತಿಯಂ ಪಡೆಯಲಿರ್ದವಳಂ ಮುನಿದಕ್ಕ ನಿನ್ನನ
ಚ್ಚರಿಯೆನೆ ರಂಡೆಮಾಡುವಳಪಂ ಬಗೆವರ್ಗಱವಾಗದಿರ್ಕುಮೋ ॥ —೧೧೪

ಎಂದು ಮಗಳ ಮೊಗಮಂ ನೋಡಿ ಪಳಯಿಸಿ ತಲೆಯಂ ಪೊಯ್ದು ಕೊಂಡಟ್ಟು ನೆರೆದ ನಂಟರ ಬಳಸಿರ್ದ ಪೌರರ ಮೊಗಮಂ ನೋಡಿ ॥ —೧೧೫

ಇರುಳೊಳ್ ಚಂದ್ರನ ರಶ್ಮಿಯಂ ಕಿಡಿಸಲೆಂದಿರ್ಪಾತನಂ ಕೋಪದು
ಬ್ಬರದಿಂದಂ ಪಗಲೊಳ್ [1] ದಿವಾಕರನ ತೀವ್ರೋಷ್ಣಾಂಶುವಂ ಮಾಣಿಪೆಂ
ಭರದಿಂದೆಂಬನುಮುರ್ವಿಯೊಳ್ ನಿಖಿಲಪುಣ್ಯಾಂಭೋಧಿಯಪ್ಪಾತನಂ
ಪುರುಡಿಂದಂ ಕೊಲಲೆಂದು ಕಾಯ್ವ ನರನುಂ ಗಾಂಪಂ ಪೆಱರ್ ಗಾಂಪರೇ ॥

ಮರುಳಾಗಿ ಕೆಮ್ಮನೀತನ
ನುರಿಯಂ ಕಾಣ್ಬಂತೆ ಕಂಡು ಱಿಕ್ಕಟಮುನಿಸಿಂ ।
ಹರಿಯಿಸುವೆನೆಂದು ಪಾಪದ
ಭರದಿಂ ನರಕಕ್ಕೆ ಜಗುಳ್ದನೆನ್ನಾತ್ಮೇಶಂ ॥ —೧೧೬

[ಪೆಱಂ ನಂಬದೆ ನಂಬಿ ತನ್ನ ಸತಿಯಂ ಪೋಗುತ್ತುಮಿರ್ದೊಯ್ಯನ
ಟ್ಟಿಱಿನೆನ್ನಾಣ್ಮನನಾಪ್ತನೆಂದು ಗುಣಪಾಲಂ ಗುಪ್ತದಿಂ ಬುದ್ಧಿವೇ
ಳ್ದುಱೆ ತಾಂ ಕೈಯೆಡೆಯೆಂದು ಪೇಱರಿಸಿ ಪೋದಂತಪ್ಪುದಂ ಗಾವಿಲಂ
ಮಱೆದಂತಾತನ ಪುತ್ರನಂ ಕಿಡಿಪೆನೆಂಬಾತಂಗಿದೇಂ ಚೋದ್ಯಮೋ] ॥ —೧೧೭

---

[1] ಭರದಿಂ ಪೂರ್ಣಿಮೆಯೊಳ್ ಶಶಾಂಕನೊದವಂ ಮಾಣ್ಪೆರ್ನೆಂಬಾತನುಂ ಕರಮುಕ್ಕಿಂ ಪಗಲೊಳ್ (ಗ)

ಎಂದು ಕಪಟಮಿಲ್ಲದೆ ಮಾಯೆಯುಂ ಬಿಟ್ಟು ಶ್ರೀದತ್ತಂ ಮಾಡಿದ ಪೊಲ್ಲಮೆಯೆಲ್ಲಮನೊಂದುಗುಂದದೆಲ್ಲಮನೆಲ್ಲರ್ಗಮಱಿಪಿ [ಗುಣಪಾಲ ಸೆಟ್ಟಿಯ ಮಗನೆಂದಱಿಯೆ ಪೇೞ್ದು ಧನಕೀರ್ತಿಕುಮಾರನಂ ಮಾಳವಾಧೀಶ್ವರನಾಗಿ ಜಿನಧರ್ಮದೋಜೆಯಿಂ ನಡೆದು ಪ್ರಾಣಿಗಳನೋವಿ ವಾತ್ಸಲ್ಯರತ್ನಾಕರನೆನಿಸಿ ಸುಖದಿಂ ರಾಜ್ಯಂಗೆಯ್ಯೆಂದು ಪರಸಿ ಮಗಳುಮಂ ದರ್ಶನಶುದ್ಧಿಯೊಳ್ ಶಚೀಮಹಾದೇವಿಯುಮಂ ಪತಿವ್ರತಾಗುಣದೊಳ್ ಪ್ರಭಾವತಿಯುಮಂ ಸೀತೆಯುಮಂ ದೃಢವ್ರತದೊಳ್ ಚೇಳಿನಿಯುಮಂ ಸದ್ದರ್ಶನಗುರುಭಕ್ತಿಗಳೊಳ್ ರುಕ್ಮಿಣೀಮಹಾದೇವಿಯುಮಂ ಸುಲೋಚನೆಯುಮಂ ಪೋಲ್ತು ಪಟ್ಟನರಸಿಯಾಗೆಂದು ಪರಸಿ] ಪಲರುಂ ಬೇಡ ವೇಡೆನೆ ಮನದಱಲಿಂದಿರಲಾಱದೆ ವಿಷಪೂರಿತಮಪ್ಪ ಲಡ್ಡುಗೆಗಳಂ ತಿಂದು ವಿಶಾಖೆಯುಂ ಸಾವುದುಂ ॥ ೨೧೯

ಪುರಜನಮುಂ ಬಾಂಧವರುಂ
ತರಳಾಕ್ಷಿಯ ವಚನದಿಂದಮಱಿದಾತನ ಸಿ ।
ಷ್ಕರುಣತೆಗೆ ನಾಡೆಯುಂ ಕೊ
ಕ್ಕರಿಸಿ ಮನಂನೊಂದು ಮಱುಗಿ ಚೋದ್ಯಂಬಟ್ಟರ್ ॥ ೨೨೦

ಜಿನಸಮಯದಾಗಮಂಗಳ
ನನುನಯದಿಂ ಕೇಳದೋದದಾನೊಳ್ಳಿದನೆಂ ।
ದನವರತಂ ಪೊಂಗಿರ್ಪಾ
ತನ ಮಾಡುವ ಧರ್ಮದಲ್ಲಿ ಪುರುಳಱಸುವುದೇ ॥ ೨೨೧

ಚರಿತಪುರಾಣಮಂ ಸಮಯದುನ್ನತಿಯುಂ ಭುವನತ್ರಯಂಗಳೊಂ
ದಿರವನಪೂರ್ವಮಪ್ಪ ಜಿನಧರ್ಮದ ಪೆಂಪಿನಗುರ್ವುವೆತ್ತ ದು
ರ್ಧರತಪಮಂ [1] ಚತುಸ್ಸಮಯದೋಜೆಯನೊಳ್ಳಿದನಾಗಿ ನಿಚ್ಚಲುಂ
ವರಮುನಿನಾಥರೊಳ್ ನೆಱೆ ವಿಚಾರಿಸಲೊಲ್ಲದನುಂ ಮನುಷ್ಯನೇ॥ ೨೨೨

---

1 ಅಗುರ್ವುವೆತ್ತ ಲೋಗರ ಮತಮಂ (ಗ)

ಎಂದು ತಮ್ಮೊಳ್ ನುಡಿದು ಶ್ರೀದತ್ತಸೆಟ್ಟಿಯು ಮಾಡಿದ ಕಷ್ಟತೆಗೆ ಬೈದು ಜೈನಧರ್ಮಮನಱಿಯದ ಜಡಂ ಮಾಡದ ಪಾಪಮಿಲ್ಲೆಂದು ಪೇಸಿ ಶ್ರೀದತ್ತನ ವಿಶಾಖೆಯ ಪೆಣಂಗಳ್ಗಂ ದಹನಕ್ರಿಯೆಗಳಂ ಮಾಡಿ ಲೌಕಿಕಕ್ರಿಯೆಯೆಲ್ಲಮಂ ನೆಱಪುವುದುಂ ॥ ೧೨೩

[ಪಿರಿದಪ್ಪಾಪತ್ತಂ ಪರಿ
ಹರಿಸಿ ಮಹಾಪುಣ್ಯಮೂರ್ತಿ ಕೀರ್ತಿಸಿಧಾನಂ ।
ಪರಮಾರ್ಥಂ ಬದುಕಿದನು
ರ್ವರೆಯೊಳಿದಾಶ್ಚರ್ಯಮೆಂದು ಕೈಮುಗಿದು ಜನಂ ॥ ೧೨೪

ಬಂದೆಕೊರಲೊಳ್ ಪೊಗೞುತ್ತುಮಿರೆ ॥ ೧೨೫

ನಿನ್ನಂತು ನೋಂತರಾರ್ ಧೈ
ರ್ಯೋನ್ನತ ನಿನ್ನಂತು ಪುಣ್ಯಮೂರ್ತಿಗಳಾರ್ ನಿ ।
ನ್ನನ್ನರ್ ಗುಣವಂತರದಾರ್
ನಿನ್ನಂತಾರ್ ಧರೆಗೆ ಕೀರ್ತಿಭಾಜನರಾದರ್ ॥ ೧೨೬

ನೀನುಂ ನಿಮ್ಮಯ್ಯನಂತೆ ವೈಶ್ಯಾಗ್ರಗಣ್ಯನುಂ ವಿಶೇಷಪುಣ್ಯನುಂ ಜಿನಸಮಯವಾರ್ಧಿವರ್ಧನನುಮಾಗಿ ಬಾೞೆಂದು ಪುರಜನಮುಂ ಬಂಧುವರ್ಗಮುಂ ನೆರೆದು ಪರಮಾಶೀರ್ವಚನಶತಸಹಸ್ರಂಗಳಿಂ ಪರಸಿ ನಾನಾಪ್ರಕಾರದಿಂ ಪೊಗೞ್ದು] ಶ್ರೀದತ್ತಸೆಟ್ಟಿಯು ಮನೆಗಮರ್ಥಕ್ಕಮೊಡೆಯನಾಗೆಂದಿರಿಸಿ ಪೋದರದಂ ವಿಶ್ವಂಧರಮಹಾರಾಜಂ ಕೇಳ್ದು ॥ ೧೨೭

[ಮಾಳವಪತಿಯಪ್ಪಂ ಗಡ
ಪಾಲಿಸುವಂ ಗಡ ಸಮಸ್ತಭೂಪಾಲಕರಂ ।
ಲೀಲೆಯೊಳ್ ವೀರದೊಳ್ ಬಾ
ಯ್ಕೇಳಿಸುವಂ ಗಡ ಸಮಸ್ತವಸುಧಾತಳಮಂ ॥ ೧೨೮

ಜಿನಸಮಯವರ್ಧನಂ ಗಡ
ಮನವರತಂ ಭವ್ಯಜನವಿನೋದಂ ಗಡ ಮಾ ।

ತನನಿಂದು ನೋಪ್ಪೆಮೆಂದಿಂ
ತನುಪಮಗುಣನಿಳಯನಚ್ಚಱಿಂ ನಲಿಯುತ್ತುಂ ॥ ೨೯

ಧನಕೀರ್ತಿಕುಮಾರನರಮನೆಗೆ ಮಹಾವಿಭೂತಿಯಿಂ ರಾಜಕುಮಾರಪರಿವೃತನಾಗಿ ಮಾಳವಾಧೀಶಂ ಬಂದು ವಾತ್ಸಲ್ಯರತ್ನಾಕರನಂ ನೋಡಿ ಮೆಚ್ಚಿ ॥ ೩೦

ಈತೇಜಮುಮೀರೂಪುಂ
ಮಾತೇನಿಂತಪ್ಪ ವಿನಯಮುಂ ಗುಣಮುಂ ವಿ ।
ಖ್ಯಾತಿಯುಮೀತನನಿನಿತುಂ
ಭೂತಳಪತಿಮಾೞ್ಪುದೆಂಬುದೊಂದಚ್ಚರಿಯೋ ॥ ೩೧

ಎಂದು ತನ್ನೊಳ್ ನುಡಿದು ಬೞಿಕ್ಕಮಾತನ ವೃತ್ತಾಂತಮೆಲ್ಲಮಂ ಕೇಳ್ದು ತಲೆಯಂ ತೂಗಿ ಗುಣಪಾಲಸೆಟ್ಟಿಯಪ್ಪೊಡೆ ಪುಣ್ಯಮೂರ್ತಿಯುಂ ದೃಢವ್ರತನುಮಪ್ಪನಂತಪ್ಪ ಮಹಾಪುರುಷಂಗೆ ಪುಟ್ಟಿದನೆಂದೊಡೀತನುಂ ಕೇವಳನಲ್ಲನಾದೇಶಪುರುಷನಪ್ಪನೆಂದು ಧನಕೀರ್ತಿಯನರಮನೆಗೊಡಗೊಂಡು ಪೋಗಿ ವಿಶ್ವಾವತಿಕನ್ನೆಯುಮನರ್ಧರಾಜ್ಯಮುಮಂ ಕುಡಲೆಂದಿರ್ಪುದುಂ ॥ ೩೨

ಗುಣಪಾಲಸೆಟ್ಟಿ ವೈಶ್ಯಾ
ಗ್ರಣಿ ದೇವಮುನೀನುರಾಗದಿಂದಿರ್ದಂ ಧಾ ।
ರಿಣಿಪೂಜ್ಯನಪ್ಪ ನರರ
ಗ್ರಣಿ ಕೌಶಾಂಬಿಪುರಿಯೊಳ್ ಮಹೋನ್ನತಿಯಿಂದಂ ॥ ೩೩

ಎಂದೋರ್ವಂ ಬಿನ್ನವಿಪುದು
ಮಂದಾಗಳ್ ಕೇಳ್ದು ಭೂಭುಜಂ ಮೆಚ್ಚಿ ಸದಾ ।
ನಂದಂ ಮೆಯ್ಯಱಿಯದೆ ಮುದ
ದಿಂದಂ ಮೆಯ್ವೆರ್ಚೆ ನಲಿದು ರಾಗಿಸಿ ನಯದಿಂ ॥ ೩೪

ಬಂದ ದೂತಂಗಂಗಚಿತ್ತಮಂ ಕೊಟ್ಟು ಮಱುದಿವಸಂ ಕೌಶಾಂಬಿಗೆ ಪೆರ್ಗಡೆಗಳನಟ್ಟಿ ಗುಣಪಾಲಸೆಟ್ಟಿಯುಂ ಬರಿಸಿ ಪುರದೊಳಷ್ಟಶೋಭೆಯುಂ ಮಾಡಿಸಿ ಸಕಳಸಾಮಂತಪರಿಸ್ಕೃತನಾಗಿ ಧನಕೀರ್ತಿಯುಮಂ ತಾನುಂ] [1] ಮಹಾವಿಭೂತಿಯಿಂದಿದಿರ್ಗೊಂಡು ಮನೆಯುಂ ಪುಗಿಸಿ ಮುನ್ನಿನ ಪದವಿಯುಂ ಕೊಟ್ಟು ‖ ೨೩೬

ನಿನ್ನರ್ಥಮುಮಂ ಮನೆಯುಮ
ನಿನ್ನೆವರಂ ಕಾದು ಮೋಹದಿಂ ರಕ್ಷಿಸಿದೆಂ ।
ನಿನ್ನರ್ಥಮುಮಂ ಮನೆಯುಮ
ನುನ್ನತ ಕೈಕೊಂಡು ಸುಖದೊಳಿರ್ ಸಂತಸದಿಂ ‖ ೨೩೭

[ನಿನ್ನಭಿಮಾನಮುಮಂ ವ್ರತ
ದುನ್ನತಿಯುಮನಱಿದು ಬಳಿಕೆ ಚೋದ್ಯಂಬಟ್ಟೆಂ ।
ನಿನ್ನಂ ತಳ್ವಿಲ್ಲದೆ ಕಾ
ಣ್ಬನ್ನೆವರಂ ದಿವ್ಯಭೋಗಮಂ ತೊಱೆದಿರ್ದೆಂ] ‖ ೨೩೮

ಎನಗೆ ಸಖನಾಗಿಯುಂ ನಂ
ಟನಾಗಿಯುಂ ನೀನೆ ನಿನ್ನ ನಂಬಿರ್ದ ಜಿನೇ ।
ಶನ ಧರ್ಮದಂದಮಂ ಪೇ
ಳ್ದನುಪಮಜಿನಪಾದಸೇವೆಯುಂ ಮಾಡೆನಗಂ ‖ ೨೩೯

ಎಂದು ತನ್ನ ಕಾರ್ಮಯಂ ಸಭೆಗೆಲ್ಲಂ ತೋಱುವಂತೆ ನುಡಿದು ‖

ನಿನ್ನ ತನೂಭವಂಗೆ ಧನಕೀರ್ತಿಗೆ ಮಾಳವದೇಶದರ್ಥಮಂ
ಭಿನ್ನಸರೋಜವಕ್ತ್ರೆ ವೆರಸಿತ್ತಪೆನರ್ತಿಯೊಳಂತಿದಕ್ಕೆ ಮ
ತ್ತೆನ್ನದೆ ಸತ್ಯಶೌಚನಿಧಿ ಮಾನವವಂದಿತ ಮರ್ತ್ಯರತ್ನ ವೈ
ಶ್ಯೋನ್ನತ ನೀನೊಡಂಬಡುವುದೆಂದು ಮಹೀಶ್ವರವಂದಿತಕ್ರಮಂ ‖ ೨೪೦

---

1 ಧನಕೀರ್ತಿಯುಂ ಬರಸಿ ವಿಶ್ವಾವತಿಯುಂಬ ತನ್ನ ಮಗಳುಮನರ್ಧರಾಜ್ಯಮಂ ಕುಡಲೆಂದಿರ್ದನನ್ನೆಗಂ, ಚಾರರ್ವಂದು ಗುಣಪಾಲನಿರ್ದೆಡೆಯುನಱಿಪುವುದುಂ ಪೆರ್ಗಡೆಗಳನಟ್ಟಿಯುಂ ಬರಿಸಿ (ಗ)

ಕೈಮುಗಿದು ಬೇಡಿಕೊಂಡು ಮತ್ತಮಿಂತೆಂದಂ ॥ ೨೪೧

ಜಿನಪಾದಭಕ್ತನಲ್ಲಂ
ಜನೇಶನಂದೆನ್ನದೆಸೆಗೆ ಬೆಚ್ಚದೆ ಮುನ್ನಂ ।
ವಿನುತವ್ರತಮಂ ಕೊಟ್ಟೊ
ಯ್ಯನೆ ನಂಬಿ ಬಱಕ್ಕೆ ವೈಶ್ಯವಂಶಲಲಾಮಾ ॥ ೨೪೨

[ಧನಕೀರ್ತಿಗೆನ್ನ ಮಗಳಂ ಪ್ರಾಣವಲ್ಲಭೆಮಾಡೆಂದು ಮುನ್ನಾತನ ಮನವನಱಿವನಪ್ಪುದಱಿಂ ಗುಣಪಾಲಸೆಟ್ಟಿಯು ಮನದ ಸಂಶಯಮಂ ಪಿಂಗೆ ನುಡಿದೊಡಂಬಡಿಸಿ ರಾಜಭವನಕ್ಕೆ ಪೋಗಿ ಗುಣಪಾಲಸೆಟ್ಟಿಯು ದರ್ಶನಶುದ್ಧಿಯೊಳಾದ ದೃಢತೆಯನಂದಿನ ದಿವಸಮೆಲ್ಲಂ ಪೊಗೞ್ದು ಮಱುದಿವಸಂ ನೈಮಿತ್ತಿಕರಂ ಕರೆದು ಶುಭದಿನಮಂ ಬೆಸಗೊಂಡು] [1] ॥ ೨೪೩

ಪಸೆ ಪಸುರ್ವಂದರೊಪ್ಪೆ ಗಣಿಕಾನಿಕರಂ ಮನಮೊಲ್ದು ಪಾಡೆ ಸಂ
ತಸದಿನಮರ್ಕೆವೆತ್ತಿರೆ ವಿವಾಹಗೃಹಂ ವರರತ್ನದಿಂ ವಿರಾ
ಜಿಸೆ ಪಱೆಗಳ್ಪಯೋಧಿ ಮೊಱೆವಂತಿರೆ ತಮ್ಮೊಳಗುರ್ವುವೆತ್ತು ಘೂ
ರ್ಣಿಸೆ ಜಿನಪೂಜೆಯೊಪ್ಪೆ ಪೊಗೞುತ್ತಿರೆ ಸುತ್ತಲುಮಿರ್ದ ಬರ್ಪವರ್ ॥

ಧನಕೀರ್ತಿಕುಮಾರಂಗಂ
ತನೂಜೆಗಂ ಮನದೊಳೊಸೆದು ಪರಮೋತ್ಸವದಿಂ ।
ಜಿನಗಂಧೋದಕದಿಂದಂ
ಜನಾಧಿಪಂ ತಾನೆ ಬಂದು ಕೈನೀರೆಱೆದಂ ॥ ೨೪೪

[ಅಂತು ಕೈನೀರೆಱೆದು ವಿವಾಹಮಂ ಮಾಡಿ ಗುಣಪಾಲಸೆಟ್ಟಿ ಮೊದಲಾದ ಬಂಧುಸಮೂಹಕ್ಕಂ ರಾಜನಿಕುರಂಬಕ್ಕಮುಡಲುಂ ತುಡಲುಂ ಕೊಟ್ಟು ತದನಂತರಂ ಹಯವಾರಣಭಂಡಾರಗಳೊಳರ್ಧಮನಳಿಯಂಗೆ ಕೊಟ್ಟು ಕ್ಷೀರೋದಕನ್ಯಾಯದಿಂದೊಡಗೂಡಿ ರಾಜ್ಯಶ್ರೀಯನನುಭವಿಸುತ್ತುಂ ಪತ್ತೆಂಟುದಿವಸಮನುಭವಿಸುತ್ತಿರ್ಪನ್ನೆಗಂ] [2] ॥ ೨೪೫

---

1 ಎಂದೊಡಂಬಡಿಸಿ (ಗ)

2 ಅಂತು ಮದುವೆಯುಂ ಮಾಡಿ ತನ್ನರ್ಧರಾಜ್ಯಮುಂ ಕೊಟ್ಟು ಮಹಾಮಹಿಮೆಯಿಂದಿರ್ಪುದುಂ (ಗ)

ನಿಮಗೆ ಸಮಾನಮಿಲ್ಲ ಧರಣೀತಳದೊಳ್ ತಡವೇಕೆ ಬೇಗಮೊ
ಪ್ಪುವ ಜಿನಮಾರ್ಗಮಂ ದುರಿತಹಾರಿಯನಕ್ಷಯಸೌಖ್ಯದಾಯಿಯಂ
ಪ್ರವರಗುಣಾಬ್ಧಿಯಂ ನೆಱೆ ವಿಚಾರಿಸಿ ಪೊರ್ದುವುದೆಂದು ಪೇೞಲೆಂ
ದವಿತತಮೋಕ್ಷಲಕ್ಷ್ಮಿ ಪದೆದಟ್ಟಿದ ದೂತನೆ ಬರ್ಪ ಮಾರ್ಗದಿಂ ॥ ೨೪೩

ಯಶೋಧರರೆಂಬರೊರ್ವರೇಕವಿಹಾರಿಗಳ್ ವಿಹಾರಿಸುತ್ತುಮುಜ್ಜ
ಯಿನಿಗೆ [ವಂದು ಪೊಱವೊೞಲೊಳಿರ್ಪುದುಂ ಋಷಿನಿವೇದಕಂ ಕಂಡು
ಬಂದು ವಿಶ್ವಂಧರಮಹಾರಾಜಂಗೆ ಬಿನ್ನಪಂಗೆಯ್ವುದುಂ ಋಷಿನಿವೇದಕಂ
ಗಂಗಚಿತ್ತಮಂ ಕೊಟ್ಟಾನಂದಭೇರಿಯಂ ಪೊಯ್ಸಿ ಗುಣಪಾಲಸೆಟ್ಟಿ ಮೊದ
ಲಾದ ಶ್ರಾವಕರುಂ ಧನಕೀರ್ತಿಮೊದಲಾದ ಕುಮಾರಕರುಂ ವಿಶ್ವಾವತಿ
ಮೊದಲಾದ ನಂದನೆಯರುಂ ಧನಶ್ರೀಯುಂ ಶ್ರೀಮತಿಯುಂಮೊದಲಾದ
ಶ್ರಾವಕಿತಿಯರುಂ ಲಕ್ಷ್ಮೀಮತಿಮೊದಲಾದರಸಿಯರುಂ ಬೆರಸು ಅರ
ಸುವ ಬಳ್ಳಿ ಕಾಲೊಳ್ ತೊಡರ್ದುದೆಂಬಂತೆ ಸುವ್ರತಾರೂಢರಾಗಲೆಂ
ದಿರ್ದೆಮಗೆ ಮಹಾಪುರುಷರ್ ಭಾಗ್ಯದಿಂದಿದಿರ್ವಂದವರೆಂದು ವಿಶ್ವಂಧರ
ಮಹಾರಾಜಂ ॥ ೨೪೪

ರಾಗದಿನತಿಶಯದಿಂ ತಳು
ವಾಗದೆ ಪೊಱಮಟ್ಟು ಬಂದು ಪಿರಿದುತ್ಸವದಿಂ ।
ಯೋಗೀಂದ್ರವಂದ್ಯಪಾದನ
ನಾಗಳ್ ಬಲವಂದು ಮೂಱುಸೂೞುವನೀಶಂ ॥ ೨೪೫

ಪಲವರ್ಚನೆಯಿಂದರ್ಚಿಸಿ ತ್ರಿಕರಣಶುದ್ಧಿಯಿಂ ಬಂದಿಸಿ ಪೊಡೆ
ಮಟ್ಟು ಕುಳ್ಳಿರೆ ಗುಣಪಾಲಸೆಟ್ಟಿ ಸುಕವಿನಿಕರಪಿಕಮಾಕಂದಂಗಭಿ
ಮುಖನಾಗಿ ಕರಕಮಲಂಗಳಂ ಮುಗಿದು ವಿನಯದಿಂದಾಪ್ತಾಗಮಪದಾ
ರ್ಥಂಗಳಂ ಚಿತ್ತದ ಶಂಕೆ ಪೋಪಿನಂ ಕೇಳ್ದು, ಅರಸನುಂ ಧನಕೀರ್ತಿ
ಯುಂ ಮೊದಲಾದನೇಕರುಂ ಕೇಳ್ದು ನಂಬಿ ಪಂಚಾಣುವ್ರತಮಹಾವ್ರತ
ರತ್ನಂಗಳಂ ಧರಿಯಿಸಲೆಂದಿರ್ಪುದುಂ, ಗುಣಪಾಲಸೆಟ್ಟಿ ಧರ್ಮಶ್ರವಣಾ

ನಂತರಂ ಪರಮಾವಧಿಲೋಚನರಪ್ಪ ತಪೋನಿಧಿಗಳಂ] [1] ಧನಕೀರ್ತಿಗೆ ಶ್ರೀದತ್ತಸೆಟ್ಟಿ ಮಾಡಿದ್ದೈದುಂ ಕಂಟಕಂಗಳುಂ ತಪ್ಪಿ ರಾಜ್ಯಮಾದುದಾವ ಭವದ ಪುಣ್ಯದ ಫಲಮೆಂದು ಬೆಸಗೊಳ್ವುದುಂ ॥ —೨೪೦

ಪರಮಾವಧಿಲೋಚನದಿಂ
ದುರಿತೇಂಧನದಹನನಱಿದು ಪೇೞ್ದಂ ಸಖೆ ಝೋಂ |
ಕರಿಸಿ [2] ಧನಕೀರ್ತಿಧರಣೀ
ಶ್ವರವಂದಿತಪಾದಯುಗನ ಮುನ್ನಿನ ಭವಮಂ ॥ —೨೪೧

[ಸುರರಾಜನ ಪುರವರದೊಳ್
ದೊರೆಯೆನಿಸಿ ನೆಗೞ್ತೆವೆತ್ತ ಪುರಮುಜ್ಜಯಿನೀ |
ಪುರಮದರ ಕೆಲದೊಳಿರ್ಪುದು
ಸಿರಿಸ್ಟಮೆಂಬೂರ್ ಧರಿತ್ರಿಯೊಳ್ ಕಡುರಮ್ಯಂ] ॥ —೨೪೨

ಆ [ಶಿರಿಷ್ಟ] ಗ್ರಾಮದೊಳ್ ಮೃಗಸೇನನೆಂಬ ಮೀಂಬುಲಿಗನಿರ್ಪನಾತನ ಪೆಂಡತಿ ಘಂಟೆಯೆಂಬಳಾ [ಯಿರ್ವರುಂ ಪಲಕಾಲಂ ಪಲಪಾನುರಾಗದಿಂದಿರ್ದೊಂದು] [4] ದಿವಸಂ ಬಲೆಯಂ ಕೊಂಡು ಸಿಂಪಾನದಿಗೆ ಪೋಗುತ್ತುಮೆಡೆಯೊಳ್ ಯಶೋಧರರೆಂಬ ಋಷಿಯರ ಕೆಲದೊಳ್ ಧರ್ಮಮಂ ಕೇಳ್ವ ನೆರಪಿಯುಂ ಕಂಡು [ಪಾಪದುಪಶಮದಿಂದೇನಾನುಮೊಂದು ಚೋದ್ಯಮಾಗಲೆವೇೞ್ಕುಮೆಂದು ನೋಡಲರ್ತಿವೆರಸು ಶಾಂತರೂಪದಿಂದೆಯ್ದೆವಂದು ಬಲೆಯನಿೞಿಪಿ ದೂರದೊಳ್ ಕುಳ್ಳಿರ್ದು] ತನ್ನೊಳಿಂತೆಂದಂ ॥ —೨೪೩

ಹಾರದ ಮುತ್ತಿನೈಸರದ ವಜ್ರದ ಕಂಕಣದೊಪ್ಪುವೆತ್ತ ಕೇ
ಯೂರದ ರತ್ನಕುಂಡಲದ ವಸ್ತ್ರದ ಮುದ್ರಿಕೆಯೊಂದು ಮಿಕ್ಕಲಂ

---

1 ಬಪ್ಪುದುಂ ಅವರ ಬರವಂ ಋಷಿನಿವೇದಕನಿಂದಱಿದು ವಿಶ್ವಂಧರಮಹಾರಾಜಂ ಸಕಲಪರಿಜನಂವೆರಸು ಪೋಗಿ ವಂದಿಸಿ ಧರ್ಮಶ್ರವಣಾನಂತರಂ (ಗ)

2 ಸಖಿಜೇಂಕರಿಸೆ (ಬ.), ಸಖೆಜೆಂಕಱಿಸಿ (ಕ)

3 ಈ ಪುರದ ಕೆಲದೊಳ್ ಸಿರಸಿಗ್ರಾಮಮೆಂಬುದು (ಗ)

4 ತನೊಂದು (ಗ)

ಕಾರದ ಮಾರ್ಸಿುಪ್ಪ ಪುರುಷರ್ ನೆರೆದದ್ಭುತಮೆತ್ತೆ ಕಟ್ಟಲುಂ
ಸೀರೆಯುಮಿಲ್ಲದೀಗುರುವನರ್ಚಿಸಿ ಕೈಮುಗಿದಂಜಿ ಸುತ್ತಲುಂ ॥ ೧೫೪

ಇರ್ದಪರೀತಂ ಪ್ರತ್ಯಕ್ಷದೇವನಾಗಲೆವೇಳ್ಕುಮೆಂದು ತಾನುಂ ಕಯ್ಯುಗಿದು ಧರ್ಮಮಂ ಕೇಳುತ್ತುಮಿರೆ ॥ ೧೫೫

ವರಮುನಿ ಮಧುರಸ್ವರದಿಂ
ಪರಮಾಗಮಮಂ ಸಮಸ್ತಭವ್ಯಜನಕ್ಕಾ ।
ದರದಿಂ ಪೇಳುತ್ತಿರೆ ನಿ
ಷ್ಕರುಣಮ ನಲೆ ಜಾಲಗಾರನುಂ ಕೇಳುತ್ತುಂ ॥ ೧೫೬

ಇರ್ದನನ್ನೆಗಂ ಸಕಲಶ್ರಾವಕರುಂ ತಂತಮ್ಮ ಬಯಸುವ ವ್ರತಂಗಳಂ ಕಯ್ಕೊಂಡು ದರ್ಶನದೊಳಂ ದೃಢರಾಗಿ ಮುನಿವರಂಗೆ ಪೊಡೆಮಟ್ಟು ಪೋಪುದುಂ ಮೃಗಸೇನನುಮೆರ್ದು ನಿಂದಿರ್ದು ಕಯ್ಯಂ ಮುಗಿದು ॥ ೧೫೭

ದೇವ ಮಹಾಪ್ರಸಾದ ಪರಮೇಶ್ವರ ನಿನ್ನನವಜ್ಞೆಗೆಯ್ದು ಸ
ದ್ಭಾವಮನೊಕ್ಕು ಬತ್ತಲಿಗನೆಂದೆಳಸಿರ್ದನನಂತಕಾಲಮುಂ
ಕೇವಲಮೆನ್ನ ಕರ್ಮವಶದಿಂ ನೆರೆದೀಪ್ರಜೆಗೆಲ್ಲಮರ್ತಿಯಿಂ
ಭಾವಿಸಿ ಪೇಡಿದಂತುಟನೆ ನೀನೊಸೆದೀವುದನೆಯ್ದೆ ಕಂಡು ಕೇಳ್ ॥ ೧೫೮

ದೇವನೆಂದಾನೀಗಳ್ ನಂಬಿದೆನೆನಗೊಂದು ಬ್ರತಮಂ ದಯೆಗೆಯ್ವುದೆನೆ ಮುನೀಶ್ವರರಿಂತೆಂದರ್ ॥ ೧೫೯

ಕಳ್ಳಂ ಮಾಣೆನೆ ನಿಮ್ಮಡಿ
ಕಳ್ಳಲ್ಲದೊಡಿಂದೆ ಸಾವೆನೆನೆ ಮುನಿ ಮತ್ತಂ ।
ಪೊಲ್ಲದು ಕೊಲೆಯುಂ ಮಾಣೆನೆ
ಕೊಲ್ಲದೊಡಾನೆಂತು ಪೊರೆವೆನೆನ್ನಂಗನೆಯುಂ ॥ ೧೬೦

ಪುಸಿಯುಂ ಮಾಣೆನೆ ನಿಮ್ಮಡಿ
ಪುಸಿಯುಂ ಮಾಣ ಲದು ಬಾಳಬಾರದು ಧರೆಯೊಳ್ ।

ಪುಸಿ ಮುಖ್ಯಮೆಂಬುದಂ ಭಾ
ವಿಸಿ ಮುನಿಪಂ ಕಳವನುೞಿವುದೆಂಬುದುಮಾಗಳ್ ॥ ೨೬೧

ಕಳವೆಂಬುದು ಮುನಿಪತಿ ಮ
ತ್ಕುಲಕ್ಕೆ ಬಿಡಬಾರದದನೆ ಬಿಟ್ಟೊಡೆ ಬಾೞ್ವೆಂ ।
ದಳವಾವುದೊ ಪೇೞಿಂ ಭೂ [1]
ತಳದೊಳ್ ಮೀಂಗುಲಿಗನಪ್ಪವಂಗದು ಮುಖ್ಯಂ ॥ ೨೬೨

ಎಂಬುದುಂ [ಪಂಚಾಣುವ್ರತಮೊಂದುಂ ಕೈಕೊಳ್ಳದೆನೆ ಮತ್ತೆ ನೀಂ ಬಲೆಯಂ ಬೀಸಿದಲ್ಲಿ ಮೊದಲ್ ಸಿಕ್ಕಿದೊಂದು ಮೀನಂ ಬಿಡುವುದೆನೆ, ಅಂತೆ ಗೆಯ್ವೆನೆಂದು] [2] ಬಲೆಯುಂ ಕೊಂಡು ಸಿಂಪಾನದಿಯ ಪೆರ್ಮಡುವಿಂಗೆ ಪೋಗಿ ಜಾಲಮಂ ಬೀಸುವುದುಂ ಪಿರಿದಪ್ಪ ಮೀನ್ ಬಂದೊಡೆ ಗುರುವಚನಮನುಲ್ಲಂಘಿಸಲಾಗದೆಂದು ಕುಱುಪಿಂಗೆ ನೇಣಂ ಕಟ್ಟಿ ಮಗುೞೆ ಮಡುವಿನೊಳ್ ಬಿಟ್ಟು ಸಿಂಪಾನದಿಯ ತಡಿವಿಡಿದರೆಗಾವುದಂ ತರಮಂ [ಪೋಗಿ ಬಲೆಯುಂ ಬಿಡುವುದುಂ ಮುನ್ನಂ ಬಿಟ್ಟ ಮೀನೆ ಸಿಕ್ಕೆ ಕುಱುಪಂ ಕಂಡಱಿದು ॥ ೨೬೩

ಯತಿಪತಿವಂದ್ಯಂ ಕೊಟ್ಟ
ವ್ರತಮಂ ನೆನೆದಾಗಳಂತೆ ಬಿಟ್ಟಾಮೀನಂ ।
ದ್ಯುತಿವೆರಸು ತೊೞಲೆಯು ತಡಿವಿಡಿ
ದತಿಶಯದಿಂ ಪೋಗಿ ನೂಱುಮಾರಂತರಮಂ] [3] ॥ ೨೬೪

---

1 ಬಿಡದದನೆ ಬಿಟ್ಟೆನಪ್ಪೊಡೆ ಬಾೞ್ವೆಂ । ದಳಿಪಾವುದೊ ಪೇಳಿ ಮಹೀ (ಗ)

2 ಅಂತಪ್ಪೊಡೆ ನೀನಿಂದು ಮೊದಲಾಗಿ ಬಲೆಯೊಳ್ ಮುನ್ನಂ ಬಂದ ಮೀನಂ ಬಿಟ್ಟು ಕಳೆವುದೆಂಬುದುಮದಕ್ಕೊಡಂಬಟ್ಟು ಮಹಾಪ್ರಸಾದಂ ಕೈಕೊಂಡೆನೆಂ ಬಂದುಮವರಿಂತೆಂದರ್ :—

ಸಾವೆಡೆಯೊಳ್ ನೀನೊಲವಿಂ ಶ್ರಾವಕರಪ್ಪವರು ತಾಳ್ದ ಸುವ್ರತಚಯಮಂ ।
ಶ್ರೀವರಮುನಿಸಾಕ್ಷಿಯೊಳಾವಗಮೊಳಕೊಂಡೆನೆಂದು ನೆನೆ ಮನದೊಳ್ ॥

ಎನುತ್ತಂ ಜೀವಮಂ ಬಿಡುವುದೆಂಬುದುಂ ಅಂತೆ ಗೆಯ್ವೆನೆಂದು (ಗ)

3 ಬಂದು (ಗ)

ಬಲೆಯುಂ ಬೀಸುವುದುಂ ಸಂ
ಚಲಮೆನಿಸದೆ ಮತ್ತಮಾಮಹಾಮತ್ಸ್ಯಮೆ ನಿ ।
ಶ ಲಮಾಗೆ ಬಂದೊಡಾಮಿಾಂ
ಗುಲಿಗಂ ಬೆಱಗಾಗಿ ನೆನೆದು ತನ್ನ ವ್ರತಮಂ ॥ ೧೬೫

ಮಗುೞೆ ತೊಱೆಯೊಳ್ ಬಿಟ್ಟು ಮತ್ತಮರೆಗಾವುದಂತರಂ ತೊಱೆಯ ತಡಿವಿಡಿದು ಪೋಗಿ ಬಲೆಯುಂ ಬೀಸುವುದುಂ, ಮುನ್ನಿನ ಮಿಾನೆ ಬರ್ಪುದುಂ ಮುನಿ ಕೊಟ್ಟ ವ್ರತಮಂ ॥ ೧೬೬

ಅವಧರಿಸಿ ಮಗುೞೆ ತೊಱೆಯೊಳ್
ವಿವೇಕದಿಂ ಬಿಟ್ಟು ತೊಱೆಯ ತಡಿವಿಡಿದು ಮಹೋ ।
ತ್ಸವದಿಂ ಮೃಗಸೇನಂ ಮಾ
ನವರತ್ನಂ ನೂಱುಮಾರಿನಂತರದೆಡೆಯೊಳ್ ॥ ೧೬೭

ಪೋಗಿ ಜಾಲಮಂ ಬೀಸುವುದುಂ ಮುನ್ನಿನ ಮಹಾಮತ್ಸ್ಯಮೆ ಬಲೆಯೊಳ್ ಬರೆ ವಿಸ್ಮಯಂಬಟ್ಟು ನಿಂದಿರ್ಪುದುಂ ॥ ೧೬೮

ಕೊಲೆಯೊಳ್ ಮತಿಯಂ ಮಾಣದೆ
ನಿಲಿಸುವರೀಮಾರ್ಗದಿಂದೆ ನರಕಕ್ಕಿೞಿವರ್ ।
ಚಲದಿಂದಮೆಂದು ತೋರ್ಪವೊ
ಲಲಂಘ್ಯಗುಣನರ್ಕನಪರವಾರಿಧಿಗಿೞಿದಂ ॥ ೧೬೯

ಅಂತು ನೇಸಱ್ ಪಡುವುದುಂ ಬಱಿದೆ ಪೋಗಲಾಗದೆಂದು ಪುಳ್ಳಿಗಳಂ ಕೊಂಡು ಮನೆಗೆವರ್ಪುದುಂ ತಳ್ವಾದನೆಂದು ಕನಲುತ್ತುಮಿರ್ದ ಘಂಟೆ ಮಿಾನಿಲ್ಲದೆ ಬಱಿದೆ ಪುಳ್ಳಿಯುಂ ಕೊಂಡು ಬಂದ ಮೃಗಸೇನನಂ ಕಂಡು ಕಿನಿಸಿ ಪೊಱಗಣ್ಗೆ ನೂಂಕುವುದುಂ ಭಯಸ್ಥನಾಗಿ ಕಾಲಮೇಲೆ ಬಿರ್ದು ತನ್ನ ತಳ್ವಿದ ಕಾರಣಮೆಲ್ಲಮಂ ಪೇೞೆ ಕಣ್ಗಳಿಂ ಕಿಡಿಯುಂ ಕೆಂಡಮುಂ ಪಾಯೆ ॥ ೧೭೦

ಕೆಲನಂ ಪೊಯ್ಯೆ ತಗುಳ್ದು ಬಿರ್ದ ಮೊಲೆಗಳ್ ಪರ್ದಾಡುವೆಂತಿರ್ದ ಕೆಂ
ದಲೆ ಕೋಪೋದ್ಭವದುಗ್ರದಿಂ ನಡುಗೆ ಸೀಳ್ದೊಂದಾಗಿ ನೀರ್ಪಾಯ್ವಿನಂ
ಕೊಪೆಗಣ್ಮುಳ್ಳಿಸೆ ದೊಡ್ಡವೊಟ್ಟೆಕುಣಿಯಲ್ ಪೊಯ್ವಳ್ ಮಹಾಕೋಪಿ ಕಾ
ವಲಿಯಂತಪ್ಪ ಕರಾಗ್ರದಿಂದೊದೆಯುತುಂ ಕರ್ಗಿರ್ದ ಪಾದಂಗಳಿಂ ॥

ಅಂತು ನುಗ್ಗಾಗೆ ಬಡಿದು ನಿನಗೆ ವ್ರತಮನಿತ್ತ ಋಷಿಯರ ಮನೆಗೆ ಪೋಗೆಂದು ಪೊಱಮಡಿಸಿ ಪಡಿಯಂ ಕೀಱುವುದುಂ ಮೃಗಸೇನಂ ದುಃಖಿತನಾಗಿ ॥ ೧೨೨

[ಒಂದುದಿನಂ ವ್ಯವಸಾಯಂ
ಕುಂದಿದೊಡೀಕಾಂತೆ ಮುಳಿದು ಬಯ್ದು ಪಳದಱಿಂ ।
ಸೌಂದರಿಯುಂ ಸುತರುಂ ಬೇ
ಡೆಂದಱಿಪುವ ದಿವ್ಯಮುನಿಯ ವಚನಮನೀಗಳ್ ॥ ೧೨೩

ಅನ್ನವರ ಕಂಡು ಪಾಪದಿ
ನುನ್ನತಸದ್ಧರ್ಮರತ್ನಮಂ ಬಿಟ್ಟಳಿಪಿಂ ।
ದೆನ್ನ ಸತಿಯೆಂದು ನಂಬಿದೆ
ನಿನ್ನಱಿದೆಂ ಸತಿಯರಾಗದೆಂಬುದನೀಗಳ್] ॥ ೧೨೪

ಮುಳಿದೆನ್ನಂ ಕರುಣಿಸದ
ಗ್ಗಳಮಾಗಿರೆ ಬಡಿದ ಸತಿಯುಮಂ ಮನೆಯುಮನು ।
ಜ್ವಲಮಾಗಿ ತೊಱೆದು ನೆಟ್ಟನೆ
ಮಲರಹಿತನನೆಯ್ದಿ ಕೇಳ ಬೆಳಗಾದಾಗಳ್ ॥ ೧೨೫

ಶ್ರಾವಕಕ್ರಮಮಂ ಕೊಳ್ವೆನೆಂದು ಚಿತ್ತದೊಳ್ ನೆನೆಯುತ್ತುಂ ಸಿದ್ರೆಗೆಯ್ವುದುಂ ನಡುವಿರುಳಪ್ಪಾಗಳ್ ಕಪ್ಪೆಯನಟ್ಟುತ್ತುಂ ಬಂದ ಪಾವು ಕಪ್ಪೆ ತಪ್ಪಿ ಮೃಗಸೇನನನುಂಗುಟಮಂ ಪಿಡಿವುದುಂ ವಿಷವೇಱಿ ಕಂಠಗತಪ್ರಾಣನಾಗಿ ಸುವ್ರತದ ಫಲದಿಂ ನಿನಗೆ ಧನಕೀರ್ತಿಯಾಗಿ ಪುಟ್ಟಿದಂ ॥ ೧೨೬

ಭರವಸದಿಂದಾವಿಪ್ರಾನಂ
ಗುರುವಚನಮನೊಳ್ಳಿತಾಗಿ ಮನದೊಳ್ ನೆನೆದಾ ।
ದರದಿಂದಮೆಯ್ದುಸೂಚ್ವಿರ
ಭರದಿಂದಂ ಬಿಟ್ಟನಪ್ಪ ಕಾರಣದಿಂದಂ ॥ ೨೬೭

ಶ್ರೀದತ್ತಂ ಮಾಡಿದ್ದೈದುಂ ಕೋಲೆಯುಂ ಪರಿಹರಿಸಿ ವಿಶ್ವಂಧರ ಮಹಾರಾಜನ ರಾಜ್ಯದರ್ಧಕ್ಕೆ ಮುಖ್ಯನಾದನಿಂತು ॥ ೨೬೮

ಮೃಗಸೇನನ ಪೆಣನಂ ತೊ
ಟ್ಟಗೆ ಸವಳದೆ ಘಂಟೆ ಕಂಡು ದುಃಖಿಸಿ ತಾನುಂ ।
ಮೃಗಸೇನನ ಸುವ್ರತಮಂ
ಮೃಗಾಕ್ಷಿ ಕೇಳ್ದಾನುಮೆಯ್ದೆ ತಾಳ್ದಿದೆನೆನುತಂ ॥ ೨೬೯

ಗಂಡನೊಡನೆ ಸತ್ತು ತದ್ವ್ರತಮಂ ಕೈಕೊಂಡೆನೆಂದ ಫಲದಿಂ ಘಂಟೆಯುಂ ಶ್ರೀದತ್ತಸೆಟ್ಟಿಗೆ ಶ್ರೀಮತಿಯೆಂಬ ಮಗಳಾಗಿ ಮತ್ತಂ ಧನಕೀರ್ತಿಗೆ ವಲ್ಲಭೆಯಾದಳಾವಿಪ್ರಾನುವಿಪ್ರಾಪುರದೊಳ್ ಮೃಗಸೇನೆಯೆಂಬ ಸೂಳೆಯಾಗಿ [ಪೊತ್ತುವೋಗಿಂಗೆ ಕೆಳದಿಯರ್ವೆರಸು ಸಿಂಪಾನದಿಯ ತಡಿವಿಡಿದು ಬರುತ್ತುಂ ಕೆಂದಳಿರ ಮಾವಿನ ಕೆಳಗೆ ಪಟ್ಟಿರ್ದ ಧನಕೀರ್ತಿಯುಂ ಕಂಡು ತಂದೆಯುಂ ಕಂಡಂತೆ ಸ್ನೇಹಿತೆಯಾಗಿ ಸಾರೆ ಕುಳ್ಳಿರ್ದು ರೂಪನಚ್ಚರಿತು ನೋಡುತ್ತುಂ ಸೋಗಿನೊಳದೋಲೆಯುಂ ಕಂಡು ವಾಚಿಸಿ ನೋಡಿ ಮಱುಗಿ ತಲ್ಲೇಖಮಂ ಸೀಳ್ದಿಡಾಡಿ ಶ್ರೀಮತಿಯನೀವೋಲೆಗಾಣಲೊಡನೆ ಮಹಾಬಳನೀತಂಗೆ ಕುಡುವುದೆಂದು ಬರೆದು ಮೆಗುಳ ಮುದ್ರಿಸಿ ಮುನ್ನಿನಂತೆ ಸೋಗಿನೊಳಕ್ಕಿ ಪೋಪಳಪ್ಪುದಱಿಂ ಧನಕೀರ್ತಿಯ ಸಾವು ತಪ್ಪಿತೆಂದು ಮೂವರ ಭವಮುಮಂ ಪೇೞ್ದಂ॥ ೨೭೦

ಮುನಿಪತಿ ಪೇೞೆ ಕೇಳ್ದು ಗುಣಪಾಲವಣಿಗ್ವರನುಂ ಮಹೀಶನುಂ
ವನರುಹನೇತ್ರೆಯುಂ ಸಕಲಭೂಭುಜರುಂ ಧನಕೀರ್ತಿಭೂಮಿಪಾ

ಲನು ಮೃಗಸೇನೆಯುಂ ಮನದೊಳಚ್ಚರಿವಟ್ಟು ಜಿನೇಂದ್ರಧರ್ಮಮಂ
ಜನನುತಮಂ ಕರಂ ಪಡೆದು ನಂಬಿದವರ್ಗೆಡರುಂಟೆ ಲೋಕದೊಳ್] ||

ಕಿಱಿದಪ್ಪೀವ್ರತದಿಂದಮೀಮಹಿಮೆಯುಂ ಮತ್ತೀಮಹಾಧೈರ್ಯಮುಂ
ನೆಱೆದೀರಾಜ್ಯಮನೀಸುಖೋನ್ನತಿಯುಮನೀಸದ್ರೂಪನೀತೇಜಮಂ
ತಱಿಸಂದೀಧನಕೀರ್ತಿ ಪೆತ್ತನೆನೆ ಪಂಚಾಣುವ್ರತಾನೀಕಮಂ
ನೆಱೆ ಕೈಕೊಂಡ ನರಂಗೆ ನಿರ್ವೃತಿಸುಖಂ ಕೈಸಾರ್ವುದೇನದ್ಭುತಂ ||

ಎಂದು ತಮ್ಮೊಳ್ ನುಡಿದು ದಂಟನೂದುವಂಗೆ ಕೊಟಿಲ್ ದೊರೆ ಕೊಂಡುದೆಂಬಂತೆ ಕೋಣನನೇಱುವಂಗೆ ಮದಕರಿ ದೊರೆಕೊಂಡಂತೆ ಪುಲ್ಗುಡಿಸಿಲಿನೊಳಿರ್ಪಂಗೆ ಮಣಿಮಾಡಮಾದಂತೆ ನಾಯಕತನಂಗೆಯ್ದಂಗೆ ಚಕ್ರವರ್ತಿತ್ವಮಾದಂತೆ ಮುನ್ನಮೆ ಬ್ರತಮಂ ಕೊಳಲೆಂದಿರ್ದವರಹಿಂಸಾವ್ರತದ ಪ್ರತ್ಯಕ್ಷಫಲಮಂ ಕಂಡು ವಿಶ್ವಂಭರಮಹಾರಾಜನುಂ ಗುಣಪಾಲಸೆಟ್ಟಿಯುಂ ಲಕ್ಷ್ಮೀಮತಿಮಹಾದೇವಿಯುಂ ಧನಶ್ರೀಯುಂ ಜಿನದೀಕ್ಷೆಯಂ ಕೈಕೊಂಡರ್. ಧನಕೀರ್ತಿಕುಮಾರಂ ಮೊದಲಾಗೆ ಸಮಸ್ತರಾಜಕುಮಾರರುಂ ಶ್ರೀಮತಿ ಮೊದಲಾಗೆ ಪಲಂಬರರಸಿಯರುಂ ಸಕಲಪರಿಜನಮುಂ ನಿರ್ವಾಣಲಕ್ಷ್ಮಿಯ ತೊಡಪಿನೊಳ್ ಕೀಲಿಸಿರ್ದ ಪಂಚರತ್ನಮೆನಿಪ ಪಂಚಾಣುವ್ರತಂಗಳಂ ಕೈಕೊಂಡು ದರ್ಶನದೊಳ್ ದೃಢರಾಗಿ ಮುನಿರಾಜಹಂಸನಂ ಬಂದಿಸಿ ಪೊೞಲ್ಗೆವಂದು ಸಂತೋಷಂ ಬೆರಸಿರ್ದರ್ || ೨೮೩

ಭರತನ ಸಗರನ ಮಘವನ
ಸುರಪನ ರಾಘವನ ವಜ್ರಜಂಘನ ಲಕ್ಷ್ಮೀ |
ಧರನ ದೊರೆ ಜೈನಧರ್ಮದೊ
ಳುರುಮುದದಿಂ ಮಿಕ್ಕರೆನಿಸಿ ವಸುಮತಿಯೆಲ್ಲಂ || ೨೮೪

---

1 ಪುಟ್ಟಿ ಧನಕೀರ್ತಿಗುಪಕಾರಂಗೆಯ್ದುಳ್ ಶ್ರೀದತ್ತಸೆಟ್ಟಿ ಕೊಲೆಯನೊಡರ್ಚಿದ ಪಾಪದ ಫಲದಿಂ ನರಕದೊಳ್ ಬಿರ್ದನೆಂದು ಮುನಿಪತಿ ಪೇಳೆ ಕೇಳ್ದು (ಗ)

ಕೈವಾರದಿಂ ಪೊಗಪೆ [ಸನತ್ಕುಮಾರಚಕ್ರವರ್ತಿಯಂತೆ ತೇಜಸ್ವಿಯುಂ ಜಿನಧರ್ಮೋದ್ಧಾರಕನುಂ ಶ್ರೀಷೇಣಮಹಾರಾಜನಂತೆ ವೀರನುಂ ಅನ್ನದಾನವಿನೋದನುಂ ಪಂಚಮಚಕ್ರಧರನಂತೆ ಸದ್ಧರ್ಮನಿಶ್ಶಂಕನುಂ ಶ್ರುತವಿನೂತನುಂ ಅಭಯಕುಮಾರನಂತೆ ಕುಶಲನುಂ ಅಭಯದಾನಸಮೇತನುಂ ನಾಗಕುಮಾರನಂತೆ ಸುಭಗನುಂ ಜಿನಪೂಜಾನಂದನುಂ ಧನ್ಯಕುಮಾರನಂತೆ ಮುನಿಜನಾನಂದನುಂ ವಿನೀತನುಮಾಗಿ] ಧನಕೀರ್ತಿ ಮಹಾರಾಜಂ ಪಲಕಾಲಂ ರಾಜ್ಯಂಗೆಯ್ಯುತ್ತುಮಿರ್ದೊಂದುದಿವಸಂ ಕನ್ನೆಯ ನರೆಯಂ ಕಂಡು ॥ ೧೮೫

ಎನ್ನಂತಪ್ಪತಿಮೂರ್ಖರಿಲ್ಲ ಜಗದೊಳ್ ಬೇಳಾಗಿ ನಿಷ್ಕಾರಣಂ
ಚೆನ್ನಂ ಸ್ತ್ರೀಯರ ಭೋಗಮಂ ಮಹಿಮೆಯುಂ ಶ್ರೀಯುಂ ಮಹೀಚಕ್ರಮಂ
ತನ್ನಂ ತಾನಚಯುತ್ತುಮಿರ್ಪ ತನುವಂ ನಂಬಿರ್ದು ಕೆಟ್ಟೆಂ ಜವಂ
ಗೆನ್ನಂ ತಿಂಗುರಿ ಮಾಡದೀಗಳ್ ಜಿನಶ್ರೀದೀಕ್ಷೆಯಂ ತಾಳ್ದುವೆಂ ॥ ೧೮೬

ಉಡು ಕಣ್ಣಂ ಮುಚ್ಚಿರ್ದ
ನ್ನಡೆಯಂ ಕೇಳಾರುಮಱಿಯರೆಂಬೆಗ್ಗಿಂದಂ ।
ಮಡಿವಂತೆ ಪ್ರಾಯ್ದು ಜಡರುಂ
ಕಿಡುವರ್ ಧನಗೇಹಮೆನ್ನದೆಂಬಳಿಪಿಂದಂ ॥ ೧೮೭

[ಉದಯಂಗೆಯ್ದಾದಿತ್ಯಂ
ಪದುಳಂ ನಡೆದಸ್ತಮಾನನಪ್ಪಂತೆವೊಲಂ ।
ಮುದದಿಂ ನರರುಂ ಕ್ರಮದಿಂ
ವಿದಿತಂ ನೀಡಿಲ್ಲದಱಿದು ದುರ್ಗತಿಗಿಱಿವರ್] ॥ ೧೮೮

ಮಾಗಿಯ ಕಾಲಂ ತೊಟ್ಟನೆ
ಬೇಗಂ ಹಿಮಮೆಯ್ದುವಂತೆ ಸಾವೆಯ್ದುವುದುಂ ।
ನೀಗದ ದುಃಖಂ ಘಮ್ಮನ
ಲಾಗಳ ಬಂದಿರ್ಕುಮಲ್ಲಿ ಸಂದೆಯಮುಂಟೇ ॥ ೧೮೯

ಊರಂ ಸಾರದೆ ಸಾರವಸ್ತುಚಯಮಂ ತಾಳ್ದೊಪ್ಪಿ ನಿರ್ಗ್ರಂಥದಿಂ
ದಾರಣ್ಯಂಗಳೊಳಿರ್ಪನುಂ ಕನಕಭಂಡಾರಕ್ಕೆ ಕಾಪಿಲ್ಲದು
ಗ್ರಾರಣ್ಯಂಗಳೊಳುಣ್ಕೆ ಪೊಣ್ಕೆ ಚಲದಿಂ ಪೋಪಾತನುಂ ಕಷ್ಟಸಂ
ಸಾರೋಗ್ರಾಹಿಗೆ ಬೆಚ್ಚಲೊಲ್ಲದವನುಂ ಕೇಡೆಯ್ದುವಂ ನಿಚ್ಚಯಂ॥೭೯೦

ಎಂದು ಸಂಸಾರಕ್ಕೆ ಪೇಸಿ ಸುಕೀರ್ತಿಯೆಂಬ ತನ್ನ ಪಿರಿಯ ಮಗಂಗೆ ಪಟ್ಟಮಂ ಕಟ್ಟಿ ರಾಜ್ಯಮಂ ತೊಱೆದು ಮುನ್ನಿನ ಯಶೋಧರಭಟ್ಟಾರಕರಲ್ಲಿ ಜಿನದೀಕ್ಷೆಯಂ ಕೈಕೊಂಡು ಸಕಲಶ್ರುತಪಾರಾವಾರಪಾರಗನಾಗಿ ಗುರುಗಳಾಜ್ಞೆಯಿಂದೇಕವಿಹಾರಮನೆತ್ತಿಕೊಂಡುಗ್ರೋಗ್ರಮಪ್ಪ ತಪದೊಳ್ ಪ್ರಾಯೋಪಗಮನದಿಂ ಸಂನ್ಯಸನವಿಧಿಯಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱು ಸಾಗರೋಪಮಕಾಲಮಾಯುಷ್ಯಮನೊಡೆಯನುಮಹಮಿಂದ್ರನುಮಾಗಿ ಪುಟ್ಟಿದಂ ॥

ಸಿರಿಯಂ ಬಿಟ್ಟು ಸಮಸ್ತಭೂವಳಯಮಂ ಕೈಕೊಳ್ಳದೋರಂತೆ ಸೌಂ
ದರಹೇಮಾಂಗಿಯರೆಲ್ಲರಂ ತೊಱೆದು ಬಿಟ್ಟಾನಂದಮಂ ಭೋಗಮಂ
ಪರಮಶ್ರೀಸಾಧುವಿಂಗೆ ಸೋಲ್ತು ಜಿನಪಾದಾಂಭೋಜಮಂ ಪೊರ್ದಿ ಸ
ಚ್ಚರಿತಂ ಮತ್ಪತಿ ಜೈನದೀಕ್ಷೆಗೊಡಲಂ ತಾನೊಡ್ಡಿದಂ ಧೈರ್ಯದಿಂ ॥

ಎನ್ನ ಸಂಪತ್ತೇನೆಂದು ಮಗನ ಮೋಹಮುಮಂ ರಾಜ್ಯದ ಕಾಂಕ್ಷೆಯುಮಂ ಬಿಸುಟು ಶ್ರೀಮತಿಯುಂ ವಿನಯಮತಿಯುಮೆಂಬ ಕಂತಿಯರಲ್ಲಿ ದೀಕ್ಷೆಯುಂ ಕೈಕೊಂಡು ನಿರ್ಮಾಯೆಯಾಗೆ ನೆಗೞ್ದು ಕಡೆಯೊಳ್ ಸಮಾಧಿವಿಧಿಯಿಂ ಮುಡಿಪಿ ದೇವಲೋಕದೊಳ್ ಪುಟ್ಟಿದಳ್. ವಿಶ್ವಂಧರಮುನಿ[ಕುಂಜರನುಂ ಗುಣಪಾಲಮುನಿಯುಂ ಲಕ್ಷ್ಮೀಮತಿಯುಂ ಧನಶ್ರೀಯುಂ ಮೃಗಸೇನೆಯುಂ ತಪದೊಳುತ್ತರೋತ್ತರಂ ನೆಗೞ್ದು] [1] ಸಮಾಧಿಮರಣದಿಂ ಮುಡಿಪಿ ದೇವಲೋಕದೊಳ್ ಪುಟ್ಟಿದರದುಕಾರಣದಿಂ॥

ಕೊಲೆಯಂ ಬಿಟ್ಟ ಮಹಾತ್ಮಂ
ಸುಲಲಿತಕೈವಲ್ಯಕಾಮಿನೀಶ್ವರನಕ್ಕುಂ ।

---

1 ಮೊದಲಾಗೆಲ್ಲರುಂ (ಗ)

ಪಲವುಂ ಮಾತಿನೊಳೇನೊ
ಳ್ಗಲಿಯಾಗಿ ಸಮಸ್ತಧಾತ್ರಿಯಂ ತಾನಾಳ್ಗಂ ॥ ೧೯೪

ಕೊಲೆಯೊಳ್ ಕೂಡಿದ ಕಷ್ಟಂ
ತಲೆಕೆಳಗಾಗಿರ್ಪುಮುಗ್ರನರಕಾರ್ಣವದೊಳ್ ।
ಸಲೆ ತಿರಿಕಯೋನಿಯೊಳ್ ತಾಂ
ಸಲೆ ತಿರುಗುಗು [1] ಮಾವಕಾಲಮುಂ ಭವಭವದೊಳ್ ॥ ೧೯೫

ಎಂದಹಿಂಸಾವ್ರತದ ಪ್ರತ್ಯಕ್ಷಫಲಮುಮಂ ಹಿಂಸೆಯೊಳಾದ ಪೊಲ್ಲಮೆಯುಮಂ ಗಣಧರಸ್ವಾಮಿಗಳ್ ಪೇಲೆ ಕೇಳ್ದು ॥ ೧೯೬

ವರಭವ್ಯಾಂಭೋಜಸೂರ್ಯಂ ನಿರುಪಮಗುಣನುದ್ಯತ್ತಪಂ ದೇವಧಾತ್ರೀ
ಧರಧೈರ್ಯಂ ವಾಗ್ವಧೂವಲ್ಲಭನಫೆಕುಲವಿದ್ರಾವಣಂ ಸತ್ಯರತ್ನಾ
ಭರಣಂ ತ್ರೈವಿದ್ಯಚೂಡಾಮಣಿವಿಮಲಪದಾಂಭೋಜಭೃಂಗಂ ವಿನೇಯಾಂ
ಬರಚಂದ್ರಂ ತುಷ್ಟನಾದಂ [2] ಸುಕವಿಜನಮನಃಪದ್ಮಿನೀರಾಜಹಂಸಂ ॥

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣಪಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ನಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುಂದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧರ್ಮಾಮೃತದೊಳ್
ಅಹಿಂಸಾವ್ರತವರ್ಣನಂ
ದಶಮಾಶ್ವಾಸಂ.

---

1 ಸಲೆ ತಿರುಗುಂ ಮತ್ತಂ ಮಲಮಲಮರುಗುಗು (ಬ. ಕ.)

2 ಧರ್ಮರತ್ನಾಕರನುರ್ವೀಪೂಜ್ಯನಂಗೋದ್ಭವಮದಗಜಸಂಹಾರತ್ರೈವಿದ್ಯಚಕ್ರೇಶ್ವರಪಾದಾಂಭೋಜಭೃಂಗಂ (ಬ. ಕ)

ಏ ಕಾ ದ ಶಾ ಶ್ವಾ ಸಂ

ಶ್ರೀಮದಹಿಂಸಾವ್ರತಮಿದು
ಸಾಮಾನ್ಯಮೆ ಸಕಲಸುಖಮನೀವಗ್ಗದ ಚಿಂ ।
ತಾಮಣಿಯೆಂದೊಸೆದಂ ಧರ
ಣೀಮಹಿತಂ ಸುಕವಿನಿಕರಪಿಕಮಾಕಂದಂ ॥ ೧

[ಅಂತಹಿಂಸಾವ್ರತದ ಕಥೆಯುಂ ಕೇಳ್ದು ಮನದ ಪೆರ್ಚಿಂ ಮಗಧ ನಾಯಕಂ ಮತ್ತಂ ಗಣಧರಸ್ವಾಮಿಗಳ್ಗ ಪೊಡೆಮಟ್ಟು ಮುಂದಣ ಸತ್ಯ ವ್ರತದ ಕಥೆಯುಂ ಬೆಸಸುವುದೆಂದು ಕೈಗಳಂ ಮುಗಿದಿರ್ಪುದುಂ ನಿರ್ವೃತಿ ಕಾಂತೆಯ ಕೂಟಕ್ಕಿದು ತಥ್ಯಮೆನಿಸುವ ಸತ್ಯವ್ರತದ ಕಥೆಯುಂ ಗೌತಮ ಸ್ವಾಮಿಗಳಿಂತೆಂದು] [1] ಪೇೞ್ದರ್ :— ವೀರದೊಳ್ ಕೂಡಿ ಪರಿಗೆಯುಂ ಬಿಟ್ಟೇಱುಂ ಬೆರಸಿರ್ಪಂತೆ, ಕ್ಷತ್ರಿಯಂಗೆ ಪುಟ್ಟೆ ಸಿಂಹಾಸನಮುಂ ಬೆಳ್ಗೊಡೆಯುಂ ಬೆರಸಿರ್ಪಂತೆ, ಶಕ್ತಿಯೊಳ್ ಕೂಡಿ ಪೆಂಡಿರುಂ ಮಕ್ಕಳುಂ ಬೆರಸಿರ್ಪಂತೆ, ಶ್ರೀಯೊಳ್ ಕೂಡಿ ತೇಜಮುಂ ಮಹಿಮೆಯುಂ ಬೆರಸಿರ್ಪಂತೆ, [ಜಾತ್ಯಶ್ವಮನೇಱಿ ಸಬಳಮುಮಡಾಯುಧಮುಂ ಬೆರಸಿರ್ಪಂತೆ, ಬಲ್ಗೋಟೆಯೊಳ್ ಪೊಕ್ಕು ನೀರುಂ ಧಾನ್ಯಮುಂ ಬೆರಸಿರ್ಪಂತೆ, ಬೀಜದೊಳ್ ನೆರೆದು ಬಂಟರೆತ್ತಿನೊಳ್ ಬೆರಸಿರ್ಪಂತೆ, ಭೂಬಲದೊಳ್ ಕೂಡಿ ಬಲದೊಳಂ ಬೆರಸಿರ್ಪಂತೆ, ಜವ್ವನದೊಳ್ ಕೂಡಿ ವಿಳಾಸದೊಳಂ ಶೃಂಗಾರದೊಳಂ ಕೂಡಿರ್ಪಂತೆ], ಸಮ್ಯಗ್ದರ್ಶನದೊಳ್ ಕೂಡಿ ಕೊಲ್ಲದ ವ್ರತದೊಳಂ ಪುಸಿಯದ ವ್ರತದೊಳಂ ಬೆರಸಿರ್ಪುದು ॥ ೨

---

1 ಅಂತು ಕೊಲ್ಲದ ವ್ರತದ ಕಥೆಯನಱಿದು ಮುಕ್ತಿಕಾಮಿನಿಯ ಕೂಟಕ್ಕಿದುವೆ ಪಥ್ಯಮೆನಿಸುವ ಸತ್ಯವ್ರತದ ಕಥೆಯಂ ಬೆಸಸಿಮೆಂಬುದುಮಿಂತೆಂದು (ಗ)

ವಸುಧಾವಳಯಮಂ ವಿಶ್ವಾ
ಸಿಸಿ ಪೊರ್ದುರ್ಪುದಿವನೆ ದೇವನೆಂದೆಲ್ಲಂ ಪೂ ।
ಜಿಸುವುದದಱಿಂದಮುಗ್ಗಳ
ಪುಸಿಯಿಲ್ಲದ ಸುವ್ರತಕ್ಕೆ ದೊರೆ ಪೆಱತೊಳವೇ ॥ ೩

ಇನ್ನದಱ ಪೆಂಪೆಂತೆಂದೊಡೆ, ॥ ೪

ತುಱುಗಿದ ನಂದನಾವಳಿಯಿನೊಪ್ಪುವ ವಾರಿಜಷಂಡದೋಳಿಯಿಂ
ನೆಱೆದತಿಶೋಭೆಯಿಂ ಬಳಸಿದೂರ್ಗಳಿನೊಪ್ಪುವ ಕೆಯ್ವೊಲಂಗಳಿಂ
ಮಿಱುಗುವ ರತ್ನದಿಂದೆಸೆವ ಜೈನನಿವಾಸದಿನೆಯ್ದೆ ನೀಳ್ದ ಸು
ತ್ತಿಱಿದ ತಟಾಕದಿಂ ಕರಮೆ ರಂಜಿಸುತಿರ್ಪುದು ವೆಂಗಿಮಂಡಲಂ ॥ ೫

[ತದ್ವೆಂಗಿಮಂಡಲದೊಳಂ
ವಿದ್ವಜ್ಜನದಿಂ ಸುರೇಶ್ವರನಿಭಾನ್ವಿತರಿಂ ।
ಸದ್ವಚನಯುಕ್ತರಿಂ ದೃಢ
ಸದ್ವ್ರತರಿಂ ವಿಟವಿಟೇನಿಕಾಯದಿನಧಿಕಂ ॥ ೬

ರಮಣೀಯಮಪ್ಪುದು ಪ್ರತಿಪಾಲಪುರಮೆಂಬುದದನಾಳ್ವಂ ಧನದ ಮಹಾರಾಜನೆಂಬ ಮಹಾಮಾಂಡಳಿಕನಾತಂ ॥ ೭

ಜಿನನಾಥಾರ್ಚನೆಯೊಳ್ ಸುರಾಧಿಪತಿಯಂ ಶ್ರೇಯಾಂಸನಂ ದಾನದೊಳ್
ಮುನಿಪಾದಾಂಬುಜಭಕ್ತಿಯೊಳ್ ಮಘವನಂ ನಾಗೇಂದ್ರನಂ ಭೋಗದೊಳ್
ಧನದೊಳ್ ಖೇಚರರಾಜನಂ ಚೆಲುವಿನೊಳ್ ಕಂದರ್ಪನಂ ಬುದಿ ಯೊಳ್
ಮನುವಂ ತೇಜದೊಳರ್ಕನಂ ಭರತಚಕ್ರಾಧೀಶನಂ ಪೆಂಪಿನೊಳ್ ॥ ೮

ಪೋಲ್ತು ಸುಖಸಂಕಥಾವಿನೋದದಿಂ ರಾಜ್ಯಲಕ್ಷ್ಮೀಮನೋಹರನಾಗಿರ್ಪುದುಮೊಂದುದಿವಸಂ ಚರನೊರ್ವನರಸನ ಚಿತ್ತವೃತ್ತಿಯನಱಿದು ತನ್ನ ಮನದ ಕಾರ್ಯಮನಱಿಪಿ ಮೆಚ್ಚುಗೊಳ್ವಪೇಕ್ಷೆಯಿಂ ಮೆಲ್ಲನೆ ಸಾರ್ದು ಸಾಷ್ಟಾಂಗವೆಱಗಿ ಪೊಡೆಮಟ್ಟು ದೂರದೊಳ್ ನಿಂದು ಕೈಗಳಂ ಮುಗಿದು ಬಿನ್ನಪಮೊಂದಿಂತೆಂದಂ ॥ ೯

ಮದನನ ಕೈಪಿಡಿ ಕಾಮನ
ಪದಪಿನ ತೀವ್ರಾಸಿ ಮನ್ಮಥನ ನಚ್ಚಿನ ನಂ ।
ಬಿದ ಕೈದು ಕಾಮದೇವನ
ಮದದಾನೆ ಮನೋಜನೃಪನ ಪೂವಿನ ಬಾಣಂ ॥ ೧೦

ಬಿದಿ ಕಾಡಲೆಂದು ಜಗಮಂ
ಸುದತಿಯನಚ್ಚೊತ್ತಿ ಪಡೆದು ಮೆಲ್ಲನೆ ಕೊಟ್ಟಂ ।
ಮದನಂಗೆ ಬಿದಿಯ ಬೆಸದಿಂ
ಮದನನುಮವಳಿಂದಮಲೆಯದಿರ್ದಪನಿಳೆಯಂ ॥ ೧೧

ಆಪದ್ಮಾಕ್ಷಿಯ ಸೊಗಯಿಪ
ರೂಪಂ ಕೇಳ್ದವರುಮಳಿಪಿ ಮಱುಗುವರೆನೆ ಧಾ ।
ತ್ರೀಪಾಲಕ ತದ್ವನಿತೆಯ
ರೂಪಂ ನೆಱೆ ಕಂಡೊಡಳಿಪದಿರ್ಪವನಾವಂ ॥ ೧೨

ಸಂಘಶ್ರೀಯೆಂಬ ಬುದ್ಧೋಪಾಸಕನಾತನ ಮಗಳ್ ಕಮಳಶ್ರೀಯೆಂಬ ಕನ್ಯೆಯಿರ್ದಪಳಾಕನ್ಯೆ ದೇವರ್ಗೆ ಪ್ರಾಣವಲ್ಲಭೆಯಾಗಲ್ ತಕ್ಕವಳೆಂಬುದಂ ಧನದಮಹಾರಾಜನಾತಂಗಂಗಚಿತ್ತಮನಿತ್ತು ಪೆರ್ಗಡೆಗಳಂ ಸಂಘಶ್ರೀಯಲ್ಲಿಗೆ ಕಳುಪಿ ಕಮಲಶ್ರೀಯುಂ ಬೇಡಟ್ಟುವುದುಂ ಸಂಘಶ್ರೀ ಪೆರ್ಗಡೆಗಳ ಬರವನಱಿದಿದಿರ್ಗೊಂಡು ಪೋಗಿ ಪಿರಿದಪ್ಪ ವಿಷ್ಟರಮನಿಕ್ಕಿ ವಸ್ತ್ರತಾಂಬೂಲಾದಿಗಳಿಂ ಸಂತೋಷಂಬಡಿಸಿ, ಬೆಸನಾವುದೆಂಬುದುಂ ಪೆರ್ಗಡೆಗಳಿಂತೆಂದರ್ ॥ ೧೩

ನಿನ್ನ ತನೂಜೆಯುಂ ವನಜಲೋಚನೆಯುಂ ಲಲಿತಾಂಗಿಯುಂ ವಿಳಾ
ಸೋನ್ನತೆಯುಂ ಮನೋಜಗಜಗಾಮಿನಿಯುಂ ರಮಣೀಯವಕ್ತ್ರೆಯುಂ
ಸನ್ನುತರೂಪೆಯುಂ ಧನದಭೂಪತಿ ಭೂವಳಯೈಕವಂದ್ಯನ
ತ್ಯುನ್ನತತೇಜನಿಂದ್ರವಿಭವಂ ನಯದಿಂ ಜಿನಪಾದಶೇಖರಂ ॥ ೧೪

ಬೇಡಿಯಟ್ಟಿದನೆಂಬುದುಂ ಪೊಲೆಯಂಗೆ ಪೊನ್ ದೊರೆಕೊಂಡಂತೆ
ಪೆರ್ಚಿ ತಿಮಿರವ್ಯಾಧಿಯುಳ್ಳರಂತೆ ಮೆಯ್ಯಱಿಯದೆ ಸಂಘಶ್ರೀ ತನ್ನ
ಮನದೊಳ್ ಗುಡಿಗಟ್ಟಿ ಧನದಮಹಾರಾಜನಪ್ಪೊಡೆ ಋಷಿಯರ್ಗಮತಿಭಕ್ತ
ನಾತನೆನ್ನೊಡೆಯಂ, "ಯಥಾ ರಾಜಾ ತಥಾ ಪ್ರಜಾಃ" ಎಂಬೀನೀತಿ
ವಾಕ್ಯದಂತೆ ನಾಡುಂ ಬೀಡುಂ ಪ್ರಜೆಯುಂ ಪರಿಗ್ರಹಮುಂ ಮೊದಲಾಗೆ
ಲ್ಲರುಂ ಜೈನರೆ ; ಎನ್ನ ಪಿಡಿದ ಬುದ್ಧಸಮಯಮೀತನ ದೇಶದೊಳಂ
ಪುರದೊಳಮೆಸೆಗುಮೀತನೆ ಯೆನ್ನ ಮಗಳಪ್ಪ ಕಮಳಶ್ರೀಯುಂ ತಂದ
ನಪ್ಪೊಡೆ, ಮತ್ತೆನಿಸದಾಕೆ ಕಾರಣಮಾಗಿ ಮೋಹದಿನೆನ್ನಿಷ್ಟದೈವಮಪ್ಪ
ಸುಗತಂಗಂ ಭಕ್ತನಕ್ಕುಮೆನಗುಂ ಪಿರಿದಪ್ಪ ನಿರ್ವಾಹಮಾತನ ದೆಸೆಯಿಂ
ದೊರೆಕೊಳ್ಗುಮೆಂದಾಳೋಚಿಸಿ ಪೆರ್ಗಡೆಗಳ್ಗಂತೆಂದಂ ॥ ೧೫

ಧರಣೀಶಂ ಬೇಳ್ಪಂ ಗಡ
ಮರವಿಂದಾನನೆಯನೆನ್ನ ಮಗಳಂ ಜಗದೊಳ್ ।
ಪಿರಿದಪ್ಪ ಜನಕ್ಕೆನ್ನಂ
ತಿರೆ ನೋಂತವರಾರ್ ಮನುಷ್ಯರೊಳ್ ನಿಶ್ಚಯದಿಂ ॥ ೧೬

ಧರಣೀಶ್ವರಜಿನಪಾದಾಂ
ಬುರುಹಂ ಭವ್ಯಜನವಾರಿಜಾರ್ಕಂ ಬೇಡಲ್ ।
ತರುಣಿಯನೀಯದೆ ಮಾಣ್ಬೆನೆ
ಸಿರಿ ಬರೆ ಮೊಣಕಾಲನಾಂಪ ಗಾಂಪರುಮೊಳರೇ ॥ ೧೭

ಎಂದು ಪೆರ್ಚಿ ನುಡಿದು ಕಮಲಶ್ರೀಯನೊಡಗೊಂಡು ಪೋಗಿ
ಮೆಂಬುದುಂ ಪೆರ್ಗಡೆಗಳ್ ಕುಮಾರಿಯನಾನೆಯನೇಱಿಸಿಕೊಂಡು ಅರ
ಮನೆಗೆವಂದು ಅರಸಂಗೊಪ್ಪಿಸುವುದುಂ ॥ ೧೮

ಅರಸಂ ಕನ್ನೆಯ ರೂಪಂ
ಪರಿಭಾವಿಸಿ ನೋಡಿ ನೋಡಿ ಲಾವಣ್ಯಕ್ಕ ।
ಚ್ಚರಿವಟ್ಟು ತೂಗಿ ತಲೆಯಂ
ಸುರೇಂದ್ರಸತಿಗೀಕೆ ಚೆಲ್ವಿನೊಳ್ ಮಿಗಿಲಪ್ಪಳ್ ॥ ೧೯

ಆತನ ಪೇರ್ಮೆಗೆ ರೂಪುಸ
ಮಾತೀತಂ ಚೆಲ್ವಿನೇಳ್ಗೆಯೊಳ್ ಮೇನಕೆಗಂ |
ಸೀತೆಗಮಬ್ಜಾನನೆ ತಾಂ
ಭೂತಳದೊಳಗೀಕೆ ನಾಲ್ವರ್ಗ್ಗಗ್ಗಳಿಪ್ಪಳ್ ॥ ೨೦

ಎಂದು ಮನದೊಳ್ ಪೊಗೞ್ದು ಕಮಳಶ್ರೀಯಂ ॥ ೨೧

ಸಿರಿಯೊಳ್ ನಾರಾಯಣಂ ರಂಭೆಯೊಳಮರವರಾಧೀಶ್ವರಂ ಸೀತೆಯೊಳ್ ಭೂ
ಧರವಂದ್ಯಂ ರಾಘವೇಶಂ ರತಿಯೊಳಮಳಚಿತ್ತೋದ್ಭವಂ ರೋಹಿಣೀಸಾಂ
ದರಶೋಭಾಕಾರೆಯೊಳ್ ಚಂದ್ರಮನನುನಯದಿಂ ಕೂರ್ತು ಕೂಡಿರ್ಪವೋಲ್ ಭೂ
ಧರಧೈರ್ಯಂ ಕನ್ಯೆಯೊಳ್ ಸಂತಸದಿನೊಸೆದು ಕೂಡಿರ್ದನುತ್ಸಾಹದಿಂದಂ ॥ ೨೨

ಅಂತಿರ್ದೊಂದುದಿನಂ ಭೂ
ಕಾಂತಂ ಜಿನಪಾದಪದ್ಮಮಧುಪಂ ರಿಪುಭೂ |
ಪಾಂತಕನೊರ್ಮೆಯೆ ತನ್ನೊಳ್
ಚಿಂತಿಸಿದಂ ಸಾರಮಲ್ಲದೀಸಂಸೃತಿಯಂ][1] ॥ ೨೩

ಪೆಂಡಿರ ವಶವಾಗಿ ಮಹೀ
ಮಂಡಲದೊಳ್ ಪಲರುಮೆಯ್ದಿದರ್ ದುರ್ಗ್ಗತಿಯಂ |
ಪಂಡಿತರಪ್ಪವರದಱಿಂ
ಪೆಂಡಿರ ಬಳಸಿಂಗೆ ಬೇಗಮೆಳಸುವರಲ್ಲಂ ॥ ೨೪

---

1 ಆದೇಶದೊಳ್ ಪ್ರತಿಪಾಲಪುರವೆಂಬುದು ಪುರಮುಂಟದನಾಳ್ವಂ ಧನದ ಮಹಾರಾಜನೆಂಬ ಮಾಂಡಳಿಕಂ ಸಂಘಶ್ರೀಯೆಂಬ ಬೌದ್ಧನ ಸುತೆ ಕಮಲಶ್ರೀಯೆಂಬ ಕುಮಾರಿಗೆ ಸೋಲ್ತು ವಲ್ಲಭೆಮಾಡಿ ಸಂಘಶ್ರೀಗೆ ಮಂಡಲಮಂ ಕೊಟ್ಟು ಕೆಲವು ದಿವಸಂ ಸುಖಮಿರ್ದೊಂದುದಿವಸಂ ತನ್ನ ಮರುಳಾಟಕ್ಕೆ ವಿಸ್ಮಯಂಬಟ್ಟು (ಗ)

ಜಿನಪಾದಸೇವೆಯಂ ಬಿ
ಟ್ಟನವರತಂ ಪೆಂಡಿರೆಱಕದಿಂದಿರ್ಪ ನರಂ |
ಜನನಿಯುನೊಲ್ಲದೆ ರಾಕ್ಷಸ
ವನಿತೆಯುನಪ್ಪಿಕೊಳ್ವ ಪೊರ್ದುವೆಗ್ಗನನಿಱುಕುಂ ॥ ೧೦೫

[ಜಿನಮುನಿಗಳ ಭಕ್ತಿಯುನುೞಿ
ದನುನಯದಿಂ ಪೆಂಡಿರೆಱಕದಿಂದಿರ್ಪಾತಂ |
ಕನಕಮನೀಡಾಡಿ ಮರು
ಳ್ತನದಿಂದಿದ್ದಿಲನೆ ಕೊಳ್ವ ಮರುಳಂ ಪೋಲ್ಕುಂ] ॥ ೧೦೬

ಜಿನಭಕ್ತಿಯಿಲ್ಲದಾಕೆಯೊ
ಳನಂಗವಶನಾಗಿ ಸೋಲ್ತು ಕೂಡಿರ್ಪಾತಂ |
ತನಗೆ ಕಡುಮುಳಿವ ನರನಂ
ಮನೆಯಂ ಪೊಕ್ಕಿಪ್ಪ ಗಾಂಪನಂ ನೆಱೆ ಪೋಲ್ಕುಂ ॥ ೧೦೭

[ನಡುಮನೆಯೊಳ್ ನಿಧಾನಮಂ ಕಂಡದನಗೞ್ವನಿತು ಕಾಯುಕ್ಲೇಶಕ್ಕಾಱದೆ ಬಡತನದೊಳ್ ನವೆವನುಂ, ಪಲಕಾಲಂ ಗೊರೆಕೊಳ್ಳದ ಸದ್ಧರ್ಮಂ ಪುಣ್ಯದಿಂ ದೊರೆಕೊಂಡೊಡೆ ಧರ್ಮದೊಳಾದಲ್ಪ ದುಃಖಕ್ಕೆ ತನುವುಮಂ ಧನಮುಮನೊಡ್ಡಲಾಱದೆ ಪೆಂಡಿರ ರಾಜ್ಯದ ಧನಶ್ರೀಯೊಳಾದಲ್ಪಸುಖಕ್ಕಳಿಪಿ ನರಕದೊಳ್ ಬಿರ್ದು ಮಹಾದುಃಖದೊಳ್ ಕುದಿವರುಮೊಗ್ಗರೆಂದು ಭಾವಿಸಿ ಕಮಳಶ್ರೀಯೊಳಾದ ವಿರಹಾಗ್ನಿಯುಂ ಜಿನವಚನವಾರಿಯಿಂ ಮೆಲ್ಲನೆ ನಂದಿಸಿ][1] ಪಲವು ತೆಱದ ಧರ್ಮಶ್ರವಣದಿಂ ಕಮಳಶ್ರೀಯುಂ ಸದ್ಧರ್ಮಕ್ಕೆ ತಂದು ಸಕಳಶ್ರಾವಕವ್ರತಂಗಳಂ ದೇವ ಗುರುಸನ್ನಿಧಾನದೊಳ್ ಕೈಕೊಳಿಸಿ ದರ್ಶನಶುದ್ಧಿಯುಪ್ಪಂತು ಮಾಡಿ ಸಂಘಶ್ರೀಯುಮಂ ಶ್ರಾವಕನಂ ಮಾೞ್ಪ ಬಗೆಯುಂ ತಂದು ತನ್ನೊಳಂ ತೆಂದಂ ॥ ೧೦೮

[1] ಎಂದು ಭಾವಿಸಿ (ಗ)

ಮುಳ್ಳುಳ್ಳ ವೃಕ್ಷಮಂ ಕರ
ಮಲ್ಲದೆ ಪೊರ್ದಿದ ಲತಾಳಿ ಕಿಡುವಂತಿರೆ ಪೆಂ ।
ಪಿಲ್ಲದ ಕುಮಾರ್ಗಗಳುಮಂ
ಮೆಲ್ಲನೆ ಪೊರ್ದಿರ್ದ ನರರ ಗುಣಮುಂ ಕಿಡುಗುಂ ॥ ೨೯

ಬಿಡದೆಂಜಲ ಕುೞಿಯಂ ನೇ
ರ್ಪಡೆ ಪೊರ್ದಿದ ವಾರಿ ಪೊಲ್ಲದೆನಿಪವೊಲಳಿಪಿಂ ।
ಕಡುಪೊಲ್ಲರಪ್ಪ ಮಾನವ
ರೊಡಗೂಡಿದ ಮಾನಿಸರ್ಗೆ ಸದ್ಗುಣಮೞಿಗುಂ ॥ ೩೦

ಅದುಕಾರಣದಿಂ ಪೆಂಡತಿಗೆ ಕೂರ್ಪಾತನತ್ತೆಯೊಡನೆ ಕಿಚ್ಚಂ ಪೊಕ್ಕನೆಂಬ ನಾಣ್ಣುಡಿಯುಂ ನನ್ನಿಮಾಡಿ, ಕೆಮ್ಮನಪ್ಪ ಕುಮತಪ್ರೀತನುಂ ದುಷ್ಕರ್ಮಸಮೇತನುಮಪ್ಪ ಸಂಘಶ್ರೀಯುಂ ಕಮಳಶ್ರೀಯುಮೋಹದಿಂ ಪಿಡಿದು ಕೊಂಡಾಡಿ ಸುಗತಿಯಿಂ ಕೆಟ್ಟು ಸದ್ಧರ್ಮಮಂ ಬಿಟ್ಟು ದುರ್ಗತಿಗೆ ಸಲ್ವ ಕಜ್ಜಮಂ ಬಗೆಯಲಾಗದಾತನುಮಂ ಧರ್ಮದೊಳ್ ದೃಢನಪ್ಪಂತು ಮಾಡಿ ಬೞಿಕ್ಕಾತನಮೇಲೆ ಮೋಹಮಂ ಮಾಡುವೆನೆಂದು ದಿವಸಕ್ಕಂ ಕ್ರಮಕ್ರಮದಿಂ ನಿರ್ವೃತಿಯು ಸೈದಾರಿಯೆನಿಪ ಜಿನಾಗಮಮನಿಂತೆಂದು ಪೇೞ್ದಂ ॥ ೩೧

ಆರಯ್ದು ನೋಡಿ ನಾಡೆ ವಿ
ಚಾರಿಸಿ ಸದ್ಧರ್ಮಮಪ್ಪುದಂ ಪಿಡಿಯದೆ ನಿ ।
ಷ್ಕಾರಣಮವಿಚಾರತೆಯಿಂ
ಸಾರಂಗೆಟ್ಟಿರ್ದ ಧರ್ಮಮಂ ಪೊರ್ದುವುದೇ ॥ ೩೨

ವ್ರತದ ನೆಗೞ್ತೆಗೆ ಜೆಂಬಿ
ರ್ದತಿಶಯಸದ್ಧರ್ಮರತ್ನಮಂ ಬಿಟ್ಟು ಮಹೋ ।
ನ್ನತಿಯಿಂ ಕುಧರ್ಮಮಂ ಸಂ
ತತಮಳಿಪಿಂ ಪಿಡಿದು ನಲಿವ ಮನುಜನೆ ಗಾಂಪಂ ॥ ೩೩

ತನ್ನಯ ಮನಮವಿಚಾರಿಸೆ
ತನ್ನ ಮನಂಬೊಕ್ಕ ಬೞಿಕೆ ಮುಕ್ತಿಯನೀವ ।
ತ್ಯನ್ನತಧರ್ಮಮನಱಿವಿಂ
ಸನ್ನುತಮತಿಯಾಗಿ ಪಿಡಿಯದಾತನೆ ಗಾಂಪಂ ॥ ೨೪

ಊರಾವುಗಳೋಡುವುದಂ ಕಂಡು ಕುರುಡಾವುಂ ಓಡಿತೆಂಬಂತೆ ವಿಜ್ಞಾನಹೀನರುಂ ದುರ್ಗತಿಭಾಜನರುಂ ಅಘಸಮೇತರುಮವಿಚಾರಿಗಳು ಮಪ್ಪ ದುರ್ಮತಿಗಳಂ ಕಂಡು ಬೆಳಬೆಂಜನನಾಗಿ, ಕೊಲೆಯೊಳ್ ಪೊರ್ದಿದ ಪುಸಿಯೊಳೊಡಂಬಟ್ಟ ಕಳವಿನೊಳ್ ಕೂಡಿದ ಪರಸ್ತ್ರೀಯು ರೊಳ್ಪೊಂದಿದ ಪರಿಗ್ರಹಾಪೇಕ್ಷೆಯಿಂ ಮತಿಗೆಟ್ಟು ಮಱುಗುವ ಕುತ್ಸಿತ ಧರ್ಮಮುಮಂ, ರಾಗದ್ವೇಷಾದಿ ದೋಷಯುಕ್ತನುಂ [ವನಿತಾಸ ಕ್ತನುಂ] ರೌದ್ರಾತ್ಮನುಂ ನಿರ್ದಯನುಮಪ್ಪ ದೇವನುಮಂ, ಪೆಸರಿಲ್ಲ ದುಪದೇಶಮಿಲ್ಲದ [ನಿಯಮಮಿಲ್ಲದ] ನಿಷ್ಠೆಯಿಲ್ಲದ ದುರಾಚಾರದೊಳ್ ಪೊರ್ದಿದ ವ್ರತಮುಮಂ, ಅಭಿಮಾನಮಿಲ್ಲದ ಧೈರ್ಯಮಿಲ್ಲದ ಶಾಂತರೂಪ ಲ್ಲದ ಕೋಪದೊಳ್ ಕೂಡಿದ ಮಾಯಾವಿಯಾಗಿ ಮೆಚ್ಚಿದಂತೆ ನೆಗೞ್ವ ತಪಮುಮಂ, ಕೊಂಡಾಡುವ ಕೈಕೊಳ್ವ ಕೈಮುಗಿವ ಸುಗತಿವಡೆವೆ ನೆಂಬ ಮಾನಿಸಂ ಕಟ್ಟೆಗ್ಗನಕ್ಕುಮದೆಂತೆಂದೊಡೆ, ಮತ್ತಿಯೆಲೆಯುಂ ತಾಂಬೂಲದೆಲೆಯೆಂದು ಮೆಲ್ದು ಪಲ್ಗೞಿಗಾಸೆಗೆಯ್ವನುಮಂ ಬೂದಿಯು ಬೆಳ್ಪುಮಂ ನುಣ್ಪುಮಂ ಕಂಡು ಕಳವೆಯಕ್ಕಿಯ ಪಿಟ್ಟೆಂದು ಕಾವಲಿ ಯೊಳೞಿದೌಗನಡುವೆನೆಂಬನುಮಂ ಪೋಲ್ಕುಮಿಂತು ॥ ೨೫

ಕಸಮಂ ಸೋದಿಸಿ ಮಾಣದುತ್ತು ಮನೆಯುಂ ಸದ್ಭಾರ್ಯೆಯುಂ ಬಿಟ್ಟು ಸಂಕಿಸದೋರಂತಿರೆ ಕಾದು ಪಟ್ಟು ಪದೆಪಿಂ ಮಣ್ಣಿಕ್ಕಿ ಲೇಸಾಗಿ ಬಿ ತ್ತಿ ಸಮಂತೊಯ್ವನೆ ಧಾನ್ಯಮಂ ಪಡೆವವೊಲ್ ಸದ್ಧರ್ಮದಿಂದಾದ ಬೇ ವಸಮಂ ಸೈರಿಸಿ ನಿಂದು ಮುಕ್ತಿಸುಖಮಂ ಕೈಕೊಳ್ವದಾನಂದದಿಂ ॥

ಮತ್ತಂ ನೀರೊಳಗಣ ಮರದಂತೆ ಮೆಚ್ಚಿದಂತು ಪರಿಯದೆ ಕಡು ವೆಳದ ಮರದಂತೆ ಮನದೊಳಲ್ಲಾಡದೆ ಪಂದೆಯಪ್ಪನಂಕದಂತೆ ಪಲವಂ

ನೆನೆಯದೆ ಕಲಿಯಪ್ಪ ಮೂರ್ಖನಂತೆ ಮೆಯ್ಮಱೆಯದೆ ಪಲಕಾಲದ ವೃದ್ಧನಂತೆ ಮತಿಗಿಡದೆ ಪಾಣ್ಬೆಯಪ್ಪ ಸಜ್ಜನೆಯಂತೆ ಪಿಡಿವಿಡಿಗೊಳ್ಳದೆ ಪೊಲೆಬೂತಿನಂತೆ ಕಿಡೆ ನುಡಿಯದೆ ಪಾದರಸದಂತೆ ನೆಲೆಗೆಟ್ಟು ಪರಿಯದೆ ಬೆಂದ ಮುತ್ತುಗಳಂತೆ ಪೆಟ್ಟುವೆರ್ಚದೆ ಬಕದಂತೆ ಪೊಲ್ಲಮೆಯಂ ಪಾರದೆ [1] ಬೇಸಗೆಯ ಪೊನಲಂತೆ ಕ್ಷಣಿಕನಾಗದೆ ಪಗರಣಿಗರಂತೆ ಬೇಳಂಬಮಾಗದೆ ಪುಲ್ಲೆಯ ನೋಟದಂತೆ ಸಂಚಳನಾಗದೆ ಕಸ್ತುರಿ ನನ್ನಿಯಂತೆ ಕಿಡದೆ ಕುಲಜನಂ ಕಂಡ ಪೊಲೆಯನಂತೆ ಪುಸಿಯದೆ ನಿಂದು ಸುವ್ರತಂಗಳಂ ತಾಳ್ದಿ ಪರತ್ರೆಯ ಮಹಾಸುಖಮಂ ಪಡೆವುದು ॥ ೩೭

ಕೆಮ್ಮನೆ ಮೂರ್ಖರ ಪೇೞ್ಕೆಗೆ
ತಮ್ಮ ಮನಂಸೋಲ್ತು ಸುವ್ರತಕ್ಕಾಱದೆ ಕಾ ।
ಡೆಮ್ಮೆಯ ತೆಱದಿಂ ಮಲೆವರ್
ಕೆಮ್ಮನೆ ಸದ್ದರ್ಶನಕ್ಕೆ ಮುನಿವರ್ ಧೂರ್ತರ್ ॥ ೩೮

ಪಿಡಿಯಚ್ಚುವಿಡಿದು ಕೆಮ್ಮನೆ
ಜಡಮತಿಗಳ್ ತಮ್ಮ ಬೆಸನಮಂ ಸಲಿಸುವುದಂ ।
ಬಿಡಲಾಱದೆ ನಿರ್ವೃತಿಯಂ
ಕಿಡಿಸಿ ಕುಕಿಲ್ದೆಯ್ದಿ [2] ಪೊರ್ದುವರ್ ದುರ್ಮತಮಂ ॥ ೩೯

ಮುಱುವಿಕ್ಕಿ ಪೊರೆದು ಗೊಡ್ಡಂ
ಕಱೆದೊಡೆ ಪಾಲುಂಟೆ ದೋಷಿಯಪ್ಪಾತನುಮಂ ।
ಪೆಱಪಿಂಗದೆ ಪಿಡಿದಿರ್ದೊಡೆ
ನೆಱೆ ನಿರ್ವೃತಿಸುಖಮನಣ್ಣ ಪೇೞ್ಪಿಡೆದಪರೇ ॥ ೪೦

---

[1] ಬಡಿವೆತ್ತ ಬೇಡನಂತೆ ಮುನಿಯದೆ ದಾನಂಬಡೆಯದ ಪಾರ್ವನಂತೆ ಮನಂಗುಂದದೆ ಸೋಂಬನಂತಲಸದೆ ನಿರ್ಮಲನಾಗಿ ದೇವನುಮಂ ಧರ್ಮಮುಮಂ ವಿಚಾರಿಸಿ ಕೈಕೊಂಡು ಮರನ ಮೊದಲಂತಲ್ಲಾಡದೆ ತಿಪ್ಪೆಯ ನೀರಂತೆ ಪೊಲ್ಲನಿಸದೆ ಬೇಸಗೆಯ (ಗ)

ಕುಡುಗೆಂದು ಕುಕಿಲ್ದು (ಬ. ಕ.)

ಒರೆಗೀಪೊನ್ಗೀಪೊನ್ನಿನಿ
ವಿರಿದೀಪೊನ್ನಿದು ಸಮಂತು ಕಿಱಿದೆಂದಾರ ।
ಯ್ದುರುಮುದದಿನಱಿಯದಾಡುವ
ಪರದನವೊಲ್ ದೈವಮಱಿಯದವನುಂ ಕಿಡುಗುಂ ॥ ೪೧

ಪದನಱಿದು ಬಿತ್ತದ ಬೆಳಸುಂ, ಪ್ರಾಯಮಱಿದು ಪಡೆಯದ ಸೂಳೆಯ ಪಡಪುಂ, ಲಾಭಮಱಿಯದಾಡಿದ ಪರದುಂ, [1] ಪಾಲಱಿದು ಮಾಱುಗೊಳ್ಳದ ಪಯನುಂ, ವಿಚಾರಮಱಿಯದೆ ತಿರ್ದುವ ತಿರ್ದುಂ, ಜಾತಿಯಱಿಯದೆ ಕುಡುವ ಕೂಸುಂ, ಬೀರಮಱಿಯದೆ ಪೊರೆದ ಬಂಟನುಂ, ಶೀಲಮಱಿಯದ ಪೆಂಡಿರ ಕೂರ್ಮೆಯುಂ, ಪೊನ್ನಳವಿಯಱಿಯದಾತನ ಪರದುಂ [2], ರುಚಿಯಱಿಯದೂಟಮುಂ, ಬಡತನಮಱಿಯದ ಬೇಟಮುಂ, ಶಕ್ತಿಯಱಿಯದ ಪೊಱೆಯುಂ, ಪೆಸರಱಿಯದಂಗೆ ಕೊಟ್ಟ ಸಾಲಮುಂ, ಪೊಲನಱಿಯದ ತೋಟಮುಂ, ಮನಮಱಿಯದಾಟಮುಂ, ಸಲುಗೆಯಾದವನ ಪುರುಡುಂ, ದೇವನುಮಂ ಧರ್ಮಮುಮಂ ವ್ರತಮುಮನಱಿಯದೆ ಮೊಗಂ ಮೇಲೆತ್ತಿ ಪೊಟ್ಟೇಱಿಸಿ ದುರ್ಮಾರ್ಗಮಂ ತನ್ನಿಚ್ಛೆಗೆ ನಚ್ಚಿ ಮೆಚ್ಚಿ ಕೊಂಡಾಡಿ ಮದದಿಂದೆನ್ನ ಪಿಡಿದುದೆ ದೈವಮೆನ್ನ ಮಾಡುವುದೆ ಧರ್ಮಮೆನ್ನ ನೆಗೞ್ದುದೆ ತಪಮೆಂದು ಮುಯ್ಪಂ ನೋಡುವ ಮಾನಿಸರುಂ ತುದಿಯೊಳ್ ಮಹಾದುಃಖಮನೆಯ್ದುವರಲ್ಲದೆ ಸುಖಮನೆಯ್ದುವರಲ್ಲರಿಂತು ॥ ೪೨

ತೆಂಗಿನಕಾಯದೊಂದು ಕಠಿನತ್ವಮನೊರ್ಮೆಯೆ ಕಂಡು ಪೊಲ್ಲದೆಂ
ದೇಂ ಗಳ ಬೆಚ್ಚಿ ಭೀರುತನದಿಂ ಬಿಡದೊಯ್ಯನೆ ಮೂಸಿ ನೋಡಿ ನಾ
ಯ್ಪಿಂಗಿದುದೆಂಬ ಬೆಳ್ತನಮನೊಯ್ಕನೆ ಮಾಡದೆ ಬುದ್ಧಿವಂತರುಂ
ಪಿಂಗದೆ ಪೊರ್ದಿ ಮೆಲ್ಲನೆ ವಿಚಾರಿಸಿ ಪೊರ್ದುವುದಾಪ್ತನಪ್ಪನಂ ॥ ೪೩

---

1 ಒಳಗಱಿಯದ ಕೋಟೆ ಪಳಿಗಮುಂ (ಗ)

2 ಮನಮಱಿಯದಾತನ ಕೆಳೆಯುಂ ಕುಲಮಱಿಯದಾತನೆಂಜಲುಂ ಖಲಮಱಿಯದಾತನ ಕಾಳಗಮುಂ ನೆಲೆಯಱಿಯದೆ ತೋಱೆಯುಂ ಪಾಯ್ವನುಂ (ಗ)

ದಕ್ಕಿನೊಳ್ ಮಾಡಿದ ಮನೆ ಸೊಕ್ಕಿದಾನೆ ಸೋಂಕೆ ಕೆಡೆದು ಬೀೞ್ವಂತೆ ದೋಷಿಯಪ್ಪ ದೇವನಂ ಪಿಡಿದ ಮಾನಿಸನುಂ ಕರ್ಮರಾಜನೊಡ್ಡಂ ಮಾರ್ಕೊಳಲಾಱದೆ ನರಕದೊಳ್ ತಲೆ ಕೆಳಕಾಗಿ ಬೀೞ್ಗುಮಿಂತು ॥ ೪೪

ಮಿಳಿಯೊಳ್ ಮಾತಂಗಮಂ ಕಟ್ಟಿದೊಡೆ ನಿಲುಗುಮಂತಲ್ಲದಾದಂದು ಕೂರ್ಪರಂ
ಬಲದಿಂ ಮುಯ್ಪಾಂತು ಪೇರಾನೆಯನವಯವದಿಂ ಪಂಜಿಯೊಳ್ ಕಟ್ಟಿದಂದು
ಮೃಳದಿಂ ಮತ್ತದ್ವಿಪಂ ನಿಂದಪುದೆ ಮರುಳ್ ಸದ್ಧರ್ಮದಿಂದಲ್ಲದುರ್ವೀ
ತಳದೊಳ್ ದುಷ್ಕರ್ಮಬಂಧಂ ಕಿಡಲಱಿಗುಮೆ ಮತ್ತನ್ಯಧರ್ಮಂಗಳಿಂದಂ ॥ ೪೫

ಕಾೞ್ಕಿಚ್ಚಿಗಂಜಿದಾತಂ ಪೆರ್ಮಡುವಂ ಪೊಕ್ಕೊಡೆ ಬಾೞ್ಗುಮುದ್ಧತಿಯಿಂ ಕರಂಡಮಂ ಪೊಕ್ಕೊಡೆ ಕಱಿಮುಱಿಯಾಗಿ[1] ಬೇಗುಮಂತೆ ನರಕತಿರಿಕಂಗಳೊಳ್ ಕರಟದ ಕದಿರಂತೆ ತಿರಿಪುವ ಕರ್ಮಕಂಜುವಾತಂ ಸದ್ಧರ್ಮಮಂ ಪಿಡಿದೊಡೆ ಸುಖಿಯಕ್ಕುಮಲ್ಲದೆ ಕೊಲೆಯೊಳ್ ಕೂಡಿದ ಕುಧರ್ಮಮಂ ಪಿಡಿದೊಡೆ ನರಕಮಂ ಪೊಕ್ಕು ಮಹಾದುಃಖಮನೆಯ್ದುಗುಂ ॥ ೪೬

ಬೇವಿಂಗೆ ಕಯ್ಪು ಸಹಜಂ
ಭೂವಳಯದೊಳೆಂಬ ತೆಱದಿನತಿಪಾಪಿಗಳುಂ ।
ಶ್ರೀವರಸದ್ಧರ್ಮದ ದೆಸೆ
ಗೋವದೆ ಮುನಿಯುತ್ತುಮಿರ್ಪರಘವಶದಿಂದಂ ॥ ೪೭

ಒಡೆಯರ ಸಿರಿಯುಂ ಕಂಡೊಡೆ
ಬಡವರ್ ಮುನಿವಂತೆ ನರಕಗತಿಗಿೞಿವವರುಂ ।
ತಡೆಯದೆ ನಿರ್ವೃತಿಸುಖಮಂ
ಪಡೆವವರಂ ಕಂಡೊಡಾಗಳುಂ ಕಡುಗಾಯ್ವರ್ ॥ ೪೮

---

1 ಕರಿಮುರಿಯಾಗಿ (ಗ)

ಪೊನ್ನುೞವರಂ ಕಳ್ಬರ್
ಬೆನ್ನಟ್ಟಿ ತಗುಳ್ವ ತೆಱದಿನತಿನಿರ್ಮಳರಂ ।
ಸನ್ನುತದರ್ಶನಶುದ್ಧರ
ನುನ್ನತರಂ ಪಾಪಿಯಪ್ಪರುಂ ನೆಱೆ ತಗುಳ್ವರ್ ॥ ೪೯

ಮೞೆ ಮೊಕ್ಕಳಮಾದೊಡೆ ತೊಱೆ ಪೆರ್ಚಿ ಪರಿಗುಮಲ್ಲದೆ ಸಮುದ್ರಂ ಪೆರ್ಚಿ ಪರಿಯದಂತೆ ಕುತ್ಸಿತಧರ್ಮದ ಮಹಿಮೆಗೆ ಮಿಥ್ಯಾದೃಷ್ಟಿಗಳಪ್ಪ ದುರಾತ್ಮರ್ ಪೆರ್ಚುವರಲ್ಲದೆ ಸದ್ದೃಷ್ಟಿಗಳಪ್ಪ ಮಹಾತ್ಮರ್ ಪೆರ್ಚಲಱಿಯರ್ ॥ ೫೦

ಸಾರಂ ಚಾಮೀಕರಭಂ
ಡಾರಕ್ಕೞ್ಕರ್ತು ಕಾಪನಿಡುವವೊಲೆಲೆ ಸಂ ।
ಸಾರಭಯಮುಳ್ಳ ಭವ್ಯನು
ಮೋರಂತಿರೆ ಕಾದುಕೊಳ್ಗೆ ರತ್ನತ್ರಯಮಂ ॥ ೫೧

ಏಗೆಟ್ಟುದೆಂದು ಹೀನೋ
ದ್ಯೋಗದಿನೇೞದರ ಮಾತನಾಲಿಸಿ ಕಿಡದು ।
ದ್ಯೋಗಿಯಿವನೆನಿಪ ಭವ್ಯಂ
ಬೇಗಂ ತಿಳಿದಾರ್ತು ಪಿಡಿಗೆ ಸದ್ದರ್ಶನಮಂ ॥ ೫೨

ಮತ್ತಂ [ಹೋಮಮಂ ಮಾಡುವ ಬ್ರಾಹ್ಮಣಂ ನೋಂವು ಬೆನ್ನ ನೋಱದೊಡೆ ಸೈರಿಸಲಾಱದೆ ಬೆನ್ನಂ ಪೊಯ್ದುಕೊಳ್ವುದುಂ ಕೆಲದೊಳಿರ್ದವರೆಲ್ಲಂ ಕೊಡನ ತುಪ್ಪದೊಳ್ ಕೈಯನದ್ದಿಕೊಂಡು ತಮ್ಮ ಬೆನ್ಗಳಂ ಪೊಯ್ದುಕೊಂಡರೆಂಬ ಗಾವಿಲಿಕೆಯಂ ಮಾಡಿ] ಲೋಕವಾಡಿದಂತಾಡಿ ಕುಮಾರ್ಗಮಂ ಪತ್ತದೆ ಮೂಢತ್ರಯಮಂ ಬಿಟ್ಟು ಮುಕ್ತಿಯನೆಯ್ದಿ[ಸುವ ಸದ್ಧರ್ಮಮಂ] ನಿರ್ದೋಷಿಯಪ್ಪ ದೇವನುಮಂ [1] [ಮಹಾಪರೀಷಹಂಗಳಂ ಗೆಲ್ವಂತಪ್ಪ ತಪಮುಮಂ] ಪೊರ್ದುವುದೆಂದು ಧನದಮಹಾರಾಜನಾಪ್ತಧರ್ಮದ ತಪದ ಸ್ವರೂಪಮಂ ಪೇೞ್ವುದಂ ಸಂಘಶ್ರೀ ಧರ್ಮಕ್ಕೆ[ಂತುಂ ಬಾರದಿರ್ಪುದುಮೊಂದುದಿವಸಂ ॥ ೫೩

---

1 ಕೊಲೆಯೊಳ್ ಪೊರ್ದದ ಸದ್ಧರ್ಮಮಂ (ಗ)

ಪರಮತಪೋಧನರ್ ದುರಿತಸಂಹರಣರ್ ನಿಖಿಳಾಗಮಾನ್ವಿತರ್
ಗುರುಪದಭಕ್ತರೂರ್ಜಿತಯಶರ್ ಜಿನಧರ್ಮಸರೋರುಹಾರ್ಕರು
ತ್ತಮಗುಣರಿಂದ್ರಶೈಲಸದೃಶಕ್ಷಮರುಗ್ರಕಷಾಯಹೀನರುಂ
ಸುರನರಪೂಜಿತಕ್ರಮಪಯೋರುಹರುನ್ನತಪುಣ್ಯಮೂರ್ತಿಗಳ್ ॥ ೫೪

ಪೂರ್ವವಿದೇಹದಿಂ ಚಾರಣಋಷಿಯರ್ ವೈಕ್ರಿಯಿಕ ಋದ್ಧಿ ಪ್ರಾಪ್ತರಪ್ಪುದಱಿಂ ತಮ್ಮ ಪಂಚಶತಚಾಪೋತ್ಸೇಧಮಪ್ಪ ದೇಹಮಂ ಭರತಕ್ಷೇತ್ರದವರ ದೇಹದಸತು ಪ್ರಮಾಣಂಮಾಡಿ ಪೊಳೆವೆಳವೆರೆಯಂತೆ ತೊಱತೊಱ ತೊಳಗುವ ದೇಹಮನೊಡೆಯರಂತರಿಕ್ಷದೊಳ್ ಪೋಗುತ್ತಿರ್ದರವರಂ ಸಾಮಂತರಾಜಕುಮಾರಮಕುಟಬದ್ಧಪರಿವೃತನಾಗಿರ್ದ ವಾತ್ಸಲ್ಯರತ್ನಾಕರಂ ಕಂಡು ॥ ೫೫

ಖರಕರನುದಯದೊಳರಲದ
ಸರೋಜದಂತಾಗಳೆಯ್ದೆ ಭಕ್ತಿಯ ಭರದಿಂ ।
ಕರಮಲ್ಲದರಲೆ ಮುಖಪಂ
ಕರುಹಂ ಧರಣೀಶನೆರ್ದು ಸಿಂಹಾಸನದಿಂ ॥ ೫೬

ಚಾರಣಋಷಿಯರ ರೂಪಂ
ಚಾರುಗುಣಂ ನೋಡಿ ಸಂತಸಂ ಮಿಗೆ ಹಸ್ತಾಂ ।
ಭೋರುಹಮಂ ಮುಗಿದು ಗುಣಾ
ಧಾರಂ ಕಳಕಳಿಸಿ ನಕ್ಕು ಮಂತ್ರಿಯ ಮುಖಮಂ ॥ ೫೭

ನೋಡಿ, ನೋಡ ಸದ್ಧರ್ಮದೊಳಾದ ಮಹಿಮೆಯುಮೆಂದು ಮುನಿಯುಗಳಮಂ ತೋಱಿ ತಪದೊಳಪ್ಪ ಋದ್ಧಿಗಳುಮಂ ದಾನದಿಂದಪ್ಪ ಮಹಾಭೋಗಂಗಳುಮಂ ಪೂಜೆಯಿಂದಪ್ಪ ಪರಮೈಶ್ವರ್ಯಂಗಳುಮಂ ಸಮ್ಯಕ್ತ್ವದಿಂದಪ್ಪ ನಿರ್ವೃತಿಶ್ರೀಯುಮಂ ಪೇೞೆ, ಸಂಘಶ್ರೀ ಕೇಳ್ದು ಧರ್ಮದ ಪ್ರತ್ಯಕ್ಷ ಫಲಮಂ ಕಣ್ಣಾರೆ ಕಂಡು ಸದ್ಧರ್ಮಾಭಿಮುಖ

ನಾಗಿ ಮನದ ಶಂಕೆ ಪೋಗೆ ಮಿಥ್ಯಾತ್ವಕ್ಕೆ ಪೇಸಿ ಶ್ರಾವಕ ವ್ರತಂಗಳ ನೇಱಿಸಿಕೊಂಡು ದೃಢವ್ರತಿಯಪ್ಪುದುಂ ಧನದಮಹಾರಾಜಂ ರಾಗದಿಂ ದಿರ್ಪುದುಂ] [1] ॥ ೫೮

ದೊರೆಕೊಳ್ಳದ ಜಿನಧರ್ಮಂ
ದೊರೆಕೊಂಡುದು ಧನದಭೂಪನಿಂದೆನಗೆಂದಾ ।
ದರದಿಂ ಸಂಘಶ್ರೀ ಸುರ
ನರಪೂಜಿತಜಿನಪದಾಬ್ಜಮಂ ನಂಬುಗೆಯಿಂ ॥ ೫೯

ಪೊರ್ದಿ ಮತ್ತಿನ ಕುಮಾರ್ಗಾಳಾಪಮುಂ ಪತ್ತುವಿಟ್ಟು ಧನದ ಮಹಾರಾಜಂಗೆ ಪರಮಮಿತ್ರನಾಗಿ ಸಲುತ್ತುಮಿರ್ದೊಂದುದಿವಸಂ [ಅರಸನ ವಂಶಾವತಾರಮುಂ ತದ್ರಾಜಧಾನಿಗೆ ಪ್ರತಿಪಾಲಪುರಮೆಂಬ ಪೆಸರಾದ ಕಾರಣಮುಮಂ ಬೆಸಗೊಳ್ವೆನೆಂಬತಿರ್ಕೆಯಿಂದೋಲಗಂಗೊಟ್ಟಿರ್ದ ಸಮ್ಯಕ್ತ್ವಚೂಡಾಮಣಿಗೆ ಪೊಡೆಮಟ್ಟು ವಿನಯದಿಂ ಕೈಗಳಂ ಮುಗಿದು ಬಿನ್ನಪಮೆಂದು ತನ್ನ ಮನದೆಱಕದಿಂ ಬೆಸಗೊಳ್ವುದುಮರಸಂ ಬುದ್ಧಿ ಸಾಗರನೆಂಬ ಪೆರ್ಗಡೆಯ ಮೊಗಮಂ ನೋಡುವುದುಂ ॥ ೬೦

ಅರಸನ ಚಿತ್ತಮನಱಿದೋ
ಸರಿಸದೆ ಸಮ್ಯಕ್ತ್ವಜಲಧಿಯನ್ವಯಮಂ ವಿ ।
ಸ್ತರದಿಂ ಸಂಘಶ್ರೀಗು
ರ್ವರೆಪೂಜ್ಯಂ ನುಡಿದನಂಬುನಿಧಿನಿಸ್ವನದಿಂ ॥ ೬೧

---

1 ಬಾರದಿರ್ದೊಂದು ದಿವಸಮಾಕಾಶದೊಳ್ ಪೊಳೆವ ಯೆಳೆವೆಱೆಯಂತೆ ತೊಳತೊಳಗುತ್ತ ಪೋಪ ಚಾರಣಋಷಿಯುವನರಸಂ ಕಂಡು ಸಿಂಹಾಸನದಿಂದಿೞಿದು ವೋಲಗದೊಳಿರ್ದ ಸಮಸ್ತಮುಕುಟಬದ್ಧರ್ವೆರಸು ಭಕ್ತಿಯಿಂ ಪೊಡವಡುವುದುಂ ಸಂಘಶ್ರೀ ತಪದ ಮಹಿಮೆಗಾಶ್ಚರ್ಯಂಬಟ್ಟು ತಾನುಂ ಪೊಡಮಟ್ಟು ಮುನ್ನಮು ರಸಂ ತನಗೆ ಪೇಳ್ವ ಧರ್ಮಶ್ರವಣಮನಿಂತು ಮನದೆಗೊಂಡು ನಂಬಿ ಶ್ರಾವಕವ್ರತ ಮಂ ಕೈಕೊಂಡು ಧರ್ಮದೊಳ್ ದೃಢನಾಗಿ (ಗ)

ಶ್ರೀವಾಸುಪೂಜ್ಯಜಿನನ ಮ
ಹಾವನಿಪಾಲಾರ್ಚಿತಾಂಘ್ರಿಪದಯುಗನ ವರ ।
ಶ್ರೀವರನ ತೀರ್ಥಕಾಲದೊ
ಳೀವಿಭುವಿನ ವಂಶಜಂ ಯಶೋಧರನೆಂಬಂ ॥ ೬೦

ಇಕ್ಷ್ವಾಕುವಂಶಪವಿತ್ರನಂಗವಿಷಯದ ಚಂಪಾಪುರಮನಾಳ್ವನಾತನರಸಿ ಸೌಂದರಿಮಹಾದೇವಿ ಯೆಂಬಳಾಯಿರ್ವರ್ಗಂ ಪುಟ್ಟಿದ ಕುಮಾರರನಂತವೀರ್ಯನುಂ ಪ್ರಿಯಬಳನುಮೆಂಬರಂಗಜಸನ್ನಿಭರವರೊಳ್ ಕೂಡಿ ಯಶೋಧರಮಹಾರಾಜಂ ರಾಜ್ಯಂಗೆಯ್ಯುತ್ತುಮಿರ್ದೊಂದು ದಿವಸಂ ತನ್ನೊಳಿಂತೆಂದು ಬಗೆದಂ ॥ ೬೩

ಪರಮಂಡಲದರಸುಗಳಂ .
ನಿರಾಕುಳಂ ವೀರದಿಂದಮಂಜಿಸಿ ಕಪ್ಪಂ ।
ಬೆರಸು ಬೆಸಕೆಯ್ಸಿಕೊಳ್ಳದ
ರರಸದು ಚತುರಂಗದರಸನನುಕರಿಸಿರ್ಕುಂ ॥ ೬೪

ಸಕಲಧರಿತ್ರೀತಲಮುಮ
ನಕಳಂಕಚರಿತ್ರನಾಗಿ ಬೆಸಕೆಯ್ಸಿ ಯಶಃ ।
ಪ್ರಕಟಂಮಾಡದೆ ವೈರಿ
ಪ್ರಕರಮನೆಱಗಿಸದನರಸು ವಿರಸಮೆನಿಕ್ಕುಂ ॥ ೬೫

ಭರದಿಂ ಷಟ್ಖಂಡಭೂಮಂಡಲಮನಿದಿರ ನಿಕ್ಷೇಪಮಂ ಬೇಗದಿಂ ಕೊಂ
ಡುರುತೇಜಂ ತೇಜದಿಂದಬ್ಬರಿಸಿ ಪೊರೆದು ಸದ್ಧರ್ಮಮಂ ರಾಜ್ಯಸೌಖ್ಯೋ
ತ್ಕರನಾಗಿರ್ದರ್ದು ಬೆಂಬೀೞದೆ ನರಕದೊಳಾನಂದದಿಂ ಮುಕ್ತಿವೆತ್ತಂ
ಭರದಿಂ ತ್ರೈಲೋಕ್ಯವಂದ್ಯಂ ಬಗೆವೊಡೆ ಧರಣೀನಾಥರಿಂತಾಗವೇಡಾ ॥

ಅದುಕಾರಣದಿಂ ಸಮುದ್ರಮುದ್ರಿತವಸುಂಧರಾಚಕ್ರದೊಳ್ ಕೀರ್ತಿಲತೆಯುಂ ಧರ್ಮಮುಂ ಪೆರ್ಚುವಂತಾಗೆ ರಾಜ್ಯಂಗೆಯ್ವುದರಸಂ ಕಡಬರಸಂ ಪಾದರಸಂ ನಿಶ್ಚಯಮರಸಲ್ಲೆಂದು ತನ್ನೊಳ್ ಭಾವಿಸಿ ರಿಪು

ನೃಪರನಲ್ಲಾಡಿಸಲುಂ ಪ್ರತಾಪಪರರಪ್ಪ ಭೂಪರನೊತ್ತಿ ಕಪ್ಪಂಗೊಳಲುಂ ಭವ್ಯನಿಕರದ ಮನಕ್ಕಾಹ್ಲಾದಮಂ ಮಾಡಲುಂ ಸದ್ಧರ್ಮಮಂ ಬೆಳಗಲುಂ ವಿರೋಧಿನೃಪಸಾಧನಮಂ ಬೆಂಕೊಳ್ಳಲುಂ ಬಗೆದು ॥ ೬೭

ಕರೆದು ನಿಜಮಂತ್ರಿವರ್ಗಮ
ನರಸಂ ಲೇಸಾಗಿ ತನ್ನ ಬಗೆಯಂ ಪೇೞ್ದು ।
ಚರಿಯಾಗೆ ತಡೆದು ನಿಲ್ಲದೆ
ಬರವೇೞ್ದು ಸಮಸ್ತ ಮಕುಟಬದ್ಧರನಾಗಳ್ ॥ ೬೮

ಶರನಿಧಿಗಳ್ ಘೂರ್ಣಿಸುವಂ
ತಿರೆ ತೂರ್ಯರವಂಗಳೆಸೆಯೆ ಜಿನಪೂಜೆಯುಮಂ ।
ನಿರುಪಮಜಿನಾಭಿಷವಮುಮ
ನರಸಂ ನೆಱೆ ಮಾಡಿ ಮೂಱುದಿವಸಂಬರೆಗಂ ॥ ೬೯

ತದನಂತರಮೊಸೆದು ಮಹೀ
ಸುದತೀಶಂ ವೈರಿಭೂಮಿಪಾಲರ ಚಿತ್ತಂ ।
ಬೆದಱೆ ಯಶೋಧರಭೂಪಾ
ಭ್ಯುದಯಂ ಪೊಯ್ಸಿ ಪ್ರಯಾಣಭೇರಿಯನಾಗಳ್ ॥ ೭೦

ದಕ್ಷಿಣದಿಶಾವರಕೆತ್ತಿ ಮಾಳವ ಮಗಧ ಕರ್ಣಾಟ ಗೊಲ್ಲ ಕರಹಾಟ ಗೌಳ ಲಾಟ ಚೋಳ ಚೇರ ಪಾಂಡ್ಯ ಕಳಿಂಗಾದಿವಿಷಯಂಗಳಂ ಸಾಧಿಸಿ ಕಪ್ಪಂಗೊಂಡು ತನಗೆ ಬೆಸಕೆಯ್ವಂತು ಮಾಡಿ ವೆಂಗಿಮಂಡಲಕ್ಕೆ ವಂದು ತದ್ವಿಷಯದೊಳಾದ ಚೆಲ್ವಿಂಗೆ ಸೋಲ್ತನಗಿರ್ಪೊಡೀವಿಷಯಮೆ ತಕ್ಕುದೆಂದು ತನ್ನ ಮನದೊಳ್ ಬಗೆದು ಸಮಸ್ತಧಾತ್ರೀವಳಯಮುಮಂ ತಾನೊರ್ವನೆ ಪ್ರತಿಪಾಲಿಸಿದನಪ್ಪುದಱಿಂ ಲೋಕಕ್ಕೆ ತನ್ನಳವುಮಂ ಪ್ರಕಟಂ ಮಾೞ್ಪಂತೆ ಪಿರಿದಪ್ಪ ಪೊೞಲಂ ಮಾಡಿ ಪ್ರತಿಪಾಲಪುರಮೆಂದು ಪೆಸರಿಟ್ಟು ಕೊಂಡಾಡಿ ॥ ೭೧

ಸುರುಚಿರರತ್ನಾಳಿಗಳಿಂ
ಸುರರ್ಮ್ಯವಿಮಾನಂಗಳೆನಿಪ ಜಿನಭವನಮುಮಂ ।
ಪುರವರದ ಸುತ್ತಲುಂ ಭಾ
ಸುರತೇಜಂ ಗುಣಕರಂಡಕಂ ಮಾಡಿಸಿದಂ ॥ ೭೦

ತನ್ನಾಳ್ದ ಮಹೀವಳಯದೊ
ಳುನ್ನತಿಯಿಂ ಕೂಡೆ ಪಲವು ಜಿನಮಂದಿರಮಂ ।
ಸನ್ನುತಮೆತಿ ಮಾಡಿದನೆನ
ಲಿನ್ನಾತನ ಧರ್ಮದಳವನೇವಣ್ಣಿಪುದೋ ॥ ೭೧

ಜಿನಪತಿಯೆ ದೇವನಾಜಿನ
ಮುನಿಗಳ್ ಸದ್ಗುರುಗಳಾಜಿನಾಧೀಶ್ವರಭ ।
ಕ್ತನೆ ನಂಟನೆಂಬನಿನ್ನಾ
ಜನಪನ ಸಮ್ಯಕ್ತ್ವದಳವನೇವಣ್ಣಿಪುದೋ][1] ॥ ೭೪

ಸುರರ ವಿನೋದದೊಳ್ ಜಿನರ ಪೂಜೆಯೊಳುತ್ತಮಮುಪ್ಪ ಧಾರಿಣೀ
ಸ್ತುತರೆನಿಸಿರ್ದ ದಿವ್ಯಮುನಿನಾಥರ ಸೇವೆಯೊಳೈದೆ ಭವ್ಯಸಂ
ತತಿಯ ವಿನೋದದೊಳ್ ಪದಪದಾರ್ಥವಿಚಾರಣೆಯೊಳ್ ತಗುಳ್ದು ಭೂ
ಪತಿ ಬುಧಗೋಷ್ಠಿಯೊಳ್ ಜನಪರೋಲಗದೊಳ್ ಮನವೊಲ್ದು ನಿಚ್ಚಲುಂ॥

---

1 ಧನದಮಹಾರಾಜನನ್ವಯರಂ ಮುಂಡಿಯ ವಂಶನೆಂಬಿದಕ್ಕೆ ಕಾರಣ ಮುಮಂ ತದ್ರಾಜಧಾನಿಗೆ ಪ್ರತಿಪಾಲಪುರವೆಂಬ ನಾಮಮಾದ ವೃತ್ತಾಂತಮುಮ ನರಸನ ಸನ್ನಿಧಾನದೊಳ್ ಬುದ್ಧಿಸಾಗರನೆಂಬ ಪೆರ್ಗಡೆಯು ಬೆಸಗೊಳ್ವುದು ಸಂಘ ಶ್ರೀಗೆ ತಿಳಿವಂತಾಗಲಿಂತೆಂದು ಪೇಳ್ದಂ. ವಾಸುಪೂಜ್ಯಭಟ್ಟಾರಕರ ಕಾಲದೊಳೀ ಮಹೀಶ್ವರನ ವಂಶದೊಳ್ ಯಶೋಧರನೆಂಬ ಮಹಾಮಂಡಲಿಕಂ ಇಕ್ಷ್ವಾಕುವಂ ಶತಿಲಕನನಂತವೀರ್ಯನುಂ ಶ್ರೀಧರನುಂ ಪ್ರಿಯಂಬಕನುಮೆಂಬ ಮೂವರ್ಮಕ್ಕಳ್ವೆ ರಸಂಗ ವಿಷಯದ ಚಂಪಾಪುರಮನಾಳುತ್ತಮಿರ್ದು ಪ್ರತಾಪದಿಂ ದಕ್ಷಿಣದೇಶಮಂ ಸಾಧಿಸಿ ತನಗೆ ಮಾಡಿ ವೆಂಗಿಮಂಡಲಂ ಚೆಲುವನಪ್ಪುದಱಿಂದೆನಗೀದೇಶಮುಮಂ ಪ್ರತಿಪಾಲಿಸಿದನಪ್ಪುದಱಿಂ ಪ್ರತಿಪಾಲಪುರವೆಂಬ ಪೆಸರನಿಟ್ಟು (ಗ).

[ಕಾಲಮಂ ಕಳೆಯುತ್ತಿರ್ದೊಂದುದಿವಸಂ ಸಕಲಾಂತಃಪುರ ಪುರಂಧ್ರಿಯರ್ವೆರಸು ವನಕ್ರೀಡೆಗೆ ಪೋಗಿ ॥ ೭೬

ಒಳಯೊಳಂಗಸಂಭವನ [1] ಬೀಡಿನ ಕೆಂಗುಡಿಯಂತೆ ಸುತ್ತಲುಂ
ಲೀಲೆಯಿನಂಕುರಪ್ರಕರದಿಂ ವಿಡಿಯಿಂ ತಳಿರಿಂ ಮುಸುಂಕಿ ಭೂ
ಪಾಲನ ಸೈನ್ಯಮಂ ಪಡೆಪಿನಿಂದಿದಿರ್ಗೊಳ್ವವೊಲಿರ್ದ ಭೂ
ಜಾಳಿಗಳೊಪ್ಪಮಂ ಮನದ ಸೋಲದಿನಚ್ಚರಿವಟ್ಟು ಭೂಭುಜಂ ॥ ೭೭

ನೋಡುತ್ತುಂ ನಂದನವನದೊಳಗೆ ಪೊಕ್ಕು ಜಲಕ್ರೀಡೆಯುಮಂ ಪಿರಿದು ಪೊತ್ತಾಡಿ ನೆಱೆಯೆ ಶೃಂಗಾರಂಗೆಯ್ದು ಗಂಧಸಿಂಧುರಾರೂಢನಾಗಿ ದಿವಿಜೇಂದ್ರಲೀಲೆಯಿಂ ಪುರಕ್ಕೆ ಮಗುಳ್ವಾತಂ ರಾಜಪತ್ನಿಯರುಂ ವಿಳಾಸಿನಿಯರುಂ ವಿನೋದದಿಂ ತಿರಿಯೆ ತಱಂಟಾದ ಮಾವಿನ ಬಱುಗೊಂಬುಗಳಂ ಕಂಡು ಬೆಱಗಾಗಿ ॥] [2] ೭೮

ತಳಿರಿಂದೊಪ್ಪುವ ಚೂತಭೂಜನಿಕರಂ ಮತ್ತೈನ್ಯದಿಂ ನೋಡೆ ನೋ
ಡೆ ಲಯಕ್ಕೆಯ್ದಿದುವಕ್ಕಟಾ ನರರ ಪೆಂಪುಂ ಶ್ರೀಯುಮಾಯುಷ್ಯಮುಂ
ಬಳಮುಂ ಪೆಂಡಿರ ಭೋಗಮುಂ ಮಹಿಮೆಯುಂ ಸೌಭಾಗ್ಯಮುಂ ಭೋಗಮುಂ
ತಿಳವಂದೀತೆಱದಿಂದೆ ಘುಸ್ಮನಱುಗುಂ ಕೇಳಲ್ಲಿ ಸಂದೇಹಮೇ ॥ ೭೯

ಬೂತಿನ ಮಾತಂ ನಂಬಿ ಕಾಳಗಕ್ಕೆ ಪೋಪನುಂ, ಕಳ್ಳನೊಡಗೂಡಿ ವ್ಯವಹಾರಕ್ಕೆ ಪೋಪನುಂ, ಸೋಂಬನೊಡಗೂಡಿ ಕೆಲಸಂಗೆಯ್ಯದಿರ್ಪನುಂ [3] ಬಂದಿಕಾಱನ ಮಾತಂ ನಂಬಿ ಸಂಚಿತಧನಮಂ ತೋರ್ಪನುಂ, ತಳಾಱನ ಮಾತಂ ನಂಬಿ ಮನದ ಪೊಲ್ಲಮೆಯಂ ಪೇೞ್ವನುಂ,

---

1 ಸನ್ನಿಭನ (ಕ. ಖ.)

2 ರಾಜ್ಯಂಗೆಯ್ಯುತ್ತಮಿರ್ದೊಂದು ದಿವಸಂ ವನಕ್ರೀಡೆಯನಾಡಿ ಮಗುಳ್ದು ತಂ ವಿಲಾಸಿನಿಯರಿಂ ಪೊಡವಾಸದೊಳ್ ಪಂಡಿರಿಂ ತಿಱಿಯೆ ತರಂಟಾದ ಮಾವಿನ ಶಾಖೆಯುಮರಂಗಳಂ ಕಂಡು (ಗ).

3 ಕೆಲಸಂಗೆಯ್ವ ವಿಪ್ರನುಂ (ಕ. ಖ.)

ಧೂರ್ತನಂ ನಂಬಿ ಬಾವಿಯೊಳ್ ಬೀಳ್ವನುಂ, ಟಕ್ಕನ ವಚನಮಂ ನಂಬಿ ನೆರೆಯೂರ್ಗೆ ಪೋಪನುಂ, ಡೊಂಬನ ಮಾತಂ ನಂಬಿ ಕೂಸುಗುಡುವನುಂ ಪಂಚೇಂದ್ರಿಯಂಗಳ ವಶಮಾಗಿ ಸಂಸಾರದಲ್ಪಭೋಗಮಂ ಪತ್ತಿ ಧರ್ಮಮಂ ಬಿಟ್ಟು ನೆಗಳ್ವನುಂ, ದುಃಖಕ್ಕಂ ದುರ್ಯಶಕ್ಕಂ ಭಾಜನನಕ್ಕುಮಲ್ಲದೆ ಮಱೆದಪ್ಪೊಡಂ ಸುಖಮನೆಯ್ದಲಾಱಂ ॥ ೮೦

ಜಲಮಂ ಕಡೆದು ಧರಿತ್ರೀ
ತಳದೊಳ್ ಬೆಣ್ಣೆಗೊಳಲಿರ್ಪ ನರನುಂ ವಿಷಯಂ ।
ಗಳೊಳಳ್ಸಿ ನಿಂದು ಸೌಖ್ಯ
ಕ್ಕಳಪುವನುಂ [1] ಮರುಳ ಬಾಲಮಾಗದೆ ಪೋಗಂ ॥ ೮೧

ಮಿಂಚಿನ ಬೆಳಕಂ ನಂಬಿ ಕ
ರಂ ಚಲದಿಂ ಬಟ್ಟೆವೋಪೆನೆಂಬನುಮುಳಿಪಿಂ ।
ಪಂಚೇಂದ್ರಿಯಸುಖಮಂ ಪಿಡಿ
ದಂಚಿತಮೋಕ್ಷಕ್ಕೆ ಪೋಪನೆಂಬವನೆಗ್ಗಂ ॥ ೮೨

ಒಡೆಗೆಱೆಯಂ ನಂಬಿ ಮನಂ
ಬಿಡೆ ಬೆಳಸಿಂಗಾಸೆಗೆಯ್ವನುಂ ಸಂಸೃತಿಯೊಳ್ ।
ಕಿಡುವೊಡಲಂ ನಂಬಿ ಸುಖ
ಕ್ಕೊಡರಿಸುವವನೆಯ್ದಲಾಱನೆಂತುಂ ಫಲಮಂ ॥ ೮೩

ಎನಗೆಂದುಂ ಸಾವಿಲ್ಲೆಂ
ದನವರತಂ ಸೊರ್ಕವೇಡ ಸಾವುಳ್ಳವನೊ ।
ಯ್ಯನೆ ಸಾಪ ಮನುಜರಂ ಕಂ
ಡೆನಗಂ ಸಾವುಂಟು ಬೇಗಮೆಂದಱಿಗಱಿವಂ ॥ ೮೪

---

1 ಎಳಸುವನುಂ (ಗ).

ಸಾವವರಂ ಕಂಡಿರ್ದುಂ
ಸಾವೆಯ್ದಿದ ನರರನೊಯ್ದು ಸುಟ್ಟುಂ ಮತ್ತಂ [1] ।
ಸಾವೆನಗಿಲ್ಲೆಂದಿರ್ಪನೆ
ಗಾವಿಲನಾರಯ್ದು ನೋಡುವೆಂದುರ್ವರೆಯೊಳ್ ॥ ೮೫

ಸಿರಿ ಕೆಟ್ಟು ಕರ್ಮವಶದಿಂ
ತಿರಿವವರಂ ಕಂಡು ಕಂಡು ಶಾಶ್ವತವೆಂದಾ ।
ಸಿರಿಯುಂ ನಚ್ಚಿರ್ಪಾತಂ
ಮರುಳಳಯೊಳ್ ಮತ್ತೆ ಮರುಳ್ಗೆ ಕೋಡೆರಡೊಳವೇ ॥ ೮೬

ಮುನ್ನಿನ ಚಾಗಿ [2] ಗಳಾವೆಡೆ
ಮುನ್ನಿನ ವಿಭವಾನ್ವಿತರ್ಕಳಾವೆಡೆ ಮತ್ತಂ ।
ಮುನ್ನಿನ ಸಧರ್ಮ [3] ರಾವೆಡೆ
ಮುನ್ನಿನ ಚಕ್ರೇಶರೆಲ್ಲಿದರ್ ವಸುಮತಿಯೊಳ್ ॥ ೮೭

ಅಱಿತದೊಳು ಪಿರಿಯನೆಂಬಂ
ಕುಱಿಯಾಗದೆ ನಂಬಿ ಕಿಡದೆ ಸಂಸ್ಕೃತಿಯನಿದಂ ।
ತೊಱೆದು ತಪದಿಂದೆ ತನ್ನಂ
ಪೊಱೆದು ಸದಾಚಾರನಾಗಿ ನೆಗೞಲ್ವೇಡಾ ॥ ೮೮

ನಿಲ್ಲದ ತನುವನಿದಂ ತಳು
ವಿಲ್ಲದೆ ತಪದಿಂದೆ ತವಿಸಿ ಕೈವಲ್ಯಶ್ರೀ ।
ವಲ್ಲಭನಾಗಲ್ವೇಡಾ
ಬಲ್ಲಂ ಸಂಸಾರದಱುವನೆಂಬ ಮನುಷ್ಯಂ ॥ ೮೯

---

1 ನರರನೆಯ್ದೆ ಪುಟ್ಟಿರ್ದುಂ ತಾ (ಗ).
2 ಭೋಗಿ (ಗ). 3 ಸೋದರ (ಗ).

ಎಂದು ಭಾವಿಸಿ ಪಟ್ಟದರಸಿಯರ ರೂಪುಗಳಂ ನೋಡುವುದುಂ, ಎಮಗೆ ಕಾಂಕ್ಷೆಯುಂ ಮಾಡಿದಿರಪ್ಪೊಡೆ ನಿಮ್ಮಾತ್ಮಕಾರ್ಯಕ್ಕೆಡಱಿಲ್ಲದೆ ಸಯ್ತಾಗಲಱಿಯದೆಂದು ಪೇೞ್ವಂತೆ ಕೊಂಕಿದ ಕುರುಳ್ಗಳುಮಂ[1] ಎಮಗೆಱಕಂಮಾಡಿದಿರಪ್ಪೊಡೆ ಕೀನಾಶನ ಸುತ್ತುವಲೆಗೊಳಗಪ್ಪಿರೆಂದು ಪೇೞ್ವಂತಿರ್ದ ಮೇಖಳೆಯುಮಂ, ಎಮಗಪೇಕ್ಷೆಮಾಡಿದಿರಪ್ಪೊಡೆ ಕರ್ಮರಾಜಂ ಪಿಡಿಯಿಂದಲ್ಲಾಡಿಸದೆ ಮಾಣನೆಂದು ಪೇೞ್ವಂ[ತಲ್ಲಾಡುವ[2] ಮೇಲುದುಮಂ, ಎಮಗೆಱಗಿದಿರಪ್ಪೊಡೆ ಅಂತಕನಿಂದಿಱುಂಕೆಪಡುವಿರೆಂದು ಪೇೞ್ವಂತಿರ್ದ ತೊಡೆಯೊಳಿಱುಂಕಿದ ನಿಱಿಯುಮಂ, ಎಮಗೆ ಮನಂಗೊಟ್ಟಿರಪ್ಪೊಡೆ ಸಂಸೃತಿಯ ಕೈಗೊಳಗಪ್ಪಿರೆಂದು ಪೇೞ್ವಂತಿರ್ದ ತೋಳುಮಂ, ಎಮಗೆಟ್ಕಿರ್ತಿರಪ್ಪೊಡೆ ನಾರಕರ ಕಾಲ ತುಳಿಪಕ್ಕೊಳಗಪ್ಪಿರೆಂದು ಪೇೞ್ವಂತಿರ್ದ ಚರಣಾರವಿಂದಂಗಳುಮಂ] ಎಮಗೆ ಮೋಹಿಸಿದಿರಪ್ಪೊಡೆ ನಿರ್ಬುದ್ಧಿಗಳಪ್ಪಿರೆಂದು ಪೇೞ್ವಂತಿರ್ದ ದೊಡ್ಡಿದುವಪ್ಪ ಮುಡಿಗಳುಮಂ, ಎಮಗೆ ಸ್ನೇಹಂಗೆಯ್ದಿರಪ್ಪೊಡೆ ಕುಮಾರ್ಗಕ್ಕೆ ಸಲ್ವಿರೆಂದು ಪೇೞ್ವಂತೆ ಕೆಳಗಿೞಿದ ಬಾಸೆಗಳುಮಂ, ಎಮಗೆ ಬಗೆಗೊಟ್ಟಿರಪ್ಪೊಡೆ[3] ನರಕಕ್ಕಿೞಿವಿರೆಂದು ಪೇೞ್ವಂತೆ ನಸುಜೋಲ್ದ ಮೊಲೆಗಳುಮಂ, ಎಮಗೆ ಪತ್ತುಗೆಯಂ ಮಾಡಿದಿರಪ್ಪೊಡೆ ಸುಖದೊಳ್ ನೆಲೆಸದೆ ತಿರಿವಿರೆಂದು ಪೇೞ್ವಂತೆ ಸಂಚಳಿಸುವ ಕಣ್ಗಳುಮಂ, ನೋಡಿ ವೈರಾಗ್ಯಂ ಪೆರ್ಚೆ, [ಪೆಱರ ಮನೆಯ ಮದುವೆಯೊಳ್ ಲೋಗರಂ ನಂಟುಮಾಡಿಕೊಳ್ವುದ

---

1 ಎಮಗೆಳಸಿದಿರಪ್ಪೊಡೆ ಮೇಲಸಿಯುಂತಾಗದೆ ಮಾಣರೆಂದು ಪೇೞ್ವಂತೆ ಬಡವಾದ ನಡುವುಮಂ ನಮಗಾಸೆಗೆಯ್ದಿರಪ್ಪೊಡೆ ಸಂಸಾರದೊಳ್ ಸುೞಿಯದೆ ಮಾಣಿರೆಂದು ಪೇೞ್ವಂತೆ ಸುೞಿದಿರ್ದ ಭೊಕ್ಕಳುಮಂ ಎಮಗೆ ನಚ್ಚಿದಿರಪ್ಪೊಡೆ ಜನನ ಪಾಶಂ ಪೊತ್ತದೆ ಪೋಗದೆಂದು ಪೇೞ್ವಂತಿರ್ದ ಕೊರಲ ರೇಖೆಗಳುಮಂ ಎಮಗೆಱಗಿದಿರಪ್ಪೊಡೆ ಮೃತ್ಯುರಾಜನ ಪೊಳೆವ ಸರಳ್ಗಳು ಕೇಳ್ವವೆ ಮಾಣವೆಂದು ಪೇೞ್ವಂತಿರ್ದ ದಂತಪಂಕ್ತಿಗಳುಮಂ ಎಮಗಾಸೆಗೆಯ್ದಿರಪ್ಪೊಡೆ ಕೃತಾಂತನ ಕೂರಲಗಿಂಗೊಳಗಪ್ಪಿರೆಂದು ಪೇೞ್ವಂತಿರ್ದ ಸೆಳ್ಳುಗುರುಗಳುಮಂ (ಗ).

2 ಪೇೞ್ವಂತಿರ್ದ ಆಭರಣಗಳುಮಂ (ಗ).

3 ಕೈವೊಯ್ದಿರಪ್ಪೊಡೆ (ಗ).

ವನುಂ ಶಾಶ್ವತಮಲ್ಲದೊಡಲುಮಂ ನಿರಂತರಮಲ್ಲದ ಧನಮುಮಂ ತವಿಸಿ ಧ್ರುವಮಪ್ಪ ಸುಖಮಂ ಪಡೆಯದವನುಂ ಬುದ್ಧಿವಂತರಲ್ಲರೆಂದು ತನ್ನೊಳ್ ನುಡಿದು ಸಂಸಾರವಲ್ಲಿಯುಮಂ ಬೇರ್ವೆರಸಿ ಕಿೞ್ತೀಡಾಡುವ ಕಜ್ಜಮನೆತ್ತಿ ಕೊಂಡು] ರಾಜಮಂದಿರಕ್ಕೆ ವಂದು [ಮಱುದಿವಸಮನಂತವೀರ್ಯರ್ಂ ಮೊದಲಾದ] ಕುಮಾರರಂ ಬರಿಸಿ [ಮುಂದೆ ಕುಳ್ಳಿರಿಸಿ ಯಶೋಧರಮಹಾ ರಾಜನಿಂತೆಂದಂ ॥ ೯೦

ಸಕಳೋರ್ವೀಚಕ್ರಮುಂ ಸಾಧಿಸಿ ಭುಜಬಲದಿಂ ತಾಳ್ದ ವೀರತ್ವದಿಂ ಭೂ
ಪಕದಂಬಂ ಹಸ್ತಕಂಜದ್ವಯಮುಕುಳಿತರಾಗಿರ್ದು ಕೈವಾರದಿಂ ಸೇ
ವಕರಾಗಿರ್ಪಂತು ಮಾಡಿ ಪ್ರಕಟಿಸಿ ಜಸಮಂ ವಾರ್ಧಿಯುಂ ತಾಪಿನಂ ಶ
ತ್ರುಕದಂಬಂ ಬೆರ್ಚಿ ಕಪ್ಪಂದಿಱಿಸಿದೆನೊಲವಿಂದಿನ್ನೆಗಂ ಲೀಲೆಯಿಂದಂ॥

ರಾಜ್ಯಂಗೆಯ್ದಿನ್ನೆನಗೆ ತಡೆಯಲೆಡೆಯಿಲ್ಲ ಮುಕ್ತಿಶ್ರೀಯುಂ ಕುಡುವ ಜಿನೇಂದ್ರಪದಪದ್ಮಂಗಳಂ ಶರಣ್ಬುಗಲ್ವೇೞ್ಪುದು ಧರಾಭಾರಮಂ ಕೈಕೊಳ್ಳಿಮೆಂಬುದುಮನಂತವೀರ್ಯರ್ನಿಂತೆಂದಂ ॥][1] ೯೧

ದೇವ ಮರುಳಲ್ಲೆನೆನಗಂ[2]
ದೇವರ್ ಕೈಕೊಂಬ[3] ತಪಮೆ ಸಾಲ್ಗುಂ ಮುಕ್ತಿ ।
ಶ್ರೀವನಿತೆಯಲ್ಲದಳಪಿ ಮ
ಹೀವನಿತೆಗೆ ಸೋಲ್ತು ಕಿಡುವ ಗಾಂಪನೆನಲ್ಲೆಂ[4] ॥ ೯೨

[ಈಭವದ ಸುಖಕ್ಕೆನಗೆ ಮ
ಹಾಭಯಮೇಗೆಯ್ದುಮೊಲ್ವೆನಲ್ಲೆಂ ನೆಱೆ ಧಾ ।
ತ್ರೀಭಾರಮನವನೀಶ ಧ
ರಾಭಾರಮನಾಂತು ಕಿಡಿಸಲಾಱೆಂ ಸುಖಮಂ ॥ ೯೩

[1] ರಾಜ್ಯಮಂ ಕೈಕೊಳ್ಳಿಮೆಂಬುದುಂ ಅನಂತವೀರ್ಯನುಂ ವಾತ್ಸಲ್ಯರತ್ನಾಕರನುಮಿಂತೆಂದು ಪೇಳ್ದರ್ (ಗ).

[2] ಮರುಳಲ್ಲದೇವಗಂ (ಗ). [3] ಕೈಕೊಳ್ವ (ಗ), [4] ಗಾಂಪವರೆಲ್ಲಂ (ಗ).

ಎನಗೆ ದಯೆಗೆಯ್ವುದವನೀ
ವನಿತೇಶ್ವರ ದಿವ್ಯಮಪ್ಪ ಜಿನದೀಕ್ಷೆಯೆ ಸಾ |
ಲ್ಗೆನಿತೆಂಬುದುಂ ನೃಪಂ ಪ್ರಿಯ
ತನಯನ ಮಾತಿಂಗೆ ಪೆರ್ಚೆ ಮನದಾದರದಿಂ || ೯೫

ಈತಂ ಸಂಸಾರಕ್ಕತಿ
ಭೀತಂ ರಾಜ್ಯಕ್ಕೆ ಮೋಹಮುಳ್ಳವನಲ್ಲಂ
ಭೂತಳಭಾರಮನೆತ್ತುವೆ
ನೀತನ ತಮ್ಮಂಗೆ ತಡೆಯದೀಗಳ್ ಮುದದಿಂ || ೯೬

ಎಂದು ಯಶೋಧರಮಹಾರಾಜಂ ಶ್ರೀಧರಕುಮಾರನ ಮೊಗಮಂ ನೋಡಿ ವೆಂಗಿಮಂಡಲಂಮೊದಲಾದ ಸಮುದ್ರಮುದ್ರಿತಮಹೀವಳಯಮೆಲ್ಲಮಂ ಕೊಂಡು ರಾಜ್ಯಲಕ್ಷ್ಮೀಮನೋಹರನಾಗಿ ಸುಖದಿಂದಿರ್ಪುದೆಂಬುದುಂ ವಾತ್ಸಲ್ಯರತ್ನಾಕರಂ ಮುಗುಳ್ನಗೆನಕ್ಕಿಂತೆಂದಂ || ೯೭

ದೇವರ್ ಧರಿಯಿಸುವಿಳೆಯಂ
ಭೂವಳಯದೊಳಮ್ಮವಂದಿಗರ್ ತಮ್ಮಳವಂ |
ಭಾವಿಸದೆ ಸೊಕ್ಕಿ ಪೆಂಪಿಂ
ಗಾವಿಲತನದಿಂದ ಮುಕ್ತಿ ಧರಿಯಿಸಲಳವೇ ||] ೯೮

ದೇವರ್ ದಯೆಗೆಯ್ವೊಡೆ ಸ
ದ್ಭಾವದಿನಪವರ್ಗಲಕ್ಷ್ಮಿಯುಂ ತತ್ಕ್ಷಣದಿಂ |
ದೀವ ಜಿನರಾಜದೀಕ್ಷೆಯ
ನೀವುದು ಪೆಱತೇವುದೆಮಗೆ ನಾಡುಂ ಬೀಡುಂ || ೯೯

ಕಳವೆಯಕೂಳುಮಂ ತಿಳಿದುಪ್ಪುಮುಮಂ ಬಿಸುಟ್ಟು ನುಚ್ಚುಗೂಳುಮನೆಣ್ಣೆಯುಮನುಣ್ಬನುಮಂ ಬಾೞೆಯ ಪಣ್ಣುಮಂ ಖಂಡಶರ್ಕರೆಯುಮಂ ಬಿಸುಟು ಎೞೆಯ ಮಣ್ಣಂ ಮೆಲ್ವನುಂ ಪಾಸುಮಂ ಬಿಸುಟ್ಟು ಸಱಿಯ ಮೇಲೆ ಪಡುವನುಂ ನಂಟರುಮಂ ಕೆಳೆಯರು

ಮಂ [1] ಬಿಟ್ಟು ದಾಯಿಗರಂ ಪೊರ್ದುವನುಂ ಕುದುರೆಯುಮನಾನೆಯುಮ ನೊಲ್ಲದೆ ನಾಯನೇಱುವನುಂ ಅಮೂಲ್ಯಮಪ್ಪ ಅಣುವ್ರತಮಹಾವ್ರತಂ ಗಳುಮನುದಾಸೀನಂಗೆಯ್ದು ಸಂಸಾರದಲ್ಪಸುಖಮಂ ಪೊರ್ದುವನುಂ ಮರುಳರಲ್ಲದೆ ಚತುರರಲ್ಲರ್ ॥ ೧೦೦

[ಅದಱಿಂ ಕೈವಲ್ಯಶ್ರೀ
ಸುದತಿಯನಾರ್ತೀವ ಜೈನದೀಕ್ಷೆಯನೆ ಶುಭಾ ।
ಭ್ಯುದಯಮನೆ ಕುಡುವುದಲ್ಲದೆ
ವಿದಿತಂ ದಯೆಗೆಯ್ಯಬೇಡ ರಾಜ್ಯಶ್ರೀಯುಂ] ॥ ೧೦೧

ಎನಗೆಳ್ಳನಿತುಂ ಸಾಸವೆ
ಯನಿತುಂ ಸೀರನಿತು ಮೋಹಮಿಲ್ಲವನಿಯುಮೇ ।
ಲೆನಗೆ ಪಿರಿದಪ್ಪ ಮೋಹಂ
ಜಿನದೀಕ್ಷೆಯೊಳಂತು ದೇವ ನಿಶ್ಚಯದಿಂದಂ ॥ [2] ೧೦೨

ಎಂದು [ಪಲವಂ ನುಡಿಯುದೊಂದನೆ ಪರಿಚ್ಛೇದಮಾಗಿ ನುಡಿದ-ಮಾಣ್ಬುದುಂ ಯಶೋಧರಮಹಾರಾಜಂ ಸಮ್ಯಕ್ತ್ವಚೂಡಾಮಣಿಯುಮನದ ನಿರ್ಮಳಿಕೆಯನಱಿದು ಪೆಱತಂ ನುಡಿಯದೀಪ್ರಿಯಬಂಧುಕುಮಾರಂಗೆ ಪಟ್ಟಮಂ ಕಟ್ಟಿ ಧರಾಭಾರಮಂ ಕೊಟ್ಟು ಮಯ್ಸುಖಕ್ಕೆಳಸದನಂತವೀರ್ಯಕುಮಾರನುಂ ವಾತ್ಸಲ್ಯರತ್ನಾಕರನುಂಬೆರಸು ಪೊೞಲಂ ಪೊಱಮಟ್ಟು ಪೋಗಿ] [3] ವಿಶ್ವಸೇನರೆಂಬಾಚಾರ್ಯರಲ್ಲಿ ಜಿನದೀಕ್ಷೆಯಂ ಕೈಕೊಂಡು ಸಕಳಶ್ರುತಮುಮನೋದಿ ॥ ೧೦೩

---

1 ನಂಟರ ಕೆಳೆಯುಂ (ಗ)

2 ಎಮಗೆ ಮನದೊಳಗೆ ಕೇಳ್ ಸಾ । ಸವೆಯನಿತುಂ ಮೋಹಮಿಲ್ಲ ಭೂವನಿತೆಯುಮೇ ॥ ಲೆಮಗೆ ಪಿರಿದಪ್ಪ ಮೋಹಂ । ಭುವನೇಶ್ವರ ॥ ಜೈನದೀಕ್ಷೆಯೊಳ್ ನಿಶ್ಚಯದಿಂ (ಗ)

3 ಮಱುಮಾತಿಂಗೆಡೆಯಿಲ್ಲದಂತು ನುಡಿವುದುಂ ಪ್ರಿಯಂಬಕಕುಮಾರಂಗೆ ಪಟ್ಟಮಂ ಕಟ್ಟಿ ಮೂವರುಂ (ಗ)

ಗುರುಪದಸೇವೆಯಿಂದಮುಳಚಿತ್ತದಿಸುಜ್ಜ್ವಲಮಪ್ಪದೊಂದುದು
ರ್ಧರಚರಿತಂಗಳಿಂದಮರ್ದ ಸಂಯಮದಿಂ ಮನದೋಜೆಯಿಂ ಮನಂ
ಮುರಿಯದೆ ಬಾಹ್ಯದಿವ್ಯತಪದುನ್ನತಿಯಿಂ ಪಲವುಂ ಪರೀಷಹೋ
ತ್ಕರದೊಳಮಿರ್ದ ಬಾಧೆಗೆ ಮನಂಗಿಡದೂರ್ಜಿತಮಪ್ಪ ಧೈರ್ಯದಿಂ ||

[ಇವರ್ಗೆ ದೊರೆಯಿಲ್ಲ ಬಗೆವೊಡೆ
ಭುವನದೊಳಂದರ್ತಿವೆರಸು ಭಕ್ತಿಯು ಭರದಿಂ |
ಪ್ರವರಗುಣಾಢ್ಯರ್ ಬಣ್ಣಿಸೆ
ವಿವಿಧಗುಣರ್ ತಪದೊಳುತ್ತರೋತ್ತರಮಾದರ್ || ೧೦೫

ಮುನ್ನಿನ ಸಿರಿಯಂ ನೆನೆಯದೆ
ಮುನ್ನಿನ ಲೀಲೆಗಳನೆಯ್ದೆ ಪಂಬಲಿಸದೆ ಭೂ |
ಪೋನ್ನತರರಟ್ಟ(?)[1] ತಪದೊಳ್
ಮುನ್ನಿನ ಸಚ್ಚರಿತರೋಜೆಗೆಣೆಯನೆ ನೆಗೞ್ದರ್] || ೧೦೬

ಬೆಂಬೀೞದೆ ಪೆಱಪೆಱತಂ
ಪಂಬಲಿಸದೆ ಕರ್ಮವೈರಿಗೆಡೆಗುಡದೆ ಶರೀ |
ರಂ ಬಡವಾದಪ್ಪುದೆನ್ನದೆ
ಡೊಂಬಿಲ್ಲದೆ ಶುದ್ಧವೃತ್ತಿಯೊಳ್ ನೆಱೆ ನೆಗೞ್ದರ್ || ೧೦೭

ಎಂತುಟು ಜಿನೇಂದ್ರವಚನಮ
ದಂ ತಪ್ಪದೆ ಪೆಱರ ಪೂಜೆಗೆಳಸದೆ ಸುಖಮಂ |
ಚಿಂತಿಸದೆ ನಿರ್ವೃತಿಶ್ರೀ
ಕಾಂತೆಯ ಕೂಟಮನೆ ಬಯಸಿ ನೆಗೞ್ದರ್ ತಪದೊಳ್ || ೧೦೮

ಪಾಪಸೆಗಲ್ಲಂ ಮೆಟ್ಟಿದಂತೆ ಸನ್ಮಾರ್ಗಮಂ ಮೀಱಿ ಪರಿಯದೆ [ತ್ರಿದಂಡರಹಿತರುಂ ತ್ರಿಶಲ್ಯವರ್ಜಿತರುಂ ಚತುಷ್ಕಷಾಯದೂರರುಂ ತ್ರಯೋದಶವಿಧಚಾರಿತ್ರಸಂಪನ್ನರುಂ ಪಂಚಾಚಾರಯುಕ್ತರುಂ ದಶ

---

1 ಭೂಪೋನ್ನತರದಬಿಟ್ಟ (ಕ)

ಧರ್ಮಧರರುಮಾಗಿ] ಗುರುಗಳಾಜ್ಞೆಯಿಂ ಗುರುಗಳನಗಲ್ದು ವಿಹಾರಿಸುತ್ತುಂ ಬಂದು ಜಟಾಶಿಖರಮೆಂಬ ಪರ್ವತಮನೆಯ್ದಿ ತದ್ಗಿರಿಯೊಳ್ ಯಶೋಧರಭಟ್ಟಾರಕರುಮನಂತವೀರ್ಯಮುನಿಪುಂಗವನುಂ ಅಷ್ಟಕಕರ್ಮಮಂ ಕಿಡಿಸಿ [1] ಪರಮಶ್ರೀಮನಃಪ್ರಿಯರಾದರಕಳಂಕರೆನಿಸಿದ ಶ್ರೀಧರಾಚಾರ್ಯರಾಗಿರಿಯೊಳುಗ್ರೋಗ್ರಮಪ್ಪ ತಪದೊಳ್ ನೆಗೞುತ್ತುಮಿರ್ದರನ್ನೆಗಂ ॥ ೧೦೯

ಪ್ರತಿಪಾಲಪುರಮುಮಂ ಸಂ
ತತಮವನೀತಳಮುಮಂ ಮಹೋನ್ನತಿಯಿಂದು ।
ದ್ಧತವೈರಿದರ್ಪದಳನಂ
ನುತಸತ್ಪ್ರಿಯಬಲಕುಮಾರಕಂ ಪಾಲಿಸುತುಂ ॥ ೧೧೦

[ಸುಖಸಂಕಥಾವಿನೋದದಿಂದಿರ್ಪುದುಮೊಂದುದಿವಸಂ ವನಪಾಲಕನೊರ್ವಂ ಬಂದು ಜಿನಸಮಯವಾರ್ಧಿವರ್ಧನಚಂದ್ರನಂ ಕಂಡು ತನ್ನ ತಂದ ಪೊಸಮಾವಿನೆಳದಳಿರುಮಂ ಜಾದಿಯ ಮಲ್ಲಿಗೆಯ ಪಾದರಿಯ ಪೊಸಪುಷ್ಪಮುಮಂ ಕೊಟ್ಟು ಪೊಡೆಮಟ್ಟು ॥ ೧೧೧

ಅಳಿಗಳ ಗಾಯನಂ ನಿಮಿಱೆ ಕೋಕಿಲನಿಸ್ವನಮುಣ್ಮೆ ಕೇಕಿಸಂ
ಕುಳರವಮೊಪ್ಪೆ ಕೆಂದಳಿರ ಗೊಂದಣದಿಂ ಸಹಕಾರಭೂರುಹಾ
ವಳಿ ಕಡುರಮ್ಯಮಾಗೆ ವನಜಂಗಳರಲ್ದಿರೆ ಕೂಡೆ ಚಂದ್ರನು
ಜ್ಜ್ವಳಿಸಿ ವಿನೋದದಿಂ ಪದೆಯೆ ಬಂದನೊರಲ್ದು ವಸಂತವಲ್ಲಭಂ ॥ ೧೧೨

ಅಂತು ಬಂದ ವಸಂತಮಾಸಮಂ ವೃಥೆಮಾಡದೆ ವನಕ್ರೀಡೆಗೆ ಬಿಜಯಂಗೆಯ್ವುದೆಂದು ಬಿನ್ನಪಂಗೆಯ್ವುದುಂ, ಪ್ರಿಯಬಳಕುಮಾರಂ ವನಪಾಲಕನ ಮಾತಿಂಗೆ ಮೆಚ್ಚಿ ಪಸಾಯದಾನಮಂ ಕೊಟ್ಟು ಮನಮಂ ಲೇಸುಮಾಡೆಂದು ಕಳುಪಿ ಮೞುದಿವಸಮುತ್ಸಾಹಭೇರಿಯಂ ಪೊಯ್ಸಿ ॥

---

1 ಅಷ್ಟವಿಧಕರ್ಮನಿರ್ಮೂಲನಂ ಮಾಡಿ (ಗ)

ನೆಲೆವೊಲ್ ಶೋಭೆವೆತ್ತಿರೆ ಮುಖಾಂಬುರುಹಂ ಕಡುರಮ್ಯವಾಗೆ ಸಂ
ಚಲನಯನದ್ವಯಂ ಪೊಳೆಯೆ ಕರ್ಣಯುಗಂ ಕರವೊಪ್ಪೆ ನೀಲಕುಂ
ತಲದ ಬೆಡಂಗು ಶೋಭೆವಡೆದುನ್ನತಿವೆತ್ತಿರೆ ಗಾಡಿವೆತ್ತ ಕೋ
ಮಲೆಯರಿನೊಪ್ಪಿ ಬಂದನವನೀಶ್ವರನಂದಮರೇಂದ್ರಲೀಲೆಯಿಂ || ೧೧೪

ಅಂತು ಬಂದು ತನ್ನ ಬರವಿಂಗೆ ತೋರಣಂ ಗಟ್ಟಿದಂತಿರ್ದ ಮಾಧವೀಲತೆಗಳುಮಂ, ತನ್ನ ಬರವಿಂಗೆ ವನದೇವತೆಯರ್ ನೆರೆದು ಮಂಗಳಂ ಪಾಡುವಂತೆ ಮೃದುನಿನಾದದಿಂ ಪಾಡುವ ಮೊಱೆದುಂಬಿಗಳುಮಂ, ತನ್ನ ಪಡೆಯುನಿದಿರ್ಗೊಳ್ವಂತಿರ್ದ ಸರೋವರಗಳುಮಂ ತನ್ನ ಪಡೆಗೆ ವಸಂತರಾಜಂ ಬಿರ್ದಂ ಸಮೆದನೆಂಬಂತೆ ತನಿರಸದಿಂ ತೀವಿ ಬೀಗಿ ಬೆಳೆದ ಪಣ್ಗಳ ಭಾರದಿಂ ಮುಱಿವಂತಿರ್ದ ಮೈಂದವಾಟೆಗಳುಮಂ, ತನ್ನ ಬರವಿಂಗೆ ಪೂವಲಿಗೆದಱಿದರೆಂಬಂತೆ ನೆಲದೊಳಿಕ್ಕಿರ್ದ ಸುರಗಿಯ ನಾಗಸಂಪಗೆಯ ಪಾದರಿಯ ಪೂಗಳುಮಂ, ತನ್ನ ಪಡೆಗೆ ಬಿಡಲೆಂದು ಕಾಮದೇವಂ ಸಮೆದ......ಲತಾಮಂಟಪಂಗಳುಮಂ ನೋಡುತ್ತುಂ, ನಂದನವನದೊಳಗೆ ಪೊಕ್ಕು ಪಿರಿದುಬೇಗಂ ತನ್ನ ಮನದಲಪು ಪೋಪಂತೆ ವನಕ್ರೀಡೆಯುಮನಾಡಿ ಮತ್ತಂ ತದ್ವನದಿಂ ಪೊಱಮಟ್ಟು ಪೋಗಲಾಱದೆ ವಿನೋದದಿಂ ತೊಟಲುತ್ತುಮೊಂದುಲತಾಮಂಟಪದೊಳಗೆ ಪೊಕ್ಕು ಕರ್ಪುರದ ಜಗುಲಿಯುಮೇಲೆ ಕಂಕೆಲ್ಲಿಯ ಪಲ್ಲವಂಗಳಿಂ ಸಮೆದ ತಳರ್ವಾಸಿನಮೇಲೆ ಪವಡಿಸಿ || ೧೧೫

ನರನಾಥಂ ಸುಖದಿಂದಿರೆ
ಕರಮುಗ್ರವಿಷಾಹಿಯಪ್ಪ ಪಾವೆಯ್ತಂದೋ |
ಸರಿಸದೆ ನೃಪನುಂಗುಟಮಂ
ಭರದಿಂದಂ ಕಪ್ಪೆಯೆಂದು ಪಿಡಿವುದುಮರಸಂ] [1] ೧೧೬

---

1 ಅಂತು ಸುಖದಿನಿದಿರ್ದೊಂದುದಿವಸಂ ವನಕ್ರೀಡೆಯುನಾಡಿ ವಲ್ಲಭೆವೆರಸು ಕೆಂದಳಿರ್ವಾಸಿನ ಕೆಳಗಣ ಲತಾಮಂಟಪದೊಳ್ಪಟ್ಟ ಕರ್ಪುರದಿಂ ಸುಗಂಧಕ್ಕೆಳಸಿ ಬಂದ ಘಾವು ತಲೆಯುಂ ಪಿಡಿವುದುಂ (ಗ)

ಬೆಱಗಾಗಿ ತನ್ನ ತನುವಂ
ತೊಱೆದು ಮಹಾರಾಜ್ಯಲಕ್ಷ್ಮಿಯುಮಂ ನೆನೆದು ಕರಂ ।
ಮಱುಗದೆ ಜಿನೇಂದ್ರಪದವಂ
ಸೆಱೆವಿಡಿದಂ ಜ್ಞಾನಿಯುಪ್ಪವಂ ಕೆಟ್ಟಪನೇ ॥ ೧೧೭

ಜಿನಪದಯುಗವಾರಿಜಮಂ
ನೆನೆಯುತ್ತುಂ ರಾಜ್ಯಮೋಹಮಂ ಬಿಟ್ಟು ಧರಾ ।
ವನಿತೇಶಂ ಗೀರ್ವಾಣಾಂ
ಗನೆಯರೊಳೊಡಗೂಡಿದಂ ಸಮಾಧಿಯ ಫಲದಿಂ ॥ ೧೧೮

[ಇತ್ತಲಿಂದ್ರಪ್ರಭನೆಂಬ ಪೆರ್ಗಡೆ ಪ್ರಿಯಬಳಕುಮಾರಂ ಪರಲೋಕಪ್ರಾಪ್ತನಪ್ಪುದನಱಿದು ಮನದೊಳ್ ಮಲಮಲಮಱುಗಿ ॥ ೧೧೯

ಸಂತತಿಯಿಲ್ಲದ ರಾಜ್ಯಂ
ಪಿಂತಾದುದು ವೈರಿಭೂಭುಜರ್ಗೆಡೆಯಾಯ್ತು ।
ನ್ನೆಂತಕ್ಕುಮೊ ಪೇೞ್ ಬಿದಿಯೆಂ
ದಂತರದೊಳ್ ಮಱುಗಿ ಕಂದಿದು ಬೆದೆಬೆದೆಬೆಂದಂ ॥ ೧೨೦

ಅಂತು ಕುಮಾರನ ಸಾವಿಂಗಂ ಪೆಱಗಣ ರಾಜ್ಯಭಾರಮಂ ತಾಳ್ವಂತಪ್ಪ ಸಂತತಿಯಿಲ್ಲದುದಕ್ಕಂ ಬೆಱಗಾಗಿ ಕುಮಾರಂ ಸತ್ತನೆಂಬುದ ನಾರ್ಗಮಱಿಪದೆ ಗುಪ್ತದಿಂದರಸಂ ವನಕ್ರೀಡೆಯಾಡಿ ಬೞಲ್ದನೆಂದು ರಾಜಭವನಕ್ಕೆ ತಂದು ರಾತ್ರಿಯೊಳ್ ಸಂಸ್ಕರಿಸಿ ನಾಡ ಗಡಿಗೆ ಪರಮಾಂಡಲಿಕರಿಂ ಬಾಧೆಯಾಗದಂತೆ ದಂಡಂ ಪೇೞ್ದು ವಾತ್ಸಲ್ಯರತ್ನಾಕರಂ ಋಷಿನಿವಾಸಪರ್ವತತೊಳಿರ್ದನೆಂಬುದಂ ಚರರ ದೆಸೆಯಿಂದಮಱಿದು ತನ್ನ ಪಿರಿಯ ಮಗಂಗರಸನವಸಾನಮನಱಿಪಿ ಬೀಡಿನ ಕಾಪಂ ಪೇೞ್ದು ॥

ತೆಂಕಣ ಭೂಪಾಲಕರಂ
ಭೋಂಕನೆ ಪರಿದೆಯ್ದಿ ದರ್ಪಮಂ ಕಿಡಿಸಿ ಮನಂ ।
ಶಂಕಿಸದೆ ಕಾದಿ ಚಲದಿಂ
ದಂ ಕಪ್ಪಂದರ್ಪುದೆಂದು ವೆಂಗಿಯ ನಾಥಂ ॥ ೧೨೨

ಎನಗೆ ಬೆಸಸಿದನೆಂದು ಕೃತಕವಚನಮಂ ಪೊಱಲೊಳಗೆಲ್ಲಂ ಪ್ರಕಟಂಮಾಡಿ ಚಾತುರಂಗಬಲಂಬೆರಸು ಪೊಱಮಟ್ಟು ಕತಿಪಯಪ್ರಯಾಣಂಗಳಂ ಋಷಿನಿವಾಸಪರ್ವತಮನೆಯ್ದಿ ಪರ್ವತನಿತಂಬದೊಳ್ ಬೀಡಂಬಿಟ್ಟು ಕತಿಪಯಜನಂಬೆರಸು ಪರ್ವತಮನೆಯ್ದೆಱಿ ಜಿನಭವನಂಗಳಂ ಪೂಜಿಸಿ ಶ್ರೀಧರಾಚಾರ್ಯರಲ್ಲಿಗೆವಂದು ತನ್ಮುನೀಂದ್ರನ ಪಾದಪಂಕಜಂಗಳಂ ಪಲವರ್ಚನೆಯಿಂದರ್ಚಿಸಿ ಪೊಡೆವಟ್ಟು ಮುಂದೆ ಕುಳ್ಳಿರ್ದು ಕಿಱಿದು ಬೇಗಂ ಧರ್ಮಮಂ ಕೇಳ್ದು ಕೃತಕವಿನಯದಿಂದಿಂತೆಂದಂ ॥ ೧೨೩

ಪರಮಮುನೀಶ್ವರ ನೀವೀ
ಗಿರಿಯೊಳ್ ನೆಲೆಸಿರ್ದಿರೆಂಬುದಂ ಕೇಳ್ದು ಸದಾ ।
ಚರಿತಗುಣರಾಶಿ ನಿಮ್ಮಯ
ಚರಣಸರೋಜಾತಯುಗಳಮಂ ನಿಚ್ಚಯದಿಂ ॥ ೧೨೪

ಕಾಣ್ಬೆವೆಂಬಾರ್ತಿಯಿಂ ವೆಂಗಿಮಂಡಲದಿಂ ಬಂದೆವಾವಪ್ಪೊಡೆ ಪರದರೆವಾನ್ಮುಯದ (?) ಶ್ರಾವಕರೆವಿನ್ನುಂ ನಿಮ್ಮಡಿಗಳ ಶ್ರೀಪಾದಮಂ ಕಾಣಲೆಂದು ಪಲಂಬರುಂ ಪಿರಿದಪ್ಪ ವ್ರತಂಬೆರಸು ಬಂದು ಪರ್ವತದ ಕೆಳಗಿರ್ದರೀಗಿರಿಯನೇಱಲಾಱರ್ ಕಡುವೃದ್ಧರವರಂ ನಿಮ್ಮಡಿಗಳ್ ಬಿಜಯಂಗೆಯ್ದು ಪರಸಿ ಸಂತೋಷಮಂ ಮಾಳ್ಪುದೆಂದು ಪ್ರಾರ್ಥಿಸಿ ಮುಗುಳ್ವೆಂದಿಸಿ ತಮ್ಮ ಬಿಟ್ಟಬೀಡಿಂಗೆ ಬಂದರನ್ನೆಗಂ ಮುನಿಮುಖ್ಯನವರ ಮಾತಿಂಗೆ ಕರುಣಿಸಿ ಮಧ್ಯಾಹ್ನದೊಳ್ ಚರ್ಯಾಮಾರ್ಗದಿಂ ಪೊಱಮಟ್ಟು ॥

ಅವರ ಮಾತುಗಳ್ಲಮಂ ಮುನಿಪುಂಗವಂ ದಿಟಮೆಂದು ಭೂ
ಭುವನವಂದಿತಪಾದಪಂಕಜನಾದರಂಬೆರಸರ್ತಿಯಿಂ
ವಿವಿಧಶೀಲಗುಣಾಬ್ಧಿ ನಂಬಿದನಂತು ಮೆಲ್ಲನೆ ಶೈಳದಿಂ
ದವನಿಗೆಯ್ತರೆ ನೋಡಿ ಕಂಡು ಮನೋನುರಾಗದಿನಾಖಳಂ ॥ ೧೨೫

ಭಕ್ತಿಪೂರ್ವಕಂ ನಿಲಿಸಿ ನಿದ್ರೆ ಪಿರಿದಪ್ಪಂತಪ್ಪ ಮರ್ದುಗಳಂ ಕೂಡೊಳ್ ಬೆರಸಿ ಕಯ್ಯಲಿಕ್ಕುವುದುಂ ಶ್ರೀಧರಮುನಿನಾಥನವರ ಕಪಟ

ವೃತ್ತಿಯನಱಿಯದುಂಡು ಸೊಕ್ಕಿ ಮೆಯ್ಯಱಿಯದೆ ಟಕ್ಕನಿಕ್ಕಿದಂತು ಕೆಡೆದು ನಿದ್ರೆಗೆಯ್ವುದುಂ ಪೆರ್ಚಿ ಪಿರಿದಪ್ಪ ಯತ್ನದಿಂ ಸಿವಿಗೆಯೊಳಿಕ್ಕಿ ದಾಳಾದಾಳಿಯಿಂ ಬಂದು ಪ್ರತಿಪಾಲಪುರಮಂ ಪೊಕ್ಕು ಮಱೆದು ಪಟ್ಟ ಮುನಿಪತಿಗೆ ರತ್ನಾಭರಣಂಗಳಂ ತುಡಿಸಿ ಸುಗಂಧದ್ರವ್ಯಂಗಳಂ ಪೂಸಿ ದಿವ್ಯವಸ್ತ್ರಮನುಡಿಸಿ ರೋಮಜವೆಂಬ ಪಾಸಿನಮೇಲೆ ಪಡಿಸಿ ಸುತ್ತಿ ಮುತ್ತಿ ಬಂದೋಲಗಿಸುತ್ತುಮಿರ್ಪುದುಂ ಮೂಱನೆಯ ದಿವಸಕ್ಕೆ] [1] ॥

ಪರಮಗುಣಾಂಬುರಾಶಿ ಖಳನಿಕ್ಕಿದ ಮದ್ದಿನ ತೀವ್ರಮಪ್ಪ ನಿ
ಷ್ಠುರವಿಷದುಕ್ಕು ಪೋಗೆ ತನು ಘರ್ಮನಲರ್ಮೆಯೆ ನೊಚ್ಚಿ ತಾಗೆ ತ
ದ್ಗಿರಿಯೊಳ್ ನಿಂದೆನೆಂಬ ಬಗೆಯಿಂ ಮುಱಿದೊಯ್ಯನೆ ಮೆಯ್ಯನಾದರಂ
ಬೆರಸು ನಿಮಿರ್ಚೆ ಕಾಲನೊದೆದೆರ್ದು ಕರಂಗಳನಾತ್ಮದೇಹಮಂ ॥ ೧೦೪

ತಡವರಿಸಿ ನೋಡಿ ತುಡಿಸಿದ ತೊಡವುಗಳುಮನುಡಿಸಿದ ಸೀರೆಯುಮಂ ಪೂಸಿದ ಶ್ರೀಖಂಡಮುಮಂ ಪಟ್ಟಿರ್ದ ಪಾಸುಮಂ ಸುತ್ತಿ ಮುತ್ತಿರ್ದ ಮಕುಟಬದ್ಧರುಮಂ ಕಂಡು ಬೆಱಗಾಗಿ ॥ ೧೦೫

ಸುರವರಪೂಜ್ಯಮಪ್ಪ ದಿವಿಜೇಶ್ವರಲಕ್ಷ್ಮಿಗಮೂಲ್ಯಮಪ್ಪ ಸೌಂ
ದರಮೆನಿಸಿರ್ದ ನಿರ್ವೃತಿಯನೆಯ್ದಿಸಲಾರ್ಪ ಸಮಸ್ತದೋಷದೊಳ್

---

1 ಇತ್ತಲಿಂದ್ರಪ್ರಭನೆಂಬ ಪ್ರಧಾನಂ ಕುಮಾರನ ಸಾವನಱಿದು ಸಂತತಿಯಿಲ್ಲದುದಕ್ಕೆ ಮಲ್ಮಲ ಮಱುಗಿ ಶ್ರೀಧರಾಚಾರ್ಯರ್ ದಿಗಂಬರಗಿರಿಯೊಳಿರ್ದುದನಱಿವನಪ್ಪುದಱಿಂ ತನ್ನಮಗಂಗೆ ಕುಮಾರನ ಕಾರ್ಯಮನಱಿಪಿ ಪುರಕ್ಕೆ ಕಾಪಾಗಿರಿಸಿ ದಕ್ಷಿಣಭಾಗದವರನಳವಡಿಸಿ ಬಂದಪೆನೆಂದು ರುಷಿನಿವಾಸಪರ್ವತಕ್ಕೆ ಬಂದು ಶ್ರೀಧರಾಚಾರ್ಯರಂ ವಂದಿಸಿ ಮುಂದೆ ಕುಳ್ಳಿರ್ದು ಧರ್ಮಮಂ ಕೇಳ್ದು ತದನಂತರಂ ನಿಮ್ಮ ಶ್ರೀಪಾದಮಂ ಕಾಣಲೆಂದು ಪಲಂಬರುಂ ವ್ರತವಿಶೇಷದಿಂ ದೂರದೇಶದೊಳಿರ್ದು ಬಂದ ವೃದ್ಧರಪ್ಪುದಱಿಂ ಪರ್ವತಮನೇಱಲಾಱದಿರ್ದಪರೆಂಬುದುಮವರ್ಕರುಣಿಸಿ ತದ್ಗಿರೀಂದ್ರದಿಂದಿಳಿವವರ್ ಬಿಟ್ಟ ಬೀಡಿನೊಳು ಚರಿಗೆಗುಪುವುದುಮಿಂದ್ರಪ್ರಭಂ ನಿರಿಸಿ ನಿದ್ರೆಬರ್ಪಂತಾಹಾರಮನಿಕ್ಕುವುದುಂ ಡಕ್ಕುಗೊಂಡಂತೆ ತೂಂಕಡಿಸಿ ಕೆಡೆದರಾನೆಯಮೇಲೆ ದಾಳಾದಾಳಿಯಿಂ ಪ್ರತಿಪಾಲಪುರಕ್ಕೆ ವಂದರಮನೆಯಂ ಪೊಕ್ಕು ದಿವ್ಯಾಭರಣಂಗಳಂ ತೊಡಿಸಿ ಪಾಸಿನ ಮೇಲಿರಿಸಿ ಸುತ್ತಿ ಮುತ್ತಿಕೊಂಡೋಲಗಿಸುತ್ತುಮಿರ್ಪುದು ಮೂಱನೆಯ ದಿವಸದಂದಿಂಗೆ (ಗ)

ಪೊರೆಯದ ದುಃಖಮಂ ಮಱೆದು ಪೊರ್ದಿಸಲೀಯದ ಜೈನದೀಕ್ಷೆಯುಂ
ಪರಿಹರಿಪಂತುಟೊಂದು ವಿಧಿಯುಂ ದೊರೆಕೊಂಡುದು ಕರ್ಮದೇಶ್ಗೆ
ಯಿಂ || ೧೩೦

ಪುಸಿದು ದುರಾತ್ಮನೆನ್ನ ಗುಣಮಂ ಭುವನತ್ರಯಪೂಜ್ಯನಪ್ಪುದಂ
ಕುಸಿಯಿಸಿ ತನ್ನ ಬಾಳ್ಕೆಗೆಡೆಯಿಲ್ಲದೆ ವೈಶ್ಯರೆಂದು ಬಂದು ನಂ
ಬಿಸಿ ಕಡುದೂರ್ತಿನಿಂ ಪಲವುಟಕ್ಕುಗಳಿಂ ಸಮೆದನ್ನಮಂ ಸಮಂ
ಬಸಿಕೆಯನೊಕ್ಕು ಬೇಗಮೆನಗಿಕ್ಕಿ ಬಟಿಕ್ಕೆ ಮನೋನುರಾಗದಿಂ ||೧೩೧

ಇಲ್ಲಿಗೆ ತಂದು ತಮ್ಮಂತು ಮಾಡಿದನೆಂದು ಕೇಡಿಂಗೆ ಬಿಸುಸುಯ್ದು ಪಾಸಿನಮೇಲೆ ಬೀೞ್ವುದುಂ ಶೀತಲಕ್ರಿಯೆಗಳಿಂದೆೞ್ಚಱಿಸಿ ಸುಯ್ತು ಕುಳ್ಳಿರಿಸಿ ಸಮ್ಯಕ್ತ್ವಚೂಡಾಮಣಿಗೆ ಸಮಸ್ತಬಂಧುಜನಮುಂ ಪ್ರಧಾನರುಂ [1] ಮೆಯ್ಯನಿಕ್ಕಿ ಬಿನ್ನಪಮೊಂದಿಂತೆಂದರ್ || ೧೩೨

ಸಂತತಿಯಿಲ್ಲದ ರಾಜ್ಯಮು
ನಿಂತಿದನಡಿಗರ್ದಿ ಕಿಡಿಸದುನ್ನತಗುಣ ನಿ |
ಶ್ಚಿಂತಂ ನಿಱಿಸಿ ಬಟಿಕ್ಕಂ
ಸಂತತಿಯುಂ ಮಾಡಿ ದೇವ ತಪದೊಳ್ ನಿಲ್ ನೀಂ || ೧೩೩

[ಪರಮಾಂಡಳಿಕರ್ ಭಯದಿಂ
ಕರಂಗಳಂ ಮುಗಿದು ಕಪ್ಪಮಂ ತಂದೀವರ್ |
ಕರಮಂಜೆ ನಿನ್ನ ಜನಕಂ
ಗೆರಡಿಲ್ಲದೆ ದೇವ ನೀನಿದಂ ಕಿಡಿಸುವುದೇ] || ೧೩೪

ಎಂದು ಬಿನ್ನಪಂಗೆಯ್ದು ಕಾರುಣ್ಯಮಪ್ಪಂತು ಕಣ್ಣನೀರ್ಗಳನಿಕ್ಕಿ ನಿಷ್ಕರುಣಿಯಾಗಿ ಪೋಪೆನೆಂಬ ಬಗೆಯುಳ್ಳೊಡನಿಬರುಮಂ [2] ಕೊಂದು ಪೋಗೆಂದು ಮದದಾನೆಯುಂ ಕಂಬಕ್ಕೆ ತಪ್ಪಂತೆ ಲಲ್ಲೆಗೆಯ್ದು

1 ಸಾಮಂತರುಂ (ಗ)   2 ಉಳ್ಳೊಡೆ ನೀವೆಮ್ಮುಮಂ (ಗ)

ಬಲ್ಲಾಳ್ತನದಿಂ ಪಟ್ಟಮಂ ಕಟ್ಟಿ ಸಿಂಹಪಮಂ ಸೇಱಯಿಡುವಂತೆ ರಾಜ್ಯ
ದೊಳ್ ನಿಱಿಸಿ ಪಲವುತೆಱದ ಕಾಪುಗಳಿಂ ಮಿಡುಕಬಾರದಂತಾಗೆ ಕಾದು
ರಾಜ್ಯಂಗೆಯ್ಯುವುದುಂ ॥ ೧೩೫

ಬಿಸುಟು ನುತರಾಜ್ಯಲಕ್ಷ್ಮಿಯ
ನಸದೃಶವೆನಿಸಿರ್ದ ಮುಕ್ತಿಗೋಮಿನಿಯೊಳ್ ಸಂ ।
ತಸದೊಳ್ ಕೂಡುವುದೆಂಬಂ
ತಸಹಾಯ [1] ಪರಾಕ್ರಮಂ ಮಗಂ ಪುಟ್ಟುವುದುಂ ॥ ೧೩೬

[ಕರಮಲ್ಲದೊಸೆದು ರಾಗಂ
ಬೆರಸು ಮಹೀಪಾಲನಾತ್ಮಪುತ್ರಂಗೆ ಮನೋ ।
ಹರಮಪ್ಪ ತನ್ನ ತಂದೆಯ
ವರನಾಮಮನಿಟ್ಟು ಕಟ್ಟಿ ಪಟ್ಟಮನಾಗಳ್] [2] ॥ ೧೩೭

ಸೆಱೆಮನೆಯೊಳಿರ್ದ ಮನುಜಂ
ಸೆಱೆ ಬಿಟ್ಟು ಬಱಿಕ್ಕ ನಿಲ್ಲದೋಡುವ ತೆಱದಿಂ ।
ಪೆಱಪಿಂಗಿ ಸೆಡೆದು ನಿಲ್ಲದೆ
ತಱಿಸಲದಿಂ ಬಿಟ್ಟು ಸಕಲರಾಜ್ಯಶ್ರೀಯುಮಂ ॥ ೧೩೮

[ಪೋಗಿ ಜಿನದೀಕ್ಷೆಯುಮಂ ಕೈಕೊಂಡು ದ್ವಾದಶವಿಧತಪದೊಳುತ್ತ
ರೋತ್ತರಂ ನೆಗೞ್ದು ಮುನ್ನಿನ ಋಷಿನಿವಾಸಪರ್ವತದೊಳ್ ಪಲವುಕಾಲ
ಮಿರ್ದು ಕರ್ಮಕ್ಷಯಂಗೆಯ್ದು ನಿರ್ವಾಣಶ್ರೀಸಮೇತನಾದನಂದಿನಿಂದಿ
ತ್ತಲುಂ ಋಷಿನಿವಾಸಗಿರಿ ಶ್ರೀಧರಾಚಾರ್ಯರ ಪೆಸರೆ ಪೆಸರಾಗಿ ಶ್ರೀಪ
ರ್ವತಮೆಂದು ಪ್ರಸಿದ್ಧಿಗೆ ಸಂದುದು. ತದ್ಗಿರಿಯ ದಕ್ಷಿಣಭಾಗದೊ
ಳೊಂದು ವಟವೃಕ್ಷದ ಕೆಳಗಿರ್ದ ಮುಕ್ತಿಗೆ ಸಂದರಪ್ಪುದಱಿಂದಾಸ್ಥ

1 ಸಂತಸದಿಂ ನೆರೆಯಲ್ ಬೇಗದಿನಸಹಾಯ (ಗ)

2 ಪುಟ್ಟೆ ಯಶೋಧರನೆಂದು ಪೆಸರಿಟ್ಟು ರಾಜ್ಯಮಂ ಕೊಟ್ಟು (ಗ)

ನಕ್ಕೆ ಸಿದ್ಧವಟವೆಂಬ ಪೆಸರಾಯ್ತು. ಶ್ರೀಧರಕೇವಲಿಗಳ್ಗೆ ಕೇವಲಜ್ಞಾನ ಪೂಜೆಯಂ ಮಾಡಲೆಂದು ಚತುರ್ವಿಧದೇವನಿಕಾಯಂ ನೆರೆದರಪ್ಪುದಱಿಂ ದಾಸ್ಥಾನಕ್ಕಮರಾವತಿಯೆಂಬ ಪೆಸರಾಯ್ತು. ತನ್ಮುನಿ ತಪಂಗೆಯ್ವ ಕಾಲದೊಳ್ ಅರ್ಜುನವೃಕ್ಷದ ಕೆಳಗಿರ್ದಾರಂ ಖೇಚರರ್ ಮಲ್ಲಿಗೆಯರಳಂ ಪೂಜಿಸಿದರಪ್ಪುದಱಿಂದಾಸ್ಥಾನಕ್ಕೆ ಮಲ್ಲಿಕಾರ್ಜುನವೆಸರಾಯ್ತು. ಇಂದ್ರ ಪ್ರಭನಾಮಮುನಿಯುಂ ಛದ್ಮಿಸಲ್ವೇಡಿ ವೃದ್ಧರ್ ಬಂದಿರ್ದಾರೆಂದೊಡೆ ವೃದ್ಧ ಗಿರಿಯಾದುದು. ಯಶೋಧರಕುಮಾರಂ ಋಷಿಪುತ್ರನಪ್ಪುದಱಿಂದಾ ತನ ಮೈದುನರ್ ಮೇಳದಿಂ ಮುಂಡಿಯ ವಂಶಜನೆಯೆಂದು ಕುಮಾರ ನೊಡನೆ ನಗುವುದಱಿಂದದುವೆ ಪ್ರಸಿದ್ಧಮಾಗಿ ಮುಂಡಿಯ ವಂಶಮಾದು ದೆಂದು ಬುದ್ಧಿಸಾಗರಂ ಧನದಮಹಾರಾಜನ ವಂಶಾವತಾರಮುಮಂ ಪ್ರತಿ ಪಾಲಪುರದ ಪೆಸರ ವೃತ್ತಾಂತಮುಮಂ ಪೇೞೆ ಸಂಘಶ್ರೀ ಸಂತೋಷಂ ಬಟ್ಟು ॥ ೧೩೯

ಈತನ ವಂಶದವರ್ ವಿ
ಖ್ಯಾತರ್ ಸಾಮಾನ್ಯರಲ್ಲರೆಂದುಂ ಧರ್ಮೋ ।
ಪೇತರದಱಿಂದಮಿನ್ನೃಪ
ಜಾತನನಾನೆನಿತು ಪುಣ್ಯದಿಂ ಪೊರ್ದಿದೆನೋ [1] ॥ ೧೪೦

ಏನೆಂದಱಿಯದೆ ಮುನ್ನಪ
ಮಾನಂ ಗೆಯ್ದಿರ್ದೆನುಱದು ಜಿನತತ್ತ್ವಮನ ।
ಜ್ಞಾನತೆಯಿನೀಗಳಱಿದೆಂ
ಮಾನಪಪತಿಯಿಂದಮೊಳ್ಳಿತೆಂಬುದನಿಂಬಿಂ] [2] ॥ ೧೪೧

1 ಜಾತನನಾಗಿಂತು ಪುಣ್ಯದಿಂ ಪೊರ್ದುವೆನೆ (ಕ. ಬ.)

2 ಜಾತರೂಪಧರನಾಗಿ ಕರ್ಮಕ್ಷಯಂಗೆಯ್ದು ನಿರ್ವಾಣಲಕ್ಷ್ಮಿಯೊಳ್ ಕೂಡಿ ದನಿತ್ತಲ್ ಯಶೋಧರಕುಮಾರನ ಮೈದುನಂ ಮುಂಡಿಯವಂಶಜನೆಂದು ಕಾಡು ವುದುಮದುವೆ ಪ್ರಕಟಮಾಗಿ ಮುಂಡಿಯವಂಶಜಮಾದುದೆಂದಬ್ಧಿಸಾಗರರ್ ಪೇಳ್ವುದುಂ ಸಂಘಶ್ರೀ ಲೇಸಾಗಿ ತಿಳಿದು ಸಂತೋಷಂಬಟ್ಟು (ಗ)

ನರನಾಥನ ದೆಸೆಯಿಂ ಭೂ
ಸುರಮೋಕ್ಷಮನೀವ ಧರ್ಮಮುಂ ಪಿರಿದಪ್ಪೀ ।
ಸಿರಿಯುಂ ದೊರೆಕೊಂಡುದು ವಿ
ಸ್ತರದಿಂದೆನ್ನಂತು ನೋಂತನಾವನೊ ಜಗದೊಳ್ ॥ ೧೪೨

[ಎಂದು ಸಂತೋಷಂಬಟ್ಟು ಸುಖದಿಂದಿರ್ಪುದುಮೊಂದುದಿವಸಂ ಸಂಘಶ್ರೀಯು ಮುನ್ನಿನ ಗುರು ಬುದ್ಧಶ್ರೀಯೆಂಬ ಭಿಕ್ಷುಕಂ ಸಂಘಶ್ರೀ ಧನದಮಹಾರಾಜನ ಪೇಳ್ಕೆಯಿಂ ಶ್ರಾವಕನಾದನೆಂಬುದಂ ಕೇಳ್ದು ಮುನಿದು ಮನೆಗೆ ಬರ್ಪುದುಂ ಸಂಘಶ್ರೀ ಮುನ್ನಿನ ಮಾರ್ಗದಿಂ ಪೊಡೆ ಮಡದೆ ಮನ್ನಿಸದೆ ಮೋನಂಗೊಂಡುದಾಸೀನಂಗೆಯ್ದಿರ್ಪುದುಂ ॥ ೧೪೩

ಮುನ್ನಿನ ಮಾರ್ಗದೊಳೆನ್ನಂ
ಮನ್ನಿಸದೀಖಳನನಾವ ಪಾಂಗಿನೊಳಂ ಸಂ ।
ಪನ್ನತೆಯಿಂ ಕಿಡಿಸುವೆನಂ
ದುನ್ನತಿಯಿಂ ಪೂಣ್ದು ನೋಡಿ ಸಂಘಶ್ರೀಯುಂ ॥ ೧೪೪

ನೀನಪ್ಪೊಡೆ ಧನದಧರಿ
ತ್ರೀನಾಥನ ಮನೆಗೆ ಮುಖ್ಯನೈ ನಿನ್ನಗೃಹ ।
ಕ್ಕಾನಿಂದು ಬಂದೊಡಿಂತಪ
ಮಾನಂ ಮಾಡುವುದು ಮಂತ್ರಿಗಿದು ಗುಣದೊಳವೇ ॥ ೧೪೫

ನಿನಗಿದು ಪಾಟಿಯಲ್ತು ಮೊಗಮಿಾಯದೆ ಮನ್ನಿಸದುದ್ಧತಿಕ್ಕೆಯಿಂ
ಮುಸಿದವರಂತೆ ಕೇಳ್ ನುಡಿಯದಿರ್ಪುದು ನೆಟ್ಟನೆ ಮುನ್ನಿನಂತೆ ನೀ
ನೆನಗತಿಭಕ್ತನೆಂದು ಬಗೆಗೆಟ್ಟು ಭವದ್ಭವನಕ್ಕೆ ಬಂದೆನಿಂ
ತಿನಿತಪಮಾನಮಂ ನೆಱೆಯೆ ಮಾಳ್ಪೊಡೆ ಬರ್ಪನೆ ಹೀನವೃತ್ತಿಯಿಂ ॥

ಆವನಾದೊಡಮಕ್ಕೆ ತನ್ನ ಗೃಹಕ್ಕೆ ಬಂದೊಡೆ ಗರ್ವದಿಂ
ದೇವನಂತಿಱಿಸಿರ್ಪುದುಂ ಕಡುವೊಂಗಿ ಬಿಂಕದಿನಿರ್ಪುದುಂ
ಭಾವಕಂಗೆ ಬುಧಂಗೆ ಮಂತ್ರಿಗೆ ಸಜ್ಜನಪ್ರಿಯನಪ್ಪವಂ
ಗಾವುದೊಳ್ಗುಣಮಾವುದುನ್ನತಿ ಪೆಂಪದಾವುದು ಧಾತ್ರಿಯೊಳ್ ॥ ೧೪೬

ಎಂದು ಮೃದುವಚನಂಗಳಿಂ ಸಂಘಶ್ರೀಯ ಮನಂಗೊಳಿಸಲೆಂದು ನುಡಿದಾತನಂ ಸದ್ಧರ್ಮದಿಂ ಪತ್ತುವಿಡಿಸಿ ಮಿಥ್ಯಾತ್ವಮಂ ಪೊರ್ದಿಸುವ ಬುದ್ಧಿಯಿನಿಂತೆಂದಂ] [1] ೧೪೮

ನೀಂ ಬುದ್ಧಾಗಮದೊಳ್ ಕುಶ
ಲಂ ಬಗೆವೊಡೆ ನಿನ್ನ ದೊರೆಯ ಚತುರನುಮಾದಂ ।
ನಂಬಿ ಪೆಱತೊಂದು ಸಮಯಮ
ನಿಂಬಿಂ ಪೊರ್ದಿರ್ದನೆಂದೊಡಿಂತಿದು ಚೋದ್ಯಂ ॥ ೧೪೯

[ವ್ರತಮಂ ಪಾಲಿಸಿ ದೇಹಮಂ ತೊಱೆದು ವಿದ್ಯಾನೀಕಮಂ ಬಿಟ್ಟು ಪೆಂಡತಿಯುಂ ಧಾನ್ಯಮನಾತ್ಮಜಪ್ರತತಿಯುಂ ಮುಂ ಬಿಟ್ಟು ಗಾಂಪಿಂದೆ ನಿರ್ವೃತಿಯಂ ಸಾಧಿಪೆನೆಂಬ ಸಾಹಸಿಗರಂ ದಿಗ್ವಾಸರಂ ನಂಬಿ ದುರ್ಮತ ನೀಂ ಗಾವಿಲರಂತಿದೇಕೆ ಕಿಡಿಪೈ ಸಂಸಾರಸೌಖ್ಯಂಗಳಂ ॥ ೧೫೦

ಸುರತದೊಳಿಚ್ಛೆಯುಂ ಸಲಿಸುವಂಬುರಹಾಕ್ಷಿಯರೊಳ್ ನಿರಂತರಂ
ನೆರೆವುದು ದಿವ್ಯಭೋಜನಮನುಣ್ಬುದು ತನ್ನ ಮನಕ್ಕೆವಂದರೊಳ್
ಪರಿಸುವುತಿರ್ಪು (?) ದುದ್ಧತಿಯಿನಿಂದ್ರಿಯದಿಚ್ಛೆಯೊಳಿರ್ಪುದಾಗಳುಂ
ಮರುಳ ವಿನೋದದಿಂ ನಲಿಯುತಿರ್ಪುದು ಮೋಕ್ಷಮನಾರು ಕಂಡವರ್ ॥

ಎಂಬುದುಂ ಸಂಘಶ್ರೀಯಿಂತೆಂದಂ ॥ ೧೫೦

ಜಿನವಚನಂ ಪುಸಿಯಪ್ಪೊಡೆ
ಧನದಮಹಾರಾಜನೆನಗೆ ತೋಱಿದನಘಜೇ ।
ವನದಿ ಬಡಬಾಗ್ನಿಯೆನಿಸುವ
ಮುನಿಯುಗಳಮನಂತರಿಕ್ಷದೊಳ್ ಪೋಪವರಂ] [2] ॥ ೧೫೧

---

1 ಎಂದು ರಾಗದಿಂದಿರ್ಪುದುಂ ಸಂಘಶ್ರೀ ಶ್ರಾವಕನಾಗಿರ್ದನೆಂಬುದುಂ ಸಂಘಶ್ರೀಯ ಮುನ್ನಿನ ಗುರು ಬುದ್ಧಶ್ರೀಯೆಂಬ ಭಿಕ್ಷುಕಂ ಕೇಳ್ದು ಬಂದು ಸಂಘಶ್ರೀಗಿಂತೆಂದಂ (ಗ)

2 ಎಂಬುದುಂ ಸಂಘಶ್ರೀಯಿಂತೆಂದಂ (ಗ)

ವರತಪದೊಳಾದ ವೃದ್ಧಿಯು
ನೆರಡಿಲ್ಲದೆ ಕಂಡು ನಂಬಿದೆಂ ಜಿನಮತಮಂ ।
ಮರುಳಲ್ಲೆನೆನಗೆ ನಿನ್ನೀ
ಪುರುಳಿಲ್ಲದ ಧರ್ಮ ಬಾರ್ತೆಯುಲ್ಲದು ಮತ್ತಂ ॥ ೧೫೪

ಎಂದು ನುಡಿವುದುಂ ಬುದ್ಧಶ್ರೀ ಸಂಘಶ್ರೀಯುನೆಂತಾದೊಡಂ ಕಿಡಿಸುವೆನೆಂಬ ಕಜ್ಜದಿನಿಂತೆಂದಂ ॥ ೧೫೫

ಧನದಮಹೀಶ್ವರಂ ವಿಬುಧಬಂಧು ಚತುರ್ಬಲದಿಂದೆ ಕಾದಿ ಜೇ
ವನಧಿಪರೀತಭೂವಳಯಮಂ ನೆಱೆ ಸಾಧಿಸಿಕೊಂಡನೆಂದೊಡಿಂ
ನಿನಗೆ ಜನೇಶನಂಬರದೊಳಿರ್ದರನುತ್ಸವದಿಂ ಮುನೀಂದ್ರರಂ
ಮನಮುರಿತೋಱಿ ತನ್ನ ವಶಮಾಗಿರೆ ಮಾೞ್ಪುದದಾವ ವಿಸ್ಮಯಂ ॥

ಎಂದು ಕಳಕಳಿಸಿ ನಕ್ಕು ಮತ್ತಮೆನಿತಾನುಂ ಕುತ್ಸಿತಮಪ್ಪುದಾಹರಣೆಗಳಂ ತೋಱಿ ಶೂನ್ಯವಾದಮಂ ಮಾಡಿ ತಡಂಗಾಲ್ಪೊಯ್ವುದುಂ ಸಂಘಶ್ರೀ ಬುದ್ಧಶ್ರೀಯ ವೃಥಾಲಾಪಕ್ಕೊಳಗಾಗಿ ಲೋಚನಹೀನನಂತೆ ಶೋಭೆಗೆಟ್ಟು [ತಿಗಂಗೆಟ್ಟು] ಕುದುರೆಯಂತೆ ಮನಂಗೆಟ್ಟು, ಮಾಗಿಯು ತೊಱೆ[1] ಯಂತೊಳಸಾರ್ದು, ಇರುಳ್ ಕಣ್ಗಾಣದರಂತೆ ತೊಟ್ಟನೆ ಕಣ್ಗೆಟ್ಟು [ಸದ್ಧರ್ಮ] ವಿಮುಖನಾಗಿ "ಪುನಃ ಶ್ವಾನೋ ಭವಿಷ್ಯತಿ" ಯೆಂಬ ನೀತಿಯುನ್ನುಂಟುಮಾಡಿ ಮಿಥ್ಯಾತ್ವಮಂ ಪೊರ್ದಿದನಿಂತು ॥ ೧೫೭

[ಎನ್ನ ಚಲಂ ಕೂಡಿದುದೆಂ
ದುನ್ನತಿಯಿಂ ಪೆಟ್ಟುಮೆರ್ಚಿ ಬುದ್ಧಶ್ರೀ ಪೋ ।
ದನ್ನಯದೊಳಿತ್ತುಂಘಚಯ
ದುನ್ನತಿಯಿಂ ಕಷ್ಟನಾದನಪಗತಪುಣ್ಯಂ॥] ೧೫೮

1 ಕೋಗಿಲೆ (ಕ. ಬ.)

ಜಿನಪದಸೇವನೆಯುಂ [1] ಬಿ
ಟ್ಟನೇಕದುರ್ಮತಿಗಳೊಡನೆ ಕೂಡಿ ಮಹಾದು |
ರ್ವಿನಯದಿನನಂತಸುಖಮಂ
ತನಗೀವಂತಪ್ಪ ಧರ್ಮತರುವಂ ಕಡಿದಂ [2] || ೧೫೯

ವಿಮಲಗುಣಗಣಮನೊಕ್ಕು
ತ್ತಮಧರ್ಮಮನೊಲ್ಲದಧಿಕಪಾಪಂ ಶೂನ್ಯಾ |
ಗಮಮಂ ಪೊರ್ದಿದನದಱಿಂ
ಸಮಂತು ಸದ್ಧರ್ಮವಿರ್ಪ್ಪುದಂ ಕಂಡವರಾರ್ || ೧೬೦

ತಡೆಯದೆ ಮಹಾನಿಧಾನಂ
ಬಡವನ ಕೈಸಾರ್ದು ಭೂಪರಱಿಯದೆ ನೆಲಸಿ |
ರ್ಪೊಡಮೊಳ್ಳಿತಪ್ಪ ಧರ್ಮಂ
ಕಿಡದಿರ್ಪೊಡಮವರೆ ಪುಣ್ಯವಂತರ್ ಧರೆಯೊಳ್ || ೧೬೧

[3] ಕುಂಕುಮಮಂ ಬಿಟ್ಟು ಜಾದಂ ಪೂಸುವಂತೆ ಮನೆಯಂ ಬಿಟ್ಟು ಬೀದಿಯೊಳಿರ್ಪಂತೆ ಪಟ್ಟಣಮಂ ಬಿಟ್ಟು ಪೊಲಗೇರಿಯೊಳ್ ಪಡುವಂತೆ [4] ಪಾಲಂ ಬಿಟ್ಟು ಕಳ್ಳಂ ಕುಡಿವಂತೆ ರಾಜಕುಮಾರರ ಕೆಳೆಯುಂ ಬಿಟ್ಟು ಪುಲ್ಲಡಕಿಯೊಳ್ ಕೆಳೆಗೊಳ್ವಂತೆ ಸೀರೆಯುಂ ಬಿಟ್ಟು ನಾರ ನುಡುವಂತೆ ದಿವ್ಯಾಭರಣಂಗಳಂ ಬಿಟ್ಟು ಬಳ್ಳಿಗಳಂ ಕಟ್ಟುವಂತೆ ಸೊಡರ ಬೆಳಗಂ ಬಿಟ್ಟು ಕೊಳ್ಳಿಯ ಬೆಳಗಿನೊಳುಣ್ಬಂತೆ ಕಱುಮಾಡಮಂ ಬಿಟ್ಟು ಪುಲ್ಗುಡಿಸಲನಾಶ್ರಯಿಸುವಂತೆ ಜಾಜಿಯ ಪೂವಂ ಬಿಟ್ಟು ಬೇವಿನ ಪೂವಂ ತುಱುಂಬುವಂತೆ ಸದ್ಧರ್ಮಮಂ ಬಿಟ್ಟು ಮಿಥ್ಯಾತ್ವಪ್ರೇತನಾಗಿರ್ಪುದುಂ ವಾತ್ಸಲ್ಯರತ್ನಾಕರನಱಿದು ತನ್ನೊಳಿಂತೆಂದಂ || ೧೬೨

---

1 ಜಿನಪದಸೇವೆಗಳಂ (ಗ) 2 ಅದು ಧನದಮಹಾರಾಜಂ ಕೇಳ್ದು ಕಮಲಶ್ರೀಯ ಮೊಗಮಂ ನೋಡಿ ನಗುತಮಿಂತೆಂದಂ ವಿಮಲಗುಣ.... (ಗ)

3 ಎಂದು ಸಂಘಶ್ರೀಯುಂ ಬರಿಸಿ ಮತ್ತಂ ಧರ್ಮಮಂ ಪೇಳುವುದುಂ ಎಂತುಂ ನಂಬದಿರ್ಪುದು ಮಿಂತೆಂದಂ (ಗ) 4 ಇರ್ಪಂತೆ (ಗ)

ಮಾಱಿಲೆಂದಳಿಪಿಂ ವಣಿಗ್ವರನೊಯ್ದು ಕರ್ಪೂರಮಂ ಕರಂ
ತೋಱೆ ಭಾವಿಸಿ ನೋಡಿ ತಾಂ ಪೊಲೆಯುಂ ದಿಟಂ ಕಳುಹಿಂಗೆ (?) ನೀಂ
ತೋಱು ಕೊಂಡಪೆನೆನ್ನ ಬಳ್ಳದೊಳೆಂಬವೊಲ್ ಪರಧರ್ಮಮಂ
ಕೀಱು ಪೇೞ್ದಡವೊಲ್ವರಲ್ಲರಘಾನ್ವಿತರ್ ಗುಣವರ್ಜಿತರ್ ॥ ೧೬೩

ನಾಯು ಕುನ್ನಿಗೆ ಕೂರ್ತು ರಾಜ್ಯಮನಿತ್ತು ಪಾಸಿನ ಮೇಲೆ ತಂ
ದಾಯತಿಕ್ಕೆಯಿನೊಪ್ಪವಾಗಿರಿಸಿ ಪ್ರಭೂತ್ಕರಮಿರ್ದು ಕ
ಟ್ಟಾಯದಿಂದೊಡನೋಪದೋಲಗಿಸುತ್ತುಮಿರ್ಪೊಡೆ ಮತ್ತಮಾ
ನಾಯು ಕುನ್ನಿ ಸಮಂತು ಮಾಣ್ಬುದೆ ಪೇಲ ತಿಂಬುದನೆಲ್ಲಿಯುಂ ॥ ೧೬೪

ಎಂದು [ಭಾವಿಸಿ ಸಂಘಶ್ರೀಯುಂ ಬರಿಸಿ ಮುಂದೆ ಕುಳ್ಳಿರಿಸಿ ಧರ್ಮಶ್ರವಣಮಂ ಮಾಡೆ] [1] ಮೂಗರಂತೆ ಮಱುಮಾತುಗುಡದೆ ಮರ[2]ದಂತೆ ಬಿಟ್ಟಾಡದೆ ಬೆಳ್ಪುರಸಿನಂತೆ [3] ಶೂನ್ಯಹೃದಯನಾಗಿ ಬೆಳೆದ ಕೆಯ್ಯಂತೆ ತಲೆಯಂ ಬಾಗಿ ಮಿಥ್ಯಾತ್ವಗ್ರಹಾವಿಷ್ಟನಾಗಿ ಕೇಳದಿರ್ಪುದುಂ, ಪಲವು ದಿವಸಮಾತನನಂತುಂ ಧರ್ಮಕ್ಕೆ ತರಲಾಱದೆ ಕಮಳಶ್ರೀಯು ಸಾವಂತರ ಮೊಗಮಂ ನೋಡಿ ಧನದಮಹಾರಾಜನಿಂತೆಂದಂ ॥ ೧೬೫

ಕಲ್ಲೆಂತುಂ ನನೆಯದವೊಲ್
ಪೊಲ್ಲಮೆಯೊಳ್ ಕೂಡಿ ರೌರವಕ್ಕಿೞಿವವರುಂ ।
ಸಲ್ಲಲಿತಮಪ್ಪ ಧರ್ಮ
ಕ್ಕೆಲ್ಲಿಯುಮೋರಂತೆ ಬಾರರಘವಶದಿಂದಂ ॥ ೧೬೬

ಇರುಳಪ್ಪಾಗಳ್ ಪಶ್ಚಿಮ
ಶರನಿಧಿಗಿೞಿವಂತೆ ಸೂರ್ಯನಘಸಂಕುಲದಿಂ ।
ಪೊರೆದಿರ್ದ ತೀವ್ರರುಂ ಸಿ
ಷ್ಟ್ರರನರಕಕ್ಕಿೞಿವರಲ್ಲಿ ಸಂದೆಯಮುಂಟೇ ॥ ೧೬೭

---

1 ಮುಟ್ಟನುಡಿವುದ ೦ (ಗ) 2 ಮಂದರ (ಕ. ಬ.) 3 ಬೀಳ್ಪರಸಿನಂತೆ (ಗ)

ಎನಿತು ಕಡುಗೂತೊಱಡಂ ಜೇ
ವಿನ ಮರನಂ ಮಳಯಜೋರ್ವಿಜಂಮಾಡುವೆನೆಂ ।
ಬನೆ ಗಾಂಪನಂತೆ ಪಾತಕ
ರೆನಿತಿಂದೊಡಮುಮಳ ಧರ್ಮಮಂ ಪೊರ್ದುವರೇ ॥ ೧೬೮

ಎಂದು ನುಡಿಯುತ್ತುಂ [ಧರ್ಮವಾತ್ಸಲ್ಯದಿಂ ಕಾರುಣ್ಯರಸಮೊದವೆ ಸಂಘಶ್ರೀಯುಂ ನರಕಕ್ಕೆ ಸಲಲೀಯದೆ ಪಂಚಮಗತಿಯುನೆಯ್ದಿಸುವೆನೆಂಬ ಮೋಹದಿಂದೆ]ನಿತಾನುಂ ತೆಱದ ಕಥೆಗಳುಮಂ ದೃಷ್ಟಾಂತಂಗಳುಮಂ ತೋಱಿ ನುಡಿದುಂ ವ್ರತಕ್ಕೆ ತರಲಾಱದೆ ॥ ೧೬೯

ವರಚಾರಣಋಷಿಯರನಂ
ಬರದೊಳ್ ಪೋಗುತ್ತುಮಿರ್ದರಂ ನಿನಗಂದಾ ।
ದರದಿಂ ತೋಱಿದೆನವನ
ಚ್ಚರಿಪಟ್ಟು ಮನೋನುರಾಗದಿಂ ಕಂಡುಂ ನೀಂ ॥ ೧೭೦

ಜಡಮತಿಯಾಗಿ ನಿರ್ಬುದ್ಧಿತನದಿಂ ಮಿಥ್ಯಾತ್ವಯುತರಪ್ಪ ಧೂರ್ತರ ಮಾತಂ ಕೇಳ್ದು ಪರತ್ರೆಯುಮಿಲ್ಲ [1] ದೈವಮುಮಿಲ್ಲೆಂದು ಬೆಣಕಚಂಗೆಡೆಯುಬೇಡ ॥ ೧೭೧

ಅನುಪಮತಪದ ಫಲಂ ಮೇ
ದಿನಿಯೊಳ್ ಪೇಱಲ್ಲದಂದು ಪ್ರತ್ಯಕ್ಷಂ ನೀಂ ।
ಘನಪದದೊಳ್ ಪೋಪವರಂ
ಮುನಿವರರಂ ವೃದ್ಧಿಯುಕ್ತರಂ ನಿಶ್ಚಯದಿಂ ॥ ೧೭೨

ಕಂಡಿರ್ದುಂ ಮತ್ತಂ ಮೇ
ತಂಡದ ಮೀಸಮನೆ ಮಾಡಿ ಸುವ್ರತಮುಂ ಕೈ ।
ಕೊಂಡು ಮತಿಗೆಟ್ಟು ಬಿಡುವೀ
ಮಿಂಡರ ಮಾತಿಂಗೆ ಬೆಚ್ಚಿ ಸದ್ದರ್ಶನಮಂ [2] ॥ ೧೭೩

---

1 ಧರ್ಮಮುಮಿಲ್ಲ (ಗ) 2 ಬೆಚ್ಚಿಸಲ್ ಸದ್ಧನಮಂ (ಕ. ಖ.)

ನಿನ್ನ ಗುರುವಪ್ಪ ಬೆಳಪುಂಜನ ವಚನಮನಂತಿರಿಸು ನೀನೆ ಪ್ರತ್ಯಕ್ಷಮಾಗೆ ನಭೋಂಗಣದೊಳ್ ಪೋಪ ಚಾರಣಋಷಿಯರಂ ಕಂಡುದುಂಟೋ ಪೇೞಿಲ್ಲವೋ ಪುಸಿಯದೆ ಪೇೞೆನೆ ಬುದ್ಧಶ್ರೀಯು ಕುಹೇತುದೃಷ್ಟಾಂತವನೆ ನಂಬಿ ತಱಂಟಿಗವೊಱಂಟಿಗಂ ಮರ್ದಿಲ್ಲೆಂಬುದಂ ನನ್ನಿಮಾಡಿ ಚಾರಣಋಷಿಯರಂ ಕಾಣೆನೆಂದು ತಲೆವುಟ್ಟರಸನೊಡನೆ ಬಾಯಂ ಬಡಿವುದುಂ॥ ೧೩೪

ಪುರದೇವತೆಗಳ್ ಮುನಿಸಿಂ
ಪರಿತಂದು ದುರಾತ್ಮನೆರಡು ಕಣ್ಗಳುಮಂ ನಿ ।
ಷ್ಠುರಮಾಗಿ ಪೊಯ್ಯೆ ತೊಟ್ಟನೆ
ಕುರುಡಾದಂ ಪುಸಿಯ ಪೊಟ್ಟಣಗ್ಗದು [1] ಪಿರಿದೇ ॥ ೧೩೫

ತಲೆ ನೋಯೆ ಕಣ್ಗಳೆರಡುಂ
ನೆಲದೊಳ್ ಬಿರ್ದಿರೆ ಸಭಾಳಿ ಬೆಱಗಾಗೆ ಖಳಂ ।
ನೆಲನಂ ತಡವರಿಸುತ್ತುಂ
ಪೊಲೆಯರ ತೆಱದಿಂದೆ ದೂರದೊಳ್ ಕುಳ್ಳಿರ್ದಂ ॥ ೧೩೬

ಅಂತಿರ್ದ ಸಂಘಶ್ರೀಯುಂ ಸಭಾಜನಂ ನೋಡಿ ಪಾಪದ ಪ್ರತ್ಯಕ್ಷಫಲಮಂ ಕಂಡು ತಮ್ಮೊಳಿಂತೆಂದರ್ ॥ ೧೩೭

ಸರಸಿಜಮಿತ್ರನಂತೆ ತನು ಶೋಭಿಸೆ ಮಾನವದೇವಖೇಚರೇ
ಶ್ವರನತಪಾದಪಂಕರುಹರುತ್ತಮರೂರ್ಜಿತರಂದು ಚಾರಣರ್
ನಿರುಪಮರಂತರಿಕ್ಷದೊಳಗುರ್ವಿಸಿ ಪೋಪರನೊಳ್ಳತಾಗೆ ಭಾ
ಸುರಗುಣ [2] ತೋಱೆ ಕಂಡು ಖಳನಕ್ಕಟ ನೋಡಿರೆ ಕಾಣೆನೆಂದಪಂ॥ ೧೩೮

ಇವನಿಂ ಬಿಟ್ಟು ಬ್ರಹ್ಮೇತಿಕಾಱರುಂ ದುಃಖಭಾಜನರುಮಸತ್ಯವಾದಿಗಳುಮಿಲ್ಲೆಂದು ಮತ್ತಮಿಂತೆಂದರ್ ॥ ೧೩೯

---

1 ಪೊಟ್ಟಳಗ್ಗದು (ಕ. ಬ.)   2 ಭಾಸುರಮಣಿ (ಕ. ಬ.)

ಉಳ್ಳುದನಿಲ್ಲೆಂದೀತಂ
ಕಳ್ಳಂ ನುಡಿದಂತೆ ಪುಸಿದ [1] ಪಾಪದ ಫಲದಿಂ ।
ದೆಲ್ಲಿಯುಂ ನಿಲ್ಲದೆ ತಾಂ ತಳು
ವಿಲ್ಲದೆ ಕಣ್ಣೊಡೆದು ದುಃಖಭಾಜನನಾದಂ ॥ ೧೪೦

ವಸುಮತಿಯೊಳ್ ವಿಬುಧರ್ ಭಾ
ವಿಸುವೊಡೆ ನರಕಕ್ಕೆ ಪೋಪ ಪೆರ್ದಾರಿ ಮಹಾ ।
ವ್ಯಸನಕ್ಕೆ ಮೂಲಮಱುವೊಡೆ
ಪುಸಿಯಿಂದಂ ಬಿಟ್ಟು ಪಾತಕಂ ಪೆಱತೊಳವೇ ॥ ೧೪೧

[2] ಎಂದು ಸಮಸ್ತಜನಮುಂ ಸಂಘಶ್ರೀಯನಶ್ರೀಯುಂ ಕಂಡಂತೆ ಬಯ್ಯುತ್ತಿರೆ [ಧನದ ಮಹಾರಾಜಂ ಮಿಥ್ಯಾತ್ವಕ್ಕೆ ಗಡಗಡನಡುಗಿ ಕಣ್ಣೊಡೆದು ನೆಲದೊಳ್ ಪೊರಳ್ವ ಸಂಘಶ್ರೀಯುಮಂ ಮನೆಗೆ ಪೊತ್ತುಕೊಂಡು ಪೋಗಿಮೆಂದು ಪೇೞ್ದು ಕಳುಪುವುದುಂ] ಸಂಘಶ್ರೀ ಚಿಂತೆಯಿಂ ಜರ್ಜರನೆ ಜಱಿದು ದುಃಖಪೀಡಿತನಾಗಿ [ಕೆಲವುದಿವಸಕ್ಕೆ] ಸತ್ತು ನರಕಕ್ಕಿೞಿದು ದೀರ್ಘಸಂಸಾರಿಯಾದನವನೇೞ್ತಲೆವರೆಗಂ ಪುಟ್ಟಿದ ಮಕ್ಕಳೆಲ್ಲ ಮಂಧಕರಪ್ಪುದಱಿಂದಾದೇಶಕ್ಕಂಧಕವಿಷಯಮೆಂದು ಪೆಸರಾಯ್ತು. ವೆಂಗಿವಲ್ಲಭನಪ್ಪ ಧನದಮಹಾರಾಜನಿತ್ತಲ್ ಸಂಸಾರದ ವಿಚಿತ್ರಮಂ ಕಂಡು ರಾಜ್ಯಕ್ಕೆ ಬೆೞ್ಕಿ ವಿಷಯಸುಖಕ್ಕೆ ಭಯಸ್ಥನಾಗಿ ॥ ೧೪೨

ಚಾರಣಋಷಿಪದಯುಗಳಮ
ನೋರಂತಿರೆ ಕಂಡು ಕಾಣೆನೆಂದಂ ದುಷ್ಟ ।
ಪ್ರೇರಣೆಯಿಂದೇನಾಗದೊ
ಧಾರಿಣಿಯೊಳ್ ದುಷ್ಟಸಂಗತಂ ಪೊಲ್ಲದಱಿಂ ॥ ೧೪೩

---

1 ಕಳ್ಳಂ ಕಾಡಿದಂತೆ ಪುಸಿದು (ಗ)

2 ಮಸಣದ ಕಿಚ್ಚಿನಿಂ ನರಕಪಾಲದ ಭಾಂಡಮನಿಟ್ಟು ಮಜ್ಜೆಯ
ರಸಮಸರಾಗೆ ಕೀಲಿಗನ ಹೆಂಡತಿ ತಾಂ ತೊಳಸುತ್ತ ಮೂಳೆಯೊಳ್
ಪುಸಿವನ ಕಾಲ ದೂಳಿಯೊಳಪೊಕ್ಕಪುದೆಂದೆಡಗಾಲ ಕೆಪ್ಪಿನಿಂ
ದೆಸೆಮುಸಿಯಾಗಿ ಮುಚ್ಚಿದಳಿದೇಂ ಪುಸಿ ಪೊಲ್ಲದು ಭೂತಳಾಗ್ರದೊಳ್ ॥(ಗ)

ಕಣ್ಣೊಳವಾಗಿಯುಂ ಕತ್ತಲೆಯೊಳ್ ಮುಂದಿರ್ದ ಮಾನಿಸರಂ ಕಾಣದಂತೆ ಜೀವಕ್ಕೆ ಮೂಱುಂ ಲೋಕಮನಱಿವ ಶಕ್ತಿಯುಂಟಾಗಿಯುಂ ಕರ್ಮದ ತೀವ್ರತೆಯಿಂ ಸದ್ದರ್ಶನಮನಱಿಯಲಾಱದುದಱಿಂ ದಾಪಾಪಮೆ ಕಡುಬಲ್ಲಿತ್ತೆಂದು ॥ ೧೮೪

ಮಿಥ್ಯಾತ್ವಬಂಧದಿಂದಂ
ಮಿಥ್ಯಾದೃಷ್ಟಿಗಳ ಮಾತೆ ರುಚಿಯಾಗಿರ್ಕುಂ ।
ಮಿಥ್ಯಾಹಾರಕರೆಂದುದೆ
ಪಥ್ಯಂ ಜೀವಕ್ಕೆ ಬಗೆದು ನೋೞ್ಪೊಡೆ ಜಗದೊಳ್ ॥ ೧೮೫

ಮತ್ತಂ ಕೋಡಗಂ ಮಾನಿಸರಂತಾಗಿಯುಂ ಮಾನಿಸಗುಣಮಂ ಪೋಲದಂತೆ, ಬೆಕ್ಕು ಪುಲಿಯ ರೂಪಾಗಿಯುಂ ಪುಲಿಯಲ್ಲದಂತೆ, ಪಿತ್ತಳೆ ಪೊನ್ನಂತಾಗಿಯುಂ ಪೊನ್ನಲ್ಲದಂತೆ, ಹೊಱಸು ಹಂಸೆಯಂತಾಗಿಯುಂ ಹಂಸೆಯಲ್ಲದಂತೆ, ತೊತ್ತು ವ್ಯವಸಾಯುವಂತೆಯಾಗಿಯುಂ ಪೆಂಡತಿಯಲ್ಲದಂತೆ, ಪೊಲೆಯರ್ ಧನಕ್ಕೊಡೆಯರಾಗಿಯುಂ [1] ಮೇಲ್ಜಾತಿಯಾಗದಂತೆ, ಹಱುಹೆ [2] ಮಣಿಯಾಗಿಯುಂ ಬಲ್ವಸ್ತ್ರವಾಗದಂತೆ, ಬೇಡಗೊಟ್ಟಮೂರಾಗಿಯುಂ [ಪಟ್ಟಣವಾಗದಂತೆ, ಬಳ್ ತುಡಿಗೆಯಾಗಿಯುಂ ಸರಿಗೆಯಲ್ಲದಂತೆ, ಸಾವೆ ಬೆಳಸೆಯಾಗಿಯುಂ ಕಳವೆಯ ಬೆಳೆಯಲ್ಲದಂತೆ], ಪಗರಣಿಗನರಸಾಗಿಯುಂ ಕ್ಷತ್ರಿಯನಲ್ಲದಂತೆ, ಪಕ್ಷಿಗಳಾಕಾಶದೊಳ್ ಪೋಪುವಾಗಿಯುಂ ವಿದ್ಯಾಧರರಲ್ಲದಂತೆ, ನಾಯ್ ಸಿಂಹಾಕಾರವಾಗಿಯುಂ ಸಿಂಹವಲ್ಲದಂತೆ, ಜಾದು ಕೆಚ್ಚನಾಗಿಯುಂ ಕುಂಕುಮವಲ್ಲದಂತೆ, [3] ಗುಡಿಸಿಲ್ ಚೆಲ್ವಾಗಿಯುಂ ಮಾಳಿಗೆಯಲ್ಲದಂತೆ, [4] ಬೂತೊಳ್ಳಿದನಾಗಿಯುಂ ಪ್ರಭುವಲ್ಲದಂತೆ, [5] ಪಗಿನಿನಿದಾಗಿಯುಂ ಬೆಲ್ಲಮಲ್ಲದಂತೆ, ಕಾಲುಗುರುದ್ದಮಾಗಿಯುಂ ಸೆಳ್ಳುಗುರಲ್ಲದಂತೆ, ದೂರಭವ್ಯರುಮಭ

1 ಧನಮೊಡೆಯರಾಗಿಯುಂ (ಗ) 2 ಪರುಣೆ (ಕ. ಬ.)
3 ಕಳ್ಳಿ ಹಳಿಯಾಗಿಯುಂ ಅಳೆಯಲ್ಲದಂತೆ (ಗ)
4 ಹೊರಸು ನೇರಿತಾಗಿಯುಂ ಹಾಸಲ್ಲದಂತೆ (ಗ)
5 ಹಿಂಟೆ ಬಲ್ಲಿತ್ತಾಗಿಯುಂ ಕಲ್ಲಲ್ಲದಂತೆ (ಗ)

ವ್ಯರುಂ ಶ್ರಾವಕರಾಗಿಯುಂ ಋಷಿಯರಾಗಿಯುಂ ಮೋಕ್ಷಗಾಮಿಗಳಲ್ಲರ್; ಬೆಳಗುಂ ಬೆಂಕೆಯುಂಬೆರಸಾದಿತ್ಯನೆಂತು, ಬಣ್ಣಮುಮೊರೆಯುಂಬೆರಸು ಪೊನ್ನೆಂತು, ಕಾಂತಿಯುಂ ಸೌಮ್ಯತೆಯುಂಬೆರಸು ಚಂದ್ರನೆಂತು, ಕಂಪುಂ ಕೆಂಪುಂ[1] ಬೆರಸು ಸಂಪಗೆಯೆಂತು, ಗುಣ್ಪುಮಗಲಮುಂ ಬೆರಸು ಸಮುದ್ರಮೆಂತು, ತೋರಮುಮುದ್ದಮುಂಬೆರಸು ಮಂದರಮೆಂತು, ಪಾಸುಂ ಪೊಕ್ಕುಂಬೆರಸು ಸೀರೆಯೆಂತು, ಮದವಣಿಗನುಂ ಮದವಳಿಗೆಯುಂಬೆರಸು ಮದುವೆಯೆಂತು, ನಾಡುಂ ಬೀಡುಂಬೆರಸು ರಾಜ್ಯಮೆಂತು, ಬಿಲ್ಲುಮಂಬುಂಬೆರಸು ಬಿಲ್ಗಾಳನೆಂತು, ಕರಮೊಪ್ಪುಗುಮಂತೆ ಭಾವದೊಳಂ ಸಮ್ಯಕ್ತ್ವದೊಳಂ[2] ಒಳ್ಳಿದರೆನಿಸಿ ನೆಗಟ್ದ ಸನ್ನಭವ್ಯರೆ[3] ಮೋಕ್ಷಗಾಮಿಗಳೆಂದು ಮನದೊಳ್ ಭಾವಿಸಿ ॥ ೧೯೬

ಹೆಪ್ಪಿಟ್ಟೊಡೆ ಪಾಲ್ ಮೊಸರಾ
ಗಿಪ್ಪಂತಿರೆ ನೀರ್ಗಳಾಗಲಱಿಗುಮೆ ಭವ್ಯರ್ ।
ಬಪ್ಪಂತಿರಭವ್ಯರ್ಕಳ್[4]
ಬಪ್ಪರೆ ಸದ್ದರ್ಶನಕ್ಕೆ ಬಾರದೆ ಪೋಪರ್ ॥ ೧೯೭

ಎಣ್ಣೆ ನುಣ್ಪಂ ಮಾಡುವಂತೆ ಕಳ್ಳಿ ಮಾಡುಗುಮೆ, ಕೂಟ್ತಣಿವಂ ಮಾಡುವಂತೆ ಬಾಡು ಮಾಡುಗುಮೆ, ಸಿರಿ ಮೆಯ್ಯೊಪ್ಪಂ ಮಾಡುವಂತೆ ಗೋಣಿ ಮಾಡುಗುಮೆ, ಕಿಚ್ಚು ಪುಳ್ಳಿಯುಂ ಬೂದಿಮಾಡುವಂತೆ ಬಿಸಿಲ್ ಮಾಡುಗುಮೆ,[5] ಮಾಡಲಾಱುವಂತೆ ಸಮ್ಯಕ್ತ್ವಂ ಕರ್ಮಗಳ ಕೇಡಂ ಮಾಡುವಂತೆ ಮಿಥ್ಯಾತ್ವಂ ಮಾಡಲಾಱದಾ ಸಮ್ಯಕ್ತ್ವ [ದ ಮಿಥ್ಯಾತ್ವದ] ಭೇದಮಂ ಪೇೞ್ವೊಡೆ, ತೋಂಟದ ಗಿಡುವಿನ ಮಾಳದ ಗಿಡುವಿನ, ಸಮರ್ಥರ ಶಿಶುವಿನ ಪೊಲೆಯರ[6] ಶಿಶುವಿನ, ಪೊನ್ನ ರಾಶಿಯು

---

1 ಪೆಂಪುಂ (ಗ) 2 ಸುವ್ರತದೊಳಂ (ಕ. ಬ.)

3 ಆ ಸನ್ನುತಭವ್ಯರೆ (ಗ) 4 ಬಪ್ಪಂತಿರೆ ಕಷ್ಟನರರ್ (ಗ)

5 ಕೊಡಲಿ ಮರನಂ ಕಡಿಖಂಡಂ ಮಾಡುವಂತೆ ಕಾಡುಗೋಲ್ಮಾಡುಗುಮೋ (ಗ)

6 ಬಡವರ (ಗ)

ಪೊಣ್ಣ ರಾಶಿಯು, ರತ್ನದ ತೊಡವಿನ ನೂಲ ತೊಡವಿನ, ಸೊಡರಿನ ಕಾಱ್ಕಿಚ್ಚಿನ, ರಕ್ಷೆಯುಂತರಿದುಮೇೞದಮುಮಕ್ಕುಂ ॥ ೧೮೮

ಕಾಸಿದೊಡೆ ಬೆಣ್ಣೆ ತುಪ್ಪಂ
ಲೇಸಪ್ಪವೊಲೆಣ್ಣೆ ಕಾಸೆ ಘೃತಮಪ್ಪುದೆ ಕೇ ।
ಳಾಸನ್ನಭವ್ಯನಮೃತ
ಶ್ರೀಸತಿಗಿರದೆಱಗುವಂತೆ ಖಳನೆಱಗುಗುಮೇ ॥ ೧೮೯

ಕೆಸಱೊಳ್ ನೆಲ್ ಬೆಳಗುಮಲ್ಲದೆ ಜೋಳಂ ಬೆಳೆಯಲಱಿಯದು ಬಯಲೊಳ್ ಜೋಳಂ ಬೆಳೆವಂತೆ ನೆಲ್ ಬೆಳೆಯಲಱಿಯದಂತೆ ಪುಸಿವ ಕಷ್ಟರುಂ ಪುಸಿವರನೆ ಪೊರ್ದುವರಲ್ಲದೆ ಸತ್ಯಮುಳ್ಳರಂ ಪೊರ್ದಲಱಿಯರ್, ಸತ್ಯಮುಳ್ಳವರ್ ಸತ್ಯಮುಳ್ಳವರನಲ್ಲದೆ ಪುಸಿವರಂ ಪೊರ್ದಲಱಿಯರೆಂದು ಭಾವಿಸಿ ಮಿಥ್ಯಾತ್ವದ ಪ್ರತ್ಯಕ್ಷಫಲಮಂ ಕಣ್ಣಾರೆ ಕಂಡು ಮತ್ತೆ ಪುಸಿಯೊಳ್ ಪೊರ್ದಿದ ಕೊಲೆಯೊಳ್ ಪೊರೆಯದ ಜಿನೇಂದ್ರದೀಕ್ಷೆಯನುದಾಸೀನಂಗೆಯ್ದು ಸಂಘಶ್ರೀಯಂತೆ ಮಿಥ್ಯಾತ್ವಕ್ಕೆಡೆಗೊಟ್ಟು ನರಕದೊಳ್ ತಲೆಕೆಳಗಾಗಿ ಬಿರ್ದು ಮಱುಗುತಿರ್ಪುದು ಕಜ್ಜಮಲ್ಲೆಂದು ತನ್ನೊಳ್ ಬಗೆದು ॥ ೧೯೦

ಪರಮಜಿನೇಂದ್ರದೀಕ್ಷೆಯನುದಾರತೆಯಿಂ ನೆಱೆ ತಾಳ್ದಿ ಕರ್ಮಭೂ
ಮಿರುಹಮನೊಪ್ಪದಿಂ ಕಡಿದು ಶಾಶ್ವತಸೌಖ್ಯಮನೆಯ್ದುವೆಂ ಮಸುಂ
ಧರೆ ಮಝು ಭಾಪು ಜೀಯೆನೆ ಧರಿತ್ರಿಯ ಭಾರಮನಾಂತು ಱಿಕ್ಕಟಂ
ನರಕದೊಳರ್ದು ದುಃಖಜಲರಾಶಿಯನೀಸುವ ಗಾಂಪದೇವುದೋ ॥ ೧೯೧

ಎಂದು ಪರಿಚ್ಛೇದಿಸಿ ತನ್ನ ಮಗನಪ್ಪ [ಇಂದ್ರಗುಪ್ತನಂ] ಬರಿಸಿ ಮುಂದೆ ಕುಳ್ಳಿರಿಸಿ ಧರಣೀಭಾರಮನೊಪ್ಪುಗೊಳ್ಳೆಂಬುದುಮಾತನಿಂತೆಂದಂ ॥ ೧೯೨

[ಕ]ರಿ ತಾಳ್ದಿ ನಿಂದ ಪುಷ್ಪಕ
ಭರಮಂ ಭರದಿಂದೆ ತಾಳ್ದಲಾರ್ಪುದೆ ಕಪಿ ದೇ ।
ವರ[ತಾಳ್ದಿ] ನಿಂದ ಧರಣೀ
ಭರಮಂ ತಾಳಲ್ಕೆ ದೇವ ಪೇೞೆನ್ನಳವೇ ॥ ೧೯೩

ಎಂಬುದುಂ ಮಗನ ಮಾತಿಂಗಂ ವಿನಯಕ್ಕಂ ಮೆಚ್ಚಿ ತಕ್ಕೈಸಿ ಕೊಂಡು ಮೊಗಮಂ ನೋಡಿ ಪಲತೆಱದ ಮೃದುವಚನಂಗಳಿಂ ದೆಂತಾನುಮೊಡಂಬಡಿಸಿ ॥ ೧೯೪

ನೆರೆದು ಲತಾಂಗಿಯರ್ ಪದೆದು ಮಂಗಳಮಂ ಮೃದುನಾದದಿಂದೆ ಸು
ಸ್ವರದಿನಗುರ್ವಿನಿಂದೊದವಿ ಪಾಡೆ ವಿದಗ್ಧೆಯರೊಲ್ದು ಪೊನ್ನ ಚಾ
ಮರಮನಳುರ್ಕೆಯಿಂ ಮುದದಿನಿಕ್ಕೆ ಪಯೋನಿಧಿಯಂತೆ ದುಂದುಭಿ
ಸ್ವರಮೆಸೆದೊಪ್ಪೆ ಕಟ್ಟಿದನಿಳಾಧಿಪನಾತ್ಮಸುತಂಗೆ ಪಟ್ಟಮಂ ॥ ೧೯೫

ಅಂತು ಪಟ್ಟಮಂ ಕಟ್ಟಿ ವೆಂಗಿಮಂಡಲಂಮೊದಲಾಗೆ ಸಕಲಧರಾಭಾರಮಂ ಕೊಟ್ಟು ಧರ್ಮಮುಮಂ ಜಿನೇಂದ್ರಪದಸೇವೆಯುಮಂ ಚಾತುರ್ವರ್ಣ್ಯಸಂಘದೊಳಾದ ಕೂರ್ಮೆಯುಮಂ ದರ್ಶನದೊಳಾದ ನಂಬುಗೆಯುಮಂ ಭವ್ಯರೊಳಾದ ಕೆಳೆಯುಮಂ ಸುಕವಿಗಳೊಳಾದ ಗೋಷ್ಠಿಯುಮಂ ದಾನದೊಳಾದ ವಿನೋದಮುಮಂ ಪೂಜೆಯೊಳಾದಾನಂದಮುಮಂ ಬಿಡವೇಡೆಂದು ಬುದ್ಧಿವೇೞ್ದು ಕೈಮುಗಿದು ಬೇಡಿಕೊಂಡು][1] ॥ ೧೯೬

ಧರಣಿಯ ಮೋಹದಿಂ ಸೆಡೆದು ನಿಲ್ಲದೆ ಪುತ್ರನ ಮೋಹದಿಂ ಮನಂ
ಮುರಿಯದೆ ಮೆಯ್ಸುಖಕ್ಕೆಳಸಿ ನಿಲ್ಲದೆ ಪೆಂಡಿರೊಳಾದ ಮೋಹಮಂ
ಸ್ಮರಿಯಿಸಿ ಮೆಲ್ಲಮೆಲ್ಲನೊಳಸಾರದೆ ಪಾರಣತಂತ್ರವಾಹನೋ
ತ್ಕರದೞಿಮೋಹದಿಂ ಸೆಱಗುವಾರದೆ ಚೆಕ್ಕನೆ ಬಿಟ್ಟು ರಾಜ್ಯಮಂ ॥ ೧೯೭

ನಾನೂರ್ವರರಸುಮಕ್ಕಳ್ವೆರಸು ಪುರದಿಂ ಪೊಱಮಟ್ಟು[2] ಪೋಗಿ ಶ್ರುತಾರ್ಣವರೆಂಬಾಚಾರ್ಯರಲ್ಲಿ ಜಿನದೀಕ್ಷೆಯಂ ಕೈಕೊಂಡು ದ್ವಾದಶಾಂಗಶ್ರುತಧರರಾಗಿ ಗುರುಗಳಾಜ್ಞೆಯಿಂದೇಕವಿಹಾರಮನೆತ್ತಿಕೊಂಡು॥

---

1 ಇಂದ್ರಗುಪ್ತಂಗೆ ಪಟ್ಟಮಂ ಕಟ್ಟಿ (ಗ)   2 ನಾಲ್ಸಾಸಿರ್ವರ ಮಕುಟಬದ್ಧರವೆರಸು (ಗ)

[ಹಿಮವೆಂ ತಕ್ಕೈಸಿಕೊಂಡುದ್ಧತಿಯಿನಡರಿ ಸನ್ಮಾರುತಂ ತೀಡೆ ಧಾತ್ರೀ
ರಮಣಿ ಪ್ರಖ್ಯಾತೆ ಮುತ್ತಿಂ ಸವೆದ ತುಡಿಗೆಯಂ ತೊಟ್ಟಳಂಬಂದದಿಂದಂ
ಕ್ರಮದಿಂ [ಮಂ]ಜೊಪ್ಪೆ ಶೀತಂ ಜಗಮನಳೆಯೆ ಬಂದಾಕಿದೊಂದ್ಯೆಕಿ
ಲೊಳ್ ಕೇ
ಳ ಮನಂಗೆಟ್ಟೋಡದಿರ್ದರ್ ತೊಱೆಯ ಕೆಱೆಯ ತೀರಂಗಳೊಳ್
ಧೈರ್ಯದಿಂದಂ ‖ ೧೯೯

ಅಂತು ಬೆಳ್ವಾಳಂತೆ ತಲ್ಲಣಿಸದೆ ಮಾಗಿಯ ನಾಲ್ಕುತಿಂಗಳುಂ
ಬೆಳ್ವಾಸ (?) ದೊಳಿರ್ದ ‖ ೨೦೦

ಬಿಸಿಲುರ್ವಿಂದಳ್ಕಿ ಬೆಂಬೀಱದೆ ತೃಷೆಯೊದವಿಂಗಳ್ಕಿ ಬಾಯ್ವಿಟ್ಟು ಬೇಗಂ
ಕುಸಿದೋರಂತಣ್ಕುಗೆಟ್ಟೋಡದೆ ಸುರಧರಣೀಂದ್ರಂಬೊಲುರ್ವೀತಳಂ ಸಂ
ತಸದಿಂದಂ ಜೀಯ ಭಾಪೆಂದಧಿಕವಿನಯದಿಂ ನಿಲ್ಲದೋರಂದದಿಂ ಬ
ಣ್ಣಿಸೆ ನಿಂದಂ ಯೋಗಿಸಂದ್ಯಂ ಗಿರಿಶಿಖರದೊಳುಗ್ರೋಗ್ರಮಾತಂಗಸಿಂಹಂ‖

ಅಂತು ದೇಸಿಗನ ಕಾಳಗದಂತೋಸರಿಸಿ ನುಸುಳ್ದು ಪೋಗದೆ
ಬೇಸಗೆಯ ನಾಲ್ಕುತಿಂಗಳುಂ ಕಲ್ನೆಲೆನಿಂದು ‖ ೨೦೨

ಕುಡುವಿಂಬಾಶ್ಚರ್ಯಮಂ ಪುಟ್ಟಿಸುತಿರೆ ಭಯಮಂ ಮಾಡೆ ಮೇಘ
ಸ್ವನಂ ನೇ
ರ್ಪಡೆ ಪಾವಂ ವ್ಯೋಮದಿಂದಂ ತಡೆಯದೆಱತೆಯೋಳಕ್ಕಿದಂತೆಲ್ಲಿಯುಂ
ಮಾ
ಣ್ದುಡುಗಿತ್ತೆಂಬೊಂದುಮಾತಂ ಪಡೆಯದೆ ಮಪೆ ಭೋರೆಂದು ಕೇಳ್
ಪೊಯ್ಯೆ ವೀರಂ
ದೃಢಚಿತ್ತಂ ಶಂಕೆಯಿಂ ಬೆಚ್ಚದೆ ಮರನೊದಲೊಳ್ ನಿಂದನತ್ಯಂತಧೈ
ರ್ಯಂ ‖ ೨೦೩

ಅಂತು ಮೞೆಗಾಲದ ನಾಲ್ಕುತಿಂಗಳುಂ ದರವುರಿಗರಂತರವರಿಸದೆ
ಮರವೊದಲೊಳಿರ್ದ] ‖ ೨೦೪

ದುರಿತವಿರೋಧಿಯುನದಟಲೆ
ದರವರಿಸದೆ ಮೋಕ್ಷವೆಂಬ ಬಲ್ಗೋಂಟೆಯುನಾ ।
ದರದಿಂದೀಭವದೊಳ್ ಎ
ಚ್ಚರದಿಂದಂ ಕೊಳ್ವೆನೆಂಬ ಮನದೊಲವಿಂದಂ ॥ ೧೦೫

ಧರೆ ಜೀಯೆನೆ ದೇವೇಂದ್ರ
ರ್ವೆರಸು ಸುರರ್ ನಚ್ಚಿ ಮೆಚ್ಚಿ ಬಣ್ಣಿಸುತಿರೆ ದು ।
ರ್ಧರಘೋರವೀರತಪದೊಳ್
ಚರಿಯಿಸಿದಂ ಸುಕವಿನಿಕರಪಿಕಮಾಕಂದಂ ॥ ೧೦೬

[ಜಿನತತ್ತ್ವಾನುರಾಗನುಂ ವಾತ್ಸಲ್ಯರತ್ನಾಕರನುಂ ಚತುಷ್ಕಷಾಯದೂರನುಂ ನಿಷ್ಕಳಂಕನುಂ ನವವಿಧಬ್ರಹ್ಮಚರ್ಯೋಪೇತನುಂ ಚತುರ್ಗತಿಗಮನಭೀತನುಂ ಷಡ್ವಿಧಜೀವೋಪೇತನುಂ ಲೋಕಪೂಜಾಲಾಭನಿರಪೇಕ್ಷನುಮಾಗಿ ತಪದೊಳತಿರ್ವೆರಸು] 1 ನೆಗಳ್ದ 2 ಅವಂತಿ ವಿಷಯುವ ವಿದಿಸೆ 3 ಯೆಂಬ ತೊಱೆಯ ತಡಿಯ್ಯರಣೆ 4 ಯೆಂಬಪರ್ವತದೊಳಷ್ಟವಿಧಕರ್ಮಂಗಳಂ ಕಿಡಿಸಿ ಕೈವಲ್ಯಲಕ್ಷ್ಮೀಮನಃಪ್ರಿಯನಾದ ನದಱಿಂ ॥ ೧೦೭

ಪುಸಿಯಿಂದಂ ಸಂಘಶ್ರೀ
ಕುಸಿದಿರ್ದಂ ರೌರವಾಂಬುರಾಶಿಯೊಳದಱಿಂ ।
ಪುಸಿ ಪೊಲ್ಲೆಂದಂಜುವ ಮಾ
ನಿಸನೆಯ್ದುಗುಮಲ್ತೆ 5 ನಿರ್ವೃತಿಶ್ರೀಸುಖಮಂ ॥ ೧೦೮

ಪುಸಿ ಪೊಲ್ಲೆಂದಂಜಿ ಕರಂ
ವಸುಧೇಶಂ ತಪದೊಳಸಗಿ ನಿರ್ವೃತಿಯುಂ ಸಂ ।
ತಸದಿಂ ಪೊರ್ದದನದಱಿಂ
ಪುಸಿ ಪೊಲ್ಲೆಂದಂಜಿ ಬೆಚ್ಚಿ ನಡೆವುದು ಪುರುಷಂ ॥ ೧೦೯

---

1 ಮೋಕ್ಷವೆಂಬ ಪಟ್ಟಣವುಂ ಚೆ। ಚ್ಚರದಿಂ ಪೊಗುವುಜ್ಜುಗದಿಂ ಭರದಿಂದಂ ಸುಕವಿನಿಕರಪಿಕಸಮಾಕಂದಂ (ಗ) 2 ಅಂತು (ಗ) 3 ವಿದದದ್ದೆ (ಗ) 4 ಯುರಣೆ (ಗ) 5 ಮತ್ತೆ (ಗ)

ಎಂದು [1] ಸತ್ಯದೊಳಾದ ಸುಖ [2] ಮುಮನಸತ್ಯದೊಳಾದ ದುಃಖ [3] ಮುಮಂ [ಪ್ರತ್ಯಕ್ಷಮಾಗೆ ಗಣಧರಸ್ವಾಮಿಗಳ್ ಪೇೞ್ದುದುಂ] [4] ||೨೧೦

ಪರಮಶ್ರೀಜೈನತತ್ತ್ವಾಮೃತಜಲನಿಧಿವಿಸ್ತೀರ್ಣಸಂಪೂರ್ಣಚಂದ್ರಂ
ಸುರಶೈಲೇಂದ್ರಕ್ಷಮಂ ವಾಗ್ವಧುಪತಿ ಧರಣೀಸ್ತುತ್ಯನತ್ಯಂತಶುದ್ಧಾ
ಭರಣಂ ತ್ರೈವಿದ್ಯಚಕ್ರೇಶ್ವರವಿಮಲಪದಾಂಭೋಜಭೃಂಗಂ ಮುನೀಂದ್ರಂ
ಬುರುಹಾರ್ಕಂ ಹೃಷ್ಟನಾದಂ ಸುಕವಿಜನಮನಃಪದ್ಮಿನೀರಾಜಹಂಸಂ [5] ||

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ಸಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತದಿಗಂಬರದಾಸನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಸತ್ಯವ್ರತವರ್ಣನಂ
ಏಕಾದಶಾಶ್ವಾಸಂ.

---

1 ಅಂತು (ಗ) 2 ಮೋಕ್ಷ (ಗ) 3 ನರಕ (ಗ) 4 ಪೇಳ್ಕೇಳ್ದ (ಗ)

5 ಪರಮಶ್ರೀಕಾಮಿನೀವಲ್ಲಭನಜಿತಜಿನಾಂಘ್ರಿದ್ವಯಾಂಭೋಜಭೃಂಗಂ
ಸುರಶೈಲೇಂದ್ರಕ್ಷಮಂ ವಾಗ್ವಧುಪತಿಧರಣೀಸ್ತುತ್ಯಸಂಗೋದ್ಭವೇಭ
ದ್ವಿರದೇಂದ್ರಾರಾತಿ ಕರ್ಮಾಚಲನುತಪವಿ ಸತಾರಿತ್ರೈವಿದ್ಯಲಕ್ಷ್ಮೀ
ವರಪಾದದ್ವಂದ್ವಭಕ್ತಂ ಸುಕವಿಜನಮನಃಪದ್ಮಿನೀರಾಜಹಂಸಂ||(ಕ. ಬ.)

ದ್ವಾ ದ ಶಾ ಶ್ವಾ ಸಂ ·

ಶ್ರೀಸತ್ಯವ್ರತಮುವೃತ
ಶ್ರೀಸತಿಯು ವಿಳಾಸವೊಂದು ಸಮ್ಯಕ್ತ್ವಗುಣಾ ।
ವಾಸಂ ನಲಿದಂ ಮನದೊಳ್
ಲೇಸಾಗಿರೆ ಸುಕವಿನಿಕರಪಿಕಮಾಕಂದಂ ॥ ೧

ಅಂತು [ಸತ್ಯವ್ರತದ ಕಥೆಯುಮಂ ಮನದರ್ತಿವೆರಸು ಕೇಳ್ದು ಮತ್ತಂ ಮಗಧಾಧಿಪತಿ ಮುನೀಂದ್ರೋತ್ತಮಂಗೆ ಭಕ್ತಿಯಿಂ ಪೊಡೆಮಟ್ಟು ಕೈಗಳಂ ಮುಗಿದು ॥ ೨

ಮುನಿಜನವಂದಿತಪದಯುಗ
ವನರುಹ ಪೆಱಗಣ ಕಥಾಳಿಯುಂ ನಿಮ್ಮಡಿ ಕೇ ।
ಳ್ದನಗೆ ಕಡುರಾಗಮಾದುದು
ಮನಸಿಜಮದಹರಣ ದುರಿತತಮೋಭಾನುನಿಭಾ] [1] ॥ ೩

ಗುಣಜಲನಿಧಿ ನಯದಿಂ ಮುಂ
ದಣ ಕಳದಾ ದಿವ್ಯಮಪ್ಪ ಸುವ್ರತಮಂ ಧಾ ।
ರಿಣಿ ಮೆಚ್ಚೆ ತಾಳ್ದ ಲೋಕಾ
ಗ್ರಣಿಯಾದರ ಕಥೆಯುಮನೆನಗೆ ಬೆಸಸಲ್ವೇಳ್ಕುಂ ॥ ೪

ಎಂಬುದುಂ [ಗೌತಮಸ್ವಾಮಿಗಳ್ ದುರಿತದ ಬಲಕ್ಕೆ ನಿಸ್ತೇಜಂ] [2] ಮಾಳ್ಪಸ್ತ್ರೀಯುವ್ರತದ ಕಥೆಯನಿಂತೆಂದು ಪೇಳ್ದರ್:—ಅರಸಿನೊಳ್ ಕೂಡಿ ಪರಿಗ್ರಹದಿಂದರಸಿಯರಿಂ ಪರಿಜನದಿಂದರಮನೆಯೊಪ್ಪುವಂತೆ, ಪ್ರಭುವಿನೊಳ್ ಕೂಡಿ ಕೋಂಟೆಯಿಂ ಕೇರಿಯಿಂದರಮನೆಯಿಂದೂರೊಪ್ಪುವಂತೆ, ಮಳೆಯೊಳ್ ಕೂಡಿ ಕೆಱೆಯಿಂ ಕಯ್ಯಿಂ ತೋಂಟದಿಂ ಪೊಲನೊಪ್ಪು

---

1 ನಲಿದು (ಗ)   2 ಕರ್ಮರಾಜನೊಡ್ಡಂಗೆ ಸಿಸ್ತಯುಂ (ಗ)

ಪೆಂತೆ, ತಂಬುಲದೊಳ್ ಕೂಡಿ ನಾಲಗೆಯಿಂ ಪಲ್ಲಿಂದಧರದಿಂ ಬಾಯೊಪ್ಪುವಂತೆ, ಕಾಡಿಗೆಯೊಳ್ ಕೂಡಿ ಬಿಳಿಯಾಲಿಯಿಂ ಕಱಿಯಾಲಿಯಿಂದೆವೆಯಿಂ ಕಣ್ಣೊಪ್ಪುವಂತೆ, ಬಲ್ಲಿದರೊಳ್ ಕೂಡಿ ಗಿರಿದುರ್ಗದಿಂ ಜಲದುರ್ಗದಿಂ ವನದುರ್ಗದಿಂ ಕೋಂಟೆಯೊಪ್ಪುವಂತೆ, ಕೂರ್ಮೆಯೊಳ್ ಕೂಡಿ ಪುರುಡಿಂ ಮುದ್ದಿಂ ಪೆರ್ಮೆಯಿಂ ಪೆಂಡಿರೊಪ್ಪುವಂತೆ, ಬಲ್ಗುದುರೆಯೊಳ್ ಕೂಡಿ ಮಱುಗೋಡಿಂದಂಕವಣೆಯಿಂ ಬಲದಿಂದಶ್ವಾಧಾರಿ [1] ಯೊಪ್ಪುವಂತೆ, ಶುದ್ಧಮಾಸದೊಳ್ ಕೂಡಿ ಚಂದ್ರಬಲದಿಂ ತಾರಾಬಲದಿಂ ಮದುವೆಯೊಪ್ಪುವಂತೆ, ಸಲುಗೆಯೊಳ್ ಕೂಡಿ ನುಡಿಯಿಂ [2] ಪೊಡರ್ಪಿಂ ಮಂತ್ರಿಯೊಪ್ಪುವಂತೆ, ಸಮ್ಯಕ್ತ್ವದೊಳ್ ಕೂಡಿ ಕೊಲೆಯಿಂ ಪುಸಿಯಿಂ ಕಳವಿಂದಗಲ್ದು ಸುವ್ರತಂಗಳಿಂ ಭವ್ಯರುಮೊಪ್ಪುವೆರಸಿರ್ಪುದು [3] ॥ ೫

ಮನಮಂ ಪೇೞ್ವುದು ಬಯಕೆಯು
ಧನಮುಮನಱಿಪುವುದು ಸೀನೆ ಶರಣೆಂಬುದು ಮೇ ।
ದಿನಿಚಕ್ರಂ ಕಡುಗೂರ್ಮೆಯೊ
ಳನ ನೆಗೞ್ದೇಸುವ್ರತಾ [4] ಧಿಪಂಗೆಣೆಯೊಳರೇ ॥ ೬

ಇನ್ನಾವ್ರತದ ಮಹಿಮೆಯುಂ ಪೇೞ್ವೊಡೆ ॥ ೭

[ಬಳಸಿದ ನಂದನವನದಿಂ
ತಳರ್ದಿರ್ದ ಸರೋರುಹಾಕರಂಗಳನೆತ್ತಂ ।
ಬಳಸಿದ ಪಲವುಂಗ್ರಾಮಂ
ಗಳನೊಪ್ಪುವುದೊಪ್ಪವೆತ್ತವೆಂತೀವಿಷಯಂ ॥ ೮

ಆವಿಷಯದೊಳ್ ತದ್ಧರಾಂಗನೆಯ ತೊಟ್ಟ ಮಣಿಭೂಷಣದಂತೆ ನಾನಾಶೋಭೆಗಳಿಂದುಜ್ಜಯಿನಿಯೆಂಬ ಪೊೞಲೊಪ್ಪುಗುಮಾಪೊೞಲನಾಳ್ವಂ ಧರ್ಮಧರಮಹಾರಾಜನೆಂಬನಾತನ ರಾಜಶ್ರೇಷ್ಠಿ ॥ ೯

---

1 ಮಱುಗೇಡಿಂದಕವಣೆಯೆಂಬಳದಿಂದಶ್ವದಾರ (ಕ. ಬ.) ಯಿಂದಶ್ವಾವಳಿ (ಗ) 2 ನುಡಿಯಿಂ ನಾಲಗೆಯಿಂ (ಕ) 3 ಒಪ್ಪಂಬೆರಸು ಸುಖಮಿರ್ಪುದು (ಗ)
4 ಕಳ್ಳದ ಸುವ್ರತ (ಕ. ಬ.)

ಅನುಪಮಗುಣನಿಳಯಂ
ಜಿನಪಾದಪಯೋಜಷಟ್ಪದಂ ಜನನುತನಿಂ ।
ದ್ರನಿಭನಮಳಾಂಗನಿರ್ಪಂ
ಜಿನದತ್ತಂ ಜೈನಸಮಯವಾರಿಧಿಚಂದ್ರಂ ॥ ೧೦

ಆತನ ಪೆಂಡತಿ ಧರಣೀ
ಖ್ಯಾತೆ ಸದಾಶುದ್ಧಚರಿತೆ ಭವ್ಯಜನೈಕ ।
ಪ್ರೀತೆ ಸಮಸ್ತಗುಣಾಂಬುಧಿ [1]
ಮಾತೇನೊ ಜಿನೇಂದ್ರದಾಸಿಯೆಂಬಳ್ ಪೆಸರಿಂ ॥ ೧೧

ನೆಗಱ್ದ ಜಿನದತ್ತಂಗಂ
ಮೃಗನಯನೆಜಿನೇಂದ್ರದಾಸಿಗಂ ಮದನನಿಭಂ ।
ಜಗತೀಪೂಜ್ಯಂ ವಿಕ್ರಮ
ಮೃಗಾರಿ ಜಿನದಾಸನೆಂಬನಗ್ರತನೂಜಂ ॥ ೧೨

ಅಂತವರ್ ಸುಖದಿಂ ಪಲಕಾಲಮಿರ್ಪನ್ನೆಗಂ ॥ ೧೩

ದುರಿತಘನಪವನರುಜ್ಜ್ವಲ
ಚರಿತರ್ ಜೈನಾಗಮಾಂಬುನಿಧಿಹಿಮಕಿರಣರ್ ।
ಧರಣೀಸ್ತುತ್ಯರ್ ಮುನಿಜನ
ಪರಿವೃಢರಂಗಜಮದೇಭವಿಘಟನಸಿಂಹರ್ ॥ ೧೪

ಜಿನಪಾಲಿತರೆಂಬ ತಪೋಧನರೊರ್ವರೇಕವಿಹಾರಿಗಳ್ ವಸುಧಾವಳಯಮಂ ತೊಳಲುತ್ತುಂ ಬಂದುಜ್ಜಯಿನಿಗೆ ಬಂದು ನೇಸಱ್ ಪಟ್ಟ ಬೞಿಕ್ಕಂ ತೊಳಲ್ವುದು ಸಂಯಮಧರರಪ್ಪ ಋಷಿಯರ್ಗೆ ಮಾರ್ಗಮಲ್ಲೆಂದು ಗಂಧವತಿಯೆಂಬ ತೊಱೆಯ ತಡಿಯೊಳ್ ರೌದ್ರಮಪ್ಪ ಶ್ಮಶಾನಭೂಮಿಯ ನಡುವೆ ॥ ೧೫

---

1 ಸದ್ಗುಣಮಹಾಂಬುಧಿ (ಗ)

ಪೊಲ್ಲೆನಿಸದ ಜೀವಾಳಗ
ಳಿಲ್ಲದ ರಮಣೀಯಮಪ್ಪ ಪಾಸಱೆಯಂ ತ ।
ಳ್ವಿಲ್ಲದೆ ಬೆಳಗಿನೊಳಾರ
ಯ್ದುಳ್ಳಳ್ಕದ ಗಂಡನಘಕಮೊಂದದಿನೇಶಂ ॥ ೧೬

ಸನ್ನುತರವಿಯುದಯಂಗೆ
ಯ್ವನ್ನೆವರಂ ಮಿಸುಕೆನೆಂದು ಮಂದರಧೈರ್ಯಂ ।
ತನ್ನಣ್ಮಿಂದಂ ಮಿಡುಕದೆ
ಸನ್ನುತಮತಿಯೊಂದೆ ಮಗ್ಗುಲೊಳ್ ಪಟ್ಟಿರ್ದಂ ॥ ೧೭

ಅಂತು ಗುಣಗಣಾಭರಣಂ ನಿತ್ಯಯೋಗಂಗೊಂಡೇಱಿಸಿದ ಬಿಲ್ಲಂತೆ ಶರೀರಮಂ ಚಳಯಿಸದೆ ಪಾರ್ಶ್ವದೊಳ್ ಪಟ್ಟಿರ್ಪುದುಮಿತ್ತಲುಜ್ಜಯಿನಿಯಿಂದೊರ್ವ ವಿಡಂಬನೆಂಬ ಸಾಧಕಂ ನಿಧಿನಿಕ್ಷೇಪಂಗಳಂ ಸಾಧಿಸಲೆಂದು ಯಥೋಚಿತಮಪ್ಪ ಬಲಿವೆರಸು ಪಲ್ಲಂ ಸುಲಿದು ಮಿಂದು ಶುಚಿರ್ಭೂತನಾಗಿ ಧೌತಾಂಬರಮನುಟ್ಟು ವೀರದಿನುಪವಾಸಂಕೈಕೊಂಡು ತನ್ನ ನಿವಾಸಮಂ ಪೊಱಮಟ್ಟು ನಟ್ಟಿರುಳ್ ತನ್ನ ಕಟ್ಟಾಳ್ತನದಿಂ ॥ ೧೮

ಪಲವುಂ ಪೂಣ್ಕೆಗಳಿಂದಂ
ಚಲದಿಂದಸಹಾಯವಿಕ್ರಮಂ ತನ್ನಳವಂ ।
ಕಲಿತನಮಂ ನಂಬಿ ಬಲಂ
ತಳರದೆ ಸಾಧಿಸುವೆನೆಂಬ ಬಳಕೆಯಿನಾತಂ ॥ ೧೯

ಕರಡಿಯ ತೊವಲಂ ಕಾಡಿಗೆಯೊಳದ್ದಿ ವಿಧಾತ್ರಂ ಲೋಕಮಂ ಬಾಸಣಿಸಿದನೆಂಬಂತಪ್ಪ ಕತ್ತಲೆಯೊಳ್ ಕೂಡಿದ ರಾತ್ರಿಯೊಳ್ ಗಂಧವತಿಯ ತಡಿವಿಡಿದು ಬಂದು ಪಿತೃವನಮಂ ಪೊಕ್ಕು ತನ್ನ ಕೈಯ ಸೊಡರಿಂ ॥ ೨೦

ತಲೆ ಪಱಿದಿರ್ದ ಪೆರ್ದಸಿಯಮೇಲೆ ಮಹಾದ್ಭುತದಿಂದಮಿದ್ದ ಕ
ಣ್ಗಳನರೆಮುಚ್ಚಿಕೊಂಡು ಕೆಡೆದಿರ್ದ ಕರುಳ್ ಪಱಿದಿರ್ದ ಭೂ
ತಳಮನೆ ಕಚ್ಚಿ ಮೆಯ್ಮಱೆಯುತಿರ್ದ ಭಯಂಕರಮಾಗಿ ಪಟ್ಟು ಕ
ಣ್ಣೊಳ್ ತೆಗೆದಿರ್ದ ವೇದನೆಗೆ ಸೈರಣೆಗೆಟ್ಟಿಱುತಿರ್ದ ಭೀತರಂ ॥ ೨೧

ನೋಡುತ್ತುಂ ಬಂದೇಕಪಾರ್ಶ್ವದೊಳ್ ಪಟ್ಟಿರ್ದ ಜಿನಪಾಲಿತ ಮುನಿಯುಂ ಕಂಡು ಪೆಣನೆಂದು ಬಗೆದು ಬೇಗದಿನಲ್ಲಿಗೆ ಮತ್ತೆರಡು ಪೆಣಂಗಳಂ ತಂದು ಮೂಱುದಲೆಯನೊಲೆಗಲ್ಲಾಗಿ ಕೆಳಗೆ ಕಿರ್ಚ್ಚಂ ಪೊತ್ತಿಸಿ ಚರುವನಡುತ್ತಿರ್ಪುದುಂ] [1] ॥ ೨೦

ಘೋರೆನೆ ಕಿಚ್ಚಿನ ನಾಲಗೆ
ನೇರಿದವಾಗಳುರೆ ನೋವಿನೊಳ್ ಸೈರಣೆಗೆ [2] ।
ಟ್ಟೋರಂತೆ ಮಱುಗಿ ಕುದಿಯದೆ
ಧೀರಂ [3] ಜಿನಪಾದಪದ್ಮಮಂ ನೆನೆಯುತ್ತುಂ ॥ ೨೧

ಮಿಾಯದೆ ಮೆಯ್ಯೊಳ್ ಶ್ರೀಖಂಡಮಂ ಪೂಸುವೆನೆಂಬ, ಪಿಂಡು ಗೂೞೊಳಗಗುಳನುಣ್ಬೆನೆಂಬ [4] [ಮದುವೆಯಾಗದೆ ಮಕ್ಕಳ್ವಡೆವೆನೆಂಬ, ಗಡ್ಡಂಬಾರದಂದವಿಡುವೆನೆಂಬ ಕಡೆಯದೆ ಬೆಣ್ಣೆಗೊಳ್ವೆನೆಂಬ] ಬೆಳೆಯದೆ ಹಗವಂ ತೋಡುವೆನೆಂಬ, ಪುಟ್ಟದ ಕೂಸಿಂಗೆ ಪೆಸರಿಡುವೆನೆಂಬ, ಸಾಲಿಸದೆ ಬಡ್ಡಿವೇೞ್ಕೆಂಬ, [5] [ನೆಯ್ಯದೆ ಸೀರೆಯನುಡುವೆನೆಂಬ], ಮಾಡದೆ ಮನೆಯಂ ಪೊಕ್ಕಪೆನೆಂಬ ಮರುಳನಂತೆ, ಪೆಱವುಣಿಸುಗಳನ ರೋಚಕಂಮಾಳ್ಪ ತುಯ್ಯಲ್ತುಪ್ಪದಂತಪ್ಪ, ಮತ್ತಿನ ಪೆಂಡಿರ್ಗೆ ಪೇಸು

---

1 ಮಾಳವದೇಶದೊಳುಜ್ಜೇನಿಯೆಂಬುದು ಪುರಮದನಾಳ್ವಂ ಧರ್ಮಧ್ವಜ ಮಹಾರಾಜನೆಂಬನಾತನ ರಾಜಶ್ರೇಷ್ಠಿ ಜಿನದತ್ತನೆಂಬನಾತನ ಭಾರ್ಯೆ ವಿಮಳ ಮತಿಯೆಂಬಳಾಯಿರ್ವರ್ಗಂ ಪ್ರಿಯನಂದನಂ ಜಿನೇಂದ್ರದಾಸನೆಂಬನಂತವರ್ಸುಖ ದಿಂದಮಿರ್ಪುದುಂ ಜಿನಪಾಲರೆಂಬ ಮಹಾತಪೋಧನರ್ ವಿಹಾರಿಸುತ್ತುಮಾಪುರಕ್ಕೆ ವಂದು ಗಂಧವತಿಯೆಂಬ ತೊಱೆಕಡೆಯ ಮಹಾಕಾಳಮೆಂಬ ಸ್ಮಶಾನಭೂಮಿ ಯೊಳ್ ಯತ್ರಾಸ್ತಮಿತವಾಸಿಗಳಪ್ಪುದಱಿಂ ನೇಸರ್ ಪಡುವುದುಂ ಪೋಗಲಱಿ ಯದೆ ಪಾರ್ಶ್ವದೊಳ್ ಯೋಱಿಸಿದ ಬಿಲ್ಲಿನಂತೆ ಪಟ್ಟಿರ್ಪುದುಂ ವಿಡಂಬನೆಂಬ ಸಾಧಕಂ ಬಂದು ನೋಡಿ ಪೆಣನೆಂದು ಮತ್ತಮೆರಡು ಪೆಣಂಗಳನಲ್ಲಿಗೆತಂದು ಮೂಱುತಲೆಯು ಮನೊಲೆಕಲ್ಲೂಡಿ ಚರುವನಡಲೆಂದು ಮಡಕೆಯನೇಱಿಸಿ ಕೆಳಗೆ ಕಿಚ್ಚನುರು ಹುವುದುಂ (ಗ) 2 ನೊಂದು ಸೈರಣೆಯಂ ಬಿ (ಗ) 3 ವೀರಂ (ಗ)

4 ಹಿಂಡುಗೂೞೊಳಗೆ ಗೂಳನುಣ್ಬೆನೆಂಬ (ಗ), ಪಿಡುಗೂಳೊಳಳೆಯ ಕೂಳನಣ್ಬೆನೆಂಬ (ಕ) 5 ಸಾಲಮಿಾಯದೆ ಬಡ್ಡಿಗೊಳ್ವೆನೆಂಬ (ಗ)

ಗೆಯುಂ ಪುಟ್ಟಿಸುವ [1] ನಾಯಕಸ್ತ್ರೀಯಂತಪ್ಪ, ಪೊಲ್ಲ ನೀರ್ಗೆ ಮನಂಗಿಡಿಸುವ ಶೀತಲಜಲದಂತಪ್ಪ, ಹೀನದ್ರವ್ಯಂಗಳ್ಗೆ ಚಿತ್ತಮಂ ಮಾಡದ ಪೊನ್ನರಾಶಿಯಂತಪ್ಪ, ಕಪ್ಪುವಸ್ತ್ರಂಗಳ್ಗೆ ಬಗೆಯಂ ಮಾಡದ ದುಕೂಲವಸ್ತ್ರದಂತಪ್ಪ, ಪುಲ್ವನೆಗೆ [2] ಪೆರ್ಚಂ ಮಾಡದ ಮಣಿಮಾಡದಂತಪ್ಪ, ಕಿಡುವ ಬೆಳಗುಗಳ್ಗೆ ಕಷ್ಟಮಂ ಮಾೞ್ಪ ಸೂರ್ಯರಶ್ಮಿಯಂತಪ್ಪ, ಕಾಜಿನ ತುಡಿಗೆಗೆ ನಿಸ್ತೇಜಂ [3] ಮಾೞ್ಪ ಮುತ್ತಿನಾಭರಣದಂತಪ್ಪ, ಹೀನಶ್ರೀಗಂ ಕಿಱುಕುಳರಾಜ್ಯ [ಭೋಗಕ್ಕಮೂನಸುಖಕ್ಕಂ] ವಿರಾಗಂ ಮಾಡಿ ಮುಕ್ತಿ [ಶ್ರೀ]ಯೊಳ್ ಕೂಡುವ, ಚಕ್ರವರ್ತಿಪದವಿಯುಮಂ ದೇವೇಂದ್ರಪದವಿಯುಮಂ ಮೊದಲ ಮೂಱುಸಂಹನನಮುಮಂ ಶ್ರುತಬುದ್ಧಿಯ ಸಂಪೂರ್ಣತೆಯುಮಂ ಕ್ಷಪಕಶ್ರೇಣಿಯನೆಯ್ದಿಸುವ ಮಹಿಮೆಯುಮಂ ಪುಟ್ಟಿಸುವ ಪುಣ್ಯಮಂ ನೆರೆಪುವ ಪಂಚಪರಮೇಷ್ಠಿಗಳ ಭಕ್ತಿಯುಮಂ ಪೂಜೆಯುಮಂ ಕೊಂಡಾಟಮುಮಂ ನಚ್ಚುಗೆಯುಮಂ ಬಿಸುಟು, ನೆಲ್ಲನಕ್ಕಿಮಾಡಲಲಸಿ ಲೇಸೆಂದಟ್ಟುಂಬ, ಕಲ್ಲಂ ನುಣ್ಪುಮಾಡದೆ ಚಿತ್ರಂಬರೆವ, ಪೊನ್ನನಾಭರಣಂಮಾಡದೆ ತುಡುವ, ಕೈಯ್ಯನುೞದೆ ಬಿತ್ತುವ, ನೂಲಂ ಪೊಸೆಯದೆ ಮಣಿಯಂ ಕೋವ, ಪುಳ್ಳಿಯಿಲ್ಲದೆ ಕಿರ್ಚಿನೊಳಡುವ [4] ಗಾಲಿಯಿಲ್ಲದೆ ಬಂಡಿವರಿಯಿಸುವ, ಬಲಮಿಲ್ಲದೆ ಕಾದುವ, ಕೂೞಿಲ್ಲದೆ ಮದ್ದಳೆಯಂ ಬಡಿವ, ಕಱೆಯದೆ ಪಾಲಂ ಬಯಸುವ, ಬೆಲೆಗುಡದೆ ಬಂಡಮರಸುವ, ಬಿದಿರೆಲೆಯೊಳ್ ರಸಮನಱಸುವ ಕಳ್ಳಿಯ ಪಾಲೊಳ್ ಬೆಣ್ಣೆಯನಱಸುವ, ತೊಱೆಯ ಸಿಪ್ಪಿನೊಳ್ ಮುತ್ತನಱಸುವ; (...?) ಧಾನ್ಯದಂತೆ ಪಸಿಯ ಧಾನ್ಯದಂತೆ ಬಾಗಿದ ಧಾನ್ಯದಂತೆ ಮಿಡಿಯುತ್ತಿರ್ಪ ಧಾನ್ಯದಂತೆ ಉಯ್ವೆರಸಿರ್ದ ಧಾನ್ಯದಂತೆ ಕೇಸಕ್ಕಿಯಂತೆ ತಳಿಸಿದಕ್ಕಿಯಂತೆ ಕರ್ಚಿದಕ್ಕಿಯಂತೆ ಬೇವ ಕೂೞನಂತೆ ಬೆಂದಿೞಿಪಿದ ಕೂೞನಂತೆ ತಳಿಗೆಗೆವಂದ ಕೂೞನಂತೆ ಬಾಡು ತುಪ್ಪಂ ಮೊದಲಾದ ಪರಿಕರಂವೆರಸುಣ್ಬ ಕೂೞನಂತೆ, [ನೆಲದಂತೆ] ಭೂಮಿ

---

1 ಮನಮುಂ ಪೇಸುಗೆಯುಂ ಮಾಳ್ಪ (ಗ)
2 ಹಲವು ಮನೆಗಳ್ಗೆ (ಗ)
3 ಪೇಸುಗೆಯುಂ (ಗ)
4 ಕಿಚ್ಚುದನುರುಹ (ಕ. ಬ.)

ಶೋಧನೆಯಂತೆ ಗುಂಡೋತ್ತರದಂತೆ ನೆಲಗಟ್ಟಿನಂತೆ ರಂಗಘಟ್ಟಣೆಯಂ
ತೆ [1] ಕಂಭನಿಱಿಸುಗೆಯಂತೆ ಕರುಮಾಡದಂತೆ ಬೋದಿಗೆಯ ಕೂಟದಂತೆ
ಮುಚ್ಚಳಂತೆ ಪ್ರತಿಷ್ಠೆಯಂತೆ ಮೇೞಣ ಬೆಸದಂತೆ ಸೊದೆಯಂತೆ ಕಳ
ಶಾರೋಹಣದಂತೆ, ಕೆಯ್ಯಂತೆ ಕೆಯ್ಯುೞುವೆಯಂತೆ [ಕೆಯ್ಯೊಳ್]
ಪದಂಬಡೆವಂತೆ ಬಿತ್ತಣದಂತೆ ಸಸಿಯಂತೆ ಪೊಡೆಯಂತೆ ಪಾಲ್ದೆನೆಯಂತೆ
ಕೊಯ್ಲದಂತೆ ಸೂಡಿನಂತೆ ಕಳಕ್ಕೆವರ್ಪಂತೆ [2] ಒಕ್ಕಣದಂತೆ [3] ರಾಶಿ
ಯಂತೆ ಮಿಥ್ಯಾದೃಷ್ಟಿ ಸಾಧನಸಮ್ಯಗ್ದೃಷ್ಟಿ ಸಮ್ಯಙ್ಮಿಥ್ಯಾದೃಷ್ಟಿ
ಅಸಂಯತಸಮ್ಯಗ್ದೃಷ್ಟಿ ದೇಶಸಂಯತ ಪ್ರಮತ್ತ ಅಪ್ರಮತ್ತ ಅಪೂರ್ವ
ಕರಣ ಅನಿವೃತ್ತಕರಣ ಸೂಕ್ಷ್ಮಸಾಂಪರಾಯ ಉಪಶಾಂತ ಕಷಾಯ [4]
ಸಯೋಗಿ [ಅಯೋಗಿ] ಎಂಬೀ [5] ಪದಿಮೂಱು ಗುಣಸ್ಥಾನಂಗಳಿರ್ದಪ್ಪುವು.
ಅವಱೊಳಗಾವ ಗುಣಸ್ಥಾನದೊಳ್ ತಾನಿರ್ದಪನಾಗುಣಸ್ಥಾನಕ್ಕೆ ತಕ್ಕು
ದಂ ನೆಗೞ್ವುದು; ನೆಗೞಲೊಲ್ಲದೆ ಮತ್ತೊಂದು ಗುಣಸ್ಥಾನದೊಳ್ ನೆಗ
ೞ್ವೆನೆಂದು ನೆಗೞುತ್ತುಮಿರ್ಪೊಡೆ ಪೊಡೆಯಂ ಕೊಯ್ದು ಧಾನ್ಯವರ
ಸುವ, ಪಸಿಯಂ ಕುಟ್ಟಿಯಕ್ಕಿಯಱಸುವ, ಬೇಪ ಕೂೞಿನೊಳ್
ರುಚಿಯಱಸುವ, [ನೆಲ್ಲನಟ್ಟು ಮೃದುಗೂೞಿನಱಸುವ] ನೆಲಗಟ್ಟಿನ
ಮೇಲೆ ಕಲಶಮನಿಡುವ, ಗುಂಡೋತ್ತರದ [6] ಮೇಲೆ ಸೊದೆಯಂ ಬೞಿವ,
ಕಂಭನಿಱುಗೆಯಿಲ್ಲದೆ ಜಿನಭವನಮಂ ಮಾೞ್ಪ, ಮುಚ್ಚಳಮಿಲ್ಲದೆ ಪ್ರತಿ
ಷ್ಠೆಯಂ ಮಾೞ್ಪ, ರಂಗಮಿಲ್ಲದೆ ಕಂಭಮಂ ನಿಱಿಸುವ, ಪಾಲ್ದೆನೆಯ
ನೊಕ್ಕುವ, ಸಸಿಯಂ ಕೊಯ್ದು ಮೆದೆಯನೊಟ್ಟುವ, ಬಿತ್ತುವ ಕಾಲ
ದೊಳ್ ಬೆಳಸನಱಸುವ, ಬಿತ್ತದೆ ಸಸಿಯಂ ನೋಡುವ, ಕಟ್ಟೆಗ್ಗನಂ
ಪೋಲ್ಕುಮದುಕಾರಣದಿಂದನ್ನೆವರಂ ದೇಶಸಂಯತಗುಣಸ್ಥಾನದೊಳಂ
ಪ್ರಮತ್ತಾಪ್ರಮತ್ತಗುಣಸ್ಥಾನದೊಳಮಿರ್ಪನ್ನೆವರಮಣುವ್ರತಿಗಳುಂ
ಮಹಾವ್ರತಿಗಳುಂ ಮಱೆಯದೇಕಚಿತ್ತದಿಂದಾಹಾರಾಭಯಭೈಷಜ್ಯ
ಶಾಸ್ತ್ರದಾನದೊಳಂ ಅನಶನಾದಿತಪದೊಳಮಾರ್ತಣ್ಮೆ ನೆಗೞುತ್ತುಂ

---

1 ರಂಗಗಟ್ಟಣಬಂತ (ಗ) 2 ಕಣಕ ಖಂದಂತೆ (ಖ. ಕ.)
3 ಭಕ್ಷಣದಂತೆ (ಕ. ಖ.) 4 ಉಪಶಾಂತಕಷಾಯ ಕ್ಷೀಣಯೋಗಿಸ
ಯೋಗಿ (ಗ) 5 ಪದಿನಾಲ್ಕುಂ (ಗ) 6 ಗುಂಡವತ್ತದ (ಕ. ಖ.)

ಜಿನಸ್ವಾಮಿಯುಂ ಪೂಜಿಸುವುದು ಬಣ್ಣಿಸುವುದು [1] ನಿಚ್ಚನಿಚ್ಚಲೆಂದು
ಪರಮಾಗಮದೋಜೆಯುಂ ಭಾವಿಸ || ೨೪

ನಯವಿದನಪ್ಪುದಱಿಂ ದು
ರ್ನಯಮಂ ಬಿಸುಟೇಕಚಿತ್ತದಿಂ ನಂಬಿರ್ದಂ |
ಭಯಮಿಲ್ಲದೆ ಜಿನಪತಿಯಂ
ನಯಸೇನಂ ಸುಕವಿನಿಕರಪಿಕಮಾಕಂದಂ || ೨೫

ದಿವಿಜೇಂದ್ರಂ ಜಿನಪೂಜೋ
ತ್ಸವದೆಸಕದಿನಿಲ್ಲಿ ಬಂದು ಮುಕ್ತಿವಧೂಟೀ |
ಧವನಪ್ಪನೆಂದೊಡಿನ್ನೊ
ಪ್ಪುವೆ ಜಿನರಂ ನಂಬಿದಂಗೆ ಕೇಳರಡುಂಟೇ || ೨೬

ಜಿನರೂಪಿಂದಮಭವ್ಯನು
ಮಿನಿತು ನವಗ್ರೈವೆಯಲ್ಲಿ [2] ಪುಟ್ಟುವನೆನೆ ಮೇ |
ದಿನಿಯೊಳ್ ಜಿನೇಂದ್ರಭಕ್ತಂ
ಗನಘಶ್ರೀ ಸೋಲ್ವಳಂಬುದಾವುದು ಗಹನಂ || ೨೭

ಕಿಱಿದಪ್ಪ ವ್ರತವಿಂಗಂ [3]
ದೆಱಗಿದ ಮಾದೆಗನುಮಗ್ಗದ ವ್ಯಂತರರಿಗ |
ರ್ಗೆಱೆಯುಂ ತಾನಾದಂ ಪದೆ [4]
ದೆಱಗೆ ಜಿನಂಗಮೃತಪದವಿ ಗಹನಮೆ ಜಗದೊಳ್ || ೨೮

ಪದೆಪಿಂ ಕಾಗೆಯ ಮಾಂಸದ
ಬಿದುಪಿಂಗಂ ಖದಿರಸಾಗರಂ ದಿವಿಜಸುಖಾ [5] |
ಸ್ಪದನಾದನೆಂದೊಡರ್ಹ
ತ್ಪದಮಂ ಪಿಡಿದಂಗೆ ಮೋಕ್ಷಮಾವುದು ಗಹನಂ || ೨೯

---

1 ನೆನೆವುದುಂ (ಗ) 2 ಮೇನಿಪನವಗ್ರೈಯುಲ್ಲಿ (ಕ. ಖ.) ಮಿನಿತುಂನವ
ಗ್ರೈವೆ (ಗ) 3 ದಿಂಗಂ (ಗ) 4 ಗರ್ಱಿಯುದೆರೆಯುನಾದನೆನೆಸಂ (ಕ.ಖ.)
5 ಮಾಂಸವು ಮುದದಿಂದಂ ಬಿಟ್ಟು ಕದಿರಸಾಗರ ದಿವಿಜಾ (ಗ)

ಓದನಮುಂಡಂ [1] ಮನ್ನಣೆ
ಗಾದ ಮಹಾಮೋದದಿಂದೆ ತಪಮಂ ಕೈಕೊಂ |
ಡಾದಂ ಸುರೇಶನೆನೆ ಜಿನ
ಪಾದಶರಣ್ಯಂಗೆ [2] ಜಗದೊಳರಿದೊಂದುಂಟೇ || ೩೦

ದೃಢಸೂರ್ಯನೆಂಬ ಕಳ್ಳಂ
ಗಡ ಜಿನಶರಣೆಂಬ ಪೆಂಪಿನಾಱಕ್ಕರಮಂ |
ಪಿಡಿದಮರನಾದನೆಂದೊಡೆ
ಪಿಡಿದಂಗರಿದುಂಟೆ ಲೋಕದೊಳ್ ಜಿನಪದಮಂ || ೩೧

ವರದತ್ತಯೋಗಿಗಿಕ್ಕಿದ
ಪರಮಾನ್ನದಿನಂದು ಸೋಮಶರ್ಮನ ಸತಿ ಭೂ |
ಪುರೆ ಯಕ್ಷಿಯಾದಳೆಂದೊಡೆ [3]
ಪರಮಜಿನಂಗೆಱಗಿದಂಗೆ ಪೇೞರಿದುಂಟೇ || ೩೨

ಪುರುದೇವನನಾರಾಧಿಸೆ
ಧರಣೇಂದ್ರಂ ಬಂದು ನಮಿವಿನಮಿಗಳ್ಗೆ ವಿಯ |
ಚ್ಚರಪದಮನಿತ್ತ [4] ನೆಂದೊಡೆ
ಪರಮಜಿನೇಶ್ವರನ ಪೆಂಪು ಸಾಧಾರಣಮೇ || ೩೩

ದ್ರುಮಸೇನಂ ಜಿನನಾಥ
ಕ್ರಮಮಂ ಮತಿಯಲ್ಲಿ ನಿಲಿಸಿ ಕರ್ಮಂಗಳನ |
ಶ್ರಮದಿಂ ಕಿಡಿಸಿದನೆಂದೊಡೆ
ವಿಮಳಜಿನಾರಾಧಕಂಗೆ ದುರ್ಗಮೆ ಮೋಕ್ಷಂ || ೩೪

ಬಿಡದೆ ರಥನೇಮಿ ಜಿನರಂ
ಬಿಡದೆ ಮಹಾವ್ಯಸನಿಯಾಗಿಯುಂ [5] ನಿರ್ವೃತಿಯುಂ |

---

1 ಓದನಮನುಂಡು (ಗ) 2 ಪಾದಂ ಶರಣಂಗೆ (ಗ)
3 ಯಕ್ಷನಾದನೆಂದೊಡೆ (ಗ) 4 ಮಹಿಮೆಯಿತ್ತ (ಗ)
5 ಪಡೆದ ಮಹಾತ್ಮಂಗೆ ಸಕಲಸುಖ (ಕ. ಬ.)

ಪಡೆದನೆಸ ಕೇಳ ಬಲ್ವಿಡಿ
ವಿಡಿದಂಗೆಡಱಂಟೆ ಜಿನಗ ಚರಣದ್ವಯಮಂ ॥ ೩೫

ಜಿನನಾಳ್ದಂ ಬಂಟನೆ ನಾಂ
ಜಿನಪತಿಗೆಂಬನಿತಱಿಂ ಶಿಳಾಪುತ್ರಂ ನೆ ।
ಟ್ಟನೆ ಮುಕ್ತನಾದನೆಂದೊಡೆ
ಜಿನಪತಿಗಾಳಾಗೆ ಮುಕ್ತಿಪದಮರಿದಾಯ್ತೇ ॥ ೩೬

ಇಲ್ಲಿಯೆ ಜೈನವ್ರತಮಂ
ಬಲ್ಲಿತುಪಿಡಿದಂಗೆ ಬಾಧೆಯಾಗದು ಬಿಟ್ಟಂ ।
ಗೆಲ್ಲಿಲ್ಲದ ಪೀಡೆಗಳುಂ
ನಿಲ್ಲದೆ ಬಂದಡಸುಗೆಲ್ಲರುಂ ಬಲ್ಲರಿದಂ ॥ ೩೭

ಕೊರಳ ಶಕ್ತಿಯಿಲ್ಲದೊರಳಂ ನುಂಗುವೆನೆಂಬ, [1] ಕಯ್ಯ ಶಕ್ತಿಯಿಲ್ಲದೆ ಕಳ್ಳನಂ ಪಿಡಿವೆನೆಂಬ, ತಲೆಯ ಶಕ್ತಿಯಿಲ್ಲದೆ ಪೆರ್ಗಲ್ಲಂ [2] ಪೊಱುವೆನೆಂಬ, ಮೆಯ್ಯ ಶಕ್ತಿಯಿಲ್ಲದೆ ಬಲ್ಲೂಟಮನುಣ್ಬೆನೆಂಬ ನಿರ್ಬುದ್ಧಿಯಂತೆ, ವರುಷಮಱುದಿಂಗಳುಪವಾಸಂಮಾಳ್ಪ, ವರುಷಮಱುದಿಂಗಳೊಂದೆಡೆಯೊಳ್ ನಿಲ್ವ, ಬೇಡರ ಪಗೆವರ ಕ್ರೂರಮೃಗಂಗಳ ನಿಷ್ಠುರಮಪ್ಪ ಬಾಧೆಯುಂ ಸೈರಿಸುವ, ಸಕಳಶ್ರುತಮುಮನಱಿವ, ಮುನ್ನಿನ ಮಹಾಪುರುಷರ್ಗೆ ಧ್ಯಾನಮೆರಡುಗಳಿಗೆಯಿಂ ಮೇಲೆ ನಿಲ್ಲದೆಂದು "ಉತ್ತಮಸಂಹನನಸ್ಯೈಕಾಗ್ರಚಿಂತಾ [ನಿರೋಧೋ] ಧ್ಯಾನಮಂತರ್ಮುಹೂರ್ತಾತ್" [3] ಎಂಬೀಸೂತ್ರಮಂ ಪೂರ್ವಾಚಾರ್ಯರ್ ನುಡಿದರದುಕಾರಣದಿಂ ಬೇಳಾಗದೆ "ದರ್ಶನಶುದ್ಧತಾವಿನಯಸಂಪನ್ನತಾಶೀಲಪ್ರತೇಷ್ವನತಿಚಾರಃ" ಎಂಬ ಜಿನೋದಿತಮಂ ನಂಬಿ ತಮ್ಮ ಗುಣಸ್ಥಾನಮನಱಿದು ಪ್ರಥಮಾನು [4] ಯೋಗದ [5] ಕರಣಾನು [6] ಯೋಗದ ದ್ರವ್ಯಾನು [7]

---

1 ಕಾಲಶಕ್ತಿಯಿಲ್ಲದೆ ಪಿರಿದು ಪರಿವೆನೆಂಬ, (ಗ) 2 ವೆಗ್ಗಳಮಂ (ಗ)
3 ಮುಹೂರ್ತಂ (ಗ)
4, 5, 6 ನಿಯೋಗ (ಗ) 7 ಚರಣಾನಿಯೋಗದ (ಗ)

ಯೋಗದ ಪೇೞ್ದ ಕ್ರಮಮಂ ತಪ್ಪಲೀಯದೆ ಲೇಸಾಗಿ ಭಾವಿಸಿ, ಸಸಿ ಧಾನ್ಯದೊಳ್ ತೋಂಟಂ ಗಿಡುವಿನ ಫಲದೊಳ್ ಶಿಶು ಕುಮಾರತ್ವದೊಳ್ ಕಬ್ಬು ರಸದೊಳ್ [ವೀರರ್ ಗೆಲ್ದದೊಳ್] ಪಾಲ್ ತುಪ್ಪದೊಳ್ ಕಾರ್ [1] ಮೞೆಯೊಳ್ ಭೂಪರ್ ತೆಱೆಯೊಳ್ ಮಗಂ ಮುಪ್ಪಿನೊಳ್ ಪೆಂಡತಿ ಕುತ್ತದೊಳ್ ಫಲಮಂ ತೋರ್ಪಂತೆ, ಮುನ್ನಮಧ್ಯಾತ್ಮಂ ಮೊದಲಾದ ಜೈನಾಗಮಮನಱಿದು ಆತ್ಮತತ್ತ್ವಫಲಮಂ ನಿರ್ವೃತಿಯ ಫಲಮುಮನೆ ಯ್ದುವ ಶ್ರಾವಕಂಗೆ ದಾನಾದಿಧರ್ಮಂ ಋಷಿಯರ್ಗೆ ಕ್ಷಮೆ ಮೊದ ಲಾದ ದಶಧರ್ಮಮಿವಱೊಳ್ ಶಕ್ತಿಗೆ ತಕ್ಕಂತು ನೆಗೞ್ದು ಕಡೆಯೊಳ್ ಲ್ಲಮಂ ತೊಱಿವುದಧ್ಯಾತ್ಮದ ಫಲಮಿನಿತಲ್ಲದೆ ತಳಾಱನ ಮನೆಯಂ ಕಳ್ಳಂ ಪೊಕ್ಕನೆಂಬ ಮಾಸಾಳು ಕುತ್ತನೆಂಬ ನೀರುರಿದುದೆಂಬ ಸೊಬಗೆಗೆ ಸವತಿಯಾದಳೆಂಬ ಜೋಯಿಸನ ಮಗಳ್ [ಪಸೆಯಮೇಲೆ] ರಂಡೆಯಾದ ಳೆಂಬ ಸಕುನಿಗನುಟ್ಟುದಂ ಕೊಟ್ಟನೆಂಬ [ಕಲಿ ಬಡಿವೆತ್ತನೆಂಬ] ಕಷ್ಟ ತಿಕ್ಕೆಯುಂ ಮಾಡಿ ಪೆಱರ್ ತತ್ತ್ವಮನೆನ್ನಂತಾರಱಿಯರೆಂದು ಪೊಟ್ಟೇ ಱಿಸಿ ತನ್ನ ಶಕ್ತಿಯು[ಮಂ ಮತಿಯುಮ] ನೊಂದುಮನಱಿಯದೆ ಶುದ್ಧಾಚಾರಮಂ ಬಿಟ್ಟು ವಜ್ರವೃಷಭನಾರಾಚಸಂಹನನದವರಂ ನೋಡಿ ತಾನುಂ ಷಡಾವಶ್ಯಕಕ್ರಿಯೆಗಳಂ ಪರಿಹರಿಸಿ ಮೆಚ್ಚಿದಂತೆ ನೆಗೞ್ದು ಜಿನರನಗಲ್ದು ಮುಕ್ತಿವಡೆವೆನೆಂಬುದು ಸೊಡರುಮಾದಿತ್ಯನುಂ ಚಂದ್ರನು ಮಿಲ್ಲದೆ ಕಾಣ್ಬೆನೆಂಬ, [2] ಕಿರ್ಚಿಲ್ಲದೆ ಸೊಡರಂ ಪೊತ್ತಿಸುವೆನೆಂಬ ಬೆಳ್ಳನ ಮಕ್ಕಮದಱಿಂ ಕ್ಷೀಣಕಷಾಯರಾಗದನ್ನೆವರಮಿತ್ತಣವರ್ಗೆಲ್ಲಂ [3] ಜಿ ನೇಂದ್ರಪದಮೆಂಬ ಬಟ್ಟೆಯುಂ ಪೊರ್ದದೆ ಜಿನೇಂದ್ರಭಕ್ತಿಯೆಂಬ ಕುದು ರೆಯನೇಱದೆ ಜಿನೇಂದ್ರಾರಾಧನೆಯೆಂಬ [4] ಪೊಲಂಬಿಗನಿಲ್ಲದೆ ಜಿನೇಂದ್ರ ನಮಸ್ಕಾರಮೆಂಬ ನೆರಮಂ ಪಾರದೆ [5] ಜಿನೇಂದ್ರಾಲೋಕನಾನಂದಮೆಂಬ

---

1 ಕಾಲಂ (ಗ)

2 ಮಳೆಯಿಲ್ಲದೆ ಬಿತ್ತುವೆನೆಂಬ, ನೆಲವಿಲ್ಲದೆ ಬೆಳೆವೆನೆಂಬ, ಕಣ್ಣಿಲ್ಲದೆ ಕಾಣ್ಬೆನೆಂಬ (ಗ) 3 ಅನ್ನೆಗಮುತ್ತಮಗುಣಸ್ಥಾನದವರ್ಗೆಲ್ಲಂ (ಗ)

4 ಜಿನೇಂದ್ರಾಧಾರಮೆಂಬ (ಗ) 5 ನೆರಮಂ ಪೊಗದೆ (ಗ)

ಸಂಬಳವಿಲ್ಲದೆ ನಿರ್ವಾಣಪುರಕ್ಕೆ ಪೋಗಲ್‌ಬಾರದೆಂದು ಜಿನಾಗಮದಿಷ್ಟ
ದಿಂ ತತ್ತ್ವಮಂ ಮನದೊಳವಧಾರಿಸಿ ॥ ೩೮

ಜಿನನೆ ಗುರು ಜಿನನೆ ದೈವಂ
ಜಿನನೆ ಕುಲಸ್ವಾಮಿ ಜಿನನೆ ನಂಬಿರ್ದಾಳ್ವಂ[1] ।
ತನಗೆಂಬ ಪೆರ್ಚಿನಿಂ ನೆ
ಟ್ಟನೆ ನಲಿದಂ ಸುಕವಿನಿಕರಪಿಕಮಾಕಂದಂ ॥ ೩೯

ಮನದೊಳ್ ಜಱಿಯದೆ ಬೆಚ್ಚದೆ
ಮುನಿಯದೆ ಸೆಡೆಯದೆ ನಿಳಿಂಪನಗನಿಭಧೈರ್ಯಂ ।
ತನುವಿನಮೇಲಣ ಮೋಹಂ
ತನಗಿಲ್ಲದೆ ತಳರದಿರ್ದನುನ್ನತಚಿತ್ತಂ ॥ ೪೦

ಅಂತು ಚಿತ್ತದೊಳಳ್ಕದೆ ಜಿನಾಗಮಮಂ ಭಾವಿಸುತ್ತುಮಿ
ರ್ಪುದುಂ [ಪೆಗಲೆಲ್ಲಂ ಬೆಂದು] ತೋಳ ಮೊದಲಂ ಕಿರ್ಚಳುರ್ವಾಗಳ್
ನರವುಗಳ್ ತೆಗೆದು ತೋಳ್ ತನಗೆ ತಾನೆ ನೆಗೆವುದುಂ, ವಿಡಂಬಂ [ಸೊಡ
ರಂ ಕಂಡ ಕೋಡಗದಂತೆ ಬೆಬ್ಬಳಿಸಿ] ಕಾಡೆದುದೆಂದು ಬೆರ್ಚಿ [ಬೆಗ
ಡು ಗೊಂಡು ತಾಂ ಮಂತ್ರವ್ಯಾಕರಣಮನಱಿಯನಪ್ಪುದಱಿಂ ಮಂತ್ರ
ದೊಳಾದ ಹೀನಾಧಿಕಮನಱಿಯದೆ ಮತಿಗೆಟ್ಟು ॥ ೪೧

ಮರನುಂ ಗಿಡುವುಂ ಪೊದರುಂ
ತರತರದಿಂದಿರ್ದ ತರುನಿಕಾಯಮುಮೆದುರ್ ।
ಬ್ಬುರಮಾಗೆ ಬಂದು ತನ್ನಂ
ಸೆರಗಿಲ್ಲದೆ ನುಂಗುವಂತೆ ತೋರ್ಪುದುಮಾಗಳ್ ॥ ೪೨

ಕೆಟ್ಟೆನೆಂದು ಬಾಯ್ಬಿಟ್ಟು ತಡವರಿಸಿ ಪೆಱಗಣ್ಗೆ ಬಿರ್ದಟ್ಟುದುಮಂ
ಸುರಗಿಯುಮನೀಡಾಡಿ ಮೆಯ್ಯಱಿಯದೆ] ಕೊಳ್ಪಟ್ಟರಂತೆ ಬತ್ತಲೆ
ಕರುಳ್ ಪಱಿವಿನಮೋಡುವುದುಂ ಜಿನಪಾಲಿತಮುನಿನಾಥಂ ಪಾಪಭೀರು
ವಪ್ಪುದಱಿಂದಾತನ ಪಾದಘಟ್ಟನೆಯಿಂ ತ್ರಸಸ್ಥಾವರಜೀವಂಗಳ್ಗೆ ಬಾಧೆ

---

1 ಜಗದಾರಾಧ್ಯಂ (ಗ)

ಯಾಗದೆ ಮಾಣದಕ್ಕಟಾ ಪೊಲ್ಲದಾಯ್ತೆಂದು[1] ಕಾರುಣ್ಯಹೃದಯನಾಗಿ ಪುರ್ದುಂ, [ವನದೇವತೆಯರುಂ] ನಗರದೇವತೆಯರುಂ ನೆರೆದು, ವಿಡಂಬನ ಡೊಂಬಾಟಕ್ಕಂ ಸಮ್ಯಕ್ತ್ವಚೂಡಾಮಣಿಯ ಧೈರ್ಯಕ್ಕಂ ಮನದೊಳಾದ ಜೀವದಯೆಗಂ ವಿಸ್ಮಯಂಬಟ್ಟು ಜಯಜಯನಿನಾದಮುಂ ದೇವದುಂದುಭಿಯುಮೊಡನೊಡನೆ ಸಮುದ್ರದಂತೆ ಘೂರ್ಣಿಸೆ [ಮೆಯ್ಯಱಿಯದೆ ರಾಗದಿಂ ಬಂದು] ನಮೇರು ಮಂದಾರಪಾರಿಜಾತಕಲ್ಪವೃಕ್ಷದರಲ್ಗಳಂ ಮುನಿಪುಂಗವನಮೇಲೆ ಸುರಿದು ಕರಕಮಲಂಗಳಂ ಮುಗಿದು ॥ ೪೨

[ಈ ಮುನಿನಾಥನಂತೆ ಮನದೊಳ್ ಕರಮಳ್ಕದೆ ನಿಂದ ಧೀರರಾ
ರೀಮುನಿವಂದ್ಯನಂತೆ ತನುವಂ ತೊಱೆದಳ್ಕದೆ ನಿಲ್ವ ಧೀರರಾ
ರೀಮುನಿರಾಜನಂತೆ ಜಿನತತ್ತ್ವದೊಳುನ್ನತನಾದನಾವನಿ
ನ್ನೀಮುನಿಪೂಜ್ಯನಂತೆ ದೃಢರಾರೊ ಮನಸ್ವಿಗಳಾರೊ ಲೋಕದೊಳ್ ॥

ತನ್ನಳವಂ ವಿಚಾರಿಸದೆ ನೋಡದೆ ಕೆಮ್ಮನೆ ತನ್ನ ವೀರಮಂ
ಕಿನ್ನರಭೂತಕಿಂಪುರುಷದೈತ್ಯನಿವಾಸಮನೆಯ್ದೆ ಡೊಂಬಿನಿಂ
ದುನ್ನತಚಿತ್ತನಂ ಪೆಣನೆ ಗೆತ್ತು ಖಳಂ ಪಿರಿದಪ್ಪ ಕಿರ್ಚಿನಿಂ
ದನ್ನೆಱೆ ಸುಟ್ಟೊಡಂ ಮನದೊಳಳ್ಕದೆ ಬಳ್ಕದೆ ಮಂದರಕ್ಷಮಂ ॥ ೪೩

ಮುನಿನಾಥನ ನಿಡುದೋಳ್ಗೆ
ದನಿತಱೊಳೋಡಾಗಿ ಸಾಧಕಂ ಭಯದಿಂ ಭೋಂ ।
ಕನೆ ಕೆಟ್ಟೆನೆಂದೊಡೀಪಿತೃ
ವನಮಂ ಪುಗುವಂಗೆ ಮತ್ತಮೆಂಟೆರ್ದೆಯೊಳವೇ ॥] ೪೪

ತನುವಂ ಧನಮಂ ಕೊಱೆದಿರ
ಲನುಪಮರೆನಿಸಿರ್ದ ಜೈನಯೋಗಿಗಮಭಿಮಾ ।
ನನಿಧಾನರಪ್ಪುಪಾಸಕ
ಜನಕ್ಕಮಳಪಡುಗುಮುೞಿದವರ್ಗದು ಮೊಗ್ಗೇ ॥ ೪೫

---

1 ತನ್ನಂ ತಾನೆ ನಿಂದಿಸಿಕೊಂಡು (ಗ)

ತನುವಿನ ಮೋಹಮಂ ಬಿಸುಟು ಪೆಂಡಿರ ಮಕ್ಕಳ ಪೊನ್ನ ಮೋಹದಿಂ
ಮನಮುರಿಬಟ್ಟು ಮೆಯ್ಸುಖಮನೊಲ್ಲದೆ ಬರ್ಪ ಪರೀಷಹಂಗಳಂ
ಘನತರಮಾಗೆ ತಾಳ್ದು ಪರಮಂ ನೆಱೆ ಸಾಧಿಸಲಯ್ಯ ಭಾಪು ಭಾ
ಪನುಪಮಜೈನಯೋಗಿಗಳ ಬಲ್ಲರಿಳಾತಳದೊಳ್ ನಿರಂತರಂ ॥ ೪೮

ಮನೆಯ ಕುಟುಂಬಮಂ ಪೊರೆಯಲೆಂದೆಡೆಯಾಡಿ ಪಲಂಬರಲ್ಲಿಗೊ
ಯ್ಯನೆ ಸುರರಾಯುಃಕ್ಕೆ ಸಿರಿಯಕ್ಕೆ ಮಹಾಸುಖಮಕ್ಕೆ ಮಕ್ಕಳ
ಕ್ಕೆನುತುಮಭೀಷ್ಟಮಂ ಕುಸಿದು ಪಲ್ದೆಱೆದಕ್ಕಟ ಬೇಡಿ ಬಾಳ್ವ ದು
ರ್ಜನತತಿ [1] ಪೇೞ ಪೆತ್ತಪರೆ ಜೈನರವೋಲ್ ಸುರರಾಜಸೌಖ್ಯಮಂ ॥ ೪೯

ಪರಿಯದೆ ವಾರವಾಳಿಯಯುಣಿಸಿಂಗೆ ಸಮರ್ಥರನಾಸೆಪಟ್ಟು ಬಂ
ದೆರೆಯದೆ ದೈನ್ಯವೃತ್ತಿಗೊಳಗಾಗದೆ ಸಂಸೃತಿವಾರ್ಧಿಯಲ್ಲಿ ಬಿ
ರ್ದುರುಳದೆ ವೀರವೃತ್ತಿಯನೆ ಪಾಟಿಸಿ ಮೋಕ್ಷಸುಖಕ್ಕೆ [2] ಚಿತ್ತಮಂ
ತಿರಿಪುತುಮಿರ್ದ ಜೈನಮುನಿಪುಂಗವರಿಂ ಮಿಗಿಲಾರೊ ಲೋಕದೊಳ್ ॥ ೫೦

ಎಂದು ಪಲತೆಱದಿಂ [ಪೊಗೞ್ವ ದೇವನಿಕಾಯದ ಕಳಕಳಮಂ ಪೊಯ್ವ ಪಂಚಮಹಾಶಬ್ದಪ್ರಘೋಷಮಂ] [3] ಪುರದವರೆಲ್ಲಂ ಕೇಳ್ದು ವಿಸ್ಮಯಂಬಡುತಿರ್ದರನ್ನೆಗಂ ॥ ೫೧

[ಮನಸಿಜನಾಗಕೇಸರಿ ಜಿನಾಗಮದೋಜೆಯಿನದ್ರಿಯಂತೆ ನಿಂ
ದನುಪಮಚಿತ್ತನಂ ಗುಣಕರಂಡನನುಜ್ಜ್ವಳಕೀರ್ತಿಕಾಂತನಂ
ಮುನಿಜನವಂದ್ಯನಂ ತಡೆಯದೀಗಳ್ ನೋಡುವೆನೆಂಬ ಮಾೞ್ಕೆಯಿಂ
ದಿನಕರನೇಱಿದಂ ದಿವಿಜರಾಜದಿಶಾವರಧಾರಿಣೀಂದ್ರಮಂ ॥ ೫೨

ಅಂತಾ]ದಿತ್ಯಂ ಪೂರ್ವಾಚಲಶಿಖರಶೇಖರನಪ್ಪುದುಂ ಪೂಣ್ಕೆ ತೀರ್ದ ಜಿನಪಾಲಿತಮುನಿವೃಂದಾರಕಂ ಯೋಗಮಂ ನಿರ್ವರ್ತಿಸಿ ತಡೆಯದಲ್ಲಿಂದೆರ್ದು ಬರ್ಪುದುಂ ತನ್ಮುನಿನಾಥನಂ ಜಿನದತ್ತಂ ಕಂಡು ಮನದಾದರದಿಂ ವಂದಿಸಿ ತಮ್ಮ ಮನೆಗೆ ಬಡಗೊಂಡು ಬಂದು ದೇಹಾರದೊಳಿರಿಸಿ ॥ ೫೩

---

1 ಜನಪತಿ (ಕ.ಖ.) ದುರ್ಜನರತಿ (ಗ)

2 ಪದಕ್ಕೆ (ಕ.ಖ.) 3 ಪುರದೇವತೆಗಳುಂ (ಗ)

[ಅಲ್ಲಿಗೆ ದಿವ್ಯೌಷಧಮಂ
ಬಲ್ಲವರಂ ತರಿಸಿ ವೈಶ್ಯತಿಲಕಂ ಮುಂದಿ ।
ರ್ದಲ್ಲಿಂದಗಲದೆ ಬೀಯ
ಕ್ಕುಳ್ಳಳ್ಕದೆ ಕೊಟ್ಟು ಪೊಂಗಳಂ ಪ್ರಿಯದಿಂದಂ ॥ ೫೪

ಮತ್ತಂ] ತಾನೆ ಕೆಲದೊಳಿರ್ದು ಪಥ್ಯಪಾನಂಗಳಂ ಪ್ರಯತ್ನದಿಂ ಮಾಡಿ ನಿರ್ದಯನಂತೆ ನಿಷ್ಕರುಣಿಯಾಗದೆ [1] ಪಾವಂ ಪಿಡಿದವರಂತೆ ದೂರದೊಳಿರದೆ, ಕುವಿಟನೊಳ್ ಕೂಡಿದ ಸೂಳೆಯಂತೆ ಮೊಗಂ ದಿರುಪದೆ, ಮನೆಯ ಗಂಡನಂ ಕಂಡ ಪಾದರಿಗಗಂಡನಂತೋಸರಿಸದೆ, [2] ಜೀವಿತಂಗುಡದಾಳ್ದನ ಬೆಸಕ್ಕಂಜುವ ಬಂಟನಂತೆ ಮನದೊಳ್ ಜುಱಿಯದೆ, ಕ್ರೂರರೊಡನೆ ಬಟ್ಟೆವೋಪ ದ್ರವ್ಯಪತಿಯಂತೆ ಪೆಱಗುಱಿಯದೆ, ಪೊಲೆಬೂತಿಂಗೆ ಕೊಡುವರ್ಥದಂತೆ ಪೆಱರಮೇಲೆ ನೆವಮಿಕ್ಕದೆ, ಅಳಿಯನಂ ಕಂಡತ್ತೆಯಂತೆ [3] ಲಜ್ಜಿಸದೆ, ಕೀೞ್ಜಾತಿಯಂ ಕಂಡ ಕುಲಜನದಂತುದಾಸೀನಂಗೆಯ್ಯದೆ ಪರಮಭಕ್ತಿಯಿಂದೋವುದುಂ, ಕೆಲವುದಿವಸಕ್ಕೆ ಪುಣ್ಣೆಲ್ಲಂ ಮಾಯ್ದು [ಲೇಸಪ್ಪುದುಂ ಜಿನಪಾಲಿತಮುನಿತನ್ನೊಳಿಂತೆಂದಂ ॥ ೫೫

ವಿಪರೀತದ ಪುಣ್ಣಿನಿದಂ
ಕೃಪೆಯಿಂ ಸಾರಿರ್ದ ವೈಶ್ಯವಂಶಲಲಾಮಂ ।
ಸುಪರೀಕ್ಷೆಯುಳ್ಳ ವೈದ್ಯರಿ
ನಪಹರಿಸಿದನಿಂತು ಸಾರ್ದ್ರಹೃದಯರುಮೊಳರೇ ॥ ೫೬

ಎಂದು ಮನದೊಳ್ ಮೆಚ್ಚಿ ಕಿರ್ಚಿನೊಳಾದ ವೇದನೆಯುಂ ಮನದೊಳಾದ ಸಂಕ್ಲೇಶಮುಂ ತೀರ್ದುದೆನಿತುಕಾಲಮಿಲ್ಲಿರ್ದೆನನಿತೆ ಸಾಲ್ಗುಮಿನ್ನು ಧರಣೀತಳದೊಳ್ ವಿಹಾರಿಸುವೆನೆಂಬ ಬಗೆಯಂ ತಂದು,] ಸೆಟ್ಟಿಗೆ ತಮ್ಮ ಪೋಗಂ ಪೇೞ್ದು ತದಾಲಯದಿಂ ಪೊಱಮಡುವುದುಂ ॥ ೫೭

---

[1] ಚನ್ನಸೂಳೆಯಂತೆ ವಯಸ್ಸದೆ (ಕ.ಖ.)

[2] ಬಳಸರಿಯದೆ (ಗ) [3] ಪೆಱರಂ ಕಂಡು (ಗ)

[ಪರಮಮುನಿಪಾದಾಂಬುರುಹಮ
ನುರುವಂದನೆಗೆಯ್ದು ಮಗಲಲಾಱದೆ ವೈಶ್ಯಂ ।
ಖರಭಾನು ಪೆಱಗೆ ನಿಲ್ಲದೆ
ಕರಮಾದರದಿಂದೆ ತಾನುಮಾತ್ಮಾಲಯಮಂ ॥ ೫೮

ಪೊಱಮಟ್ಟು ಬರ್ಪುದುಂ ಮುನಿ
ಕಿಱಿದಂತರದಲ್ಲಿ ನಿಂದು ಸದ್ಧರ್ಮಮನುಂ ।
ಮಱೆಯದೆ ಸನ್ಮುನಿಮತಮಂ
ತಱುವಲಿತನದಿಂದಮೇಳಿಸದೆ ನೀಂ ಮಗನೇ ॥ ೫೯

ಸದ್ಧರ್ಮಸಮೇತನುಂ ಸನ್ಮಾರ್ಗಪ್ರೀತನುಮಪ್ಪುದೆಂದು ಜಿನ
ದತ್ತಸೆಟ್ಟಿಯುಂ ಮೃದುವಚನಂಗಳಿಂ ಬೋಧಿಸಿ ಮನೆಗೆ ಮಗುಳ್ದು
ಪೋಗಿಮೆಂಬುದುಂ ಮಹಾಪ್ರಸಾದಮಂತೆಗೆಯ್ವೆನೆಂದು ಪ್ರದಕ್ಷಿಣಂಮಾಡಿ
ಬಂದಿಸಿ ಮನೆಗೆ ಬಂದಿರ್ಪನ್ನೆಗಂ ॥ ೬೦

ತಂದೆಯ ಪೋಗಂ ಕಂಡಾ
ನಂದದಿನರ್ಥಕ್ಕೆ ಮುನ್ನಮಡಹಡಿಸಿ ಮನಂ ।
ಗುಂದಿ ಕಡುನೊಂದು ಮನದೊಳ್
ಬೆಂದು ಮಹಾಮಱುಕದಿಂದಮಿರ್ಪ ದುರಾತ್ಮಂ ॥ [1] ೬೧

ಮನೆಯವರಂ ಬಂಚಿಸಿ ಮೆ
ಲ್ಲನೆ ದೂತಿಗಂ ಕೊಂಡು ಬೀಯಗದ ಕಯ್ಯಂ ನೆ ।
ಟ್ಟನೆ ತೆಱೆದು ಪಡಿಯನೊರ್ವನೆ
ಮನಮಂಜದೆ ಪೊಕ್ಕು ಕಂಡು ಕನಕಮನಾಗಳ್ ॥ ೬೨

ಸಂತೋಷಂಬಟ್ಟು ಮುನ್ನಿನಂತೆ ಪಡಿಯಂ ಕೆತ್ತು ಪೊನ್ನನಿಂದು [2]
ನೋಡಿ ಕಣ್ಬೇಹತನದಿಂ ತನ್ನಾರ್ಪನಿತಂ ಕಟ್ಟಿಕೊಂಡು ಪೋಪೆನೆಂದಿ

---

1 ಎಡೆವೆತ್ತಿನೆಂದು ಪೆರ್ಚ (ಕ)

2 ಪೊನ್ನನಿಂದುಂ (ಬ) ಪೊನ್ನನಿದುಂ (ಕ)

ರ್ಪುದುಂ ಜಿನದತ್ತಸೆಟ್ಟಿ ಬಂದು ಪೆಱತೊಂದುಮಂ ನೋಡದೆ ತನಗೆ ಪೊನ್ನೊಳಾದ ಮೋಹಂ ಪಿರಿದಪ್ಪುದಱಿಂ] [1] ಪೊನ್ನೆಡೆಯೊಳ್ ನಾಯನಪ್ಪೊಡಂ ನಂಬಲಾಗದೆಂಬ ನಾಣ್ಣುಡಿಯನವಧರಿಸಿ ಪೊನ್ನಿರ್ದೋವರಿಯ ಬಾಗಿಲಂ ನೋಡಿ ತನ್ನಿಕ್ಕಿದ ಬೀಯಗಮಂ ಕಾಣದೆ ಪಡಿಯಂ ನೂಂಕುವುದುಂ ಜಿನದಾಸಂ ತಂದೆ ಬಂದನೆಂದಱಿದು ಮನದೊಳ್ ಬೆಗಡುಗೊಂಡು [ನಾಡೆಯುಂ ಭಯಸ್ಥನಾಗಿ] ಪೊಱಮಟ್ಟು ಪೋಗಲಣ್ಮದೆ ಚಿನ್ನದ ದಿಂಡಿರ್ದೆಡೆಯಂ ಪೊಕ್ಕು ಮೇಲೊಂದು ಚಿನ್ನದ ದಿಂಡಂ ತೆಗೆದುಕೊಂಡು ತಾನಲ್ಲದಂತುಸಿರದಿರ್ಪುದುಂ ಸೆಟ್ಟಿ ಮನೆಯೊಳಗೆ ಪೊಕ್ಕು ನೋಡಿ ಪೊನ್ನ ರಾಸಿಯೊಳ್ ಕಿಱಿದು ಪೊನ್ ಪೋದುದಂ ಕಂಡು ॥ ೬೩

ಮಱುಕಂ ತೊಟ್ಟನೆ ಪುಟ್ಟೆ ನೊಂದು ಮತಿಗೆಟ್ಟೋವೆಂದು ಜಾಣ್ಗೆಟ್ಟು ಬೆಂ
ದಱಿತಂಗೆಟ್ಟೆರ್ದೆಗೆಟ್ಟು ಮೆಯ್ಮಱುಗಿ ಕೆಟ್ಟೆಂ ಬಾೞೆನೆಂದತ್ತು ಬಾ
ಯ್ದೞಿದೋರಂತಿರೆ ಕಂದಿ ಕುಂದಿ ಮನದೊಳ್ ಮಂಕಾಗಿ...ಮೆ
ಯ್ಮಱೆದಿನ್ನೇಗುವೆನೆಂದು ಮೋಹದೊದವಿಂ ಬಿರ್ದಂ ಧರಾಚಕ್ರದೊಳ್ ॥

ಅಂತು ಬಿರ್ದು [ಕಿಱಿದುಬೇಗದಿನೆರ್ದು ಕಳ್ಳನಿರ್ದನೆಂದು ಕೋಣೆಯಿಟ್ಟೆಡೆಕುಸುಕುಱೊಳೆಲ್ಲಂ ನೋಡಿ ತದಾವಾಸದೊಳಾರುಮಂ ಕಾಣದೆ ಮನೆಯುಂ ಪೊಱಮಟ್ಟು] ಪಡಿಯಂ ಕಿತ್ತು ಮುನ್ನಿನಂತೆ ಮುದ್ರಿಸಿ ಬಿಲ್ ಕೆಟ್ಟವರ್ ಕೀಲಂ ತಡವರಿಸಿದರೆಂಬು [ತೆ, ಕುದುರೆ ಕೆಟ್ಟವರ್ ಬಾದಣಮಂ ನೋಡಿದರೆಂಬಂತೆ] ನಾಣ್ಣುಡಿಯಂ ನನ್ನಿಮಾಡಿ ಮನದ ಮಱುಕದಿಂ ಭ್ರಮೆಗೊಂಡು ಜಿನಪಾಲಿತಮುನಿನಾಥನ ಕೊಂಡುಪೋದನೆಂದು ಬೆನ್ನನೆ ಪರಿದು ಮುನಿಕುಂಜರನನೆಯ್ದಿ ಮಾಯಾವಿನಯದಿಂ ಪೊಡೆಮಟ್ಟು ॥ ೬೪

---

1 ಕಿಱಿದಂತರಂ ಕಳುಪಿ ಬಪ್ಪನ್ನೆಗಮುನ್ನಮರ್ಥಕ್ಕಡಹಡಿಸುವ ಜಿನದಾಸಂ ಭಂಡಾರಮನೆಯಂ ಪೊಕ್ಕು ಪಡಿಯಂ ಕಿತ್ತು ಪೊನ್ನನಿಂದು ನೋಡಿ ಕಣ್ಬಾಹಿತತನದಿಂ ತನ್ನಾಸೆನಿತಂ ಕಟ್ಟಿಕೊಂಡು ಪೋಪೆನೆಂದಿರ್ಪುದುಂ ಜಿನದತ್ತಸೆಟ್ಟಿ ಬಂದು ಪೆಱತೊಂದುಮಂ ನೋಡದೆ (ಗ.)

[ಇನ್ನೆಗಮೆನ್ನನುತ್ತಮಗುಣಾಂಬುಧಿ ಭವ್ಯಪಯೋರುಹಾರ್ಕ ಮ
ತ್ತೆನ್ನದೆ ಕೂರ್ಮೆಯಿಂ ಪರಸುತಿರ್ದಿರವೋಘದಿನಿಂದು ಪೋಗಲಾ
ಗೆನ್ನನವಜ್ಞೆಗೆಯ್ದು ಬಿಸಿಲಾದುದು ನಿಮ್ಮಡಿ ನಾಳೆ ಪೋಪುದೆಂ
ದುನ್ನತಶೀಲರಂ ತೆಗೆವುದುಂ ನಯದಿಂ ಪಲವುಂ ಪ್ರತಂಗಳಂ ॥ ೬೬

ಮುನಿನಾಥಂ ಕಾರುಣ್ಯದಿಂ ಮಗುಳ್ವುದುಂ ಜಿನದತ್ತಸೆಟ್ಟಿ] ತನ್ನ ಮನೆಗೊಡಗೊಂಡು ಬಂದು ಪೊನ್ನಿರ್ದೋವರಿಯ ಬಾಗಿಲಲ್ಲಿ ಪಿರಿದಪ್ಪ ಮಣೆಯುಂ ತಂದಿಕ್ಕಿಸಿ [ಯತಿನಾಥನಂ] ಕುಳ್ಳಿರಿಸಿ ತಾನುಂ ಕೆಲದೊಳ್ ಕುಳ್ಳಿರ್ದು ತನ್ನೊಳಿಂತೆಂದಂ ॥ ೬೭

ತನುವಂ ಬಿಟ್ಟು ಪರತ್ರಯುಂ ಪಡೆವೆನೆಂಬಾಕಾಂಕ್ಷೆಯಿಂ ಜೈನಸೇ
ವನೆಯುಂ ಮಾಡುತುಮಿರ್ದು ನಿಷ್ಕಪಟದಿಂ ಪಾಪಾರಿಯುಂ ಗೆಲ್ದು ನೆ
ಟ್ಟನೆ ಕೈವಲ್ಯವಿಭೂತಿಯುಂ ಪಡೆಯದಿಂತೀಸಾಧು ಬೇಳಾಗಿ ಕೆ
ಮ್ಮನೆ ಮೋಹೋದಯದಿಂದಮೆನ್ನ ಧನಮಂ ತಾನೇಕೆ ಕಳ್ದೊಯ್ದನೋ॥

ಎಂದು [ತನ್ನ] ದುರ್ಭಾವದಿಂ ಲೋಭಿ ಗುಣವಿಶೇಷಮನಱಿಯನೆಂಬುದಂ ನನ್ನಿಮಾಡಿ ಮುನಿನಾಥನಂ ಕಳ್ಳನೆಂದು ನಿಶ್ಚಯಿಸಿ [ಪೊನ್ನನೊರ್ಮೆಯೆ ಬೇಡಿದೆನಪ್ಪೊಡೆ ಮಹಾತಪೋಧನರಂ ಬಱಿದೆ ಕಾಡುತುಮಿರ್ದಪನನ್ಯಾಯಿಯೆಂದು ಕೆಲದವರೆಲ್ಲಮೆನ್ನಂ ದೂಱಿ ಕೊಳ್ವರದುಕಾರಣದಿಂ ಮೆಲ್ಲನುಪಾಯದಿಂ ನುಡಿದು ಪೊಲ್ಲಮೆಯುಂ] [1] ದುರ್ಯಶಮುಮಾಗದಂತೆ ಬುದ್ಧಿಯಿಂದೆನ್ನ ಪೊನ್ನಂ ಕೊಳ್ವೆನೆಂದು ಮೆಲ್ಲನಲ್ಲಿಗೆ ತಕ್ಕಂತಪ್ಪ ಕಥೆಯುಂ ಪೇೞ್ದ[ಪೆನೆಂದಿಂತೆಂದಂ] ॥ ೬೯

ಮುನಿಪತಿ ಕೇಳ್ ಪೇೞ್ವೆಂ ಕಥೆ
ಯನಿದೊಂದಂ ವ್ಯಾಘ್ರಖೇಡಮೆಂಬಾಪೊೞಲೊಳ್ ।
ದಿನಕರಸನ್ನಿಭನಿರ್ಪಂ
ದಿನಕರನೆಂಬೊರ್ವನಾತನಗ್ರತನೂಜಂ ॥ ೭೦

1 ದೂಱುಂ (ಗ)

ಕರಾಳನೆಂಬನಾತಂ ದುಷ್ಟಗೋಷ್ಠಿಯಿಂ ಸಪ್ತವ್ಯಸನಸಮೇತನಾಗಿ ಪಲಕಾಲಮಿರ್ದೊಂದುದಿವಸಂ ಸೂಳೆಗೆ ಕುಡಲರ್ಥಮಿಲ್ಲದೆ ರಾಜಭವನಮಂ ಕನ್ನಮನಿಕ್ಕಿ ಪೊಕ್ಕು ತನ್ನಾರ್ಪನಿತು ಪೊನ್ನಂ ಕೊಂಡು ಮುನ್ನಿನ ಪರಿಯಿಂ ಪೊಱಮಡುವುದುಂ [ತೊೞಲ್ವ] ತಳಾಱರ್ ಕಂಡು ॥

[ಕಲ್ಲಿಂ ಗುಂಡಿಂ ಒಡಿಯಿಂ
ನಿಲ್ಲದೆ ಕೈಘಾರಮಿಡುತುಮವರೆಯ್ದುವುದುಂ ।
ತಲ್ಲಣಿಸಿ ಕರಾಳಂ ತಳು
ವಿಲ್ಲದೆ ನಿಲ್ಲದೆ ಭಯಸ್ಥನಾಗಿ ದುರಾತ್ಮಂ ॥ ೩೨

ಬೆನ್ನನೆ ಕಾಲ್ಗಾಗಿಸುತ್ತುಮಿನ್ನೆತ್ತ ಪೋದಪೆನೆಂದು ಬೆಗಡುಗೊಂಡು ಪರಿದು ಪರಿಯಲಾಱದೆ ಬಂದೊರ್ವ ಪರದನ ಕಾಲ್ಮೇಲೆ ಬಿರ್ದ ॥ ೩೩

ಸಾವಾದುದೆನಗೆ ನೀನೀ
ಸಾವಂ ಪೋಗಿಸುವುದೊಲ್ಲನೆಂದೊಡಮವರುಂ ।
ನಾನಾವಿಧದಿಂ ಕೊಂದಪ
ರಾಮಂಗಂ ಕಾಯಬಾರದಿಂದಿನ ಕೊಲೆಯಂ ॥ ೩೪

ಎಂದು ದೈನ್ಯವೃತ್ತಿಯಿಂ ನುಡಿದು] [1] ಕಳ್ಳನೊಳ್ಳಿದನಿಲ್ಲ ನಾಯ್ ಮೋನಿಯಿಲ್ಲೆಂಬ ನೀತಿಯಂ ಭಾವಿಸದೆ ಕಾರುಣ್ಯದಿಂ ಕರಾಳನಂ ತೆಗೆದು ತನ್ನ ಸಾರೆ ಕುಳ್ಳಿರಿಸಿ ಸೀರೆಯಂ ಪೊದೆದುಕೊಂಡಿರ್ದನನ್ನೆಗಂ ತಳಾಱರ್ ಪರಿತಂದೀಮನೆಯಂ ಪೊಕ್ಕನೆಂದು ಮನೆಯೊಳಗಱಸಿ ಕಾಣದೆ ಮುಂದೆ ಕುಳ್ಳಿರ್ದ ಸೆಟ್ಟಿ ಡೊಳ್ಳಿಗನಪ್ಪುದಱಿಂ ಪರೀಕ್ಷಿಸದೆ ಪೋದರಿತ್ತಲ್ ॥ ೩೫

[ಊರೊಳಗಾದುಲಿಯೆಲ್ಲಂ
ಭೋರೆನಲಿಂದುಡುಗೆ ಮನದ ನಿರ್ವೇಗಂ ವಿ ।

---

1 ಬೆನ್ನಟ್ಟಿ ಬೆಗಡುಗೊಂಡು ಪರಿದು ಪರಿಯಲಾಱದೆ ಬಂದೊರ್ವ ಪರದನ ಮನೆಯಂ ಪೊಕ್ಕು ಕಾಲಮೇಲೆ ಬಿರ್ದ ದೈನ್ಯವೃತ್ತಿಯಂ ನಡಿವುದುಂ (ಗ)

ಸತ್ತ್ರದೊಳ್ ಪೋಗೆ ಪರದನ
ಚೇಲಮನೊಳಗಿರ್ದುದ ಮೆಲ್ಲನೀಕ್ಷಿಸಿ ಚೋರಂ] ॥ ೭೬

ಪುಸಿಯ ತಾಯ್ಮನೆ ಪಾಪದಾಗರಮಿಂದ್ರಿಯಂಗಳ ಪೆರ್ಚುಗೆ ಶೋ
ಭಿಸುವ ಪೆಂಪಿನ ಕೇಡು ಕೋಪದ ಪುತ್ತು ದುಃಖದ ಬಿತ್ತು ದು
ರ್ವ್ಯಸನದಿಕ್ಕೆಯು ತಾವು ರೌರವಪಂಥಮಲ್ಲದೆ ಮನ್ಮಥ
ವ್ಯಸನಮೆಂಬ ಜಿನೇಂದ್ರವಾಕ್ಯಮನಾಖಳಂ ನೆಱೆ ತೋಱಿದಂ ॥ ೭೭

ಮತ್ತಂ ವ್ಯಸನಿಯಿಂ ಬಿಟ್ಟು ಪಾತಕರುಂ ಪುಲಿಯಿಂ ಬಿಟ್ಟು ಕ್ರೂರರುಮಿಲ್ಲೆಂಬ ಮಾತಂ ನನ್ನಿಮಾಡಿ ॥ ೭೮

ಈಪರದನ ಕತದಿಂದೆನ
ಗಾಪತ್ತಿದು ಪೋದುದಱಿದೊಡವನಿಯೊಳನಗಿ ।
ನ್ನೀಪರದನೆ ಸಖನೆನ್ನದೆ
ಪಾಪಯುತಂ ಪೊನ್ನೊಳಾದ ಪದೆಪನೆ ಬಗೆದಂ ॥ ೭೯

ಪುಸಿವಂಗೆ ಮಾಡಿದ ಹಿತಮುಂ ಕಳ್ಳಂಗೆ ಮಾಡಿದುಪಕಾರಮುಂ ಸಮುದ್ರದೊಳ್ ಒಳಕೊಂಡ ಮೞೆಯುಂ ಗ್ರಾಮಣಿಗೆ ಮಾಡಿದ ಗುಣಮುಂ ವ್ಯರ್ಥಮೆಂಬುದಂ ಮಾಡಿ [1] ತನ್ನ ಕಟ್ಟಿದ ಗೇಣಿಂ ಪರದನಂ ಜಾಲೆಯಾಡಂ ಕೊಲ್ವಂತೆ ಪೊರಱ್ಱು ಕೊಂದು ಚೇಲಮಂ ಕೊಂಡು ಪೋದನಂತೆ ಕೆಲರ್ ದುರ್ಜನತ್ವಮಂ ಮಾಳ್ಪರಲ್ಲದೆ ಪರಮೋಪಕಾರಮಂ ನೆನೆಯರೆಂದು ಪೇಱ್ದು ಸಿರದಿರ್ಪುದುಂ ಮುನಿಕುಂಜರಂ ಜಿನದತ್ತಂ ಪೇಱ್ದ ಕಥೆಯಂದಕ್ಕೆ ವಿಸ್ಮಯಂಬಟ್ಟು ॥ ೮೦

ಇಂದೀಜಿನದತ್ತನ ಕಥೆ
ಯಿಂದಂ ಲೇಸಲ್ಲದಿದಱ ಭಾವಂ ಬೇಱೇ ।
ನೆಂದಮನೂ ತಿಳಿಯದೀತನ
ಮಂದಿರದೊಳ್ ಕೇಳ ವಸ್ತುವೊಂದೇನಾನುಂ ॥ ೮೧

1 ನೆಱೆಮಾಡಿ (ಗ)

ಕೆಟ್ಟುದಱಿಂದೀತಂ ಬಾ
ಯ್ವಿಟ್ಟು ಮಹಾಮೋಹದಿಂದೆ ಮೆಯ್ಯಱಿಯದೆ ಜಾ ।
ಣ್ಗೆಟ್ಟು ಮತಿಗೆಟ್ಟು ಗತಿಯಂ
ಬಿಟ್ಟಿಪ್ಪಂ ಕಳ್ಳನೆಂದು ಶಂಕಿಪನಕ್ಕುಂ [1] ॥ ೮೨

ಇದೆಲ್ಲಮೀತನ ಗೊಟ್ಟಾಟಮಲ್ಲ ದುಷ್ಕರ್ಮದ ಗೊಟ್ಟಾಟಮೆಂದು ಮನದೊಳ್ ನಕ್ಕು ವಣಿಗ್ಜಾತಂಗೆ ನಂಬುಗೆಯಪ್ಪ[ಂತಿ] ಲ್ಲಿಗೊಂದು ಕಥೆಯಂ ಮೆಲ್ಲನೆ ಪೇೞ್ದೊಂದುಪೊಲ್ಲಮೆಯಂ ಕಳೆದುಕೊಳ್ವೆಮೆಂದು ಸೆಟ್ಟಿಗಿಂತೆಂದರ್ ॥ ೮೩

ಅತಿಶಯದಿಂ ಕೇಳ್ ದ್ವಾರಾ
ವತಿಯೆಂಬುದು ರಾಜಧಾನಿ ವೈಶ್ಯೋತ್ತಮ ಭೂ ।
ನುತನರ್ಧಚಕ್ರಿ ಧಾತ್ರೀ
ಪತಿ ನಾರಾಯಣನುದಾತ್ತನದನಾಳ್ವರಸಂ ॥ ೮೪

ಆತನ ಪುರಕ್ಕೆ [ಧರಣೀ
ಖ್ಯಾತರ್ ಗುಣಗಣಸಮೇತರುನ್ನತಶೀಲರ್ ।
ಪ್ರೀತಿಯಿನಪಗತದುರಿತ
ವ್ರಾತರ್ದ್ವಯ [2] ನಿಳಯರಮರಗಿರಿನಿಭಧೈರ್ಯರ್] ॥ ೮೫

ದಂಡಕರೆಂಬ ಋಷಿಯರ್ ಬರ್ಪುದುಮವರ [ಬರವಂ ಋಷಿ ನಿವೇದಕನಿಂದಱಿದು ನಾರಾಯಣಂ ಪರಿಜನಸಮೇತಂ ಬಂದು ವಂದಿಸಿ ಕಿಱಿದುಬೇಗಂ ಧರ್ಮಮಂ ಕೇಳ್ದು ಪಿರಿದಪ್ಪ ವ್ಯಾಧಿಯಿಂ ಮುನಿಪತಿ ಗಿಡಿಗಿಡಿಜಂತ್ರಮಾಗಿರ್ದುದಂ ಕಂಡು ತದ್ವ್ಯಾಧಿಯಂ ತೀರ್ಚುವೆನೆಂಬ ಬಗೆಯಂ ತಂದು ಬುದ್ಧಿವಂತನಪ್ಪುದಱಿಂ ನಿಮ್ಮಡಿ ನೀವೆನಗೆ ಕಾರುಣ್ಯಂಗೆಯ್ವಿರಪ್ಪೊಡೆ ಚಾತುರ್ಮಾಸ್ಯಮನೆನ್ನ ಪೊೞಲೊಳ್ ಮಾಡಿ ಪರಸುತ್ತುಮಿರ್ಪುದೆಂದು ಪಲವುಂ ವ್ರತವಿಶೇಷದಿಂ ಬೇಡಿಕೊಳ್ವುದುಂ

1 ಬಿಟ್ಟು ಕರಂ ಕಳ್ಳರೆಂದು ಸುತ್ತಿಪನಕ್ಕುಂ (ಗ)
2 ದ್ವಯೆ (ಕ. ಬ.)

ದಂಡಕಋಷಿ ಮೊಱೆಗಾಲಮೆಯುಮಡಸಿತಪ್ಪುದಱಿಂದೊಡಂಬಟ್ಟು "ತಥಾಸ್ತು" ಎಂಬುದುಂ ನಾರಾಯಣಂ ತನ್ನ ದೇಹಾರಕೊಡಗೊಂಡು ಪೋಗಿ ||] [1] ೮೬

ಶ್ರೀಕಾಂತಂ ಸದ್ವೈದ್ಯನ
ನೇಕಾಂತದೊಳಂದನೀಮುನೀಂದ್ರರ ರುಜೆಯಂ |
ವ್ಯಾಕುಳನಾಗದೆ ಕಳೆ ನಿ
ರ್ವ್ಯಾಕುಲಮಪ್ಪಂತು ಬೇಗಮೆಂಬುದುಮಾತಂ || ೮೭

ಅಂತೆ ಗೆಯ್ವೆನೆಂದು ಬೆಸನಂ ಕೈಕೊಂಡು ಪೋಗಿ ತದ್ವ್ಯಾಧಿಗೆ ತಕ್ಕಂತಪ್ಪ ದಿವ್ಯೌಷಧಂಗಳಂ ಕೂಡಿ ತಂದು ಭೂಪಾಲನ ಕೈಯೊಳ್ ಕುಡುವುದುಮರಸಂ ತನ್ಮುನೀಂದ್ರರೌಷಧಮೆಂದೊಡೆ ಕೊಳ್ಳರೆಂದುಪಾಯದಿಂ[ದೀಪರ್ವಮಿ]ದುಂಡೆಯ ಪರ್ವಮೆಂದು ಪ್ರಕಟಂಮಾಡಿ ಮರ್ದಂ ನವಣೆಯ ಪಿಟ್ಟನೊಳ್ ಕೂಡಿ ಕಿಱಿಯವಪ್ಪುಂಡೆಗಳಂ ಮಾಡಿ ತನ್ನ ಪದಿನಾಱುಸಾಸಿರ್ವರರಸಿಯರ ಮನೆಗೆಲ್ಲಮಿಾವುಂಡೆಗಳಂ ಮುನಿವಂದ್ಯರಿಂಗಿಕ್ಕುವುದೆಂದಟ್ಟುವುದುಂ || ೮೮

ಅರಸಿಯರಾತ್ಮವಲ್ಲಭನ ಪೇೞ್ಕೆಯೊಳಾಮುನಿವಂದ್ಯನಂ ಮನಂ
ಮುರಿಯದೆ ನಿಚ್ಚಲುಂ ನಿಲಿಸಿ ನಿಮ್ಮಡಿಯುಂಡೆಯ ಪರ್ವಮೀಗಳೀ
ಪುರದೊಳಮೀಮಹೀಶ್ವರನ ಗೇಹದೊಳಂ ಬಗೆವಂದಿವೂಟಮೆಂ
ದಿರದವನಿಕ್ಕೆ ಕಾಂತೆಯರ ಮಾತನೆ ನಂಬಿ ಮುನೀಂದ್ರನಂತಮಂ || ೮೯

ಮೆಲುತ್ತುಮಿರ್ಪುದುಂ ಕೆಲವಾನುಂದಿವಸಕ್ಕೆ ತನುವಿನೊಳಾದ ಕುತ್ತಮೆಲ್ಲಂ [ಕ್ರಮದಿಂ ಪಿಂಗಿ] ಪೋಪುದುಂ [ನಾರಾಯಣಂ ದಂಡಕಋಷಿಯ ವ್ಯಾಧಿ ಪೋದುದಕ್ಕೆ ಮುಯ್ಮುದಮಾಗಿ ಸಂತೋಷದಿಂದಿರ್ದುಂ, ವೈದ್ಯನುಂ ತನ್ನ ಮಾಡಿದ ಮದ್ದಿಂದಂ ರುಜೆಯೆಲ್ಲಂ ಪೋ

1 ನರಸಂ ವಂದಿಸಿ ತನ್ಮುನೀಂದ್ರನ ವ್ಯಾಧಿಯಂ ಕಂಡು ತದ್ವ್ಯಾಧಿಯನೆ ಕಳೆವೆನೆಂದು (ಗ)

ಯ್ತನ್ನಿಂ ವೈದ್ಯರಧಿಕರಾರೆಂದು ಪೆರ್ಚಿ ಮೆಯ್ಯಱಿಯದೆ ತನ್ನ ವೈದ್ಯದ ಮಹಿಮೆಯಂ ನಾರಾಯಣಂಗೆ ತೋಱಿ ಮೆಚ್ಚುಗೊಳ್ವೆನೆಂದು ದಂಡಕಋಷಿಯಂ ಸಾರೆ ಕುಳ್ಳಿರ್ದು ನಾರಾಯಣನಲ್ಲಿಗೆವೆಂದು ॥ ೯೦

ಅರಸಂಗಂ ಮುನಿಪತಿಗಂ
ಕರಮಾದರದಿಂದಮೆಱಗಿ ಕುಳ್ಳಿರ್ದು ಮುನೀ ।
ಶ್ವರಮುಖಕಮಲಮುಮಂ ವಿ
ಸ್ತರದಿಂದಂ ನೋಡಿ ನುಡಿದನಾಗಳ್ ವೈದ್ಯಂ ॥ ೯೧

ನಿತ್ತರಿಸಬಾರದೆನಿಸುವ
ಕುತ್ತಂ ಕಯ್ಕೊಂಡು ಬಿಡದೆ ಪತ್ತಿರ್ದುದು ಲೋ ।
ಕೋತ್ತಮರನಿನ್ನೆವರೆಗಂ
ಮತ್ತನಿಸದೆ ಬಿಟ್ಟು ಪೋದುದೀಗಳ್ ನಯದಿಂ][1] ೯೨

ಕಡುಲೇಸಾಯ್ತಂದಾತಂ
ತಡವಿಲ್ಲದೆ ಭಾಷೆಯಿಂದಮೆಂದೊಡೆ ಮುನಿಪಂ ।
ನುಡಿದಂ ಕರ್ಮದಿನಕ್ಕುಂ
ಕಡುದುಃಖಂ ಕಿಡುಗುಮತ್ತಮದಱುಪಶಮದಿಂ ॥ ೯೩

ಅದಾವುದು ಚೋದ್ಯಂ [ದುಃಖಂ ಕರ್ಮದೊದವಿನೊಳಮದಱುಪಶಮದಿಂ ಸುಖಂ ಸಮನಿಸುಗುಮೆಂದು ಮುನಿರಾಜುನವನಭಿಪ್ರಾಯಮನಱಿಯದೆ ಜಿನಾಗಮದೋಜೆಯಿಂದುಳ್ಳುದನುಳ್ಳಂತೆ ನುಡಿವುದುಂ ವೈದ್ಯಂ ಮುನಿದೆನ್ನ ಮಾಡಿದ ದಿವ್ಯೌಷಧದಿಂದುಪಶಮಮಾದುದೆನ್ನದೆ ಶುಭಕರ್ಮೋದಯಂ ಕಳೆದುದೆಂದೆನ್ನ ವೈದ್ಯಮನರಸನ ಮುಂದೆ ಕುಂಟುಮಾಡಿದನೆಂದು ಋಷಿಯ ಮೇಲೆ ಕೋಪಂ ಪುಟ್ಟೆ ಪಲಕಾಲಕ್ಕೆ ಪಿರಿದಪ್ಪಾರ್ತಂ ಪುಟ್ಟಿ][2] ಸತ್ತು ಕೋಡಗಮಾಗಿ ಪುಟ್ಟಿದನಿತ್ತಲ್ ॥ ೯೪

---

1 ವೈದ್ಯಂ ಬಂದರಸಂಗಂ ಮುನೀಂದ್ರಂಗಂ ಪೊಡವಟ್ಟು ನಿಮ್ಮಡಿಗಳ ಕುತ್ತಮೀಗಳ್ ಲೇಸಾಗಿ ಪೋದುದೆಂಬುದುಂ ॥ (ಗ)

2 ಎಂಬುದುಂ ವೈದ್ಯಂ ಋಷಿಯ ಮೇಲೆ ಕೋಪಂ ಪುಟ್ಟಿ ಪಿರಿದಪ್ಪಾರ್ತದಿಂ(ಗ)

ಯತಿನಾಥನುಮಾದ್ವಾರಾ
ವತಿಯುಂ ಪೂಜಿಮಟ್ಟು ಮುನ್ನಿನಾ ಕ್ರಮದಿಂದಂ |
ಕ್ಷಿತಿಯೊಳ್ ವಿಹಾರಿಸುತ್ತುಂ
ನುತವಾಕ್ಯಂ ತತ್ಕಪೀಂದ್ರನಿದರ್ಶನಮಂ || ೯೫

ಪೊಕ್ಕೊಂದುಮಾವಿನ [ಮರದ] ಕೆಳಗೆ ಶುದ್ಧಮಪ್ಪೆಡೆಯಂ ಪ್ರತಿಲೇಖನಂಗೆಯ್ದು ಕುಳ್ಳಿರ್ದು ಪಂಥಾತಿಚಾರಮಂ [1] ಮಾಡುತ್ತುಮಿರ್ಪುದುಂ, ಮುನ್ನಿನ ವೈದ್ಯಚರನಪ್ಪ ಕೋಡಗಂ ಕಂಡು ಜಾತಿಸ್ಮರನಾಗಿ ಪೂರ್ವವೈರಮಂ ನೆನೆದು || [2] ೯೬

[ಸೊಕ್ಕಿಂದಂದೆನ್ನಂ ಕರ
ಮುಕ್ಕಿಸಿಯುಂಭೋರುಹಾಕ್ಷನಾಸ್ಥಾಯಿಕೆಯೊಳ್ |
ದಕ್ಕಿಂದಲೆವಾಯ್ದೀಮುನಿ
ಯುಕ್ಕಂ ಲೇಸಾಗಿ ಕಿಡಿಸಿ ನೋವಂ ಮಾಪ್ಪೆಂ ||] ೯೭

ಎಂದು ಕಪಿ ಮಸಗಿ ಮರ್ಕಟ
ವೃಂದಂಬೆರಸೊಂದುಮಾವಿನೊಣಗಿದ ಕೊಂಬಂ |
ತಂದಿಕ್ಕುವುದುಂ ಮುನಿಜನ
ವಂದಿತಪದಯುಗನ ತೊಡೆಯುನಿರ್ಮ್ಮೆಯ್ಗಾಣಲ್ || ೯೮

ಅದು ಚೆಕ್ಕೆನಲುರ್ಚುವುದುಂ
ಸದಮಲಚಾರಿತ್ರನಳ್ಕಿ ತಲ್ಲಣಿಸದೆ ಬೆ |
ಚ್ಚದೆ ನೊಂದೆನೆಂದು ಮನದೊಳ್
ಕುದಿಯದೆ ತನುವೆನ್ನದಲ್ಲದೆಂಬಂತಿರ್ದಂ || ೯೯

[3] [ಮೋನದಿಂ ಮುನಿನಾಥನಿರ್ಪುದುಮಾಗಳಾಕಪಿ ನೋಡಿ ಸ
ಜ್ಜ್ಞಾನಿ ಮಂದರಧೈರ್ಯನೀಮುನಿ ತನ್ನ ದೇಹಮನೊಲ್ಲದಂ

---

1 ಪಂಥಾಚಾರನೇಮಮಂ (ಗ) 2 ನೆನೆದುಕೊಲಲೆಂದು (ಗ)
3 ಅಂತಿರ್ಪುದುಂ (ಗ)

ಗಾನು ಮಾಡುವೆನೆಂಬುದೆಗ್ಗಱಿವೈದ್ಯವುಂ ಕಡುಪಾಪಿಯೆಂ
ಹೀನನೆಂ ಕರಮೆಗ್ಗನೆಂ ಮುನಿಸಿಂ ವಿಚಾರಣೆಯಿಲ್ಲದಾಂ ॥] ೧೦೦

ನಿರಪರಾಧಂಗೆ ನೋವಂ ಮಾಡಿದೆನೆಂದು ತನ್ನಂ ತಾನೆ ನಿಂದಿಸಿ ಕೊಂಡು ಪಲವುಕೋಡಗಂಗಳ್ವೆರಸು ತೊಡೆಯನುರ್ಚಿ ನಟ್ಟಿರ್ದ ಕೊರಡಂ ಕಿೞ್ತು ಕಳೆದು ತಾಂ ಮುನ್ನಂ ವೈದ್ಯನಪ್ಪುದಱಿಂದಲ್ಲಿಗೆ ತಕ್ಕ ಮರ್ದಂ ಮಾಡಿ ಪುಣ್ಣಂ ಕಳೆದು ಬೞಿಕ್ಕಣುವ್ರತಧಾರಿಯಾಗಿ ಮುಡಿಪಿ ದೇವಗತಿವಡೆದುದಂತೆ ಕೆಲಂಬರ್ ಮೂರ್ಖರ್ ವಿಚಾರಣೆಯಿಲ್ಲದೆ ಸಾಧುಗಳಪ್ಪವರಂ ಬೞಿದೆ ಕಾಡುವರೆಂಬುದುಂ ಜಿನದತ್ತಸೆಟ್ಟಿ [ತನ್ನೊಳಿಂತೆಂದಂ ॥ ೧೦೧

ಪಡೆಯಲ್ಬಾರದ ಧನಮಂ
ಕಡುಲೋಭಂ ಕೊಂಡು ಕೈಗೆವಂದದನೆಂತುಂ ।
ಬಿಡಲಾಱದೆನ್ನ ಪೊನ್ನಂ
ಪಿಡಿದಿರ್ದಪನೇವನೆಂದು ಮನದೊಳ್ ನೋವಿಂ ॥ ೧೦೨

ಮಲಮಲಮಱುಗಿ ಕಿಱಿದುಬೇಗಂ ಹಮ್ಮರಂಬೋದರಂತುಸಿರದಿರ್ದು ಸೈರಿಸಲಾಱದಿನ್ನುಂ ಕಥೆಯನುಪಾಯದಿಂ ಪೇೞ್ದೆನ್ನ ಪೊನ್ನಂ ಕೊಳ್ವೆನೆಂದು] ಮತ್ತೊಂದುಕಥೆಯನಿಂತೆಂದು ಪೇೞ್ದಂ ॥ ೧೦೩

ಭಾನುಪುರಮೆಂಬ ಪುರದೊಳ
ನೂನಗುಣಂ ಕಪಿಲನೆಂಬ ಪಾರ್ವಂ ಸುಖದಿಂ ।
ತಾನಿರ್ದು ತನ್ನೊಳೊಮ್ಮೆ ಮ
ಹೀನುತನಾರಯ್ದು ಕಂಡನೊಂದೊಳ್ನಯಮಂ ॥ ೧೦೪

ಅನುಪಮವಿದ್ಯೆಗಳಂ ಬ
ಲ್ಲನವೋಘಂ ಬಲ್ಲನಾಗಿಯುಂ ಗಾರುಡಮೊಂ ।
ದನೆ ಕಲ್ಲದನ್ನೆವರೆಗಂ
ಜನಕೆಲ್ಲಂ ವಿದ್ಯೆಯಿಂದೆ ಬಿಣ್ಕಿದನಲ್ಲಂ ॥ ೧೦೫

ಎಂದು ಚಿಂತಿಸಿ [ಲಾಭಮುಂ ಕೀರ್ತಿಯುಮಿಂತಲ್ಲದಾಗದೆಂದು ಭಾನುಪುರಮಂ ಪೊಱಮಟ್ಟು ಗಾರುಡವಿದ್ಯೆಯನೆಲ್ಲಿ ಪೊಕ್ಕಪ್ಪೊಡಂ ಕಲಿವೆನೆಂದು ಪೂಣ್ದು] ಪೂರ್ವದೇಶಕ್ಕೆವೋಗಿ ತದ್ದೇಶದೊಳೂರ್ವ ಪ್ರಸಿದ್ಧನಪ್ಪ ಮಂತ್ರವಾದಿಯುಂ ಪೊರ್ದಿ ॥ ೧೦೭

[ತಿರಿದುಂಡಾತನ ಪೇೞ್ಕೆಗೆಯ್ದು ಕಪಟೋಪಾಯಂಗಳಿಂ ಲಲ್ಲೆಯಿಂ ದರಿದೆಂದೋವದೆ ಶಿಷ್ಯವೃತ್ತಿಯನವಂ ಪೂಣ್ದಿರ್ಪುದುಂ ನಾಡೆಯುಂ ಕರುಣಂಬಟ್ಟುಪದೇಶಮಂ ಕುಡುವುದುಂ ಕೈಕೊಂಡು ತದ್ದೇಶದಿಂ ಬರುತುಂ ಬಟ್ಟೆಯೊಳೊಂದು ಸತ್ತ ಪುಲಿಯಂ ಕಂಡಾಗಳಂತಾದ್ವಿಜಂ॥

ಪಾವು ಕೊಂಡು ಸತ್ತಿತ್ತೆಂದಱಿದು ಕಾರುಣ್ಯದಿಂ ತನ್ನ ಮಂತ್ರಮಂ ನಚ್ಚುವವೆನಪ್ಪುದಱಿಂ] [1] ೧೦೮

ನೀರಂ ಮಂತ್ರಿಸಿ ತಳಿಯೆ ಚ
ಮೂರಂ ವಿಷಮಿೞಿದು ರಾಗದಿಂದೆರ್ದ ಮಹಾ ।
ಕ್ರೂರತೆಯಿಂ ವಿಪ್ರನನುಪ
ಕಾರಂಬುದುಲಂಡ (?) ಮೆಂಬನಾಣ್ಗದೆಯುವೋಲ್ ॥ ೧೦೯

ಪಿಡಿದೊತ್ತಿ ಸೀೞ್ದು ತಿಂದುದು
ಗಡ ನಿಮ್ಮಡಿ ತನ್ನನುಗ್ರಫಣಿ ಮುಳಿಸಿಂದಂ ।
ಮಡಿಪಿದೊಡೆತ್ತಿದನಂ ಕೂ
ಗಿಡೆ ನುಣ್ಣನೆ ನೋಣೆದೊಡಾವ ಧರ್ಮಂ ಮುನಿಪಾ ॥ ೧೧೦

ಎಂದುಸಿರದಿರ್ಪುದುಂ ಜಿನದತ್ತನ ಮನದ ಕಪಟವೃತ್ತಿಯನಱಿದು ತಮ್ಮ ಮನದ ಶುದ್ಧವೃತ್ತಿಯನುಪಾಯದಿಂದಾತಂಗೆ ಪೇೞ್ವಂತೆ ಮತ್ತೊಂದುಕಥೆಯನಿಂತೆಂದು ಪೇೞ್ದರ್ ॥ ೧೧೧

1 ವಿಷವಾದಮುಂ ಕಲ್ತು ಬರುತ್ತಮೊಂದು ಸತ್ತ ಪುಲಿಯಂ ಕಂಡು ಕಾರುಣ್ಯದಿಂ ತನ್ನ ಮಂತ್ರಮುಂ ನಚ್ಚುವನಪ್ಪುದಱಿಂ (ಗ)

ಕೇಸರಿಪುರಮೆಂಬುದದಂ
ವಾಸವನೆಂಬವನಿಪಾಲನಾಳುತ್ತಿರ್ದಂ ।
ಭೂಸುರಕೀರ್ತಿಪತಾಕಂ
ವಾಸವನಿಭವಿಭವನಮಳನೆಂಬಂ ಪೆಸರಿಂ [1] ॥ ೧೧೨

ರಾಜಶ್ರೇಷ್ಠಿ ತದ್ವಣಿಗ್ಜ್ಞಾತನ ನಂದನಂ ವಿಮಳನೆಂಬ ಶಿಶು ಬಾಲಾಭರಣಸಮೇತ[ನಾಗಿ ನಿಚ್ಚಲುಂ ತನ್ನ ಮನೆಯಂಗಣದೊಳಾಡುತ್ತಿರ್ಪುದುಂ ॥ ೧೧೩

ನೆರೆಮನೆಯಾಕೆ ಕಂಡು ಕಡುಮೋಹದಿನಾಶಿಶು ತೊಟ್ಟ ಮಿಂಚುವಾ
ಭರಣಮನೊಯ್ಯನೊಯ್ಯನಳಿಪಿಂ ಪೆಱರೇಗುವರೆನ್ನನೆಂದು ನಿ
ಷ್ಠುರೆ ಕರಮಲ್ಲದುಮ್ಮಳಿಸಿ ತಚ್ಛಿಶುವಂ ಪಿಡಿದೊತ್ತಿ ಗಂಟಲಂ
ಮುಱಿದು ಕವರ್ತೆ ಗೊಳ್ವತೆಱದಿಂ ಬಿಡದಾಭರಣಂಗಳೆಲ್ಲಮಂ ॥ ೧೧೪

ಕೊಂಡು ಮಗುವಿನ ಪೆಣನನೀಮನೆಯೊಳ್ ಪೂೞ್ದನಪ್ಪೊಡೆ ವಿಷಮರಪ್ಪ ತಳಾಱರ ದೆಸೆಯಿಂದೆನಗೆ ಕೇಡು ಪುಟ್ಟುಗುಂ ಕಜ್ಜಮಲ್ಲದಿದನೀಗಳ್ ಕೊಂಡೊಯ್ದು ಬೀದಿಯೊಳಾಡುವ ಸಾದುಬಸವನ ಕೋಡಿನೊಳಗಿಕ್ಕಿ ಬುದ್ಧಿಯಿಂದೆತ್ತು ಕೊಂದುದು ಕೂಸನೆಂಬಂತು ಮಾಡಿ ದೂಱನೆತ್ತಿನಮೇಲಿಕ್ಕಿ ಸುಖದಿಂದಿರ್ಪೆನೆಂಬ ಸಮಕಟ್ಟನೆತ್ತಿಕೊಂಡು ಕೂಸಿನ ಪೆಣನನೊಯ್ದು ॥ ೧೧೫

ಪಗಲೆಲ್ಲಂ ತಿರಿತಂದು ಬೀದಿಗಳೊಳಾರಾನುಂ ಭರಂಗೆಯ್ದು ಕ
ಬ್ಬುಗಳಂ ಜೋಳವನಕ್ಕಿಯುಂ ಕಡಲೆಯುಂ ತೌಡಂ ಮನಂಬೆರ್ಚೆ ಪಿಂ
ಡಿಗಳಂ ಪುಲ್ಗಳನಿಕ್ಕೆ ಮೇದು ತಣಿವಿಂ ಮೆಲ್ಕುತ್ತುಗುಂ ನೋಡ ಪ
ಟ್ಟಗವೇಂದ್ರಾಧಿಪನಲ್ಲಿಗಾಕುಟಿಲೆ ಬಂದಾಗಳ್ ಮನೋರಾಗದಿಂ ॥ ೧೧೬

ಕೂಸಿನ ಪೆಣನಂ ತಾಟಕಿ
ಲೇಸಾಗಿರೆ ಬಸವನೆಡದ ಕೋಡಿನಮೇಲ ।

---

1 ನೆಂಬುವನೋರ್ವಂ (ಗ)

ತ್ಯಾಸುರಮಪ್ಪಂತಿಕ್ಕಿ ನಿ
ವಾಸಕ್ಕಾಧೂರ್ತೆ ಪೋದಳನ್ನೆಗಮಿತ್ತಲ್ ॥ ೧೧೭

ಅಮರ್ದಿನೊಳ್ದೊರೆಯಪ್ಪ ಬಾೞೆಯ ಪಣ್ಣನೊಯ್ಯನೆ ಕೊಂಡು ಬಂ
ದಮಿತಸೌಖ್ಯನುದಾರನಾಪಣಿಗೀಶ್ವರಂ ಮಗನೆಲ್ಲಿದಂ
ಕಮಲಲೋಚನನೆಂದು ಪುತ್ರನ ಮೋಹದಿಂ ಬೆಸಗೊಳ್ವುದುಂ
ಭ್ರಮೆಯಿನೆಲ್ಲರುಮಲ್ಲಿಗಲ್ಲಿಗೆ ನೋಡಿ ಕಾಣದೆ ದುಃಖದಿಂ] [1] ॥ ೧೧೮

ಬೀದಿಬೀದಿಗಳೊಳೆಲ್ಲಂ ಪರಿದು ನೋಡುತ್ತುಮಿರ್ದು ಬಸವನ ಕೋಡಿನೊಳಿರ್ದ ಪೆಣನಂ ಕಂಡು ಮೆಯ್ಮಱುಗಿ ಸೈರಿಸಲಾಱದೆ ಪಾಪಂಗೆಯ್ದೆತ್ತುಕೊಂದುದೆಂದು ಸುತ್ತಿ ಮುತ್ತಿಕೊಂಡು ಬಾಲಮಂ ಬಡಿದು ಕಂಡರ್ ಕಂಡ ಮುಖದೊಳ್ ನುರ್ಗುನುರ್ಗಾಗೆ ಬಡಿವುದುಂ ಬಸವಂ ವೇದನೆಗಿರಲಾಱದೆ ಗೋೞಿಟ್ಟೊಳಱು ದೆಸೆಗೆ ಬಿರ್ದು ಪರಿಯುತ್ತುಂ ತನ್ನ ಮನದ ನಿರ್ಮಲತೆಯನೆಲ್ಲರ್ಗಂ ತೋಱುವಂತೆ ಕಮ್ಮಱನ ಮನೆಯುಂ ಪೊಕ್ಕು ಕಾಸುತಿರ್ದ ಕಾಯ್ದ ಕಬ್ಬುನಮುಂ ಕರ್ಚಿ ನೆರೆದ ನೆರವಿಗೆ ಇದಿರಾಗಿ ಬರ್ಪುದುಂ ॥ ೧೧೯

ನೆರೆದು ನೋಡುವ ನೋಟಕರ್ ಬೆಱಗಾಗಿ ಮೋಣಿಸಿ ಪೊಯ್ಗಳಂ
ನಿರುತಮಿಂತಿದು ಕೊಲ್ಲದೀಮಗನಂ ಪೆಱರ್ ಧನವಂಚಕರ್
ಕರುಣಮಿಲ್ಲದೆ ಕೊಂದರೆಂದು ತಳಾಱನಂ ಕ್ಷಣಮಾತ್ರದಿಂ
ಕರೆಸು ನೀನಿದನಿಂತುಪೇಕ್ಷಿಸಿ ಪೋಗಲೀಯದೆ ಕಳ್ಳನಂ ॥ ೧೨೦

ತರವೇೞ್ಕುಮೆಂದು ಪೇೞ್ವುದು
ಮರವರಿಸದೆ ಪೋಗಿ ನೋಡಿ ಬುದ್ಧಿಯ ಬಲದಿಂ ।

---

1 ನಾಗಿರ್ದನಾಮಗನಂ ನೆರಮನೆಯಾಕೆ ಕೊಂದಾಭರಣಮೆಲ್ಲಮಂ ಕೊಂಡು ಮಗವಿನ ಪೆಣನಂ ನೆರಮನೆಯೊಳ್ ಪೂೞ್ದನಪ್ಪೊಡೆ ವಿಷಮರಪ್ಪ ತಳಾಱರ ದೆಸೆಯಿಂದೆನಗೆ ಕಿಡುಗು ಪುಟ್ಟುಗುಮದು ಕಜ್ಜಮಲ್ಲೆಂದು ಕೊಂಡೊಯ್ದು ಬೀದಿಯೊಳಾಡುವ ಬಡಸಾದುಬಸವನ ಕೋಡಿನೊಳಿಕ್ಕಿ ದೂರ್ತೆ ಪೋದಳನ್ನೆಗಮಿತ್ತಲ್ ಮಗವಿನಱಿಕೆಯಾಗಿ (ಗ)

ಪರಿಣತನಾರಯ್ದುಱಿದಂ
ದುರಿತಂ ಪೊಳ್ಳುಂಟೆ ಕೊಂದವರ್ ಬದ್ಧಪರೇ ॥ ೧೨೧

ಅಂತು ಕಳ್ಳಯಂ ಪಿಡಿದಂಗಂಬೆರಸು ತಂದು ಪ್ರಜೆಗೊಪ್ಪಿಸುವುದುಂ ಬೞಿಕ್ಕೆ ಬಡಸಾಧುಗೊಂದೆಯುಂ ಬಱಿದೆ ವಿಚಾರಣೆಯಿಲ್ಲದೆ ಮುಱಿಯೆ ಮೋದಿದೆವೆಂದು ತಮ್ಮಂ ತಾವೆ ಬಯ್ದುಕೊಂಡರದಱಿಂ ಮಹಾತ್ಮರಪ್ಪರವಿಚಾರಿಗಳಾಗದೆ ವಿಚಾರಿಸಿ ನೆಗೞ್ವುದೆಂಬುದುಂ ಜಿನದತ್ತಸೆಟ್ಟಿ ಯತಿಪತಿವಚನಮಂ ಕೈಕೊಳ್ಳದೆ [ಮತ್ತಮಾಮಹಾತ್ಮನೆ ಕಳ್ಳನೆಂದು ಬಗೆದು ತನ್ನ ಮನದ ಮಱುಕದಿಂ ನಿಲಲಾಱದೆ ಮುನಿನಾಥಂಗಿನ್ನೊಂದುಕಥೆಯುಂ ಪೇೞ್ದು ಮೆಲ್ಲನೆನ್ನ ಪೊನ್ನಂ ತೆಗೆವೆನೆಂದು] ಮತ್ತೊಂದುಕಥೆಯುನಿಂತೆಂದು ಪೇೞ್ದಂ ॥ ೧೨೨

ಭಾರತಿಯೆಂಬೊಂದುನದೀ
ತೀರದೊಳೊರ್ವಂ ಕಪಾಲಿಯೆಂಬಂ ಗೊರವಂ ।
ಧೀರಂ ತಾಪಸತಪಸಿನೊ
ಳಾರಿಂದಂ ಕರಮೆ ಪಿರಿಯನೆಂದೊಸೆದಿರ್ದಂ ॥ ೧೨೩

ಅಂತಿರ್ಪುದುಮೊಂದುದಿನಂ
ಸಂತತಮುಱಿಯುಟ್ಟ ಪಾವನೆೞಲಿಕ್ಕಿದವೋಲ್ ।
ತಾಂ ತಗುೞ್ದು ಕರೆವುದುಂ ಮೞೆ
ಕಾಂತಾರದ ಗಿರಿಯ ಪಿರಿಯ ಪೆರ್ವೊನಲೆಲ್ಲಂ ॥ ೧೨೪

ಬಂದಾಗೆ ಕೂಡೆ ತೊಱೆ ಪೆ
ರ್ಚಿಂದಂ ವಾರಾಶಿ ಮೇರೆದಪ್ಪಿದುದೆಂಬೊಂ ।
ದಂದದೊಳ್ ಬರ್ಪುದುಂ ಧರೆ
ಗೊಂದೊಂದಾಶ್ಚರ್ಯಮದ್ಭುತಂ ಪುಟ್ಟುವಿನಂ ॥ ೧೨೫

ಅಂತು ಪೊಲನುಂ ನೆಲನುಂ ಜಲಪ್ರಳಯಮಾಗೆ [ಬಂದ] ತೊಱೆಯೊಳೊಂದಾನೆಯ ಮಱಿ ಬಿರ್ದ ಪ್ರಾಣಭಯದಿಂ ತಲ್ಲಣಿ(ಸಿ) ಬೆರ್ಚಿ

ಬೇರ್ವೆರಸಿ ಕಿತ್ತು ಬರ್ಪ ಮತ್ತಿಯ ಪೆರ್ಮರನಂ ಪಿಡಿದು [ಕೊಂಡು]
ಮರನುಂ ತಾನುಂ ಬರುತ್ತಿರ್ಪುದುಂ ಕಪಾಲಿಭಿಕ್ಷುಕಂ [1] ಕಂಡು ॥೧೨೬

[ಕರುಣಂ ಕೈಮಿಗೆ ಮನದೊಳ್
ನಿರುತಂ ತೊಱೆಯೊಳಗೆ ಪೊಕ್ಕೊಡೀಯುವಸರದೊಳ್ ।
ಮರಣಮೆನಗಕ್ಕುಮೆಂದರ
ವರಿಸದೆ ನೆರೆದಿರ್ದ ತನ್ನ ಚಟ್ಟುಂ ತಾನುಂ] ॥ ೧೨೭

ಬುದಿಲೆನೆ ತೊಱೆಯಂ ಪಾಯ್ದು ಮಾತಂಗಕಳಭಮಂ ಪಿಡಿದು ಮರಂಬೆರಸು ತಡಿಗೆ ತಂದು ಮರನಂ ಪೋಗೆಬಿಟ್ಟು ತತ್ಕರಿಯಂ ಪೊಱಗಣ್ಗೆ ನೋಯಲೀಯದೆ ತೆಗೆದು ತದ್ಗಜದ ಮನದ ಭಯಮಂ ಪಿಂಗಿಸಿ ತನ್ನ ಮಠಕ್ಕೆ ತಂದು ॥ ೧೨೮

ಪುಳಿಗೂೞಿಂ [2] ತದಿಕಿನ ಕೆಂ
ದಳಿರಂ ಪಾಲ್ಗೆನೆಯನೆಳೆಯ ಪುಲ್ಲಂ ಕಬ್ಬಂ ।
ಬಲವಂತನಕ್ಕುಮೆಂದು
ಜ್ಜ್ವಲಚಿತ್ತಂ ತಂದು ಪೊರೆವುದುಂ ಗಜಶಿಶುವಂ ॥ ೧೨೯

ಕರಿಪತಿ ಬೆಳೆದು ಸುರೇಶನ
ಕರಿಗಂ ಮಿಗಿಲೆನಿಸಿ ಮರದೊಳಿರೆ ಪಿಸುಣರ್ ತ ।
ತ್ಕರಿಯಿರ್ದುದನೊಯ್ಯನೆ ತ
ಮ್ಮರಸಂಗಱಿಪುವುದುಮರಸನಱಿದಾಕರಿಯಂ ॥ ೧೩೦

ಕವಿಲೆಗಳಲ್ಲದೆ ಗೊರವ
ಗೆ ವಿರುದ್ಧಂ ಮದಗಜೇಂದ್ರಮೇವುದು ತಾನಾ ।
ದಿವಿಜಗಜನಿಭಕರೀಂದ್ರಮ
ನೆವಗಟ್ಟುವುದಟ್ಟಿದಿರ್ದೊಡಂ ತಾನಱಿವಂ ॥ ೧೩೧

1 ಕಾಪಾಲಿ (ಗ) 2 ಹಳಿಗೂಳಂ (ಗ)

ಎಂದರಸಂ ಕಾಪಾಲಿಯಲ್ಲಿಗಾನೆಯಂ ಬೇಡಿಯಟ್ಟುವುದುಂ ಕಾಪಾಲಿ ರಾಜಭೃತ್ಯರ ದೆಸೆಯಿಂದೆ ತತ್ಪ್ರಪಂಚಮನೆಲ್ಲಮನಱಿದು ಭಯಸ್ಥನಾಗಿ ಮದಸಿಂಧುರಮಂ ಕುಡುವುದುಂ ಅವರಾನೆಯು[ನರಸನಲ್ಲಿ ಗೊಯ್ದೊಪ್ಪಿಸುವುದುಂ ಮಹೀಧರನಾನೆಯಂ ಕೈಕೊಂಡಿರ್ಪುದುಂ॥೧೩೨

ಅರಮನೆಯೊಳಗಿರಲಾಱದೆ
ಕರಿ ಪಿಡಿಮಿಡಿಗೊಂಡು ನೆನೆದು ಮುನ್ನಿನ ನೆಲೆಯಂ ।
ಪರಿಹರಿಸಿ ಕಾಪಿನವರಂ
ಪರಿತಂದುದು ಮಠಕೆ ಮನದ ಮೋಹದಿನಾಗಳ್ ॥ ೧೩೩

ಅಂತು ಬಂದಿರ್ಪುದುಂ ಧರಣೀನಾಥಂ ಮದಮಾತಂಗಂ ಕಾಪಿನವರಂ ಕೊಂದು ತನ್ನ ಮುನ್ನಿನ ಮಠಕ್ಕೆ ಪೋದುದೆಂದು ಕೇಳ್ದು ತನಗಾಗಜದಮೇಲೆ ಮೋಹಮುಂಟಪ್ಪುದಱಿಂ ಮಾನಿಸರನಟ್ಟಿ ಮಗುಳೆ ತರಿಸಿ ಮುನ್ನಿನೆಡೆಯೊಳ್ ಕಟ್ಟಿಸುವುದುಂ ಮತ್ತಂ ನಿಲಲಾಱದೆ ಮಠವೆ ಗುಱಿಯಾಗಿ ಪೋಪುದುಂ ಮಹೀನಾಥಂ ಪಲವುಸೂಳ್ತರಿಸಿ ಬೇಸತ್ತು ಕಪಾಲಿಗೆ ಮುಳಿದೆನಗೆ ಕೊಟ್ಟಾನೆಯಂ ಕುಡಲಾಱದೆ ತನ್ನ ಮಠವನೆ ನಚ್ಚಿಸಿ ಪಿಡಿದಿರ್ದನಾದೊಡೇನಾಯ್ತು ತಾನೆನ್ನ ದೇಶದಿಂ ಪೊಱಮಟ್ಟು ಪೋಪುದೆಂದಟ್ಟುವುದುಂ ಕಪಾಲಿ ಭಯಸ್ಥನಾಗಿ ತಾನುಂ ತನ್ನ ಚಟ್ಟಗಳುಮಾನೆಯುನರಮನೆಗೆ ತಂದರಸಂಗೊಪ್ಪಿಸಿ ತನ್ನ ಪೊಲ್ಲಮೆಯಂ ಪಿಂಗಿಸಿ ಮಗುೞ್ದು ಬಂದಿರ್ಪುದುಂ ಕರಿ ಮನದೊಳ್ ಮುಳಿದು ॥ ೧೩೪

ಅರಸಂ ನಾಲ್ಕಡಿಪೋಗವೇೞ್ದೊಡೆ ಭಯಂಗೊಂಡೆನ್ನನಾಸಾಧು ತಂ
ದರಸಂಗೊಪ್ಪಿಸಿ ಪೋದನಾತನೊಳಗೇಂ ಕೇಳ್ದೋಷಮಿಲ್ಲೆಂದು ನಿ
ಷ್ಕರುಣಂ ಮಾಣದೆ ಕೊಲ್ಲನೆಂಬ ಮುಳಿಸಿಂ ಬಂದಾತನಂ ಕೊಂದುದು
ರ್ವರೆಯೊಳ್ ನಿರ್ದಯರಪ್ಪ ದುರ್ಗುಣಯುತರ್ ತಾವೊಳ್ಳಿತಂ ಮಾಳ್ಪ
ರೇ] [1] ॥ ೧೩೫

---

1 ನರಸಂಗೊಪ್ಪಿಸ ಮದಗಜಂ ಮನದೊಳ್ ಮುನಿದು (ಗ)

ಧರೆಯಂ [1] ಮೆಟ್ಟೆ ಪಲಂಬರುಂ ದಯೆಯುನೊಕ್ಕಾನಂದದಿಂದೀಕ್ಷಿಸು
ತ್ತಿರೆ ಕಾಪಾಲಿ ಮಹೀನುತಂ ಕರುಣದಿಂ ಪೊಕ್ಕನ್ನನಂದೆಯ್ದಿ ವಿ
ಸ್ತರದಿಂ ರಕ್ಷಿಸಿ ಕಾದನೆನ್ನದೆ ಗಜೇಂದ್ರಂ ಕೋಪದಿಂ ಬಂದು ನ
ಟ್ಟಿರುಳೊಳ್ಕೊಂದುದು ಬೌದ್ಧನಂ [2] ಧರಣಿಯೊಳ್ ನಿರ್ಧರ್ಮರೇಗೆಯ್ವ
ರೋ || ೧೩೬

ಎಂದು ಜಿನದತ್ತಸೆಟ್ಟಿ ಪೂಣ್ದುಸಿರದಿರ್ಪುದುಂ, ಜಿನಪಾಲಿತ ಮುನಿ [ನಾಥಂ] ನಕ್ಕು ಲೋಭಿಯ ಮನಮುಂ [3] ಬಂದ ತೊಱೆಯುಂ ಶುದ್ಧಮಾಗಲಱಿಯುವೆಂಬ ನಾಣ್ಣುಡಿ [4] ಯನೀತಂ ನನ್ನಿಮಾಡಿದನಿನ್ನುಮೊಂದು [5] ಕಥೆಯಂ ಪೇಳ್ದನ್ನಮೀಗಣ ಪೊಲ್ಲಮೆಯಂ [6] ಪಿಂಗಿಸಿಕೊಳ್ವೆನೆಂದು ಮತ್ತೊಂದುಕಥೆಯನಿಂತೆಂದು ಪೇೞ್ದಂ || ೧೩೭

ದಂತಿಪುರಮೆಂಬ ಪೊೞಲೊಳ್
ಕಂತುವಿನರಲಂಬೆ ಪೆಣ್ಣು ರೂಪಾಯ್ತೆನ್ನಂ |
ಬಂತೆಸೆವ ಚೆಲ್ವೆಯೊರ್ವಳ್
ನಂತಶ್ರೀಯೆಂಬ ಸೂಳ್ ಸುಖದಿಂದಿರ್ಪಳ್ || ೧೩೮

ಆಕೆಯ ಕೆಳದಿ ವಾಸವದತ್ತೆಯೆಂಬಳನಂತಶ್ರೀಗೊಂದುಗಿಳಿಯಂ ಮಾಱುಗೊಂಡು ಕೂರ್ಮೆಯಿಂ ತಂದು ಕುಡುವುದುಂ ಗಿಳಿಯ ಚೆಲ್ವಿಂಗೆ ನಾಡೆಯುಂ ಮನದೊಳ್ ಸೋಲ್ತು [ವಾಸವದತ್ತೆಗೆ ಮೆಚ್ಚುಗೊಟ್ಟು] ಪೊನ್ನ ಪಂಜರದೊಳ್ ಗಿಳಿಯನಿರಿಸಿ ನಾನಾಪ್ರಕಾರದ ಸೂಳ್ಮಾತುಗಳಂ ಶೃಂಗಾರವೃತ್ತಂಗಳುಮಂ ಕಲಿಸುತ್ತುಂ ಪರಮಸ್ನೇಹದಿಂ ಗಿಳಿಯ ವಿನೋದಮೆ ವಿನೋದಮಾಗಿ ಪಲವುದಿವಸಂ ಪೋಗೆ [ವೋಗೆ] || ೧೩೯

[ಸಿರಿಗಂ ಸೌಭಾಗ್ಯಕ್ಕಂ
ಪಿರಿಯಳ್ ಕೈಕೊಳ್ಗದಾರುಮಂ ಮದದಿಂದಂ |

1 ದರಿಯಂ (ಗ) 2 ಕೊಂದೆಯೆ ಪೋಯಿತಾರ (ಗ)
3 ಧನಮುಂ (ಕ. ಖ.) 4 ನಾಳ್ಗದೆ (ಗ)
5 ನಿಮಂಗಿನ್ನೊಂದು (ಗ) 6 ಶಂಕೆಯಂ (ಗ)

ಧರಣಿಯೊಳಗನ್ನೆನಗಾರುಂ
ಸರಿಯಲ್ಲರಮೋಘಮೆನುತುಮಿರ್ಪರ್ಗಳಗುರ್ವಿಂ ॥ ೧೪೦

ಮತ್ತಮವಳ ಸೌಭಾಗ್ಯದ ಪೆಂಪೆಂಬ ಪೆಸರೊಳಡಕೆಯ ಭಾಗದ ಭಾಗವಿಲ್ಲೆಂದು] ॥ ೧೪೧

ಪುರದೊಳಗಣ ಸೂಳೆಯರೆ
ಲ್ಲರುಮಾಕೆಗೆ ಮುನಿದು [ಕೊಲ್ವ ಬಗೆಯುಂ ತಂದಾ ।
ದರದಿಂ ವಾಸವದತ್ತೆಯು
ನೆರಡಿಲ್ಲದೆ ತಮಗೆ ಮಾಡಿಕೊಂಡನುನಯದಿಂ] ॥ ೧೪೨

ಮೆಲ್ಲನೆ ವಾಸವದತ್ತೆಗೆ
ಕೊಲ್ಲಾಕೆಯುನೆಂದು ಕೊಟ್ಟು ಪಲವುಂ ಪೊನ್ನಂ ।
ಕಳ್ಳೊಳಗೆ ಕಾಳಕೂಟಮ
ನೆಲ್ಲರುಮೊಂದಾಗಿ ಕೂಡಿ ಕೂಡುವುದುಮಾಗಳ್ ॥ ೧೪೩

ವಾಸವದತ್ತೆ ಪೊನ್ನ ಮೋಹದಿನಂತೆಗೆಯ್ವೆನೆಂದು ಪಲರನುಮ ತದಿಂ ಕಳ್ಳಂ ಕೊಂಡು ಬಂದು [ಕೂರ್ತು ತನ್ನ] ನಂತಶ್ರೀಗೆ ಕುಡುವುದುಂ [ಅನಂತಶ್ರೀಯುಂ ॥ ೧೪೪

ಇಲ್ಲಿರಿಸಿ ಪೋಗು ಕಳ್ಳಂ
ಮೆಲ್ಲನೆ ಬಯ್ಗಿಂಗೆ ಕುಡಿಪೆವಿರ್ವರು ನೀಸಿಂ ।
ತಿಲ್ಲಿಗೆ ಬಾಯೊಂದಾಕೆಗೆ
ಸಲ್ಲಲಿತಲತಾಂಗಿ ಮೆಚ್ಚುಗೊಟ್ಟಾದರದಿಂ ॥ ೧೪೫

ಮನ್ನಿಸುವುದುಮಾಕೆಯುಂ ಸಂತೋಷಂಬಟ್ಟು ಕಳ್ಳಂ ಮಂಚದ ಕೆಳಗಿರಿಸಿ ತನ್ನ ಮನೆಗೆ ಪೋದಳಿತ್ತಲನಂತಶ್ರೀಯುಂ ಪಾಸಿನಮೇಲೆ ಪಟ್ಟಿರ್ದಳನ್ನೆಗಂ] ಪಂಜರದೊಳಿರ್ದ ಗಿಳಿ [ಕಾಜಿನ ಬಟ್ಟಲೊಳಿರ್ದ ಸುರಾಪಾನಮಂ ನೋಡುತ್ತುಮಿರ್ಪುದುಂ] ಕಳ್ಳ ಗಂಧಕ್ಕೆ ಮೊಗಸಿದ

ನೋಣಂಗಳೆಲ್ಲಂ ಸಾವುದಂ ಕಂಡು ವಿಷಮೆಂದಱಿದು ತನ್ನೊಳಪ್ಪ ಕಾರುಣ್ಯಬುದ್ಧಿಯಿಂದೀಕಳ್ಗಂ ಕುಡಿದಳಪ್ಪೊಡನಂತಶ್ರೀ ಸಾಯ್ಗುವೆಂದುಗೂಡಿಂ ನೆಲಕ್ಕೆವಾಯ್ದು ಬಟ್ಟಲ ಕಳ್ಗಂ ನೆಲಕ್ಕುಗುವುದುಂ ॥ ೧೪೬

ಬೇಗಮನಂತಶ್ರೀ ಮುಳಿ
ದಾಗಿಳಿಯಂ ಕೊಂದು ಬೞಿಕಮಾಕಳ್ಗಂ ನಿ ।
ರ್ವೇಗಂಬಟ್ಟುಱುತುಂ ನೋ
ಟ್ಪಾಗಳ್ ಕಳ್ಗಱಿಗಿ ಸಾವ ಮಾಕ್ಷಿಕತತಿಯಂ ॥ ೧೪೭

ತೊಟ್ಟನೆಕೊಳ್ ಕಂಡು ಮನಂ
ಗೆಟ್ಟಿರ್ದಯುಂ ನೀವಿಕೊಂಡು ವಿಷಯುಕ್ತಮಿದಂ ।
ನೆಟ್ಟನೆ ಕುಡಿದೊಡೆ ಮರಣಂ
ತೊಟ್ಟನೆ ಸಮನಿಸುಗುಮಲ್ಲಿ ಸಂದೆಯುಮುಂಟೇ ॥ ೧೪೮

[ಈ ಗಿಳಿಯಿಂ ಧರ್ಮದಿಂದೊರ್ವರ್ಗೆ ಬದುಂಕಿದೆನೆನಗುಪಕಾರಂಮಾಡಿದ ಗಿಳಿಯುಂ ವಿಚಾರಿಸದೆ ಕಳ್ಗುಡಿಕಿಗಳ್ಗಂ ನಿರ್ದಯರುಂ ಮಾಡದ ಪಾಪಮಿಲ್ಲೆಂಬ ನುಡಿಯಂ (ನನ್ನಿ) ಮಾಡಿದೆಂ ಮಹಾಪಾಪಿಯೆಂದುತನ್ನಂ ತಾನೆ ಬಯ್ದುಕೊಂಡು ಬೞಿಕ್ಕಂ] [1] ಮುಱುಗಿ ಗಿಳಿಯ ಪೆಣನನೆರ್ದೆಯ ಮೇಲಿಕ್ಕಿಕೊಂಡಟ್ಟುಳಂಬಂತೆ ಬುದ್ಧಿವಂತರ [ಪ್ಪರಾಕೆಯಂತ]ವಿವೇಕಿಗಳಾಗದೆ [ನೆಗಬ್ವುದಲ್ಲದೆ ಕಮ್ಮನುದ್ಧತಿಕ್ಕೆಯಿಂ ನಿರ್ದೋಷಿಗಳ ಮೇಲೆ ದೋಷಮಂ ಮಾಡವೇಡೆಂಬುದುಂ ॥

ಮುನಿಪತಿಯ ಮಾತನೆಂತುಂ
ಮನದೊಳ್ ಕೈಕೊಂಡು ಶುದ್ಧರೆನ್ನದೆ ಮತ್ತಂ ।
ಧನದೆಱಕದಿಂದಮಾಮುನಿ
ಜನವಂದಿತಪಾದಪಂಕಜಂಗಾಪರದಂ] [2] ॥ ೧೫೦

1 ಎಂದು (ಗ)   2 ವಿಚಾರಿಸಿ ನೆಗಳ್ವುದೆಂಬುದುಂ (ಗ)

ಮತ್ತಮೊಂದು ಕಥೆಯನಿಂತೆಂದು ಪೇಳ್ದಂ ॥ ೧೫೧

ವರಮುನಿವಲ್ಲಭ ಕೇಳ
ಚ್ಚರಿಯಪ್ಪೀಕಥೆಯನವನಿಭೂಷಣಮೆಂಬಾ ।
ಪುರದೊಳ್ ಬಡಗಿಯದೊರ್ವಂ
ಕರಕುಶಲಂ ಬುದ್ಧಿವಂತನಿರ್ದೊಂದುದಿನಂ ॥ ೧೫೨

ಮರನಂ ಕಡಿಯಲೆಂದು ವಿಂಧ್ಯಾಚಳಪರ್ವತಕ್ಕೆ ಪೋಗಿ ॥ ೧೫೩

ತರತರದಿಂದಂ ಗಗನಂ
ಬರೆಗಂ ನೀಳ್ದೊಪ್ಪಿ ತೋರ್ಪ ಭೂಜಂಗಳನಾ ।
ದರದಿಂ ನೋಡುತುಮಿರ್ಪಾವ
ಸರದೊಳ್ ಮದದಾನೆಯೊಂದು ಕಂಡತಿಭರದಿಂ ॥ ೧೫೪

ಗಿಱ್ಱನೆ ಪರಿತರೆ ಬಡಗಿಯು
ಸುಱ್ಱನೆ ಸುಗಿದಂಜಿ ನಡುಗಿ ವನದೊಳಗೆಲ್ಲಂ ।
ತಿಱ್ಱನೆ ತಿರಿತಂದು ಖಳಂ
ಖುಱ್ಱನೆ ತನು ಕಂದಿ ಕುಂದಿ ಭಯವಶದಿಂದಂ ॥ ೧೫೫

ಓಡಲಾಱದೊಂದುಪೆರ್ಮರನನೇಱುವುದುಂ ಮದಗಜೇಂದ್ರಂ ಕೊಲಲಾಱದೆ ಕಿಱಿದುಬೇಗಮಿರ್ದು ಮತ್ತೊಂದುದೆಸೆಗೆ ಪೋಪುದುಂ ಬಡಗಿ ಮರದಿಂದಮಿೞಿದು ॥ ೧೫೬

[ಆಮದೇಭಮಡರ್ತು ಕೋಪದಿನೆನ್ನನಟ್ಟಿ ತಗುಳ್ದು ಬಂ
ದೀಮಹೀಜಮನೇಱಿ ಬರ್ದನದಿಲ್ಲದಂದೆರಡಿಲ್ಲದಾ
ಸಾಮಜಂ ತುಳಿದಿಕ್ಕಿ ಕೊಲ್ಲದೆ ಮಾಣದಾನದಱಿಂದಮಿಂ
ತೀಮರಕ್ಕೆಱುವಂ ವಿಮೋಹಿಸಿ ಮಾಡಲಾಗದು ನಿಶ್ಚಯಂ] [1] ॥ ೧೫೭

1 ಆನೆಯಂ ಬಾರಿಯು ಕಾದುದೂ (ಗ)

ಎನ್ನದೆ ಬಡಗಿ ಕನಿಷ್ಠಂ
ತನ್ನಳಿಪಿಂ ಕಡಿದನಾಗಳಾಪುರನಂ ಮ ।
ತ್ತೆನ್ನದೆ ದುರ್ಜನನಪ್ಪಂ
ಸನ್ನುತರಂ ಕಿಡಿಪನೆಂಬುದಾವುದು ಚೋದ್ಯಂ ॥ ೧೫೮

ಎಂದು ವೈಶ್ಯಾತ್ಮಜನುಸಿರದಿರ್ಪುದುಂ ಮುನಿಕುಂಜರಂ [ಸೆಟ್ಟಿಯ ಮಾತಿಂಗೆ ವಿಸ್ಮಯಂಬಟ್ಟು ಸಂಶಯತುಲಾರೋಹಣನಪ್ಪೀತನನೆಂತುಂ ನಂಬಿಸುವುದರಿದೆಂದು ನಕ್ಕು ಮತ್ತಂ ತನ್ನ ಪೊಲ್ಲಮೆಯುಂ ಪಿಂಗಿಸಲೆಂದು] (ಇಂತೆಂದಂ) ॥ ೧೫೯

ಜಿನದತ್ತ ಕೇಳ್ ಕಥೆಯೊಂ
ದನಪೂರ್ವಮನವುರಖೇಟಮೆಂಬೂರೊಳ್ ಮೇ ।
ದಿನಿದೇವನೊರ್ವನಿರ್ದಂ
ಜನವಿನುತಂ ಚಂದ್ರದತ್ತನೆಂಬಾಪೆಸರಿಂ ॥ ೧೬೦

ಆತನ ಪೆಂಡತಿ ಯಜ್ಞದತ್ತೆಯೆಂಬಳಾಕೆಯೊಂದುಮುಂಗುರಿಯಂ ನಡಪಿ ಪಿರಿದುಮಕ್ಕರಿಂ ಕೊಂಡಾಡುತ್ತುಮಿರ್ದೊಂದುದಿವಸಂ ॥ ೧೬೧

ತೊಟ್ಟಿಲೊಳು ತನ್ನ ಕೂಸಂ
ಪಟ್ಟಿರಿಸಿ ಲತಾಂಗಿ ಪೊತ್ತುಪೋಗಿಂಗೆ ಮನಂ ।
ಮುಟ್ಟದೆಡೆವೋದಳನ್ನೆಗ
ಮೊಟ್ಟಜೆಯಿಂ ಪಾವು ಸಿದ್ರೆಗೆಯ್ದ ಮಗನಂ ॥ ೧೬೨

ಬಂದು ಕೊಲಲಿರ್ಪುದುಂ ಪರಿ
ತಂದುರಗನನಟ್ಟಿ ಪಿಡಿದು ಮುಂಗುರಿ ಕೊಂದಾ ।
ನಂದಂ ಬೆರಸಿದಿರಂ ಪರಿ
ತಂದಾಕೆಯ ಕಾಲಮೇಲೆ ಪೊರಳ್ವುದುಮಾಗಳ್ ॥ ೧೬೩

ಮುಂಗುರಿಯ ಬಾಯ ನೆತ್ತರಂ ಕಂಡು ಶಿಶುವಂ ಕೊಂದುದೆಂದು ಮುನಿದು ತನ್ನ ಪಿಡಿದಿರ್ದೊನಕೆಯನೆತ್ತಿ ಮುಂಗುರಿಯ [ತಲೆಯ] ನಿರ್ಪೋಟಿಪಾಗೆ ಪೊಯ್ದು ಕೊಂದು ॥ ೧೬೪

ಮಱುಗಿ ಕಂದಿದೊಳಱಿ ಕೆಟ್ಟಿಂ
ಕಱುವೇ ನಾನೇವೆನೆಂದು ಬಂದೊಳಗಂ ಪೊ ।
ಕ್ಕೊಱಗುವ ಕಂದನುಮಂ ಸ
ತ್ತಱಿಕೆಯ ವಿಷಧರನ ಪೆಣನುಮಂ ಕಂಡಾಗಳ್ ॥ ೧೬೫

ಮತಿಗೆಟ್ಟು ಮಗುಳ್ ನೋಡಿ
ಪತಿಯಂ ಕೊಂದಿಕ್ಕಿ ಬೇಗಮೆನ್ನಾತ್ಮಜನಂ ।
ಧೃತಿವೆರಸು ಕಾದ ಮುಂಗುರಿ
ಗತಿಶಯಮುಮಂ ಮಾಡಿ ಪಿರಿದುಮತ್ಯಾದರದಿಂ ॥ ೧೬೬

ಕೊಂಡಾಡದೆ ಕೊಂದೆನೆಂದು ಬಱಿಕ್ಕಂ ಮಿಡುಮಿಡುಮಿಡುಕಿ ಮಱುಗಿದಳಂತೆ ಸತ್ಪುರುಷರುಮಾಕೆಯಂತವಿಚಾರಿಗಳಾಗದೆ ವಿಚಾರಿಸಿ ನೆಗೞ್ವುದೆಂಬುದುಂ ಜಿನದತ್ತಸೆಟ್ಟಿ [ಮತ್ತಂ ಮನದ ಸಂಶಯಂ ಪೋಗದೆ ಮೋಹವಶದಿಂ ಮುನೀಂದ್ರನ ಮಾತಂ ಕೈಕೊಳದೆ ಧನದಱಕದಿಂದಿನ್ನು ಪಾಯದಿನನ್ನು ಪೊನ್ನಂ ಕೊಳ್ವೆನೆಂದು ಮತ್ತೊಂದು ಕಥೆಯನಿಂತೆಂದು ಪೇೞ್ದಂ] ॥ ೧೬೭

ಜಿನಪಾಲಿತಮುನಿಪತಿ ಮೇ
ದಿನಿವಂದಿತ ಕಥೆಯನೊಂದನವಧಾರಿಸಿ ಕೇ ।
ಳನಘ ಮನವೊಲ್ದು ಕಾಮುಕ
ವನಮೆಂಬುದು ದುರ್ಗಮುಂಟು ಕೇಳ್ ತದ್ವನದೊಳ್ ॥ ೧೬೮

ಪಿರಿದಪ್ಪ ಪುರಾಣಕೂಪಮುಂಟಾಕೂಪದೊಳ್ ॥ ೧೬೯

ಗರಧರನುಂ ಪುಲಿಯುಂ ವಾ
ನರನುಂ ಬಿಡದಕ್ಕಸಾಲೆಯುಂ ಬಿರ್ದ್ದರೆ ಭೂ ।
ಸುರನೊರ್ವಂ ಗಂಗೆಗೆ ಸ
ಚ್ಚರಿತಂ ಪೋಗುತ್ತುಮಿರ್ದ್ದ ಕೌಶಿಕನೆಂಬಂ ॥ ೧೭೦

ನೀರಡಸಿ ತತ್ಕೂಪದೆಡೆಯುಂ ವನಚರರಿಂದಱಿದು [ಬಾವಿಯ ತಡಿಯೊಳ್ ನಿಂದು ತನ್ನಟ್ಟುಂಬ ಪಡಕೆಯ ಕೋಱಲೊಳ್ ಬಳ್ಳಿಯಂ ಕಟ್ಟಿ ನೀರಂ ಸೇದಲೆಂದು ಬಾವಿಯೊಳಗಿಕ್ಕುವುದುಂ ॥ ೧೩೧

ತಡೆಯದೆ ಸೇದೆಯ ನೇಣಂ
ಪಿಡಿದಿರೆ ಪುಲಿ ತೋಯಮೆಂದು ತದ್ವಿಪ್ರಂ ನೇ ।
ರ್ವಡೆ ಪೆರ್ಚಿ ತೆಗೆಯೆ ಪುಲಿ ಬಂ
ದೊಡೆ ಭಯದಿಂ ನೋಡುತಿರ್ಪುದುಂ ತದ್ವ್ಯಾಘ್ರಂ ॥ ೧೩೨

ಕೌಶಿಕಂಗೆ ಪೊಡೆಮಟ್ಟು ನಿಮ್ಮ ಪ್ರಸಾದದಿಂ ಪ್ರಾಣಭಯಂ ಪಿಂಗಿದುದೆನ್ನಂ ಬೆಸಕೆಯ್ಸಿಕೊಳ್ವುದೆಂದು ತನ್ನ ನೆಲೆಗೆ ಪೋಯ್ತತ್ತಲ್ ॥ ೧೩೩

ನೀರಟ್ಕೆ ಪೆರ್ಚಿ ವಿಪ್ರನು
ದಾರಂ ಮತ್ತಿಕ್ಕೆ ಬಾವಿಯೊಳ್ ಸೇದೆಯನಂ ।
ತೋರಂತೆ ಪಾವು ಪಿಡಿದಿರೆ
ವೀಗಂ ನೀರೆಂದು ತೆಗೆವುದುಂ ತತ್ಕ್ಷಣದಿಂ ॥ ೧೩೪

ಪಾವು ಬಂದೊಡೆ ಪಾವಂ ನೋಡಿ ಬೆಱಗಾಗಿರ್ಪುದುಂ ಫಣಿಪತಿ ಕೌಶಿಕಂಗೆ ಪೊಡೆಮಟ್ಟು ನಿಮ್ಮ ಪ್ರಸಾದದಿಂದೊಂದು ಕಂಟಕಂ ಪೋಯ್ತೆಂದು ನಿಮ್ಮ ಮಾಡಿದುಪಕಾರಮನೆಂದಿಂಗಂ ಮಱೆಯಲ್ಬಾರದು ನಿಮಗೊಂದೇನಾನುಮಾಪತ್ತಾದೊಡೆ ಮಱೆಯದೆ ನೆನೆವುದೆಂದು ತನ್ನಿರ್ವಾಸಕ್ಕೆ ಪೋಯ್ತನ್ನೆಗಂ ॥ ೧೩೫

ಪಿರಿದಪ್ಪ ತೃಷ್ಣೆಯಿಂ ಭೂ
ಸುರನಾಗಳ್ ಮತ್ತೆ ಸೇದೆಯಂ ಭಾವಿಯೊೞ ।
ಪ್ಪಿರೆ ಬೇಗಮಿಕ್ಕೆ ನೇಣಂ
ತ್ವರಿತಂ ಭಯದಿಂದೆ ಪಿಡಿಯೆ ವಾನರನಾಗಳ್ ॥ ೧೩೬

ನೀರೆಂದು ತೆಗೆವುದುಂ ಕೋಡಗಂ ಪೊಱಮಡೆ ಕೌಶಿಕಂ ಬೆಱಗಾಗಿರ್ಪುದುಂ ಮರ್ಕಟಂ ದ್ವಿಜಂಗೆ ವಿನತನಾಗಿ ನಿನ್ನ ಧರ್ಮದಿಂದೊಂದು ಸೂೞೆನಗೆ ಬಂದಪಮೃತ್ಯು ಪಿಂಗಿ ಪೋಯ್ತು ನಿನಗಾನೇನಂ ಮಾಡಿದೊಡಂ ಮಾಟಮಲ್ಲನ್ನಿರ್ಕೆಯುಮಿಾ ಕಾಮುಕವನಮೆ ನಿನ್ನ ಚಿತ್ತದೊಳವಧರಿಸಿ ಕಾರುಣ್ಯದಿಂದೊಂದವಸರದೊಳ್ ನೆನೆವುದೆಂದು ನಿಜಸ್ಥಾನಕ್ಕೆ ಪೋಪುದುಂ ॥ ೧೭೭

ಅಡಹಡಿಸಿ ತೃಷ್ಣೆಯಿಂದಾ
ಗಡೆ ವಿಪ್ರಂ ಬಾವಿಯೊಳಗೆ ಸೇದೆಯನಿಕ್ಕಲ್ ।
ಕಡುಭಯದಿಂದಂ ಮನದೊಳ್
ನಡುಗುತ್ತಿರ್ದಕ್ಕಸಾಲಿ ಸೇದೆಯ ನೇಣಂ ॥ ೧೭೮

ಪಿಡಿವುದುಂ ನೀರೆಂದು ಪೊಱಗಣ್ಗೆ ತೆಗೆಯೆ ಸ್ವರ್ಣಕಾರಕಂ ಬರೆ ಕೌಶಿಕಂ ನೋಡಿ ಚೋದ್ಯಂಬಟ್ಟಿರ್ಪುದುಮಕ್ಕಸಾಲಿ ವಿಪ್ರಂಗೆ ಪೊಡೆಮಟ್ಟು ॥ ೧೭೯

ನೀನಿತ್ತ ಜೀವಮಿದು ಧರ
ಣೀನುತ ನೀನಿಲ್ಲದಱಿದು ಸಾವೆದು ಪುಸಿಯೇ ।
ಕಾನನದೊಳಿಲ್ಲಿ ನಿಮಗಾ
ನೇನಂ ಮಾಡುವೆನೊ ಮಾಡದಿರ್ದೊಡೆ ಕಷ್ಟಂ] [1] ॥ ೧೮೦

ಈನೆಗಟ್ಟಿ ವನದ ಪೊರೆಯೊಳ್
ತಾನಗ್ಗದ ತಾಮ್ರಕೂಟಮೆಂಬುದು ಪೊೞಲಂ ।
ತಾನಗರದೊಳಾನಿರ್ಪೆಂ
ನೀನಲ್ಲಿಗೆ ಬರ್ಪುದೆಂದು ಕೈಮುಗಿದಾತಂ ॥ ೧೮೧

---

1 ಬಂದು ಬಾವಿಯೊಳ್ ಬಿದ್ದಿರ್ದ ಹಾವುಮಂ ಪುಲಿಯುಮಂ ವಾನರನುಮಂ ಕಾರುಣ್ಯದಿಂ ಪೊಱಮಡಿಸುವುದುಮವು ಪೊಱಮಟ್ಟು ಮಗುೞ್ದು ಬರ್ಪಾಗಳೆಮ್ಮಲ್ಲಿಗೆ ಬರ್ಪುದೆಂದು ಪೊಡರೆಂಣಿಗನುಂ (ಗ)

ಪ್ರಾರ್ಥಿಸುವುದುಂ ಮಗುೞ್ದು ಬರ್ಪಾಗಳ್ ನಿನ್ನಲ್ಲಿಗೆ ಬಂದಲ್ಲದೆನ್ನ ನೆಲೆನೆ ಪೋಗೆನೆಂದಕ್ಕಸಾಲೆಯುನೊಡಂಬಡಿಸುವುದುಮಾತನೊಡಂಬಟ್ಟು ತನ್ನ ಪುರಕ್ಕೆ ಪೋದನಿತ್ತಲ್ ಕೌಶಿಕಂ ತನ್ನಿಷ್ಟಸ್ಥಾನಕ್ಕೆ ಪೋಗಿ ಕೆಲವು ದಿವಸಕ್ಕೆ ಮಗುೞ್ದು ಬರುತುಂ ಕಾಮುಕವನಕ್ಕೆ ಬಂದು ಕೋಡಗ ನಿರ್ದಲ್ಲಿಗೆವರ್ಪುದುಂ ವಾನರ [ನಾನರನ] ನಱಿದು ಮುನ್ನಿನುಪಕಾರಮಂ ನೆನೆದು ಪಣ್ಪಲಂಗಳಂ ತಂದಿಕ್ಕುವುದುಂ ಪಸಿವು ಪೋಪಿನಂ ಮೆಲ್ದು ಪಥಪರಿಶ್ರಮಮಂ ಕಳೆದು ॥ ೧೮೨

ಪುಲಿಯಿರ್ಪ ಗುಹೆಗೆ ಬರ್ಪುದು
ಮಲಂಘ್ಯಗುಣನೆನ್ನನೆತ್ತಿದಾತಂ ಬಂದಂ ।
ಫಲಮಿತ್ತುದೆನ್ನ ಪುಣ್ಯಂ
ಕುಲಸಫಲಮುಮೆಂದು [1] ಪೆರ್ಚಿ ಪುಲಿ ಬಂದಿದಿರಂ ॥ ೧೮೩

ಅಂದು ಪೊಡೆಮಟ್ಟು ಪರಮಾ
ನಂದದಿನಟ್ಟಿರ್ತು ತಂದು ರತ್ನದ ತೊಡವಂ ।
ಮುಂದಿಡೆ ತದ್ವಿಪ್ರನುಮಾ
ನಂದದಿನಪನರ್ತಿವೆರಸು ಕೊಂಡಾವನದಿಂ ॥ ೧೮೪

ಪೊಱಮಟ್ಟು ತಾಮ್ರಕೂಟಕ್ಕೆ ಬಂದು ಸ್ವರ್ಣಕಾರನ [ಮನೆಗೆ ಬರ್ಪುದುಂ ಪೂರ್ವೋಪಕಾರಮಂ ನೆನೆದಿದಿರಂ ಪರಿತಂದು ಪೊಡೆಮಟ್ಟು ಭ್ಯಾಗತಪ್ರತಿಪತ್ತಿಯುಂ ಮಾಡಿ ಬಟ್ಟೆಯು ಬೞಲ್ಕೆಯುಂ ಕಳದು ಕೌಶಿಕನಂ ಕೊಂಡಾಡುತಿರ್ಪುದುಂ ಮಱುದಿವಸಂ] [2] ಬೃಹಸ್ಪತಿರವಿಶ್ವಾಸಂ [3] ಎಂಬೀನೀತಿಯುಂ ಮಱೆದು ಚಮೂರನಿತ್ತ ಪೊನ್ನಾಭರಣಗಳೆಲ್ಲಮಂ ಗಟ್ಟಿಮಾಡಿ ಕುಡುವುದೆಂದೇಕಾಂತದೊಳಕ್ಕಸಾಲೆಯು ಕೈಯೊಳ್ ಕುಡುವುದುಮಾತನಂತೆ ಗೆಯ್ವೆನೆಂದು ॥ ೧೮೫

---

1 ಫಲಮೇಕಂದಂದು (ಬ. ಕ.)   2 ಕಂಡು (ಗ)

3 ಬೃಹಸ್ಪತಿಂ ನ ವಿಶ್ವಾಸಯೇತ್ (ಗ)

ಮನದೊಳ್ ಭಾವಿಸಿ ನೋಡಿ ನೋಡಿ ಪಿರಿದಪ್ಪೀದ್ರವ್ಯಮಂ ಸಾರ್ಚಿ ಮೋ
ದಿನಿಕಾಂತಾಪತಿಯಲ್ಲಿ ಮೆಚ್ಚುಗೊಳುವೆಂ ನಿಷ್ಕಾರಣಂ ಕೊಟ್ಟು ಕೆ
ಮ್ಮನೆ ವಿಪ್ರೋನ್ನತನಲ್ಲಿ ಬರ್ಪ ಪಡಪೇನೆಂದಾದುರಾತ್ಮಂ ಮಹೀ
ಶನನಾನಂದದಿನೆಯ್ದಿ ಪೇೞ್ದೊಡರಸಂ ಕೇಳ್ದಾಗಳುತ್ಸಾಹದಿಂ ॥ ೧೮೬

[ತಳಾಱನಂ ಕರೆದು ನೀನೀಸ್ವರ್ಣಕಾರಕಂ ತೋಱಿದ ಪಾರ್ವನಂ ಸೆಱೆಯಿಡೆಂಬುದುಂ ತಳಾಱನಕ್ಕಸಾಲೆಯೊಡನೆ ಪೋಗಿ ಕೌಶಿಕನಂ ಪಿಡಿತಂದು ಕೋಳದೊಳಿಕ್ಕುವುದುಂ ಕೌಶಿಕಂ ಬೆಱಗಾಗಿ ॥ ೧೮೭

ಎನಗರ್ಥಮುಳ್ಳುದಂ ಮೋ
ದಿನಿಪತಿ ಯೆಂತಱಿವನೀದುರಾತ್ಮನೆ ಪೇೞ್ದಂ ।
ಧನಮುಂಟೆಂಬುದನೀದು
ರ್ಜನನಿಂ ಕೇಡಾದುದೆಂದು ಚಿಂತಿಸಿ ವಿಪ್ರಂ ॥ ೧೮೮

ಫಣಿಪತಿಯುಂ ನೆನೆವುದುಮಾ
ಫಣಿಪತಿ ಬಂದೇಕೆ ನೆನೆದಿರೆಂಬುದುಮಾಧಾ ।
ರಿಣಿದೇವನೆಂದನೀನಿ
ಷು ರನಿಂದೆನಗಾದ ದುಃಖಮಂ ತತ್ಕ್ಷಣದಿಂ ॥ ೧೮೯

ಪಿಂಗಿಸುವುದೆಂಬುದುಂ] [1] ತದ್ರಾಜಸುತನಂ ಕೊಂಡು ಆರ್ಗಮಿಱಿಯುದಿರೆ ಕೌಶಿಕಂ ನಿರ್ವಿಷಂಮಾಡಿ ಮೆಚ್ಚುಗೊಂಡು ತದ್ವೃತ್ತಾಂತಮೆಲ್ಲಮನರಸಂಗೆ ಪೇೞೆ ಮಹೀನಾಥಂ ಚೋದ್ಯಂಬಟ್ಟು [ಮುನಿದು ಅಕ್ಕಸಾಲೆಯುಂ ವಿಶ್ವಾಸಘಾತಕನಿವನಂ ಕವರ್ದೊಡೆ ದೋಷಮಿಲ್ಲೆಂದು ಕವರ್ದುಕೊಂಡ] [2] ನಂತೆ ಕೆಲರುಪಕಾರಶೂನ್ಯರೊಳರೆಂದು ಜಿನದತ್ತಸೆಟ್ಟಿ ನುಡಿದುಸಿಂದಿರ್ಪುದುಂ ಜಿನಪಾಲಿತಮುನಿ ವಿಸ್ಮಯಂಬಟ್ಟು ಸೆಟ್ಟಿಯ ಮುಖಮಂ ನೋಡಿ ॥ ೧೯೦

---

1 ಕೌಶಿಕನಂ ತಂದು ಕೋಳದೊಳಿಕ್ಕುವುದುಂ ಬೆರ್ಚಿ ಪಾವಂ ನೆನೆಯೆ ಪಾವುಬಂದು (ಗ) 2 ಬೆಱಗಾದ (ಗ)

ಅವಧರಿಸು ವೈಶ್ಯವಂಶ
ಪ್ರವರ ಮಹಾಚೋದ್ಯಮಪ್ಪ ಕಥೆಯನಿದಂ ಭೂ ।
ಭುವನಕ್ಕೆ ರೂಢಿವೆತ್ತಿ
ರ್ದವಂತಿಯೆಂಬೊಂದು ನಾಡು ತದ್ಧಾರಿಣಿಯೊಳ್ ॥ ೧೯೧

ಉಜ್ಜೈನಿಯೆಂಬುದು ಪುರಮದನಾಳ್ವಂ ಮಹೇಂದ್ರನೆಂಬರಸನಾತನ ರಾಜಶ್ರೇಷ್ಠಿ ಕುಬೇರನೆಂಬನಾಪರದನೊರ್ವಂ ಜಲಯಾತ್ರೆಗೆ ಪೋಗಿ [ಪಿರಿದಪ್ಪರ್ಥಲಾಭಮಾಗಿರ್ಪುದುಮೊರ್ವನೊಂದು ಮಾವಿನ ಪಣ್ಣಂ ತಂದು ಕುಬೇರನಂ ಕಂಡು ಅಪೂರ್ವಮಪ್ಪ ಮಾವಿನ ಪಣ್ಣಿದಂ ಮೆಲ್ವೊಡೆ ಸಕಲರುಜೆಗಳುಂ ಕಿಡುಗುಮಿದಱ ಪೆಸರುಂ ಸರ್ವರುಜಾಪಹಾರಿಯೆಂಬುದೆಂದು ಕುಡುವುದುಂ, ಸೆಟ್ಟಿಯಾತಂಗೆ ಸಾಲ್ವನಿತು ಪೊನ್ನಂ ಕೊಟ್ಟು ಸಂತೋಷಂಬಡಿಸಿ ಕಳಪೆ ಮಾವಿನ ಪಣ್ಣಂ ನೋಡಿ ॥ ೧೯೨

ಇದನಿಲ್ಲಿ ಮೆಲ್ದು ಕಿಡಿಸದೆ
ಪದುಳಂ ಕೊಂಡೊಯ್ದು ಮಾಳವೇಶಂಗಿತ್ತ ।
ಭ್ಯುದಯಶ್ರೀಯುಂ ಪಡೆವೆಂ
ಮುದದಿಂದಾನೆಂದು ಮೆಲ್ಲದಂತಾಪಣ್ಣಂ ॥ ೧೯೩

ಪ್ರಯತ್ನದಿಂ ತಂದುಜ್ಜೈನಿಯುಂ ಪೊಕ್ಕು ॥ ೧೯೪

ತೊಳಗುವ ವಸ್ತುಗಳಂ ಪರಿ
ಯಳದೊಳ್ ಲೇಸಾಗಿ ತೀವಿ ಮಾವಿನ ಪಣ್ಣಂ ।
ಬೆಳಗುವ ರತ್ನದಮೇಲು
ಜ್ಜ್ವಳಕೀರ್ತಿಪತಾಕನಿಟ್ಟು ತಂದವನಿಪನಂ ॥ ೧೯೫

ಕಂಡು ಪೊಡೆಮಟ್ಟು ರತ್ನದಿಂ ತೀವಿದ ಪರಿಯಣಮಂ ಭೂಪಾಲನ ಮುಂದಿಡುವುದುಂ ॥ ೧೯೬

ಅರಸಂ ಮಾವಿನಪಣ್ಣಂ
ಕರಮಾದರದಿಂದೆ ಕಳೆದುಕೊಂಡೆಂದಂ ಭೂ ।
ಧರಧೈರ್ಯ್ಯ ! ಚೂತಫಲಮಿದು
ಧರಣೀಚಕ್ರದೊಳಪೂರ್ವ್ವಮಾದುದೆ ಮರುಳೇ ॥ ೧೯೭

ಅಮೂಲ್ಯಮಪ್ಪವಸ್ತುಗಳಮೇಕಾರಣದಿಂ ತಂದಿಕ್ಕುಟು[1] (?) ತಂದಿರೆಂಬುದುಂ ಕುಬೇರನಿಂತೆಂದಂ] [2] ॥ ೧೯೮

ನರೆ ಬಂದ ನರರ್ ಮೆಲ್ದಿರೆ
ತರುಣತ್ವಮನೆಯ್ದುವರ್ ಮಹಾವ್ಯಾಧಿಗಳಂ ।
ಕರಗುವವರ್ ಮೆಲ್ದೊಡೆ ನಿ
ರ್ಜರಸನ್ನಿಭರಪ್ಪರೆಂದು ಪೇೞ್ದುದುಮರಸಂ ॥ ೧೯೯

ವಿಸ್ಮಯಂಬಟ್ಟು ಕುಬೇರಂಗೆ ಮೆಚ್ಚಂ ಕೊಟ್ಟು ಮನೆಗೆ ಕಳಪಿ ಮಾವಿನಪಣ್ಣಂ ಭಾವಿಸಿ ನೋಡಿ ॥ ೨೦೦

ಮಱಿಯುಂ ಸಿಂಧುನಿಕಾಯಮುಂ ಪಶುಗಳುಂ ವೈದ್ಯಾಂಗನಾನೀಕಮುಂ [3]
ಬೆಳಸುಂ ಪಣ್ಫಲಮುಂ ಜಿನೇಂದ್ರಮತಮುಂ ಸರ್ವೋಪಕಾರಂಗಳಂ
ತಿಳಿಯೊಳ್ ಸದ್ಗುಣನಪ್ಪ ಮಾಸಿಸನುಮಿನ್ನುಮಾರ್ಗದಿಂ ಬಾೞ್ಗು ತ
ನ್ನಳವಂ ಮಾಸಿಸಿ ಲೋಗರಂ ಕಿಡಿಸುತಿರ್ಪಾ [4] ಕಷ್ಟನುಂ ಮರ್ತ್ಯನ ॥

1 ಇಕ್ಕುಟ್ಟು (ಕ)

ಸರ್ವ್ವರುಜಾಪಹಾರಿಯೆಂಬ ಮಾವಿನಪಣ್ಣ ನೊರ್ವ್ವಂ ತಂದುಕೊಡುವುದುಂ ಅದನಲ್ಲಿಯೆ ಮೆಲ್ಲದೆ ಉಜ್ಜೈನಿಗೆ ತಂದು ಮಹೇಂದ್ರಮಹೀಪಾಲಂಗೆ ಕೊಟ್ಟು ಸೆಟ್ಟಿಯಿಂತೆಂದಂ (ಗ)

3 ವೈಶ್ಯಾತ್ಮಜಾನೀಕಮುಂ (ಕ. ಖ.)

4 ಪೂರಯದಿರ್ದಾಂ (ಕ. ಖ.)

ಅದುಕಾರಣದಿಂ ಪರೋಪಕಾರಿಯುಪ್ಪನ ಬಾೞ್ಕೆ ಸಫಲಮೆಂದು ಪಣ್ಣನೊರ್ವನೆ ಮೆಲ್ವುದು ಕಷ್ಟಂ ಪುರಮುಂ ಪರಿವಾರಮುಮರಸಿಯುಂ ಕುಮಾರರುಂಬೆರಸು ಮೆಲ್ವೆನೆಂದು ಪಣ್ಣನರಮನೆಯ ಪೆಱಗಣ ನಂದನವನದೊಳ್ ಬಿತ್ತಿಸುವುದುಮದು ಬೆಳೆದು ಪೆರ್ಮರನಾಗಿ ಫಲಮಪ್ಪುದುಂ ॥ ೨೦೨

ಉರಗನನೊಂದುಪರ್ದು ಪಿಡಿದಾಮರನಂ ಪರಿದೇಱೆ ತದ್ವಿಷಂ
ತ್ವರಿತದಿನಾಗಳೊಂದುಫಲದೊಳ್ ನೆಲೆಗೊಳ್ವುದುಮಾಫಲಂ ಸವಿ
ಸ್ತರದೊಳ ಪಣ್ತು ಬೀೞೆ ವನಪಾಲಕನಂತದನೊಯ್ದು ಕೊಟ್ಟೊಡಂ
ದರಸನುಮರ್ತಿಯಿಂ ಕೆಲದೊಳಿರ್ದ ಮಗಂಗಿರದೀವುದುಂ ಮಗಂ ॥ ೨೦೩

ಮೆಲ್ದು ವಿಷಪೂರಿತನಾಗಿ ಸಾವುದುಂ ಮಹೇಂದ್ರಭೂಮೀಶ್ವರಂ ಮಗನ ಸಾವಿಂಗೞಲ್ದು ವಿಷವೃಕ್ಷಮಿದಂ [1] ಕಡಿದು ಕಳೆಯಿಮೆಂದು ಕಡಿದೀಡಾಡಿಸಿ ಕುಬೇರನಂ ಸಾಯೆ ಬಡಿಸಿ ಸರ್ವಸ್ವಮುಂ ಕವರ್ದು ಕೊಂಡನನ್ನೆಗಂ ಪುರದೊಳಗಣ ತೊನ್ನರುಂ ಪೆಱಿನರುಂ ಕುಂಟರುಂ ಕುರುಡರುಂ ಪರಿತಂದು ಸಾವೆವೆಂದು ಪಣ್ಣುಮಂ ಕಾಯುಮಂ [2] ತಿಂದು ಸುವರ್ಣ [ಮಯ] ಶರೀರರಪ್ಪುದುಮರಸನವರಂ ಕಂಡು ವಿಸ್ಮಯಂಬಟ್ಟು ಮಱುಗಿ ಕುಬೇರನರ್ಥಮುಂ ಕೊಟ್ಟು ಕ್ಷಮೆಗೊಂಡು ಮಾವಿನಮರನಂ ಪಾತಕನೆಂ ವಿಚಾರಿಸದೆ ಕಡಿಸಿದೆನೆಂದು ಚಿಂತಿಸಿದನಂತೆ ಕೆಲರವಿಚಾರತೆಯುಂ ಮಾಡುವರದಱಿಂ [ಸಜ್ಜನರ್ ಪುರುಷರ್] ವಿಚಾರಿಸಿ ನೆಗೞ್ವುದೆಂದು ಜಿನಪಾಲಿತಮುನಿ ಮೋನಂಗೊಂಡಿರ್ಪುದುಂ ಮನಮಂ ಪಿಡಿಯಲಾಱದೆ ಜಿನದತ್ತಂ ॥ ೨೦೪

ವಂದಿತಗುಣ ಪಲವೇಕಿ
ನ್ನೊಂದನೆ ಕೇಳ್ಕಥೆಯನತ್ಯಪೂರ್ವಮಿದಂ ಸಾ ।
ನಂದಗಿರಿಯೆಂಬ ಪುರದೊಳ್
ಸಂದಿರ್ದ ಪುಳಿಂದನಮಿತನೆಂಬಂ ಪೆಸರಿಂ ॥ ೨೦೫

1 ಸಾವಿಂಗ ಮಱುಗಿ ವೃಕ್ಷಮುಂ (ಗ)   2 ಕಾಯುಮಂ ತಿಗುಱುಮಂ(ಗ)

ಆತನೊಂದು ದಿವಸಂ ತೊೞಲುತ್ತುಂ ದೈತ್ಯವನಮೆಂಬಡವಿಯೊಳ್ ನೀರಡಸಿ ಪೋಗಲಾಱದೆ ಕುಳ್ಳಿರ್ದುಮಮನನೊಂದುಕೋಡಗಂ ಕಂಡು ॥ ೨೦೬

ಕರುಣಿಸಿ ನೀರೆಡೆಯಂ ವಾ
ನರನಾಥಂ ತೋಱೆ ಕುಡಿದು ಬೇಡಂ ತದ್ವಾ ।
ನರನೆನಗುಪಕಾರಮನೊ
ಪ್ಪಿರೆ ಮಾಡಿದನೆಂಬ ಬಗೆಯನುೞಿದಳಿಪಿಂದಂ ॥ ೨೦೭

ಎನ್ನ ಪೋಪೆಡೆಯುಪ್ಪೊಡೆ ದೂರ[ಮೀನೀರಿರ್ದೆಡೆಯೊಳ್ ನೀರಂ ತುಂಬುವೆಂ ನೀರಿಲ್ಲದೆ ತೃಷ್ಣೆಯಿಂ ಸಾಯಬಾರದೆಂದು] [1] ಕೋಡಗಮಂ ಕೊಂದದಱ ತೊವಲೊಳ್ ನೀರಂ ತುಂಬಿಕೊಂಡು ಪೋದನಂತೆ ಕೆಲರುಪಕಾರಶೂನ್ಯ [ರೊಳ] ರೆಂದು ವಣಿಕ್ಪತಿ ನುಡಿಯುತಿರ್ಪುದುಂ ಮುನಿವೃಂದಾರಕಂ ನಾಡೆಯುಂ ವಿಸ್ಮಯಂಬಟ್ಟು ॥ ೨೦೮

ವರವೈಶ್ಯೋತ್ತಮ ಕೇಳು
ಧರೆಯೊಳದಾಶ್ಚರ್ಯಮಪ್ಪ ಕಥೆಯುಂ ನೀನಾ ।
ಪರದಿಂ ಧಾತ್ರಿಯೊಳೊಪ್ಪುವ
ದುರುಮುದದಿಂ ಧನದರೆನಿಪ ವೈಶ್ಯಾತ್ಮಜರಿಂ ॥ ೨೦೯

ಕೌಶಾಂಬಿಯೆಂಬ ಪುರಮದಱೊಳ್ ವಿಶಾಖನಂದನನೆಂಬ ಪರದ ನಿರ್ಧನಾತನ ಮಗನಂಗಾರಕ [ನೆಂಬನಾತ] ನೊಂದುದಿವಸಮೊಂದು ಪದ್ಮರಾಗಮಂ ಬೞಿವಿಡಿದು ಪೊೞಗೆ ಪಟ್ಟವಣೆಯುಮೇಗೆ ದಿವ್ಯವಸ್ತ್ರಮಂ ಪಾಸಿ ತದ್ವಸ್ತ್ರದಮೇಲೆ ತದ್ರತ್ನಮನಿಕ್ಕಿ ನೋಡುತ್ತುಮಿರ್ಪನ್ನೆಗಂ ॥ ೨೧೦

ತ್ವರಿತಂ ಮೇಧಾವಿಮುನೀಂ
ಶ್ವರರೆಂಬರ್ ಚರಿಗೆವರ್ಪುದುಂ ವೈಶ್ಯಕುಲಾಂ ।

1 ದೂರದಿಂ ನೀರಿಲ್ಲದೆಡೆಯೊಳ್ ತೃಷೆಯಿಂ ಪೋಗಲಾಱೆನೆಂದು (ಗ)

ಬರಭಾನು ಕಂಡು ಪರವೂ

ದರದಿಂ ಪರಿತಂದು ಭಕ್ತಿಯಿಂ ನಿಲಿಸುವುದುಂ ॥ ೬೧೧

ಮುನಿನಾಥಂ ನಿಲ್ವುದುಂ ಕೃತಾರ್ಥನಾದೆನೆಂದು ಮನೆಯೊಳ್ ಗಣ್ಗೊಡಗೊಂಡು ಪೋದನನ್ನೆಗಮಿತ್ತಲ್ ಪದ್ಮರಾಗಮಾಣಿಕ್ಯಮಂ ನೆರೆ ಮನೆಯಂಗಣದೊಳಾಡುತ್ತುಮಿರ್ದ ನವಿಲ್ [1] ಕಂಡು ಮಾಂಸಮೆಂದು ಬಗೆದು ಪರಿತಂದು ನುಂಗಿ ಪೋಯ್ತು; ವಿಶಾಖನಂದನಂ ॥ ೬೧೨

ನವವಿಧ [2] ಪುಣ್ಯದಿಂ ಕುಡುವುದುಂ ಮುನಿಗನ್ನಮನಂದು ತನ್ಮುನಿ
ಪ್ರವರನುದಾತ್ತಚಾರುಚರಿತಂ ಬಟಕಕ್ಷಯದಾನಮೆಂದು ಭೂ [3]
ಭುವನಹಿತಂ ಸಮಸ್ತನುತನಾಗಳ್ ಪೋಪುದುಮಿತ್ತಲಾವಣಿ
ಕ್ಪ್ರವರನಮರ್ಕವೆತ್ತು ಬರಲಲ್ಲಿಗೆ ರಾಗಿಸಿ ಬಂದು ರತ್ನಮಂ ॥ ೬೧೩

ಕಾಣದೆ ಮಱುಗಿ ಲೋಭಿಯುಂ [4] ಕಡುಪಾಪಿ ತುಡುಗುಣಿಯುಂ [5] ಕಡು ದೂರ್ತನೆಂಬ ಮಾತಂ ದಿಟಂಮಾಡಿ ಮೇಧಾವಿಮುನೀಂದ್ರನೆ ರತ್ನಮಂ ಕೊಂಡು ಪೋದನೆಂದು ಪೆಱಗೆ ಪರಿತಂದು ಕೃತಕದಿಂ ಪೊಡೆಮಟ್ಟು ಮನೆಗೊಡಗೊಂಡು ಬಂದು ಕುಳ್ಳಿರಿಸಿ ನಿಮ್ಮಡಿಗಳ್ ಸಕಲವಸ್ತುಮಂ ತೊಱೆದುಂ ನಿಮಗೆ ಮತ್ತೀರತ್ನದ [6] ಮೋಹಮೇಕೆ ಕಾಡವೇಡ [ಬೇಗ] ಮೆನ್ನ ಪದ್ಮರಾಗದ ಮಣಿಯನೀಯಿಮೆಂದು ಗಜಱಿ [ಗರ್ಜಿಸಿ] ॥ ೬೧೪

ನುಡಿದೊಡೆ ಮುನೀಂದ್ರವಂದ್ಯಂ
ಕಡುಮೂರ್ಖನ ನುಡಿಗೆ ನಾಡೆಯುಂ ಚೋದ್ಯಂಬ ।
ಟ್ಟೊಡಮೆಯುನೀತಂ ಕಾಣದೆ [7]
ಕಿಡೆ ನುಡಿದವಿಚಾರಿ ಕಳ್ಳನೆಂದಪನೆನ್ನಂ ॥ ೬೧೫

---

1 ಕೊಂಚೆಯುಂ (ಗ)
2 ನವನಿಧಿ (ಕ. ಖ.)
3 ದಾನಮೆಂಬುದುಂ (ಕ. ಖ.)
4 ಅತಿಲೋಭಿಯುಂ (ಗ)
5 ಅತಿ ಕೋಪಿಯುಂ (ಗ)
6 ರತ್ನದಮೋಗೆ (ಗ)
7 ಮೋಹದಿನೀತಂ (ಗ)

ಆಸದ್ಮರಾಗಮಣಿಯುಂ
ಕೋಪಿಸದಿರ್ ಕೊಳ್ಳನೆಂದೊಡಂ ನಂಬದ ದು |
ಷ್ಪಾಪಿ ಫಲಮೇವುದಿವಗಿ
ನ್ನಿಪದದೊಳ್ ಮೋನದಿಂದಮಿರ್ಪುದೆ ಕಜ್ಜಂ || ೨೧೬

ಎಂದು ಪರಿಚ್ಛೇದಿಸಿ ಪೆಱ
ತೊಂದುಮನಾಮುನಿಪನೆನ್ನದರ್ಹತ್ಪದಮಂ |
ಮಂದರಧೈರ್ಯಂ ತದ್ಧೃದ
ಯೇಂದೀವರದಲ್ಲಿ ತಾಳ್ದಿ ನಿಲ್ವುದುಮಿತ್ತಲ್[1] || ೨೧೭

[ನುಡಿದೊಡೆ ನುಡಿಯುಂ ತಾನೆಂ
ದೊಡವೆಯುನಳಿಪಿಂದಮೊಯ್ದು ಮೋಹೋದಯದಿಂ |
ಪಿಡಿದುಸಿರದೆ ಚದುರಿಕೆಯಿಂ
ಮಿಡುಕದೆ ಕುಳ್ಳಿರ್ದೊಡಕ್ಕಿಲಱಿಗುಮೆ ರತ್ನಂ] || ೨೧೮

ನುಡಿಯದೆ ನೀನಿಂತಿರ್ದೊಡೆ
ಕಡೆನೋಂಕಿ ಪೊರಟ್ಟ ಗಂಟಲಂ ಮುಟ್ಟಿ ಕರಂ |
ತಡೆಗೆಡಹಿ ತನುಪ ಜಡಿದೆ[2]
ನ್ನೊಡಮೆಯನುಗುಳಿಸದೆ ಮಾಣೆನಾರ್ಬರಿಪ್ರೊಡಂ || ೨೧೯

ಎಂದು ನುಡಿದು ವೈಶ್ಯಜಂ ಮುನಿಕುಂಜರನಂ ನುಡಿಯಿಸಲಾಱದೆ ಕೋಪಾಗ್ನಿಯಿಂ ಕಣ್ಗಾಣದೆ ಕೆಲದೊಳಿರ್ದ ಬಂಡಿಯ ಪುಳ್ಳಿಗಳಂ ಕೊಂಡು ಸೊಪ್ಪುಸೋವಡಪ್ಪಿನಮಟ್ಟಿ ಬಡಿಯೆ || ೨೨೦

ಎನ್ನನದೋಷಿಯಂ ಬಡಿದಪಂ ಖಳನೆನ್ನದೆ ಶುದ್ಧವೃತ್ತಿಯಿಂ
ದುನ್ನತಚಿತ್ತನಿಂದ್ರಧರಣೀಂದ್ರನಿಭಕ್ಷಮನಾಗಮಾನ್ವಿತಂ
ತನ್ನ ಶರೀರಮಲ್ಲದಿದು ತಾಂ ಪೆಱತೇಂ ಪೆಱರಂಗಮೆಂಬವೋಲ್
ಸನ್ನುತನಿರ್ದನಂತರದುರೋಘವಿರೋಧಿಯನಿಕ್ಕಿ ಮುಟ್ಟುತುಂ || ೨೨೧

1 ತದ್ಗೃಹಮೆಂದಿಪ್ಪನ ಪರದನಲ್ಲಿ ನಿಲ್ವುದುಮಾಗಳ್ (ಗ)
2 ಕೂಡ | ಗೆಡಪಿ ತನುವೊಡೆಯ ಬಡಿದೆ (ಕ. ಬ.)

ಅಂತು ವೈಶ್ಯಜಂ ತನುವಂ ಬಾಧಿಸುವುದುಂ ಮೇಧಾವಿಮುನಿವರರ್ ಮೇಧಾವಿಯೆಂಬ ಪೆಸರನನ್ವರ್ಥಂಮಾಡಿ ಶುಕ್ಲಧ್ಯಾನಮೆಂಬ ದಳ್ಳುರಿಯಿಂ ಕರ್ಮೇಂಧನಂಗಳಂ ಸುಟ್ಟು ಕೇವಲಿಗಳಾಗಿ ಕೋಟಿಸೂರ್ಯಪ್ರಭಾನ್ವಿತದೇಹರಾಗಿರ್ಪುದುಂ ಕೇವಲಿಪೂಜೆಯಂ ಮಾಡಲೆಂದು ಚತುರ್ವಿಧದೇವನಿಕಾಯಂ ನೆರೆದು ಬರೆ ಕಂಡಂಗಾರಕಂ ನೀರ್ಮುಟ್ಟಿದಂಗಾರಕನಂತೆ ತಣ್ಣಿದನಾಗಿರ್ಪುದುಂ ॥ ೨೨೨

ಬಡಿವಲ್ಲಿ ನಿಡಿಯ ಪುಳ್ಳಿಯ
ಕಡೆಯುಡಿ ಸಿಳ್ಱೆಂದು ಪಾಱಿ ಕೊಂಚೆಯ ಕೊರಲಂ ।
ನಡುವುದು ಕೊರಲೊಡೆದಂತಾ
ಗಡೆ ರತ್ನಂ ಧರೆಗೆ ಬೀೞ್ವುದುಂ ತನ್ಮಣಿಯಂ ॥ ೨೨೩

ಕಂಡಂಗಾರಕನೀಮುನಿ
ಮುಂಡನನಂ ನಿಷ್ಕಷಾಯನಂ ಮನದೞಲಿಂ ।
ಕೊಂಡಂ ರತ್ನಮನೆಂದಾಂ
ದಂಡಿಸಿದೆಂ ಪಾಪಕರ್ಮನೆಂ ನಿರ್ದಯನೆಂ ॥ ೨೨೪

ಎಂದಾಗಳ್ ತನ್ನಂ ತಾಂ
ನಿಂದಿಸಿ ವೈರಾಗ್ಯಮೊದವೆ ಮನದೊಳ್ ಬೇಗಂ ।
ಕಂದರ್ಪಸದೃಶನಮರರ
ವೃಂದಂ ಕೈಮುಗಿಯೆ ಜೈನದೀಕ್ಷೆಯನಾಂತಂ ॥ ೨೨೫

ಅಂತಜ್ಞಾನಿಯಾಗಿ ಕಳ್ಳರಲ್ಲದರಂ ಕಳ್ಳ [ರೆಂದು ತನ್ನರ್ಥಾಭಿಲಾಷೆಯಿಂ ಬಱಿದೆ ಕಾಡುವುದು ಪುರುಷನಪ್ಪಂಗೆ ಧರ್ಮಮಲ್ಲೆಂಬುದುಂ ವಣಿಜ್ನಂದನಂ] [1] ಮತ್ತಂ ನಂಬದೆ ಬೆನ್ನನೆ ತಗುಳ್ವುದುಂ ॥ ೨೨೬

ಜಿನಪಾಲಿತಮುನಿ ಪರದನ
ಮುನಿಸಂ ಕಂಡೀತನಪ್ಪೊಡತಿಲೋಭಂ ದು ।

1 ರನಬೇಡೆಂಬುದುಂ (ಗ)

ರ್ಜನನೆನ್ನ ಮೇಲೆ ಪರಿದಪ
ನನಘರಿವರ್ಶದ್ಧರೆಂಬ ಮಾತನೆ ಬಿಟ್ಟಂ ॥ ೧೦೭

ಕೆಮ್ಮನೆ ಬಾಯಂ ಬಡಿವುದು ಕಜ್ಜಮಲ್ಲೆಂದು [ಘೋರೋಪಸರ್ಗಂ ಪಿಂಗುವಿನಮಾಹಾರಶರೀರನಿವೃತ್ತಿಯೆಂದುಕೈಯನಿಕ್ಕಿ] [1] ಮೋನಂಗೊಂಡಿರೆ [ಜಿನದತ್ತಸೆಟ್ಟನುಡಿಯಿಸಲಾಱದೆ ಮೀಸೆಯಂ ಕಡಿದು] [2] ॥ ೧೦೮

ಕಡುಕೊಂಡೊಡಮೆಯನೀಗಳ್
ಕುಡದಿರ್ದೊಡೆ ಮುೞಿವೆನಿಕ್ಕುಟೊಳ್ಕಯ್ಯಂ ಕೂ ।
ಗಿಡೆ ಕೊಯ್ದು ಕೊಯ್ದು ಸುಣ್ಣಮ
ನಿಡುವೆಂ ಪಿಡಿದೊಯ್ದು ಮೆಟ್ಟುವೆಂ ಪೆರ್ಗಱಿಯೊಳ್ ॥ ೧೦೯

ಎಂದು [ರೌದ್ರಾಟೋಪಮಂ ಪಣ್ಣಿ ನಿಗ್ರಹಂಗೆಯ್ಯಲೆಂದಿರ್ಪುದುಂ, ಬಳಗೆ ಪಡಿಯಂ ಪತ್ತಿರ್ದು] [3] ಕೇಳ್ದು ॥ ೧೧೦

ಜಿನದಾಸಂ ನಕ್ಕು ತಮ್ಮಯ್ಯನ ಮನದ ಮಹಾದ್ವೇಷಮಂ ಕಂಡು ಮೂರ್ಖಂ
ಮುನಿವಂದ್ಯಂಗುಗ್ರಕರ್ಮಾಂಬುರುಹರವಿಗೆ ಕೋಪಾಗ್ನಿಯಿಂ ಬಾಧೆಯಂ ಭೋಂ
ಕೆನೆ ತೀವ್ರಂ ಮಾಡವನ್ನಂ ಪೊಱಮಡುವೆನಿದಂ ಬೇಗದಿಂ ದ್ರವ್ಯಮಂ ದು [4]
ರ್ವಿನಯಂಗಿತ್ತುಣ್ಮೆ ಲೋಕಂ ಪೊಗೞೆ ಪಲವುಮಾತೇವುದಾಂ ದೀಕ್ಷೆಗೊಳ್ವೆಂ ॥ ೧೧೧

---

1 ಬೇಸತ್ತು (ಗ) 2 ವೈಶ್ಯನಂದನಂ ನುಡಿಯಿಸೆ ನುಡಿಯಲಾಱದೆ ನಿಗ್ರಹಂಗೆಯ್ಯಲೆಂದಿರ್ಪುದುಂ (ಗ)

3 ರೌದ್ರರೋಷಮಂ ಪಣ್ಣುವುದುಂ ಮಗಂ ಪಡಿಯ ಪೆಱಗಿರ್ದು (ಗ)

4 ಪೊಱಮಡುವೆನಿದೇಂ ದ್ರವ್ಯಮೋ ಕಷ್ಟಮೆಂದು (ಕ. ಖ.)

ಪೆಱತೇನೀಮುನಿಪಂ ಪೊಂ
ಗೆಱಗಂ ಪೊಂಗೆಱಗುವೊಂದುಮನಮುಳ್ಳೊಡೆ ಮುಂ ।
ತೊಱೆವನ ಸಕಳಮನೆನ್ನದೆ
ನೆಱೆ ದಂಡಿಪನಿಂತು ಕಷ್ಟರಂ ಕಂಡಱಿಯೆಂ ॥ ೧೨೧

ಮಱೆದಂ ಧರ್ಮದ ಒಟ್ಟೆಯು
ನಱಿತಂ ಪಿಂತಾಗಿ ಪೋಯ್ತು ಲೋಭೋದಯದಿಂ ।
ಮಱುಕಮುಮನಱಿವೊಡರ್ಥದ
ಮಱುಕಕ್ಕೆಣೆ ಮಱುಕಮೊಳವೆ ಬಗೆವೊಡೆ ಜಗದೊಳ್[1] ॥ ೧೨೨

ಕಳ್ಳನಿವನೆಂದೊಡನಿತಱೊ
ಳೆಲ್ಲರುಮೆಱೆಯುಟ್ಟೆ ಪಿಡಿದು ನಾನಾವಿಧದಿಂ ।
ಕೊಲ್ಲದೆ ಮಾಣ್ಬರೆ ಕಳವಿಂ
ಪೊಲ್ಲಮೆ ಪೆಱತೊಳವೆ ಪಾಪದೆತ್ತರಮಲ್ತೇ ॥ ೧೨೩

ಪೆಱರರ್ಥಕ್ಕೆಱಗುವನುಂ
ಪೆಱರರ್ಥಮನೆಯ್ದೆ ತರಿಸಿ ಕೊಳ್ವವನುಂ ಕೇ ।
ಳಱಿವೊಡೆ ಕೊಲ್ವರ್ ನೆಲೆಯಿಂ
ಪೊಱಮಡಿಸುವರಟ್ಟೆ ದೂಱುವರ್ ಕೈಕೊಳ್ಳರ್ ॥ ೧೨೪

ಕಳ್ಳರ ಕೊಟ್ಟುವಿದೆಂದೊಡೆ
ಬಲ್ಲಿದರುಂ ನಡುಗುತಿರ್ಪರಪ್ಪುದಱಿಂದಂ ।
ಪೊಲ್ಲದು ಕಳವೆಂದಂಜುವು
ದಲ್ಲದೆ ಲೇಸೆಂದು ನಚ್ಚಲಕ್ಕುಮೆ ಕಳವಂ ॥ ೧೨೫

---

1 ಮಱುಗಿ ಪದನಱಿತದರ್ಥದ ಮಱುಕಕ್ಕೆಣೆಯೊಳವೆ ಬಗೆವೊಡಿಂತೀಜಗದೊಳ್.

ನರಕದ ದಾರಿ ಮಹಾನಿ
ಷ್ಠುರದುಃಖದ ಬಿತ್ತು ಪುಣ್ಯದ ಕ್ಷಯಮುಳಿಪಿಂ ।
ಗಿರಲೆಡೆ ಕೊಲೆಯು ತವರ್ಮನೆ
ದುರಿತದ ಪೆರ್ವೆಳಸು ಕಳವು ಬಗೆವೊಡೆ ಜಗದೊಳ್ ॥ (ಗ)

ತನ್ನರ್ಥಂ ಕೆಟ್ಟೊಡೆ ಕೇ
ಳನ್ನರ್ಥಂ ಕೆಟ್ಟುದೆಂದು ಬಾಯ್ವಿಟ್ಟುವರ್ |
ತನ್ನಂತೆ ಬಗೆಯಲಾಗದೆ
ಸನ್ನುತಮತಿಯಾಗಿ ಲೋಗರರ್ಥದ ಕೇಡಂ || ೨೩೭

ಒಡಲುರಿವನ್ನೆಗಂ ಬಸಿದ ಶೂಲದೊಳಿಕ್ಕಿ ಪಲರ್ ಕುಕಿಲ್ದು ಬೊ
ಬ್ಬಿಡುತುಮುಶಂಕೆಯಿಂ ತೆಗೆವ ಕಯ್ಯುಮನಂಘ್ರಿಯುಮಂ ನರರ್ತಡಂ
ಗಡಿವ ಧಗದ್ಧಗೆಂದುರಿವ ದಳ್ಳುರಿಯೊಳ್ ಪಿಡಿದೊತ್ತಿ ಕೋಪದಿಂ
ಸುಡುವತಿದುಃಖದೇಷ್ಟೆಗಳ್ ಪೇೞ್ವೆ ತಾಂ ಕಳವಾಗದೆಂಬುದಂ || ೨೩೮

ಪಿಡಿದು ತಳಾಱರೋವದೆ ಕನಲ್ದು ಮನಂಗಿಡೆ ಕಟ್ಟೆ ಶಂಕೆಯಿಂ
ನಡುಗುವ ದೇಹಮುಂ ನುಡಿಯಲಾಱದ ನಾಲಗೆಯುಂ ನಿಜೇಷ್ಟೆಯಿಂ
ನಡೆಯದ ಕಾಲುಮುಬ್ಬೆಗಮುಮಂಜಮೆಯುಂ [1] ಕಳವಾಗದೆಂಬುದಂ
ತಡೆಯದೆ ತೋಱಿ ಸಾಱುವವೊಲಿರ್ದುವು ಭಾವಿಸಿ ನೋಡೊಡುರ್ವಿ
ಯೊಳ್ || ೨೩೯

ಎಂದು ಕಳವಿನ ಕಷ್ಟವೃತ್ತಿಯುಮಂ ದ್ರವ್ಯದೊಳಾದ ಸಂಕ್ಲೇಶಮುಮಂ ವಿಚಾರಿಸಿ ಸಂಸಾರಕ್ಕೆ ಪೇಸಿ ಪಡಿಯಂ ತೆಱೆಯಿಸಿ ಪೊಱಮಟ್ಟು [ಮಹಾಪಾತಕಂ ಲೋಭದಿಂ ಮತಿಗೆಟ್ಟು ಸುಗತಿಯಂ ಕಿಡಿಸುವ ಕಜ್ಜಮನೆತ್ತಿಕೊಂಡು ಗಣಧರರಪ್ಪವರಂ ಬಱಿದೆ ಸುತ್ತುತ್ತಿರ್ದಪೆ] ಕೊಳ್ ನಿನ್ನ ಪೊನ್ನನೆಂದು ಪೊನ್ನಂ ತಂದೆರ್ದೆಯುಮೇಲೀಡಾಡಿ [ಮುನಿನಾಥಂಗೆ ಪೊಡೆಮಟ್ಟು ಮುಂದೆ ನಿಂದಿರ್ದು || ೨೪೦

ದುರಿತಮದಗಂಧಸಿಂಧುರ
ಹರಿ ಚಾರುಚರಿತ್ರ ನಿರ್ವೃತಿಶ್ರೀಸತಿಯಂ |
ಬರಿಸುವ ಜಿನೇಂದ್ರದೀಕ್ಷೆಯ
ನುರುಮುದದಿಂದೀವುದೆಂದು ಬೇಡುತೆ ಮುನಿಯಿಂ [2]] || ೨೪೧

---

1 ಮುಚ್ಚೆಗಮುಸೀಯುಮೆಯ್ಯುಂ (ಗ) 2 ಬೇಱ್ಪುದು ಮುನಿಯುಂ (ಕ. ಬ.)

ಪರಮಶ್ರೀಯೊಳ್ ನೆರೆಪುವ
ದುರಿತಾರಿಯನಱಪ ದೇವರಿಂ ಪೊಗೞಿಪ ಭೂ ।
ಸುರಜೈನದೀಕ್ಷೆಯಂ ಸ
ಚ್ಚರಿತಂ ಜಿನದಾಸನಾಕ್ಷಣಂ [1] ಕೈಕೊಂಡಂ ॥ ೧೪೦

ಅಂತು ಜಿನದಾಸಂ ಜಾತರೂಪಧರನಾಗಿರ್ಪುದುಂ ಜಿನದತ್ತ ಸೆಟ್ಟಿಯುಂ ವೈರಾಗ್ಯಂ ಪುಟ್ಟಿ ತನ್ನ ಮಾಡಿದ ಮಾಟಕ್ಕೆ [ಕರಮಲ್ಲದೆ] ನೊಂದೆನ್ನ ಪಾಪಮಿಂತಲ್ಲದೆ ಪೋಗದೆಂದು ತಾನುಂ ಜಿನದೀಕ್ಷೆಯುಂ ಕೊಂಡು ತಪಂಗೆಯ್ದು ಸಂನ್ಯಸನವಿಧಿಯಿಂ ಮುಡಿಪಿ ಮಹರ್ಧಿಕ ದೇವನಾಗಿ ಪುಟ್ಟಿದಂ. ಜಿನದಾಸಮುನೀಂದ್ರನುಂ ಪಲಕಾಲಂ ತಪಂಗೆಯ್ದು ಸಮಾಧಿಮರಣದಿಂ [ಮುಡಿಪಿ] ಸರ್ವಾರ್ಥಸಿದ್ಧಿಯೊಳ್ ಮೂವತ್ತಮೂಱುಸಾಗರೋಪಮಾಯುಷ್ಯಮನೊಡೆಯನಹಮಿಂದ್ರನಾಗಿ ಪುಟ್ಟಿದನದಱಿಂ ॥ ೧೪೧

[ಕಳವಿನ ಮಾತಂ ನೆಱೆ ಪಂ
ಬಲಿಸದೆ ಜಿನಪಾದಸೇವೆಯಿಂದಿರ್ಪ ನರಂ ।
ಮಲಹಾರಿಯಾಗಿ ನಿರ್ವೃತಿ
ಲಲನೆಗೆ ಪತಿಯಪ್ಪನೆಂಬುದೊಂದಚ್ಚರಿಯೇ] ॥ ೧೪೨

ಕಳವಿನ ಮಱೆಯೊಳ್ ಮೆಲ್ಲನೆ
ಮುಳಿಸಿಂದಘಮೆಂಬ ಬೇಡನಿರ್ದೆಚ್ಚಪನಾ ।
ಖಳನಂ ಬಂಚಿಸಿ ಸುಖದೊಳ್
ನೆಲಸುವ ಮನಮುಳ್ಳೊಡಂಜಿ ಮಾಣ್ಬುದು ಕಳವಂ ॥ ೧೪೩

ಎಂದು ಗಣಧರಸ್ವಾಮಿಗಳ್ ಕಳವಿನೊಳಾದ ಪೊಲ್ಲಮೆಯುಮನ ಸ್ತೇಯದೊಳಾದ ಮಹಾಮಹಿಮೆಯುಮಂ ಪೇೞ್ವುದುಂ ॥ ೧೪೪

---

1 ತಡೆದಿರದೆ ಕೂರ್ಮೆಯಿಂ (ಕ. ಖ.)

ದುರಿತಾರಾತೀಭಕಂಠೀರವನಘಗಿರಿವಜ್ರಾಯುಧಂ ವಾಗ್ವಧೂಸೌಂ
ದರರೂಪಂ ಕೇಳ್ದು ರಾಗಂಬೆರಸು ನಲಿದನತ್ಯೂರ್ಜಿತಂ ದೇವಧಾತ್ರೀ
ಧರಧೈರ್ಯಂ ನಿರ್ಮಲಂ ಸಂಸ್ಕೃತಿನಿಧಿಮದನಧ್ವಂಸಿ ತ್ರೈವಿದ್ಯಚಕ್ರೀ
ಶ್ವರ [1] ಪಾದಾಂಭೋಜಭೃಂಗಂ ಸುಕವಿಜನಮನಃಪದ್ಮಿನೀರಾಜಹಂಸಂ||

ಇದು ನಿಖಿಲದಿವಿಜಪರಿವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ಸಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಅಸ್ತೇಯವ್ರತವ್ಯಾವರ್ಣನಂ
ದ್ವಾದಶಾಶ್ವಾಸಂ.

---

1 ಲಕ್ಷ್ಮೀವರ (ಗ)

ತ್ರಯೋದಶಾಶ್ವಾಸಂ

ಶ್ರೀಮತ್ಸುರೇಂದ್ರವಂದ್ಯಂ
ಸಾಮಾನ್ಯಮೆ ಕಳ್ಳದ ವ್ರತಂ ಚಿಂತಿತಚಿಂ ।
ತಾಮಣಿಯೆಂದೊಸೆದಂ ಧರ
ಣೀಮಹಿತಂ ಸುಕವಿನಿಕರಪಿಕಮಾಕಂದಂ ॥ ೧

[ಅಂತಸ್ತೇಯವ್ರತಮಂ
ಕಂತುನಿಭಂ ಕೇಳ್ದು ಸಂತಸಂಬಟ್ಟು ಮಹೀ ।
ಕಾಂತಂ ನಾಲ್ಕನೆಯ ವ್ರತ
ಮಂ ತಡೆಯದೆ ಕೇಳ್ವೆನೆಂದು ಕರಮಾದರದಿಂ ॥ ೨

ಗೌತಮಸ್ವಾಮಿಗಳ್ಗೆ ಪೊಡೆಮಟ್ಟು ಕೈಗಳಂ ಮುಗಿದು ಕರ್ಮ
ರಾಜನೊಡ್ಡಂ ಕಿಡಿಸುವ ನಿಬ್ರಹ್ಮದ] [1] ಕಥೆಯನೆನಗೆ ನಿಮ್ಮಡಿ ಬೆಸಸಿ
ಮೆಂಬುದುಂ ॥ ೩

ಗಣಧರಮುನಿಮುಖ್ಯರ್ ಗುಣ
ಗಣನಿಳಯರ್ ಮೃದುನಿನಾದದಿಂ ಭೂಪ [2] ಶಿಖಾ ।
ಮಣಿಗೆ ಸುರಮನುಜಪನ್ನಗ
ಗಣಪರ್ ಕೈಮುಗಿಯೆ ಪೇೞಲುದ್ಯತರಾದರ್ ॥ ೪

[ಇಂತೆಂದು ಪೇೞ್ದರ್:—]ಹಣಿತೆಯೊಳ್ ಕೂಡಿ ಬತ್ತಿಯಿಂದೆಣ್ಣೆಯಿಂದಂ ಬೆಂಕಿಯಿಂದಂ ಬೆಳಗಿಂವಂ ಸೊಡರೆಂತೊಪ್ಪುಗುಂ, ಕರಿಯ ಭೂಮಿಯೊಡಗೂಡಿ ಮೊದಲಿಂದಂ ಪಣಿಯಿಂದಂ ಪೆರ್ಗೊಂಬುಗಳಿಂದಂ

---

[1] ಅಂತು ಕಳ್ಳದ ವ್ರತದ ಕಥೆಯನಱಿದು ಮುಂದಣ ಕರ್ಮರಾಜನಬಲಮಂ ನಿಬ್ರಹ್ಮ ಕೆಡಿಸುವ ಅಬ್ರಹ್ಮದ (ಗ) [2] ಭವ್ಯ (ಗ)

[ಕಿಱುಗೊಂಬುಗಳಿಂದಂ]ಆಲದಮರನೆಂತೊಪ್ಪುಗುಂ, ಬಲ್ಲವರೊಡಗೂಡಿ ಬಣ್ಣದಿಂದೊರೆಯಿಂ ತೂಕದಿಂ ಮಚ್ಚರ್ಯಿಂದಂ [1] ಪೊನ್ನೆಂತೊಪ್ಪುಗುಂ, ರೂಪಿನೊಡಗೂಡಿ ವಸ್ತ್ರದಿಂ ತಿಳಕದಿಂ [ತೊಡವಿಂ] ಕಾಡಿಗೆಯಿಂ ಸ್ತ್ರೀಯೆಂತೊಪ್ಪುಗುಂ, ಬೆಳ್ದಿಂಗಳೊಡಗೂಡಿ ತಂಗಾಳಿಯಿಂ ದುಯ್ಯಲ್ಗಳಿಂ ವಿಲಾಸದಿಂ ತಿಳಿಗೊಳಂಗಳಿಂ ವಸಂತ [ಮಾಸ] ಮೆಂತೊಪ್ಪುಗುಮಂತೆ ಸಮ್ಯಕ್ತ್ವದೊಳ್ ಕೂಡಿ ಕೊಲ್ಲದ ಪುಸಿಯದ ಕಳ್ಳದ
ಪಾದರಮಿಲ್ಲದ ವ್ರತಂಗಳಿಂದಂ ಶ್ರಾವಕನುಮೊಪ್ಪುವುದು ॥ ೫

ಪರವನಿತೆಗೆಱಗದವನಂ
ಧರೆ ನಂಬುವುದವನಿಪಾಳರುಂ ಕೈಕೊಳ್ವರ್ ।
ಕರಮಾದರದಿಂದೆನೆ ಪಾ
ದರಮಂ ಮಾಣೆಂಬ ಸುವ್ರತಂ ಕೇವಳಮೇ ॥ ೬

[ಇನ್ನಾ ವ್ರತದ ಮಹಿಮೆಯೆಂತೆಂದೊಡೆ, ಈ ಜಂಬೂದ್ವೀಪದ ಭರತಕ್ಷೇತ್ರದ ವತ್ಸಕಾವತೀವಿಷಯದ ಕೌಶಾಂಬಿಯೆಂಬ ಪೊೞಲನಾಳ್ವ] [2] ದಂತಬಳನೆಂಬ ಮಹಾಮಂಡಳಿಕನಾತನ ಪಟ್ಟದರಸಿ ಧಾರಿ
ಣೀಮಹಾದೇವಿ ಯೆಂಬಳವರ್ಗೆ ಪ್ರಿಯನಂದನಂ ॥ ೭

[ಸುರಪತಿವಿಭವಂ ಧಾತ್ರೀ
ಧರಧೈರ್ಯಂ ಕಾಮದೇವಸನ್ನಿಭನಹಿತ ।
ದ್ವಿರದೇಂದ್ರಸಿಂಹನರ್ಹ
ಚ್ಚರಣಸರೋಜಾತಭೃಂಗನಮಳಚರಿತ್ರಂ ॥ ೮

ಪ್ರಮಾಥಿಯೆಂಬಗ್ರನಂದನ] [3] ನಂತವರ್ ಸುಖದಿಂ ರಾಜ್ಯಂ
ಗೆಯ್ಯುತ್ತುಮಿರ್ಪುದುಂ ॥ ೯

---

1 ಈ ಪದವು (ಗ) ಪುಸ್ತಕದಲ್ಲಿ ಮಾತ್ರ ಕಂಡುಬರುತ್ತದೆ.

2 ಇನ್ನದಱ ಮಹಿಮೆಯಂ ಪೇಳ್ವಡೆ ವತ್ಸವಿಷಯದ ಕೌಶಂಬಿಯೆಂಬ ಪುರಮದನಾಳ್ವಂ (ಗ)

3 ಪ್ರಮಾಥಿ ಕುಮಾರನೆಂಬ (ಗ)

ವನಜಂಗಳ್ ದಳವೇಱೆ ಚೂತಲತೆಗಳ್ ನೀರೇಱೆ ಶೀತಾಂಶು ತೊ
ಟ್ಟನೆ ಪೂರ್ವಾದ್ರಿಯನೇಱೆ ಮನ್ಮಥಗಜಂ ಸೊರ್ಕ್ಕೇಱೆ ಪೊನ್ನುಯ್ಯಲಂ
ವನಜಾತಾಕ್ಷಿಯರೇಱೆ ಕಾಮನ ಶರಂ ಕೂರ್ಪೇಱೆ ಪುಂಡ್ರೇಕ್ಷುಚಾ
ಪನ ಚಾಪಂ ಗೊಲೆಗೇಱೆ ಬಂದುದು ವಸಂತಂ ಸಂತತೋತ್ಸಾಹದಿಂ ॥೧೧

[ಜಿನವಚನಾಮೃತಾಬ್ಧಿ ಜಗಮಂ ನೆಱೆ ಪರ್ವಿತೊ ಮೇಣ್ ಧರಿತ್ರಿಯಂ
ಜಿನವರಕೀರ್ತಿ......ನೆಱೆ ತೀವಿತೊ ಮೇಣಮೃತಾಬ್ಧಿ ಲೋಕಮಂ
ತನಗೆಡೆಮಾಡಿಕೊಂಡುದೊ ಮಹಾದ್ಭುತಮೆಂಬಿನಮುಜ್ಜ್ವಳಕ್ಕೆಯಿಂ
ವನಜವಿರೋಧಿಯೊಂದುನಿಜಕಾಂತಿ ಬಸಂತದೊಳೊಪ್ಪಿ ತೋಱುಗುಂ ॥

ಓಳಿಯೊಳಿರ್ದ ಚೂತಮಹಿಜಾತಸಮೂಹದ ಚೆಲ್ವುವೆತ್ತ ಸ
ಲ್ಲೀಲೆಯ ಕೆಂದಳಿರ್ಗಳಿಪಿ ಪೊರ್ದಿದ ತುಂಬಿಗಳರ್ತಿವೆಟ್ಟು ಸ
ಲ್ಲೀಲೆಯಿನಿಂದ್ರನೀಲದ ಪರಲ್ಗಳನಾವನದೇವಿಯರ್ ಮೃಗೇಂ
ದ್ರಾಳಿಗೆ ಕೆಂದಳಂಗಳನುದಾರತೆಯಿಂ ಕುಡುವಂತೆ ರಂಜಿಕುಂ ॥ ೧೨

ಕೊಸಗಿನ ಪೂವಿನೊಪ್ಪು ಸುರಹೊನ್ನೆಯ ಪುಷ್ಪದ ಚೆಲ್ವು ಪೆಂಪುವೆ
ತ್ತೆಸಕದಿನಿರ್ದ ಸಂಪಗೆಯ ಪೂವಿನೊಳಾದ ಬೆಡಂಗು ನಾಡೆ ರಂ
ಜಿಸೆ ವನದೇವಿಯರ್ ನಲಿದು ಮನ್ಮಥರಾಜನ ಬರ್ಪುದಕ್ಕೆ ರಾ
ಗಿಸಿ ಮನವೊಲ್ದು ಪೊತ್ತಿಸಿದ ದೀವಿಗೆಯಂದದಿನೊಪ್ಪಿ ತೋಱುಗುಂ॥೧೩

ನಲಿನಲಿದತ್ತಲಿತ್ತಲೆಡೆಯಾಡುವ ಸೋಗೆನವಿಲ್ಕಡಂಗಿ ಮೆ
ಲ್ಲುಲಿ ತರವೊಂದಿ ಪಾಡುವ ಮದಾಳಿ ಮನೋಭವರಾಗಮುಣ್ಮಿ ಬಂ
ದೆಳಸುವ ಜಕ್ಕವಕ್ಕಿ ಪುಗಲೆಂದನಟಿಂ ದನಿಗೆಯ್ಯುತಿರ್ಪ ಕೋ
ಗಿಲೆ ವಿಟರರ್ತಿಯಂ ಸಲಿಸಿ ಮೆಲ್ಲನೆ ತೀಡುವ ದಕ್ಷಿಣಾನಿಲಂ ॥ ೧೪

ಅಂತು ವಿಟವಿಟೀಜನಕ್ಕಭ್ಯುದಯಮಾಗಿ ಬಂದ ವಸಂತಮಾಸದೊಳ್ ವನಪಾಲಕಂ ಬಂದು ದಂತಿಬಲ ಮಹಾರಾಜಂಗೆ ಬಿನ್ನಪಂಗೆಯ್ವುದುಮರಸನ...ಹೃದಯನಾಗಿ ವನಪಾಲಕಂಗಂಗಚಿತ್ತಮನಿತ್ತು ವನಮಂ ಲೇಸುಮಾಡೆಂದು ಪೋಗಲ್ವೇೞ್ದು ಮಱುದಿವಸಂ ವನಕ್ರೀಡೆಗೆ ಪೋಪ ಬಗೆಯಿಂದಾನಂದಭೇರಿಯಂ ಪೊಯ್ಸುವುದುಂ ॥ ೧೫

ಪೊಳೆವೆಲರ್ಗಣ್ಣ ನೀಳ್ದ ನಿಡುಪುರ್ವಿನ ಸುಕ್ಕಿದಮೆರ್ಕೆವೆತ್ತ ಕುಂ
ತಳದ ಪೊದಳ್ಕೆವೆತ್ತ ಸಿಯ ಬಾಸೆಯ ಪೊಂಗಳಸಂಬೊಲಿರ್ದ ಪೆ
ರ್ಮೊಲೆಯ ಲತಾಂಗದುಳ್ಳುಡೆಯ ತೆಳ್ವಸಿಱಿಂದುನಿಭಾಸ್ಯದಂಗನಾ
ವಳಿ ನೆರೆದಂದು ಬಂದುದು ಮನೋಜನ ತಂತ್ರದವೋಲ್ ವಿಲಾಸದಿಂ [1] ||

ಪೊಳೆಪಿಂದಂ ಚಲ್ಲೆಗಣ್ ಕಾಮನ ಕುಸುಮಶರಾನೀಕಮಂ ಪೋಲೆ ಭೂಪಾ
ವಳಿಯುಂ ಕಯ್ಗಾಯ್ದುಚ್ಛತ್ತಿರೆ ವಿಟಜನಮಂ ಸತ್ಕಟಾಕ್ಷಂಗಳಿಂದ
ವ್ವಳಿಸುತ್ತುಂ ಕಾಮಪಾಶಕ್ಕೆಣೆಯೆನಿಸಿ ಕರಂ ಸುತ್ತಿ ರಾಜಾಲಯಕ್ಕ
ಗ್ಗಳಮೊಪ್ಪಂಬೆತ್ತು ಬಂದಿರ್ದುದು ನಯದೊದವಿಂ ವಾರನಾರೀಕದಂಬಂ||

ಅಂತು ಪೆಂಡವಾಸಮುಂ ಪುರಪುರಂಧ್ರಿಯರುಂ ರಾಜಕುಮಾರರುಂ ಪ್ರಮಾಥಿಕುಮಾರಂ ಮೊದಲಾದ ಕುಮಾರರುಂಬೆರಸು ಧಾರಿಣೀ ಮಹಾದೇವಿಯುಂ ತಾನುಂ ಗಂಧಸಿಂಧುರಾರೂಢರಾಗಿ || ೧೮

ಕರಡೆಯ ಡಕ್ಕೆಯ ಪಪಳದ
ಪರಿಡಕ್ಕೆಯಮದ್ದ ದನಿಗಳುಂ ಭೋರ್ಗರೆಯಲ್ |
ಶರನಿಧಿಗಂಭೀರರವ
ಕೆಯ್ಕರೆಯಾಗಿರೆ ಬಂದು ದಂತಿಬಳನರನಾಥಂ || ೧೯

ಮಹೋತ್ಸಾಹದಿಂ ಪೊಱಮಟ್ಟು ಬಂದು ವನಮಂ ಪೊಕ್ಕು ವಸಂತರಾಜನ ಕಟಕದಂತಿರ್ದ ವನದ ಚೆಲ್ವುಮಂ ನೋಡಿ ಧಾರಿಣೀ ಮಹಾದೇವಿಗಿಂತೆಂದಂ || ೨೦

ಗಾಳಿಯ ತೀಟದಿಂಮುಲಿವ ಕೆಂದಳಿರ್ಗಳ್ಪೞಿಯುಂ ಪೊದಳ್ದ ಭೃಂ
ಗಾಳಿಯ ನಿಸ್ವನಂ ನಿಮಿರ್ದ ಮಂಗಳಗೀತಮನಂತೆ ಚೂತಭೂ
ಜಾಳಿಗಳೊಳ್ಪು ಮಂಟಪದ ಭಂಗಿಯನಾವಗಮೇನೊ ಪೋಲೆ ಸ
ಲ್ಲೀಲೆಯಿನೀವನಂ ನೆಱೆಯೆ ಪೋಲ್ತುದು ನೋಡ ವಿವಾಹಗೇಹಮಂ|| ೨೧

1 ವಳಿನೆರೆಸಿಂದು ಬಂಧುವನಮಂ ವಿಭು ಪೊಕ್ಕ ನನಂಗನಂದದಿಂ (ಗ)

ಎಂದು ಮುಂದೆ ಕಿಱಿದಂತರಮಂ ಪೋಗಿ ಗಗನತಳದ ನಿರ್ಮಳತೆಯಂ ನೋಡಿ ನಲ್ಲಳ್ಗಿಂತೆಂದಂ ॥ ೨೨

ದುರಿತದೊಳೊಂದದಿರ್ಪ ಮತದಂದಮುಮಂ ದುರಿತಾರಿಯಪ್ಪ ಭಾ
ಸುರಜಿನವಾಕ್ಯದಂದಮುಮನೊಳ್ಳಿತುಗೇಳ್ದ ಮಹಾತ್ಮನಪ್ಪವಂ
ಪರಮತಮಂ ಬಿಸುಟ್ಟು ವಿಮಳಾಂತರನಾದವೊಲಭ್ರಮಂ ಸವಿ
ಸ್ತರದೊಳ ಬಿಟ್ಟು ನಿರ್ಮಲತೆಯಂ ನೆಱೆ ತಾಳ್ದುದಾನಭೋಂಗಣಂ॥ ೨೩

ಎನುತ್ತುಂ ಬರ್ಪಾತನರಲ್ದ ತಾವರೆಗೊಳಂಗಳಂ ನೋಡಿ ಮನಃಪ್ರಿಯೆಗಿಂತೆಂದಂ ॥ ೨೪

ಸುರಪತಿವಂದಿತಕ್ರಮಪಯೋರುಹನಪ್ಪ ಜಿನೇಶನೊಳ್ ಮನಂ
ಮುರಿಯದೆ ನಿಂದು ಕಾದಿ ಗೆಲಲಾಱದೆ ಕೆಟ್ಟೊಳಸಾರ್ದು ಪೋಗಿ ಬೆ
ಳ್ಳರಳಗಳಪ್ಪ ಲೋಕದ ಜಡಾತ್ಮರನಂಜಿಪನೆಂದು ಧಾರಿಣೀ
ವರವಧು ಕಾಮನಂ ನಗುವ ಭಂಗಿಯೊಳಿರ್ದುವು ವಾರಿಜಾಕರಂ ॥ ೨೫

ಎಂದು ನಗುತ್ತುಂ ಕಿಱಿದಂತರಂಬರಂ ನಡೆದು ಮನೋಜರಾಜನ ಮನೆಯುಂತಿರ್ದ ಸಹಕಾರಮಹೀರುಹಂಗಳುಮಂ ಸುಜನರ ಮನದಂತೆ ನೇರಿತ್ತಾಗಿ ನಲಂಬೆತ್ತಿರ್ದೆಳಲತೆಗಳುಮಂ ಜಿನಧರ್ಮದಂತೆ ನಿರ್ಮಳಮಾಗಿ ಸೊಗಯಿಸುವ ತಿಳಗೊಳಂಗಳುಮಂ ಸಜ್ಜ್ಞಾನಿಯ ಮನದಂತೆ ಚೆಲ್ವುವೆತ್ತಶೋಕೆಯ ಮರಂಗಳುಮಂ ಸಹಜಕವಿಯ ವಚನದ ರಚನೆಯುಂತಿನಿದಪ್ಪ ಮೈಂದವಾಡೆಗಳುಮಂ ಮನೋವಲ್ಲಭೆಗೆ ತೋಱುತ್ತುಂ ಬಂದು ತದನಂತರಂ ಮೊಲ್ಲೆಯ ಸಂಪಗೆಯ ಸುರಹೊನ್ನೆಯ ಕುಸುಮನಿಚಯದಿಂ ವಿನಿರ್ಮಿಸಿದ ಬಾಸಿಗಮುಮಂ ಸುರಗಿಯ ಜಾದಿಯರಲ್ಗಳಿಂ ವಿರಚಿಸಿದ ಕಂಕಣಮುಮಂ ಮನೋರಮೆಗೆ ಮನೋನುರಾಗದಿಂ ತುಡಿಸಿ ತಾನುಂ ತೊಟ್ಟು ನೆಱೆಯೆ ಶೃಂಗಾರಂಗೆಯ್ದು ಪ್ರಮಾಥಿಕುಮಾರಂ ಮೊದಲಾದ ಕುಮಾರರ್ಗಂ ಕೊಟ್ಟು ಪಿರಿದುಬೇಗಂ ವನಕ್ರೀಡೆಯನಾಡಿ ಬಚ್ಚಿಲ್ದು ಬಂದೊಂದು ಮಾವಿನ ಲತಾಮಂಟಪದೊಳಗೆ

ತಳಿರ ಪಾಸಿನಮೇಲೆ ಪಟ್ಟಿರ್ಪುದುಂ ರಾಜಕುಮಾರರುಂ ವಿಳಾಸಿನೀ ಜನಮುಂ ಕುಮಾರತಂಡಮುಂ ತಂತಮ್ಮ ಮನಕ್ಕೆ ಬಂದ ಸಹಕಾರ ಮಹೀರುಹಂಗಳಂ ಸಾರ್ದು ವಿನೋದದಿಂದಿರ್ದರನ್ನೆಗಂ ಪ್ರಮಾಥಿಕುಮಾರನುಂ ಸೌಂದರದೇವಿಯುಮಾನಂದದಿಂದೊಂದು ಕಂಕೆಲ್ಲಿಮಹೀಜಾತದ ಕೆಳಗೆ ॥ ೨೬

ಅರಲ ಪಾಸಿನಮೇಲೆ ರಂಭೆಯುಮಿಂದ್ರನುಂ ರತಿಯುಂ ಮನೋ
ಜ್ಞ್ವಳಯಶೋನ್ವಿತನಪ್ಪ ಕಾಮನುಮಿರ್ಪ ಭಂಗಿಯೊಳಿರ್ದು ಕೋ
ಮಲೆಯ ಹಾವವಿಲಾಸವಿಭ್ರಮಮಂ ನೃಪಾತ್ಮಜನಾಮಹಾ
ಬಲನ ಗಾಡಿಯನೊಪ್ಪವಾಸತಿ ಕೂರ್ತು ನೋಡುತುಮರ್ತಿಯಿಂ ॥ ೨೭

ಮೊರೆವಳಿಗಳ ಮೃದುನಿನಾದಕ್ಕಂ ಪಾಡುವ ಗಾಂಧರ್ವರ ಗೇಯದ ನುಣ್ಪುವೆತ್ತ ಕೋಮಲನಿನಾದಕ್ಕಂ ಜನದ ಕಳಕಳಕ್ಕಂ ಕಿವಿಸೋಲ್ತು ಪುರುಡಿಂ ಸವತಿವೆಂಡತಿ ಮುನಿದಗಲ್ವಂತೆ ನಿದ್ರಾಂಗನೆ ಸೌಂದರಮಹಾದೇವಿಯನೊಲ್ವುದುಂ ॥ ೨೮

ಅರೆಮುಚ್ಚುತ್ತಿರ್ದ ನೇತ್ರದ್ವಯದ ಪೊಳಪು ಪಾಠೀನಯುಗ್ಮಂ ಸರೋಜಾ
ಕರದಿಂದಂ ಮೇಲೆ ಬಂದುಮ್ಮಳಿಸಿ ಪುಗುವವೋಲ್ ನೋಡೆ ಕಣ್ಗೊಪ್ಪೆ ನಿದ್ರಾ
ಭರದಿಂ ಮೆಯ್ಯೋಲೆ ಹಾರಂ ಕೆಲಕೆ ತೊಲಗೆ ಸುಯ್ಗಂಪಿನೊಳ್ ಕೂಡಿ ಪೊಣ್ಮು
ತ್ತಿರೆ ಧಮ್ಮಿಲ್ಲಂಗಳತ್ತಂ ಪರಿಯೆ ತೊಲಗೆ ದಿವ್ಯಾಂಬರಂ ದೇಹದಿಂದಂ॥ ೨೯

ಅಂತು ನಿದ್ರಾಂಗನಾಲಿಂಗಿತೆಯಾಗಿರ್ದ ನಲ್ಲಳಂ ತೆಗೆದು ತಪ್ಪೈಸಿ ಮೆಲ್ಲನೆ ಪ್ರಸೂನಶಯ್ಯೆಯೊಳ್ ಪಟ್ಟಿರಿಸಿ ದಿಶಾವಲೋಕನಂಗೆಯ್ಯುತ್ತಿರ್ಪಿನಮೊರ್ವ ಮಹಾಸಾಮಂತನ ಮಗಂ ವಸಂತನೆಂಬಂ ತನ್ನ ಪ್ರಾಣವಲ್ಲಭೆಯಪ್ಪ ವಸಂತತಿಲಕೆಯೆಂಬ ರಾಜಪುತ್ರಿಗೆ ತನ್ನ ಬಿಲ್ಲ ಬಲ್ಮೆಯಂ ತೋಱಲೆಂದು ಪುಂಖಾನುಪುಂಖಮೆಂಬ ಸೀಮಾವಿನ ದೋಱೆ

ಗಾಯಙ್ಗಳಂ ಗೊಲೆವೆರಸು ನೆಲಕ್ಕೆ ಬೀೞಲೀಯದೆ ಸಾಯಕಮೆ ಕೈಯೆನೆ ಪಟ್ಟಿರ್ದ ಮಾರ್ಗದೊಳ್ ಲೀಲೆಯಿಂದೆಚ್ಚು ಮನೋಹರಿಗೆ ಕುಡುತಿರ್ಪುದುಂ ಅದಂ ಪ್ರಮಾಥಿಕುಮಾರಂ ಕಂಡು ॥ ೩೦

ಕಡುಜಾಣಂ ಬಿಲ್ಲೊಳೀತಂ ಸ್ಮರನಿಭನದಟಂ ನಲ್ಲಳೆಂದಂದು ನೇ
ರ್ಪಡೆ ನಾನಾಭಂಗಿಯಿಂ ತೋಱಿದಪನಿವನ ಕೌಶಲ್ಯಮಂ ಬೇಗದಿಂ ಕಂ
ಡೊಡೆ ನೀನುಂ ತೋಱವೇೞ್ಕೆನ್ನದೆ ಬಱಿದಿರಲೇಕಾಂತೆಯುಂ ಚಾಪ
ಮಂ ತಾಂ
ಪಿಡಿಯಲ್ ಜಾಣಿಲ್ಲ ಕೇಳಲ್ಲೆನಗೆನೆ ಪೆಱತೇಂ ಬಲ್ಲನತ್ಯಂತದೂರಂ ॥ ೩೧

ಅದನೀ ಕಾಮಿನಿ ಕಾಣದೆ
ಕದ (?) ಲೇಸಾಯ್ತೆನ್ನ ಪುಣ್ಯದಿಂದೀ ಪದದೊಳ್ ।
ಮದಗಜಗಮನೆಗೆ ನಿದ್ರೆಯು
ಮುದಯಿಸಿದುದು ಕೇಳದೊಂದತಿಶ್ರಮದಿಂದಂ ॥ ೩೨

ಇವಳಱಿಯದ ಕಳಗಳ್ ಭೂ
ಭುವನದೊಳಿಲ್ಲೀಕೆ ನಿದ್ರೆಯಿಂದಿರ್ದು ಮಹೀ ।
ಧವ ನಿನ್ನ ಬಿಲ್ಲ ಬಲ್ಮೆಯ
ನಿವನಂತಿರೆ ತೋಱವೇೞ್ಕುಮೆನ್ನದ ಮುನ್ನಂ ॥ ೩೩

ಪೋಪೆನೆಂದಿರ್ದು ಮೆಲ್ಲನೆ ಪೊಱಮಟ್ಟು ತನ್ನ ಪೊಱಗನೊರ್ವರ್ಗಪ್ಪುಡಂ ಪೇೞದೆ ಧನುರ್ವಿದ್ಯೆಯಂ ಕಲ್ವೆನೆಂಬುದ್ಯೋಗಮನೆತ್ತಿಕೊಂಡು ಕತಿಪಯಪ್ರಯಾಣಂಗಳಿಂ ಪಾಟಲೀಪುತ್ರಮೆಂಬ ನಗರಕ್ಕೆ ಬಂದು ದ್ರೋಣಾಚಾರ್ಯರಂ ಕಂಡು ॥ ೩೪

ಬೆಲೆಯಿಲ್ಲೆನಿಸುವ ರತ್ನಾ
ವಳಿಯಿಂ ಬಿಲ್ಲೋಜನಂಘ್ರಿಯುಗಮಂ ಧಾತ್ರೀ ।

ತಳನಾಥಸುತಂ ಪೂಜಿಸಿ
ಪೊಡೆಮಟ್ಟು ಬೞಿಕ್ಕೆ ವಿನಯದಿಂದಿರೆ ಭೂಪಂ][1] ೩೫

ದ್ರೋಣಾಚಾರ್ಯರ್ ಮನದೊಳ್
ಜಾಣನಿವಂ ಚಾರುರೂಪನತ್ಯಧಿಕಗುಣಂ ।
ಕ್ಷೋಣೀಶನಾಗವೇೞ್ಕುಂ
ಕ್ಷೋಣಿಯೊಳುೞದವರ್ಗೆ ವಿನಯಗುಣಮಿನಿತೊಳವೇ ॥ ೩೬

[ಅವಿನಯಕ್ಕಂ ಬ್ರಾಹ್ಮಣ
ನವನೀನಾಥಂ ಸಮಸ್ತಗುಣಯುತನಕ್ಕುಂ ।
ಪ್ರವರವಣಿಕ್ತನಯಂ ಸಂ
ದ ವಿದಗ್ಧಂ ಜಾಡ್ಯನಕ್ಕುಮೆಂತುಂ ಶೂದ್ರಂ ॥ ೩೭

---

[1] (ಗ) ಪುಸ್ತಕದಲ್ಲಿ ದಂತಬಲಮಹಾರಾಜನ ವನಕ್ರೀಡಾವರ್ಣನೆಯಿಲ್ಲ. ೧೧ನೆಯ ಪದ್ಯದಿಂದ ಮುಂದೆ ಅದರ ಪಾಠವು ಹೀಗಿದೆ :—

ಅಂತು ಬಂದ ವಸಂತಮಾಸದೊಳ್ ಪ್ರಮಾಥಿಕುಮಾರಂ ತನ್ನ ಮನಃಪ್ರಿಯೆ ವಸಂತಮಾಲೆವೆರಸು ವನಕ್ರೀಡೆಯನಾಡಲೆಂದು ಅರ್ತಿವೆರಸು ॥
ಪೊಳೆವಲರ್ಗಣ್ಣ.... (ಪದ್ಯ ೧೬) ಅಂತು ಪೊಕ್ಕು ನಲ್ಲಳ ಮೊಗಮಂ ನೋಡಿ ॥
ಗಾಳಿಯ ತೀಂಟದಿಂ...... (ಪದ್ಯ ೨೧) ಎಂದು ಕಿಱಿದಂತರಮಂ ಪೋಗಿ ॥
ಬಳಿಯೊಳಿರ್ದ...... (ಪದ್ಯ ೧೨) ಎಂದುಮೆಚ್ಚುತ್ತಂ ಕಿಱಿದೆಡೆಯಂಪೋಗಿ ॥
ಕೊಸಗಿನ ಪೂವಿನೊಪ್ಪು.... (ಪದ್ಯ ೧೩) ಎಂದು ಮುಂದೆಕಿಱಿದಂತರಂ ನಡೆದು ॥
ಸುರಪತಿವಂದಿತ...... (ಪದ್ಯ ೨೫) ಎಂದು ಮನೋವಲ್ಲಭೆಯಪ್ಪ ವಸಂತಮಾಲೆಯ ಕಯ್ಯಂ ಪೊಯ್ದು ನಗುತಂ ಪೋಗಿ ವನಕ್ರೀಡೆಯುಮಂ, ಜಲಕ್ರೀಡೆಯುಮನಾಡಿ ನಿಂದಿರ್ಪುದುಂ, ವಿಶ್ವಸೇನನೆಂಬ ರಾಜಕುಮಾರಂ ಶ್ರೀಮತಿಯೆಂಬ ತನ್ನ ವಲ್ಲಭೆಗೆ ಮಾವಿನೆಳಗಾಯ್ಗಳಂ ಸರಸಂಧಾನಂಗೆಯ್ದು ನೆಲನಂ ಮುಟ್ಟಲೀಯದೆ ತರಿಸಿ ಕೊಡುವುದುಂ, ಪ್ರಮಾಥಿಕುಮಾರಂ ಕಂಡು ತನಗರ್ತಿಯಾಗಿ ರಾಜಭವನಕ್ಕೆ ಬಂದು ಚಾಪವಿದ್ಯೆಯುಮಂ ಕಲ್ತು ಬರ್ಪೆನೆಂದು ನಡುವಿರುಳ ಪ್ಪಿಗಳೆದಾರ್ಗಂ ಪೇಳದೆ ಪಾಟಲಿಪುರಕ್ಕೆ ಪೋಗಿ ದ್ರೋಣಾಚಾರ್ಯರಂ ಕಂಡು ಪಲವುರತ್ನಂಗಳಂ ಪಾದದೆಸೆಯೊಳಿಕ್ಕಿ ವಿನಯದಿಂದಿಚ್ಛಾಕಾರಂಗೊಟ್ಟು ನಿಮ್ಮಲ್ಲಿಯೆ ಬಿಲ್ವಿದ್ಯೆಯಂ ಕಲ್ವೆನೆಂದು ಬಂದೆನೆನ್ನ ಪೆಸರ್ಜನಭಕ್ತನೆಂದು ಪೇಳ್ವುದುಂ (ಗ)

ಚಾಗಿಗುಣಂ ಧಾರಿಣಿಪತಿ
ಗೋಗಡಿಸದೆ ವೈಶ್ಯಜಂಗೆ ಲುಬ್ಧಗುಣಂ ಕೇ ।
ಳಾಗಳುಮೆಲೆ ಶಾಠ್ಯಗುಣಂ
ಬೇಗಂ ವಿಪ್ರಂಗೆ ಸಹಜಮೆಕ್ಕುಂ ಜಗದೊಳ್ ॥ ೩೮

ಎಂದು ಪೂರ್ವೋಕ್ತನೀತಿಶಾಸ್ತ್ರಮಂ ನೋಡಿ ತಲೆಯಂ ತೂಗಿ ಮಹಾವಿನಯಪರನೀತಂ ಕ್ಷತ್ರಿಯತನಯನಪ್ಪನೆಂದು ಪ್ರಮಾಥಿಕುಮಾರನ ಮೊಗಮಂ ನೋಡಿ ನೀಮೆಲ್ಲಿಂ ಬಂದಿರೆಲ್ಲಿರ್ಪಿರ್ನಿಮ್ಮ ಪೆಸರೇನೆಂಬುದಿಲ್ಲಿಗೇಂ ಕಾರಣಂ ಬಂದಿರೆಂದು ಬೆಸಗೊಳ್ವುದುಂ ಪ್ರಮಾಥಿಕುಮಾರನಿಂತೆಂದಂ ॥ ೩೯

ದೂರದೇಶದೊಳಿರ್ದು ಬಂದೆನಿಳಾಮರಾತ್ಮಜನೆಂ ಸವಿ
ಸ್ತಾರದಿಂ ಜಿನಭಕ್ತನೆಂಬುದು ಪೇೞಲೆನ್ನ ಪೆಸರ್ ಗುಣಾ
ಧಾರ ಪೆಂಪಿನ ಚಾಪವಿದ್ಯೆಯನರ್ತಿಯಿಂ ಕಲಲೆಂದು ಪಂ
ಕೇರುಹೋದರವಂಶಭಾಸ್ಕರ ಬಂದೆನೆಂದೊಡೆ ಕುಂಭಜಂ ॥ ೪೦

ಪ್ರಮಾಥಿಕುಮಾರನ ನುಡಿವ ಭಾವಕ್ಕಂ ವಿನಯಕ್ಕಂ ಮನದೆಗೊಂಡು ಚಾಪವಿದ್ಯೆಯೊಳೀತನಂ ಜಾಣನಂ ಮಾಡುವೆನೆಂದು ಚಿತ್ತದೊಳ್ ಪೂಣ್ದು ಪ್ರಮಾಥಿಕುಮಾರನ ಕಯ್ಯಂ ಪಿಡಿದೊಡಗೊಂಡು ಪೋಗಿ ಪಂಕ್ತಿಯೊಳುಣಲಿಕ್ಕಿಸಿ ವಸ್ತ್ರತಾಂಬೂಲಾದಿಗಳಂ ಸಂತೋಷಂಬಡಿಸಿ ಪಥಶ್ರಮಂಕಳೆದು ಮಱುದಿವಸಮಿಂತೆಂದಂ ॥ ೪೧

ಜಿನಭಕ್ತ ಚಾಪವಿದ್ಯೆಯ
ನನುನಯದಿಂದೆನ್ನ ಸಾರೆ ಧಾತ್ರೀತಳದೊಳ್ ।
ಮನವೊಲ್ದು ಕಲ್ತನವನಾ
ವನೊ ಭಾವಿಸಿ ನೋೞ್ಪೊಡಣ್ಣ ಕೇಳನ್ನೊಂದಂ ॥ ೪೨

ಚಾಪವಿದ್ಯೆಯೊಳ್ ನಿನ್ನಂ ಸವ್ಯಸಾಚಿಗಂ ಭೀಮಂಗಮಧಿಕನೆಂಬಂತು ಮಾಡುವೆನಂಜದೆ ಬಿಲ್ಲಂ ಕಲ್ಲೆಂಬುದುಂ ದ್ರೋಣಾಚಾರ್ಯ

ರೊಳಾದ ಕಾರುಣ್ಯಕ್ಕೆ ಮನದೊಳ್ ಮೆಚ್ಚಿ] [1] ಪ್ರಮೋಥಿ ಕುಮಾರಂ ತನ್ನೊಳಿಂತೆಂದಂ ॥ ೪೩

ಓಲಗಿಪಂಗೆ ಭೂಭುಜರ ಕೂರ್ಮೆಯುಮುತ್ತಮಮಪ್ಪ ಧರ್ಮಮಂ
ಕೇಳಲು ಬಂದವಂಗೆ ಮುನಿನಾಥರ ಕೂರ್ಮೆಯುಮೆಯ್ದೆ ಶಸ್ತ್ರಶಾ
ಸ್ತ್ರಾಳಿಯುಮಂ ಕರಂ [2] ಕಲಿಪಪಂಗಿರದೋಜರೊಳಾದ ಕೂರ್ಮೆಯುಂ
ಲೀಲೆಯಿನಾದೊಡಾತನೆ ಮಹೋದಯನಾತನೆ ಧನ್ಯನಲ್ಲನೇ ॥ ೪೪

[ಎಂದು ನಲಿದು ಬಿಲ್ಲ ಬಲ್ಮೆ ತನಗಾಗಳಾದಂತೆ ಮುಯ್ಯುಮ್ಮದಮಾಗಿ ಶುಭದಿನದೊಳ್ ಚಾಪವಿದ್ಯೆಯಂ ಮೊದಲ್ಗೊಂಡು ॥ ೪೫

ಒಂದೆಡೆಯೊಳಂಡೆನಪ್ಪೊಡೆ
ಸಂದೀಬಿಲ್ವಿದ್ಯೆಯಾಗಲಱಿಯದು ತಿರಿದುಂ ।
ಡಂದಲ್ಲದೆ ಮೆಯ್ಮಣಿಯದು
ಸಂದೆಯಮಿನ್ನೇಕೆ ಬಿಲ್ಲನಾಂ ಕಲ್ವೆನೆಗಂ ॥ ೪೬

ತಿರಿದುಂಬೆನೆಂದು ಪೂಣ್ದು ವಿದ್ಯೆ ಕಾರಣಮಾಗೆ ಮೆಯ್ಸುಖಮಂ ಬಿಟ್ಟು ದ್ರೋಣಾಚಾರ್ಯರ ಮಾತಂ ಮಿಱಿ ಭಿಕ್ಷಾಹಾರಮನುಂಡು ಪಲವುದಿವಸಮುಪಾಧ್ಯಾಯರ್ ಪೇೞ್ದೋಜೆಯೊಳ್ ನೆಗೞ್ದು ಚಾಪ ವಿದ್ಯೆಯೊಳತಿಪ್ರೀತನಾಗಿ ॥ ೪೭

ಜಿನಭಕ್ತನ ದೊರೆಯಾರ್ ಮೇ
ದಿನಿಯೊಳ್ ದೊರೆಯೊಪ್ಪೊಡರ್ಜುನಂ ಕರ್ಣಂ ರಾ ।
ಮನಮೋಘನಕ್ಕುಮಲ್ಲದೆ
ಜನಪಸುತರ್ ಚಾಪವಿದ್ಯೆಯೊಳ್ ಪೋಲ್ತಪರೇ ॥ ೪೮

1 ಎಂದು ಭಾವಯುತದಿಗಂಬರದಾಸನ ಮಾತಿಂದ ಪರಮಜೈನನೆಂದಱಿದು ಮನದೊಳ್ಮೆಚ್ಚಿ ಭೀಮಂಗರ್ಜುನಂಗು ಚಾಪವಿದ್ಯೆಯೊಳ್ ನಿನ್ನನಧಿಕಂ ಮಾಡುವೆನೆಂದಂಜದಿರೆಂದು ಕೂರ್ಮೆಯಿಂ ನುಡಿವುದು (ಗ)

2 ನರ್ಥಿಯಿಂ (ಗ)

ಎಂದು ಪುರಜನಮುಂ ಜಗಜ್ಜನಮುಮೊಂದೆ ಕೊರಲೊಳ್ ಪೊಗೞೆ ಪ್ರಸಿದ್ಧಿಗೆ ಸಂದು ಚಟ್ಟುತ್ತರ[1] ಮೊಯ್ತೊಂಬ ನಾಣ್ಣುಡಿಯುಂ ನನ್ನಿ ಮಾಡಿ ದ್ರೋಣಾಚಾರ್ಯರ್ಗಂ ಮಿಗಿಲೆನಿಸಿ ಸುಖದಿಂದಿರ್ಪುದುಂ ||

ಎನ್ನ ಚಟ್ಟರೊಳಲ್ಲವೀತನೆ ಬಿಲ್ಲ ಬಲ್ಮೆಗೆ ಜಾಣನ
ತ್ಯುನ್ನತಂ ಕಡುವೀರನುತ್ತಮಜೈನನೂರ್ಜಿತತೇಜನು
ತ್ಪನ್ನಬುದ್ಧಿ ವಿವೇಕಿ ಧೈರ್ಯಪರಂ ಜನಸ್ತುತನೆಂದು ತಾಂ
ತನ್ನ ಚಿತ್ತದೊಳಾಗಳುಂ ಕಡುಗೂರ್ವೆಯಿಂ ದ್ವಿಜವಂದಿತಂ || ೫೦

ಪೊಗೞುತ್ತುಮತ್ಯಾದರದಿಂ ಪುತ್ರಸ್ಥಾನೀಯನಂ ಮಾಡಿ ಕೊಂಡಾಡುತ್ತಿರ್ದೊಂದುದಿವಸಂ ಜಿನಭಕ್ತಕಂ ಮೊದಲಾದ ಶಿಷ್ಯನಿಕಾಯಮಂ ಬೆರಸು ಪೊೞಲಿಂ ಪೊಱಮಟ್ಟು ಪೋಗುತ್ತುಮಿರ್ಪುದುಮಾಪುರಮನಾಳ್ವ ಸಿಂಹಸೇನಮಹಾರಾಜನ ಮಗಳಪ್ಪ ಚಂದ್ರಲೇಖೆಯೆಂಬ ಕುಮಾರಿ ಕತಿಪಯಪರಿಜನಂಬೆರಸು ಪುರದ ಪೊಱಗಣ ಸಹಸ್ರಕೂಟ ಚೈತ್ಯಾಲಯಮಂ ಬಂದಿಸಿ ಮಗುೞ್ದು ಬರುತ್ತುಮಿರ್ಪುದುಂ || ೫೧

ಮದದಿಂ ಕಣ್ಗೆಟ್ಟು ಭೋರೆಂದಧಿಕಬಲದಿನೇವಯ್ಸಿ ಕಾಪಿರ್ದರಂ ಕ
ಟ್ಟಿದ ಶುಂಭತ್ಕಂಬಮಂ ಕಿತ್ತಡಸಿ ಬಡಿಯುತುಂ ಸೀಳುತುಂ ಸೊರ್ಕಿನಿಂ ತೂ
ಳ್ದದಯಂ ಮೆಯ್ವೊರ್ಚೆ ಮುಂ ಬಂಧಿಸಿದ ನಿಗಳಮಂ ಚಕ್ಕನೆಕ್ಕಂಬಿನಂ ಕೋ
ಪದಿನಾಗಳ್ ನುಗ್ಗುನುಗ್ಗಪ್ಪಿನೆಗ ಮುಱಿದು ಕಾಡಾನೆವೋಲ್ ತೀವ್ರದಿಂದಂ || ೫೨

ದೂರದಿಂ ಮಾರಿಯ ಮೂರಿಯಂತೆ ಬರ್ಪ ಸೊರ್ಕಿದಾನೆಯಂ ಕಂಡು ವೀರರೊಳಸಾರೆ ಗಱಿಪರೊಳಸುರ್ಕೆ ಪೊಂಕಮುಳ್ಳವರ್ ಪೊಂಕಂಗೆಟ್ಟೋಡೆ, ಬಿರುದರರಿದೆಂದು ಪೆಱಪಿಂಗೆ, ಬಂಟರ್ ಕೊಂಡಾಡುವಗೆಂಟೊಳರೆ, ಬೆಸದವರ್ ಬೆಸದವರಂತೆ ಸಿವಿಗೆಯನಿರಿಸಿ ಪೋಗೆ ಚಂದ್ರಲೇಖೆಯೊರ್ವಳ್ || ೫೩

1 ಬಟ್ಟುತ್ತರ (ಗ)

ಪರಮಜಿನೇಂದ್ರಪಾದಪದುಮದ್ವಯಮಂ ಹೃದಯಾಂಬುಜಾತದೊಳ್
ಧರಿಯಿಸಿ ಚಿತ್ತದೊಳ್ ಕದಡದುಜ್ಜ್ವಳಚಿತ್ತದಿನೀಗಜೇಂದ್ರನಿ
ಷ್ಠುರದುಪಸರ್ಗಮೊರ್ಮೊದಲೆ ಪಿಂಗುವಿನಂ ತನುವೆನ್ನದಲ್ಲವೆಂ
ದರಸನ ಪೆರ್ಮೆಯಂ ತೊಱೆದು ಪಂಚಪದಂಗಳನೋದುತಿರ್ಪಿನಂ ॥೫೪

ದ್ರೋಣಾಚಾರ್ಯರ ಶಿಷ್ಯರೆಲ್ಲಂ ಬೆತ್ತೆಬೆಟ್ಟಾಗೆ ಗೂಡುಗೊಂಡು ನೋಡುತಿರ್ಪುದುಂ ಜಿನಭಕ್ತಂ ಚಂದ್ರಲೇಖೆಯ ಮನದ ಧೈರ್ಯಮುಮಂ ಧರ್ಮದೊಳಾದ ನಂಬುಗೆಯುಮಂ ತಳರದೆ ನಿಂದ ಪರಿಚ್ಛೇದಮುಮಂ ಕಂಡು ಮೆಚ್ಚಿ ಸಮಯವಾತ್ಸಲ್ಯಮಂ ಮೆಱೆವೆನೆಂದು ಕೋಪಾಟೋಪದಿಂ ಕುಮಾರಿಗಾಗಿ ಪರಿತರ್ಪ ಗಂಧಸಿಂಧುರಕ್ಕಡ್ಡಂ ಬಂದು ನಿಂದು] [1] ॥ ೫೫

ತುಂಗಮೆನಿಸಿರ್ದ ಪಂಚಪ
ದಂಗಳನೋದುತ್ತುಮಧಿಕಗುಣಿ ಕರಿಪತಿಯಂ ।
ಭಂಗಂಮಾಡಿ ಗಜೇಂದ್ರದ
ಬೆಂಗೇಱಿದನಯ್ಯ ಭಾಪು ಜೇಯೆನೆ ಪಲರುಂ ॥ ೫೬

---

1 ಎಂದು ಚಾಪವಿದ್ಯೆ ತನಗಂಗಳಾದಂತೆ ಮುಯ್ಯುಪ್ಪೃದ್ಧಮಾಗ ಶುಭದಿನದೊಳ್ ಮೊದಲೊಂದು ಚಟ್ಟುತ್ತರವಾಯ್ತೆಂಬ ನುಡಿಯಂ ನನ್ನಿಮಾಡಿ ಬಿಲ್ಲ ಬಲ್ಮೆಯೊಳ್ ದ್ರೋಣಗಂ ತಾನೆ ಮಿಗಿಲಾಗಿರ್ಪುದುಂ ಆ ಪುರಮನಾಳ್ವ ಸಿಂಹಸೇನಮಹಾರಾಜನಾತನ ಮಗಳಪ್ಪ ಚಂದ್ರಲೇಖೆಯೆಂಬ ಕುಮಾರಿ ಪುರದ ಪೊಱಗಣ ಸಹಸ್ರಕೂಟವೆಂಬ ಬಸದಿಗೆ ಪೋಗಿ ದೇವರುಮಂ ಋಷಿಯರುಮಂ ವಂದಿಸಿ ಬರುತ್ತಿರ್ಪುದುಂ ಮುಂದೊಂದುಮದದಾನೆ ಕಂಭಮಂ ಮುಱಿದು ಘೋಳಿಯಂತೆ ವೇಗಿಯುಂ ಕಲಿಯಂತೆ ನಿಶ್ಶಂಕನುಂ ಮದ್ಯಪಿಯಂತವಿವೇಕಿಯುಂ ಮೂರ್ಖನಂತೆ ತೀವ್ರನುಂ ತಣಿಯುಂಡ ಪಾರ್ವನಂತಾಶದೃಷ್ಟಿಯುಂ ಬೇಡನಂತೆ ಮೂರ್ಖನುಂ ಕ್ರೂರನುಂ ಪಾಪಿಯಂತೆ ನಿಃಕರುಣಿಯುಮಾಗಿರ್ಪುದಂ ಕಂಡು ಭಯಂಗೊಂಡೆಲ್ಲರುಮೋಡುವುದುಂ ಚಂದ್ರಲೇಖೆಕುಮಾರಿ ಪೋಗದೆ ತಿರಿಗಿಯುಪಸರ್ಗಂ ಪಿಂಗುವಿನಮಾಹಾರಶರೀರನಿವೃತ್ತಿಯೆಂದು ಕಾಯೋತ್ಸರ್ಗದಿರೆ ದ್ರೋಣಾಚಾರ್ಯರ ಭಟ್ಟರೆಲ್ಲಂ ಬೆಟ್ಟದಂತೆ ಬೆಟ್ಟಾಡದಂಜಿ ನಿಲೆ ವಾತ್ಸಲ್ಯರತ್ನಾಕರಂ ಧರ್ಮವಾತ್ಸಲ್ಯದಿಂ ಬಂಧುರಕ್ಕಡ್ಡಂಬಂದು ನಿಂದು (ಗ)

ಅಂತು ವಿದ್ಯಾಧರಕರಣದಿಂದಾನೆಯೇಱ ಮಸೆದಸಿಯುಂ ಕಟ್ಟಿದ ನೇಣುಂ ಕೂರಂಕುಶಮಾಗೆ [ಸಿಂಹಮನಿಸಿದಾನೆಯುಂ ಗ್ರಾಮಸಿಂಹಮನಿಸಿ ನೆರೆದ ನೆರವಿ ಕಯ್ಮುಗಿಯೆ ಕುಮಾರಿಯಲ್ಲಿಗೆ ಬಂದು ॥ ೫೭

ಜಿನಧರ್ಮೋತ್ಪಳಚಂದ್ರಿಕೆ
ನಿನಗಾರ್ದೊರೆ ಶುದ್ಧಮಪ್ಪ ದರ್ಶನದೊಳ್ ಮೇ |
ದಿನಿಪೂಜ್ಯೆ ನೀನೆ ಪಿರಿಯಳ್
ಜನಮೆಂದಿತೆ ಕೇಳ ನೂಱುಸೂೞ್ ಬಣ್ಣಿಪೊಡಂ ॥ ೫೮

ಎಂದು ಮನದೊಳಾದಾದರ ಭಾವದಿಂ ಪೊಗೞ್ದುಪಸರ್ಗಂ ಪಿಂಗಿತ್ತು ಕಯ್ಯನೆತ್ತಿಕೊಳ್ಳಮೆಂಬುದುಂ ಚಂದ್ರಲೇಖೆ ಕಯ್ಯನೆತ್ತಿಕೊಂಡು ಜಿನಭಕ್ತನಂ ನೋಡಿ ಮಹಾತ್ಮನೆಂದಱಿದು ಮನದೊಳ್ ಪೊಗೞ್ದು ಇನ್ನೆನಗೀಭವದೊಳೀತನೆ ಗಂಡನುೞಿದ ರಾಜಕುಮಾರರ್ ಮೊಱೆಯಲ್ಲರೆಂದು ಪೂಣ್ದು ರಾಜಮಂದಿರಕ್ಕೆ ಪೋದಳತ್ತಲ್ ಪ್ರಮಾಥಿಕುಮಾರನಾನೆಯುಂ ಪೂರ್ವಸ್ಥಾನಕ್ಕೊಯ್ದು ಕಟ್ಟಿ ಮಗುೞ್ದು ಬಂದು ದ್ರೋಣಾಚಾರ್ಯರೊಳ್ ಕೂಡಿರ್ದನಿಪ್ಪುದುಂ ॥ ೫೯

ಪುರಮುಂ ಭೂಮಿಪಾಲನುಂ ದ್ರೋಣನುಮತಿಶಯದಿಂದೀತನಂ ಮೆಚ್ಚೆ ಚಾಮೀ
ಕರಶೈಲೇಂದ್ರಕ್ಷಮಂ ವಾಸವವಿಭವನನಂಗಾಭನುದ್ಯದ್ಗುಣಂ ಖೇ
ಚರಶೌರ್ಯಂ ಚಾಪವಿದ್ಯಾಪರಿಣತನದಟಂ ವೀರನುರ್ವೀಸ್ತುತಂ ಭಾ
ಸ್ಕರತೇಜಂ ಸೌಮ್ಯನೆಂದೆಂದಣಮೞಿಯದಲೋರಂತೆ ಕೊಂಡಾಡುತಿರ್ದರ್ ॥ ೬೦

ಎಂದು ಛಾತ್ರರೆಲ್ಲರುಂ ನೆರೆದು ಗುಜುಗುಜುಗೊಂಡು ಪಲ್ಮೊಱೆಯುತ್ತುಮಿಪ್ಪುದುಮವರ ದುರ್ಜನತ್ವಮಂ ದ್ರೋಣಾಚಾರ್ಯರ್ ಮಾಕೆರ್ಗೊಂಡು ತಮ್ಮೊಳಿಂತೆಂದರ್][1] ॥ ೬೧

---

1 ಗಜಮನಜಂ ಮಾಡಿ ಕುಮಾರಿಯುಪಸರ್ಗಮಂ ಪಿಂಗಿಸಿ ದ್ರೋಣರ ಬೇಂಕರಿಸೆ ಕರಿಯನರಿಯನುಯ್ವಂತೆ ಪೂರ್ವಸ್ಥಾನಕ್ಕೊಯ್ದು ಕಟ್ಟುವುದುಂ ಲಲಿತ ಘಟಿಯು ಮುನಿದು ಪಲ್ಮೊಱೆಯುತಿರ್ಪುದುಮದಂ ದ್ರೋಣಾಚಾರ್ಯರುಮಱಿದು (ಗ)

ಕವಿನಾಥರ್ ಕವಿಪುಂಗವರ್ಗೆ ಬಿರುದರ್ ಬೀರರ್ಗೆ ಭೂಪಾಲಕರ್
ಭುವನೇಶರ್ಗೆ ವಿಟರ್ ವಿಟರ್ಗೆ ಚತುರರ್ ಚಾತುರ್ಯರಪ್ಪರ್ಗೆ ವೈ
ಶ್ಯವರರ್ ವೈಶ್ಯವರರ್ಗೆ ಬಂಟರದಟಿಂ ಬಂಟರ್ಗೆ ಪುಣ್ಯಾಂಗನಾ
ನಿವಹಂ ಪುಣ್ಯವಧೂಜನಕ್ಕೆ ಸಹಜಂ ಕಾಯ್ವರ್ ಮಹೀಚಕ್ರದೊಳ್ ॥

[ಇವರ ಮುಳಿಸಿದಾಶ್ಚರ್ಯಮಲ್ಲದೆಂದು ಬೆರಲಂ ಪಿಡಿದು ಸಿಂಗದ ದನಿಯುಂ ಕೇಳದನ್ನೆಗಂ ಗಜಂಗಳ್ ಪ್ರತಾಪಂಗೆಯ್ಗುಂ ಸಿಂಗದದನಿಯುಂ ಕೇಳ್ದೊಡೆ ಭಯಂಗೊಟ್ಟೋಡುಗುಮಂತೆ ಜಿನಭಕ್ತನ ಧನುರ್ವಿದ್ಯೆಯುಂ ಕಾಣುವನ್ನೆವರೆಗವಿನಾಪಲಿತಘಟೆ ತಾನೆಂದುದಂ ಪೆಟ್ಟು ಧನುರ್ವಿದ್ಯೆಯೊಳಾವೆ ಪ್ರವೀಣರೆಂದಿರ್ಪ ರಾತನ ಶರಾಸನದೊಳಾದ ಪರಿಣತೆಯುಂ ಕಂಡರಪ್ಪೊಡೆ ತಂತಮ್ಮ ದರ್ಪವನುಡುಗುವರೆಂದೀಕಾರಣದಿಂ ॥ ೬೩

ಜಿನಭಕ್ತಂ ಚಾಪವಿದ್ಯಾಪರಿಣತನಧಿಕಂ ವೀರನತ್ಯಂತಧೀರಂ
ಪನುಮಾರ್ಗಂ ಜೀಯ ಭಾಪೆಂದಿವರ ಮನದ ಮಾತ್ಸರ್ಯಮುಂ ದರ್ಪ
ಮುಂ ಭೋಂ
ಕನೆ ಪೋಪಂತಾಗೆ ನಾನಾಸ್ತ್ರವನದಿನಿಳ್ ಕೈವಾರದಿಂ ಕೂರ್ಮೆಯಿಂ ನೆ
ಟ್ಟನೆ ಬಣ್ಣಿಪ್ಪಂತು ಮಾಳ್ಪಂ ಸೆಡೆದು ತಡೆವುದೇಕೆಂದುಪಾಧ್ಯಾಯ
ನಾಗಳ್ ॥ ೬೪

ಜಿನಭಕ್ತನುಮಂ ಸಮಸ್ತಶಿಷ್ಯರುಮಂ ಕರೆದು ನಿಮ್ಮ ನಿಮ್ಮ ಧನುರ್ವಿದ್ಯೆಯೊಳಾದ ಕೌಶಲ್ಯಮನೆನಗೆ ತೋಱಲ್ವೇಱ್ಪುದೆಂದು ಪೇೞ್ವುದುಮಂತೆ ಗೆಯ್ವೆವೆಂದು ಚಾಪೋಪಾಧ್ಯಾಯರ್ಗೆ ಪೊಡೆಮಟ್ಟು ಮಱು ದಿವಸವೊರ್ವರೊರ್ವರ್ಗೆ ಮಿಗಿಲಾಗಿ ನೆಱೆಯೆ ಶೃಂಗಾರಂಗೆಯ್ದು ದ್ರೋಣಾಚಾರ್ಯರಲ್ಲಿಗೆ ಬರ್ಪುದುಂ ಶಿಷ್ಯನಿಕಾಯಂಬೆರಸು ಪುರದ ಬಹಿರುದ್ಯಾನವನಕ್ಕೆ ಬಂದು ॥ ೬೫

ಇನಿಬರುಮೋರಂತಿರೆ ತೆಂ
ಗಿನಕಾಯ್ಗಳನಿಳಗೆ ಬೀೞಲೀಯದೆ ಧರೆ ಜೀ ।
ಯೆನೆ ಬಾಣನಿಕರದಿಂ ಮೆ
ಲ್ಲನೆ ತರವೇೞ್ಕೆಂದು ಬೆಸಸೆ ಗುರುವಿನ ಮಾತಂ ॥ ೬೬

ಮೀಱದೆ ಕುಮಾರರನಿಬರು
ಮಾಱೆಂದಿಕ್ಕೆಂದು ಸೆಡೆದು ನಿಲ್ಲದೆ ಜಾಣಂ ।
ತೋಱುವೆವಧಿಕರ ಪಟ್ಟಂ
ಪಾಱಿಸುವೆವಮೋಘಮೆಂದು ನಲಿನಲಿದಾಗಳ್ ॥ ೬೭

ಕರಮಾದರದಿಂದಂ ದ್ರೋ
ಣರ ಪಾದಕ್ಕೆಱಗಿ ಕೊಂಡು ಬಿಲ್ಗಳನವರು ।
ಮೆರೆ ಪೊಗಪೆ ನೆರವಿ ನೋಡು
ತ್ತಿರೆ ತೆಂಗಿನಕಾಯ್ಗಳಂ ಮನೋಹರರೂಪರ್ ॥ ೬೮

ಪಲವುಸೂೞೆಚ್ಚು ದುಃಖಂಬಟ್ಟುಮೆಂತುಂ ನೆಲಕ್ಕೆ ಶರನಿಚಯದಿಂ ದ್ರೋಣರಲ್ಲಿಗೆ ತರಲಾಱದೆ ಬಟ್ಟೆಮೋಪ ಕುತ್ತುಂಗುಳಿಯಂತೆ ಸೇದೆಗೆಟ್ಟು, ಜವ್ವನಗಾಳ್ದನಾದ ಮುದುಪನಂತೆ ಪಲ್ಗಡಿಗಿಱಿದು, ಬಿರುದರೊಳ್ ತೊಡರ್ದ ಪಂದೆಯಂತೆ ಕುಂದಿ, ಸಂತತಿಯಿಲ್ಲದ ದ್ರವ್ಯಪತಿಯಂತೆ ಮಱುಗಿ, ನಾಂದೆರೆಯ ಪೆಟ್ಟೆಯಂತೆ ಕರಗಿ, ರಾಹುವಿಂ ಪಿಡಿವೆತ್ತ ಚಂದ್ರನಂತೆ ಮನದೊಳ್ ಕಂದಿ, ಪಲರ್ಗೆ ಲಜ್ಜಿಸಿ ದ್ರೋಣಾಚಾರ್ಯರ ಮೊಗಮಂ ನೋಡಲಱಿಯದೆ ತೋರ ತೆನೆಯಂತೆ ತಲೆಯಂ ಬಾಗಿರ್ಪುದುಂ, ದ್ರೋಣಾಚಾರ್ಯರುಂ ತನ್ನೊಳಿಂತೆಂದಂ] [1] ॥ ೬೯

ಕುನರರ್ ಸತ್ಪುರುಷರ್ಗೆ ಕುತ್ಸಿತಗುಣರ್ ಮಾನ್ಯರ್ಗೆ ದುಷ್ಪಾಪಿಗಳ್
ಜಿನಧರ್ಮೋದಯರಪ್ಪವರ್ಗೆ ಬಡವರ್ ಧನ್ಯರ್ಗೆ ಹೀನರ್ ಜಗ
ಜ್ಜನವಂದ್ಯರ್ಗೆ ಕುರೂಪಿಗಳ್ ಬಿಡದೆ ಸೌರೂಪ್ಯರ್ಗೆ ದುರ್ಭಾವದಿಂ
ಮುನಿದುಂ ಕಾಯ್ದುಮುಟಿಲ್ದುಮೇಪರನವರಿಂ ತಾನಪ್ಪುದೇಂ ಪೋಪುದೇ [2] ॥

---

1 ಎಂದವರ ಗರ್ವಮಂ ಮುಱಿಯಲ್ವೇಡಿ ನೀಪರ್ವರುಮೀವನದ ತೆಂಗಿನ ಕಾಯ್ಗಳಂ ನೆಲನಂ ಮುಟ್ಟಲೀಯದಂತೆ ಅಂತರಿಕ್ಷದೊಳ್ ಶರಸಂಧಾನದಿಂದೆಮ್ಮಲ್ಲಿಗೆ ತನ್ನಿಮೆಂಬುದುಂ ತರಲಾಱದೆ ಕುತ್ತಂಗೂೞಿಯಂತೆ ಬಲಂಗೆಟ್ಟು ಜವ್ವನಗಾಳ್ದನಾದ ಮುದುಕನಂತೆ ಪಲ್ಗಡಿಗಿಱಿದು ಬಿರುದನೊಳ್ ತೊಡರ್ದ ಪಂದೆಯಂತೆ ಕುಂದಿ ನೀರ್ಮುಟ್ಟಿದೆರೆಯ ಪೆಟ್ಟೆಯಂತೆ ಸಡಿಲ್ದು ನಾಂದ ಕೋೞಿಯಂತುಲಿಪಂಗೆಟ್ಟು ಲಜ್ಜಿಸಿ ನೆಲನಂ ನೋಡುತಿರ್ಪುದುಂ ದ್ರೋಣಾಚಾರ್ಯರಿಂತೆಂದರ (ಗ)

2 ಬಪ್ಪುದೇಂ (ಗ)

[ಎಂದು ಮನದೊಳ್ ನಕ್ಕು ಜಿನಭಕ್ತನಂ ಕರೆದು ನೀಂ ನಾಳಿಕೇರ ಫಲಂಗಳನಿಲ್ಲಿಗೆ ನೆಲನಂ ಮುಟ್ಟಲೀಯದಂತರಿಕ್ಷದೊಳ್ ತಡೆಯದೆ ತರ್ಪುದೆಂಬುದು ಮಂತೆಗೆಯ್ವೆನೆಂದು ಪೊಡೆವಟ್ಟು ಬಿಲ್ಲಂ ತಳೆದುಕೊಂಡು ಜೇವೊಡೆಗೆಯ್ದು ॥ ೨೧

ಪರಮಜಿನಚರಣಯುಗಮಂ
ಸ್ಮರಿಯಿಸಿ ತೊದಳಿಲ್ಲದೆರಡುಗೇಳದೆ ಮನದೊಳ್ ।
ಚರಿಯದೆ ಕೊಂಡೊಡೆ ಕರಮು
ಬ್ಬರಿಸದೆ ಬಱಿದಂತೆ ಪೆಟ್ಟುವೆರ್ಚದೆ ನಯದಿಂ ॥ ೨೨

ಶರಸಂಧಾನವೆಂಬಲಗಿಂ ತೆಂಗಿನಕಾಯ್ಗಳಂ (ಕೊಯ್ದು) ನೆರೆದ ನೆರವಿ ಮೆಚ್ಚಿ ಭಾಪೆಂದು ಝೇಂಕರಿಸೆ ದ್ರೋಣಾಚಾರ್ಯರಲ್ಲಿಗೆ ನೆಲನಂ ಮುಟ್ಟಲೀಯದೆ ಬಾಣನಿಚಯದಿಂ ತರ್ಪುದುಂ ನಾಡುಂ ಬೀಡುಂ ಜಿನಭಕ್ತನಂ ಬಿಲ್ಲ ಬಲ್ಮೆಗೆ ಸಂತೋಷಂಬಟ್ಟು ಪೊಗೞುತ್ತುಮಿರ್ದರಿರ್ಪುದುಂ ದ್ರೋಣಾಚಾರ್ಯರ್ ಛಾತ್ರನಿಕುರಂಬಂಬೆರಸು ಮನೆಗೆವಂದು ಸುಖದಿಂದಿರ್ಪುದುಂ ಛಾತ್ರರೆಲ್ಲಂ ಪುರುಡಿಸಿ ॥ ೨೩

ಇವನೊಳ್ ಮುಂ ಕೆಳೆಗೊಂಡು ಕೂಡಿ ಬೞಿಕಂ ಕೂರ್ತಂತೆಗೆಯ್ದೀತನಂ
ಜವನಂತಪ್ಪ ಮದಾಂಧಸಿಂಧುರದ ಮುಂದಣ್ಗೊಯ್ದು ನೀನೀಗಜೇಂ
ದ್ರಮನೋರಂತಿರೆ ವೀರದಿಂದಡಸಿ ಪೊಯ್ಯೆಂದಾದರ್ ಪಿಂಗಿರ್ದ ನೋ
ಡುವೆವಿಾದೂರ್ತನನಾಗಜಂ ತುಳಿವುದಕ್ಕೆ ಪಚ್ಚದೆಮಂತಣಂ (?) ॥ ೨೪

ಎಂದು ತಮ್ಮನಿಬರುಂ ಸಮಕಟ್ಟಿ ಪುಸಿಗೂರ್ಮೆಯಿಂ ಜಿನಭಕ್ತನಂ ನಂಬಿಸಿ ಕೆಲವಾನುಂದಿವಸಂಪೋಗಲಿತ್ತೊಂದುದಿವಸಂ ಪೊೞವೊೞಲೊಳಾಡುತ್ತುಮಿರ್ಪುದುಂ ಅವರ ಬಗೆಗೊಡಂಬಟ್ಟಂತೆ ಮದದಿಂ ಕಣ್ಗಾಣದವರ ಬಯಸುವ ಮದಗಜಮೆ ಮೆಯ್ಯಱಿಯದೆ ಕಂಬಮಂ ಮುಱಿದುಕೊಂಡು ಗಾಳಿಯಂತೆ ವೇಗಿಯುಂ ನಿಚ್ಚಗಲಿಯಂತೆ ನಿಶ್ಶಂಕನುಂ ಕಳ್ಗುಡಿಕನಂತೆ [1] ತೀವ್ರನುಂ ಮೂರ್ಖನಂತವಿವೇಕಿಯುಂ

---

1 ಕಳ್ಗುಡುಹಿಯಂತೆ (ಕ. ಬ.)

ತಣಿಯುಂಡ ಪಾರ್ವನಂತಾಕಾಶದೃಷ್ಟಿಯುಂ ಗ್ರಾಮಣಿಯಂತೆ ನಿಷ್ಕರುಣಿಯುಂ ಕಿರಾತನಂತೆ ಕ್ರೂರನುಮಾಗಿರ್ಪ ಸೊಕ್ಕಿದಾನೆಯುಂ ಕಂಡು ॥

ಜಿನಭಕ್ತಂ ವೀರದೊಳ್ ಫಲ್ಗುಣನನಿೞಿಸುವಂ ಧಾರಿಣೀಪೂಜ್ಯನಿಂತೀ
ತನೆ ಪೋಗರ್ಗಂ ಮಿಕ್ಕರೇವರ್ ದ್ವಿಪವರನದಟಿಂ ತಾಗೆ ಬಂದೆಂದು ದೂರ್ತರ್
ಮುನಿಸಿಂ ಕೂರ್ತಂತೆಗೆಯ್ದುತ್ತರಿಸಿ ಪೊಗೞ್ವುದುಂ ಬರ್ಪ ಪೇರಾನೆಯಂ ಭೋಂ
ಕನೆ ವೀರಂ ಶಾಂತಿತೀರ್ಥೇಶ್ವರಪದಯುಗಮಂ ಚಿತ್ತದೊಳ್ ತಾಳ್ದಿಧೀರಂ॥

ತನ್ನ ಕೆಲದೊಳಿರ್ದ ತಿರಿದುಂಬ ದುಲ್ಲಟೆಯಂ ಕೊಂಡು ಗಜಮನ ಜಮನಿಡುವಂತೆ ಭಯಮಿಲ್ಲದಿಡುವುದುಂ ಕರಿ ನರಿಯಂತೆ ಕೀೞಿಟ್ಟಾೞಿಟ [1] ಭಯದಿಂದಿದಿರಾಗಿ ಬರಲಣ್ಮದೆ ಮಗುೞ್ದು ತನ್ನ ನೆಲೆಗೆ ಪೋಯಿತಿತ್ತಲ್ ಜಿನಭಕ್ತಂ ಹರಿಕಾಂತನಂತೆ ಮುಯ್ಪಂ ನೋಡದೆ ಕುಪ್ಪಕುೞಿ [2] ಯಾಡುವ ಮಕ್ಕಳಂತೆ ತನ್ನಂ ಪೊಗೞ್ದುಕೊಳ್ಳದೆ ನವಿಲಂತೆ ತನ್ನಾಟಕ್ಕೆ ತಾನೆ ನಲಿಯದೆ ಸಮುದ್ರದಂತೆ ಗಂಭೀರನಾಗಿರ್ಪುದುಂ ದ್ರೋಣನ ಚಟ್ಟರೆಲ್ಲರುಂ ಜಿನಭಕ್ತನ ಪುಣ್ಯದ ಮಹಿಮೆಗಂ ಮನದ ಧೈರ್ಯಕ್ಕಂ ಚೋದ್ಯಂಬಟ್ಟು ಮನದ ಕೋಪಮಂ ಪತ್ತುವಿಟ್ಟು ಸಮ್ಯಕ್ತ್ವಚೂಡಾಮಣಿಗೆ ಮನದೊಳ್ ಪೊಡೆಮಟ್ಟು ದ್ರೋಣಾಚಾರ್ಯರ್ಗೆ ತಮ್ಮ ದುರ್ಭಾವಮುಮಂ ವಾತ್ಸಲ್ಯರತ್ನಾಕರನ ಭಾಗ್ಯದ ಪೆಂಪುಮಂ ಪೇೞ್ವುದುಂ ದ್ರೋಣನಿಂತೆಂದಂ] [3] ॥ ೩೨

---

1 ಕೀಳಿಜ್ವಾಬಿಳ (ಕ. ಬ.)   2 ಕುರಿ (ಕ. ಬ.)

3 ಎಂದು ಜಿನಭಕ್ತನ ಮೊಗಮಂ ನೋಡುವುದುಂ ಅಂತರಿಕ್ಷದೊಳ್ ತೆಂಗಿನ ಕಾಯ್ಗಳಂ ಶರಸಂಧಾನದಿಂ ದ್ರೋಣರಲ್ಲಿಗೆ ತಪ್ಪುದುಂ ಛಾತ್ರರೆಲ್ಲ ಮಾನಕಷಾಯಮಂ ಬಿಟ್ಟು ಭಾವಯುತದಿಗಂಬರದಾಸನ ಮೊಗಮಂ ನೋಡಿ

ಪರಮಾರ್ಥಮೆಂತುಮಿಂತುಂ । ಪರಮಜಿನೇಶ್ವರನ ಪದಮೆ ಕಟ್ಟಿದ ಘೋಣಾ ।
ಗಿರೆ ನಂಬುವೇಡ ನಿನಗಾರ್ । ದೊರೆ ಪೇಳ್ಕೈ ಸುಕವಿನಿಕರಪಿಕಮಾಕಂದಾ ॥
ವಿನುತಜಿನಾಗಮರಸಸೇ । ವನೆಯೊಳ್ ನಿನ್ನಂತು ತುಷ್ಟನಾವಂ ನಿನ್ನಂ ।

ನೆವನೆವದಿಂದೆ ಧಾರಿಣಿ ಸುವಸ್ತು ಲತಾಲಲಿತಾಂಗಿಯರ್ ಮಹೋ
ತ್ಸವಮತಿರಾಗಮಣ್ಮ ಮಹಿಮಾಸ್ಪದಮುನ್ನತಿ ಪೆಂಪು ಸೌಖ್ಯ ಮಿ
ಕ್ಕವಿರಳಬುದ್ಧಿ ವೀರ್ಯಮಭಿವೃದ್ಧಿ ಮತಂಗಜಯುಂ ಹಯಾಳಿ ಸಂ
ಭವಿಸುಗು ಮುನ್ನುಪಾರ್ಜಿಸಿದ ಪುಣ್ಯದಿನಣ್ಣ ಮಹೀತಳಾಗ್ರದೊಳ್ ||

ನುಡಿಯದೆ ಸಾರ್ದು ಕೈಮುಗಿದು ಸೇವಿಸಿ ಘುಮ್ಮನೆ ಬಾಯ್ಗೆ ವಂದುದಂ
ನುಡಿದೊಡಮಂತದೊಳ್ನುಡಿ ವಿರೋಧಬಲಕ್ಕಿದಿರಾಗಿ ದರ್ಪದಿಂ
ಮಡಿ [1] ದೊಡಮಂತದಾರಿಪುಗೆ ತಲ್ಲಣಮರ್ಥಿಗೆ ಬೇಡಿದರ್ಥಮಂ
ಕುಡುವೊಡಮಂತದಕ್ಷಯಮೆನಲ್ ನೆಱೆ ಬಣ್ಣಿಪರಾರೊ ಪುಣ್ಯಮಂ ||೭೯

ಬಲ್ಲದೆ ಕಾಡಿ ಬಂಡಿ [2] ಸುವೊಡಂ ನಿಲಲಾಱದೆ ಸಲ್ಲತಾಂಗಿಯರ್
ಮೆಲ್ಲನೆ ಪೊರ್ದಿ ಕಾಲ್ವಿಡಿದು ಬೇಡುವುದುಂ [3] ದೆಸೆಯೆಲ್ಲಮಂಜಿ ತ
ಳ್ವಲ್ಲದೆ ಬಂದು ನಿಂದು [4] ಬೆಸಕೆಯ್ವುದುಮಬ್ಧಿಯೊಳಿರ್ದ ರತ್ನಮುಂ
ನಿಲ್ಲದೆ ಬಂದು ಪೊರ್ದುವುದು ಸಂಚಿತಪುಣ್ಯಫಲಂಗಳಲ್ಲವೇ || ೮೦

[ಉದಯದಿಂ ತೊಡಗಿ ನೇಸಱ್ ಪಡುವನ್ನೆಗಂ ಊರವರ್ ಕೊಡಂಗೊಂಡಡಕಿದೊಡಂ ತುಂಬುರ್ಚಿ ಕೆಯ್ಗಳ್ ಪರಿಯಿಸಿದೊಡಂ ಪಶುವೊದಲಾದನೇಕಜೀವಂಗಳುಂಡೊಡಂ ಕೆಱೆಯ ನೀರ್ ಮೆಱೆಯ ನೀರುಳ್ಳನ್ನವರಂ ತವೆಯದು ಮಱೆ ಪೋಗಲೊಡಮಾರ್ ಬಂದು ರಕ್ಷಿಸುವೊಡಂ ಬತ್ತುಗುಮಂತೆ ಪುಣ್ಯಾಧಿಕನಪ್ಪ ಮಹಾತ್ಮಂಗೆ ಸದ್ವಿದ್ಯೆಗಳುಂ

ತನುಪಮಾನಾಮಂ ಸಲೆ ಮೇ | ದಿನಿಯೊಳ್ ಕೇಳ್ಸುಕವಿನಿಕರಪಿಕಮಾಕಂದಾ ||
ನರವಿ ಮಜ ಭಾಪ್ಪು ಭಾಪ್ಪೆನೆ | ಕರಿಪತಿಗಿದಿರಾಗಿ ಬಿರಿದು ತಾಗಿದ ಪೆಂಪ |
ಚ್ಚರಿ ಮನದೊಳ್ ಜನನಿರಲ | ಚ್ಚರಿಯುಂಟೆ ಸುಕವಿನಿಕರಪಿಕಮಾಕಂದಾ ||
ಅರಸನ ಕುಮಾರಿ ಕೈಯಿ | ಕ್ಕಿರೆ ಧರ್ಮದೊಳಾದ ಮೋಹದಿಂ ನಿನ್ನಂತಾರ್ |
ಬಿರಿದೀ ಭವದೊಳ್ ಮಾಱುಂ | ತರಪರಿಸದೆ ಸುಕವಿನಿಕರಪಿಕಮಾಕಂದಾ ||
ವಾತ್ಸಲ್ಯರತ್ನಾಕರನೆಂಬ ಪೆಸರ್ ನಿನಗೊಪ್ಪುಗುಂ ನೀನೆ ಪುಣ್ಯಾಧಿಕಂ ಪುಣ್ಯಾಧಿಕರ್ಗೆ ತೀರದುದು ಲೋಕದೊಳಾವುದೆಂಬುದುಂ ದ್ರೋಣಾಚಾರ್ಯರಿಂತೆಂದರ್ || (ಗ)

1 ನಡೆ (ಗ) 2 ಕಟ್ಟ (ಗ) 3 ಬೇಗದಿಂದಕೇಳ ಸಲ್ಲಲಿತಾಂಗಿಯರ್ ನೆರೆದು ಕೂಡವುದುಂ (ಗ) 4 ಬಂದು (ಗ)

ವೀರಮುಂ ಧನಮುಂ ಭೋಗಮುಂ ಬುದ್ಧಿಯುಮೊಂದುತ್ತರಮಾಗೆ ಪೆರ್ಚುಗುಂ ಆಪುಣ್ಯಮಿಲ್ಲದಾಗಳನಿತುಪ್ರಯತ್ನಪರನಾದೊಡಂ ಪರಿಭವಮುಂ ಕಷ್ಟವೃತ್ತಿಯುಮಕ್ಕುಮೆಂದು ಧರ್ಮದೊಳಾದ ಮಹಿಮೆಯುಮಂ ಕರ್ಮದೊಳಾದ ಪೊಲ್ಲಮೆಯುಮಂ ಪೇಳ್ದು ಮತ್ತಂ ಪಾಪದೊಳಾದ ಹೀನತೆಯುಮನಿಂತೆಂದು ಪೇಳ್ದಂ ‖ ೮೧

ಸಿರಿಗೆ ನಿಲಯಂ ಸೂರ್ಯಂ ಮಿತ್ರಂ ಸರಸ್ವತಿಯಿಕ್ಕೆಯಾ
ಗಿರಲುಮರವಿಂದಂಗಳ್ ಶೀತಾಂಶು ಭೋಂಕನೆ ಮೂಡಿ ನಿ
ತ್ತರಿಸಿ ಬಲದಿಂ ಮತ್ತಂ ಪೆರ್ಚಿಂದಮಿರ್ದಾವು ದರ್ಪದಿಂ
ಕೊರಗಿ ಮುಗಿಯಲ್ [1] ಕರ್ಮಕ್ಕಡ್ಡಂ ಬರಲ್ ಬಲಮುಳ್ಳರಾರ್ ‖ ೮೨

ಬಲದೊಳಧಿಕಂ ಕ್ರೂರಂ ಬಲ್ಲಾಳ್ವಿವೇಕಪರಾಯಣಂ
ಕುಲದೊಳಧಿಕಂ ವಿದ್ಯಾಧೀಶಂ ವಿಯಚ್ಚರವಲ್ಲಭಂ
ಕುಲಿಶವಿಭವಂ ಧೀರಂ ಲಂಕೇಶ್ವರಂ ಮೊದಲಾಗಿ ದು
ರ್ಮನದಿನಱಿದಂ ಕರ್ಮಕ್ಕಡ್ಡಂಬರಲ್ಕೆ ಸಮರ್ಥರಾರ್ ‖ ೮೩

ಅದುಕಾರಣದಿಂ ಕರ್ಮಮುಳ್ಳಂಗೆ ನೇಣಂ ಪಿಡಿದೊಡಂ ಪಾವಾಗಿ ತಿಂಗುಂ ಪೊನ್ನಂ ಪಿಡಿದೊಡಂ ಮಣ್ಣಾಗಿರ್ಕುಂ ಆಯುಮುಳ್ಳೊಡಂ ರಾಜಾಧಿಕನಾಗಿ ನಮಗುಂ ಪಲವುಂ ಶಸ್ತ್ರಶಾಸ್ತ್ರವಿದ್ಯೆಗಳಂ ಕಲ್ತೊಡಂ ಫಲಮಾಯುಲಱಿಯುವೆಂದು ಮಿಥ್ಯೆಯುಂ ಪತ್ತುವಿಟ್ಟುಳ್ಳುದನುಳ್ಳಂತೆ ನುಡಿವುದು ‖ ೮೪

ಧರ್ಮಮೆ ತಂದೆ ಧರ್ಮಮೆ ಮನೋಹರಿ ಧರ್ಮಮೆ ಬಂಧುವರ್ಗಮೊ
ಳ್ಧರ್ಮಮೆ ಸೋದರಂ ನೆಗಳ್ದ ಧರ್ಮಮೆ ಸತ್ಸಖಿ ದಿವ್ಯಮಪ್ಪ ಸ
ದ್ಧರ್ಮಮೆ ಪಜ್ಜನುತ್ತಮದ ಧರ್ಮಮೆ ಭಾವಿಪೊಡಜ್ಜನೆಲ್ಲಿಯುಂ
ಧರ್ಮಮೆ ಮುಖ್ಯಮೆಂದು ಪರಿಭಾವಿಸುತಿರ್ಕೆ ಸುಖಾರ್ಥಿಯಪ್ಪವಂ ‖

ಧರ್ಮದಿನಕ್ಕುವೊಳ್ಗುಣಿಸುಮುಳ್ಗಣಮುಂ(?)ಸುರರಾಜಭೋಗಮುಂ
ಧರ್ಮದಿನಕ್ಕುಮುನ್ನತಿಯುಮಾಜ್ಞೆಯುಮೊಳ್ನುಡಿಯುಂ ವಿವೇಕಮುಂ

---

[1] ಮುಗಿವವು (ಕ. ಬ.)

ಧರ್ಮದಿನಕ್ಕುಮಪೂರ್ವಮದಟುಂ ಸುಜನತ್ವಮುಮುನ್ನತಿಕೆಯುಂ
ಧರ್ಮದಿನಕ್ಕುಮಗ್ಗಳದ ತೇಜಮುಮಕ್ಷಯಚಾರುಸೌಖ್ಯಮುಂ ॥ ೮೬

ಎಂದಾದ್ರೋಣಾಚಾರ್ಯರ್ ಛಾತ್ರರ್ಗೆ ಧರ್ಮದ ಮಹಾಗುಣಮುಮಂ ಪಾಪದ ಮಹಾಕಷ್ಟಮುಮಂ ಲೇಸಾಗೆ ತತ್ತ್ವರೂಪದಿಂದಿಷ್ಟಂ ಧರ್ಮೇಣ ಯೋಜಯೇತ್ ಎಂಬ ನೀತಿಶಾಸ್ತ್ರದೋಜೆಯಂ ತೋಱಿ ಪೇೞ್ವುದುಮವರ್ ತಂತಮ್ಮ ಮನದ ಕೋಪಮನುಡುಗಿ ಜಿನಭಕ್ತನಂ ಕ್ಷಮೆಗೊಂಡು ಪರಮಮಿತ್ರರಾಗಿ ದ್ರೋಣಾಚಾರ್ಯರ್ಗೆ ಪರಮಭಕ್ತರಾಗಿ ವಿದ್ಯಾಭ್ಯಾಸಂಗೆಯ್ಯುತ್ತುಂ ಸುಖಸಂಕಥಾವಿನೋದದಿಂದಿರ್ಪುದುಮೊಂದುದಿವಸಂ] [1] ॥ ೮೭

ಆವನಾದೊಡಮಕ್ಕೆ ಚಂದ್ರಕವೇಧಮಂ ಮನದರ್ತಿಯಿಂ
ದೋರ್ಪದೆಚ್ಚು ಜಗಕ್ಕೆ ಚಾಪದ ಬಲ್ಮೆಯಂ ಮೆಱೆವಂಗೆ ಲ
ಕ್ಷ್ಮೀವಿಳಾಸೆಯುಮುನ್ನತಿಕೆಯು ಚಂದ್ರಲೇಖೆಯುಮರ್ತಿಯಿಂ
ದೀವೆನೆಂದು ಮಹೀಶ್ವರಂ ತೊದಳಿಲ್ಲದಾಪುರಮಧ್ಯದೊಳ್ ॥ ೮೮

ಗೋಸಣೆಗಳೆವುದುಂ [2] ಪ್ರಮಾಥಿಕುಮಾರಂ [ಭಿಕ್ಷಾನ್ನಮಂ ನದೀತೀರದೊಳುಣಲೆಂದು ಪೋಗುತ್ತುಮಿರ್ದ್ದ ಗೋಸಣೆಯಂ ಕೇಳ್ದು ತಡವಿಲ್ಲದೆ ಪರಿತಂದು ಗೋಸಣೆಯಂ ಪಿಡಿವುದುಮವರ್ ಜಿನಭಕ್ತಂಬೆರಸು ಸಿಂಹಸೇನಮಹಾರಾಜನಲ್ಲಿಗೆವಂದು ಗೋಸಣೆಯನೀತಂ ಪಿಡಿದನೆಂದು ತೋಱಿ ಬಿನ್ನಪಂಗೆಯ್ವುದುಂ ಅರಸಂ ಪ್ರಮಾಥಿಕುಮಾರನಂ ಕಂಡು॥

ಇವನೀಚಂದ್ರಕವೇಧಮ
ನವಯವದಿಂದೆಸೆಗುಮಲ್ಲಿ ತೊದಳಿಲ್ಲ ಮಹೀ ।
ಧವತನಯನಕ್ಕುಮಲ್ಲದೊ
ಡಿವಗಿಂತೀರೂಪುಶೌರ್ಯಮಿಂತೊಪ್ಪುಗುಮೇ ॥ ೯೦

---

1 ಎಂದು ಪುಣ್ಯದೊಳಾದ ಫಲಮುಂ ಪೇಳ್ವುದುಂ ಎಲ್ಲರುಂ ಪ್ರಮಾಥಿಕುಮಾರಂಗೆ ಮಿತ್ರರಾಗಿರ್ಪುದುಂ ಒಂದುದಿವಸಂ (ಗ)

2 ಗೋಸಣೆಗೊಳ್ವುದುಂ (ಗ)

ಅದಟಂ ಪ್ರತಾಪಿ ಶೌರ್ಯಾ
ಭ್ಯುದಯಂ ಜಿನಪಾದಭಕ್ತನಮಲಚರಿತ್ರಂ ।
ಮದನಾವತಾರನರಿಬಲ
ಮದಭಂಜನನೀತನೆಮ್ಮ [1] ಕಿಱುಕುಳನಲ್ಲಂ ॥ ೯೧

ಎಂದು ಸಿಂಹಸೇನಮಹಾರಾಜಂ ವಾತ್ಸಲ್ಯರತ್ನಾಕರನ ಮೂರ್ತಿಯಂ ನೋಡಿ ನಚ್ಚಿ ಮೆಚ್ಚಿ ಮನದೊಳ್ ಪೊಗೞ್ದು ಕಯ್ಯಂ ಪಿಡಿದೊಡಗೊಂಡು ಪೋಗಿ ಮಜ್ಜನಭೋಜನತಾಂಬೂಲವಸ್ತ್ರಾಭರಣಾದಿಗಳಿಂ ಸಂತೋಷಂಬಡಿಸಿ ಮಱುದಿವಸಂ ದ್ರೋಣಾಚಾರ್ಯರ್ ವೊದಲಾಗೆ ಚಾಪವಿದ್ಯಾಪರಿಣತರುಮಂ ವಿದ್ವಜ್ಜನಮುಮಂ ಬರಿಸಿ ಚಂದ್ರಕವೇಧ್ಯ ಮನೀತನೆಚ್ಚಪಂ ಪರೀಕ್ಷಿಸಿಮೆಂಬುದುಮವರಂತೆ ಗೆಯ್ವೆಂದು ನೋಡುತ್ತಿರ್ಪ್ಪುದುಂ] [2] ॥ ೯೨

ಸೆರಗಂ ಪಾರದೆ ಬೆಚ್ಚದಳ್ಕದೆ ಭಯಂಗೊಂಡೋಡದಲ್ಲಾಡದೊ
ರ್ವರನಾಶ್ರಯಿಸ್ಸದೆ ದೃಷ್ಟಿಮುಷ್ಟಿಶರಸಂಧಾನಂಗಳಿಂ ಭೂಪನ
ಚ್ಚರಿವಟ್ಟದ್ಭುತಮೆಂದು ತೂಗೆ ತಲೆಯಂ ದ್ರೋಣಂ ಮನಂಗೊಂಡು ಸು
ಸ್ವರದಿಂ ಬಣ್ಣಿಸೆ ನೋಟಕರ್ ಪೊಗೞೆ ಭಾಷ್ಯೆಯೆಂದು ಸಂತೋಷದಿಂ ॥

ಚಂದ್ರವೇಧಮನಿಸುವುದುಂ [ಸಿಂಹಸೇನ ಮಹಾರಾಜಂ ಮಹಾವಿಭೂತಿಯಿಂದರ್ಧರಾಜ್ಯಮುಮಂ ಪ್ರತಿಜ್ಞೆಯಿರ್ದ ಚಂದ್ರಲೇಖೆಯುಮಂ ಕುಡುವುದುಂ ಕೈಕೊಂಡು ಪ್ರಮಾಥಿಕುಮಾರಂ ಪೂರ್ವೋಪಾರ್ಜಿತಪುಣ್ಯದ ಫಲದಿಂ ಚಂದ್ರಲೇಖೆಯೊಳ್ ಕೂಡಿ ಮಾಳವಾಧಾಧೀಶ್ವರನಾಗಿ ಸುಖದಿಂ] [3] ರಾಜ್ಯಂಗೆಯ್ಯುತ್ತುಮಿರ್ಪುದುಂ ॥ ೯೪

---

1 ಈತನೆಮಗೆ (ಗ) 2 ಪಿಡಿದು (ಗ)

3 ಅದಟಂಪ್ರತಾಪಿ....ಕಿಱುಕುಳನಲ್ಲಂ (ಪದ್ಯ ೯೧). ಎಂದು ಸಿಂಹಸೇನ ಮಹಾರಾಜಂ ಚಂದ್ರಲೇಖೆಯುಮನರ್ಧರಾಜ್ಯಮುಮಂ ಕುಡೆ ಕೈಕೊಂಡು (ಗ)

ಅರಸಂಗೊರ್ವಂ ಬಂದ
ಚ್ಚರಿ ದೇವ ಮಹಾಪ್ರತಾಪದಿಂ ಕೌಶಾಂಬೀ ।
ಪುರಮಂ ಪರಮಂಡಳಿಕರ್
ನೆರೆದು ಭಯಂಗೆಯ್ದು [1] ಮುತ್ತಿ ಕಾದಿಪರಿನ್ನುಂ ॥ ೯೫

ದಂತಬಲನೃಪತಿ ಕೋಂಟೆಯು
ನೆಂತುಂ ಕೊಳಲೀಯದೊಳಗೆ ಪೆರ್ಬಲದಿಂದಂ ।
ಭ್ರಾಂತಿಂ ಕಾದುತುಮಿರ್ದಪ
ನಿಂತಲಸದೆ ಪತ್ತಿ ಕಾದುವನ್ನರನಱಿಯೆಂ ॥ ೯೬

[ಪೊಱಗೆ ಬಳಸಿರ್ದ ರಿಪುನೃಪ
ರಱಿಯುಟ್ಟೆ ತಗುಳ್ದು ಪೊಣ್ದು ಪೋಗದೆ ಚಲದಿಂ ।
ಕಱುಪಿಂ ಕಾದುತುಮಿರ್ದಪ
ರಱಿದೆನಪರಪೋರ್ಗಲಱಿಯಲಾತನ ಪುಣ್ಯಂ ॥ ೯೭

ಎಂಬ ಮಾತನರಸನ ಕೆಲದೊಳಿರ್ದ ಪ್ರಮಾಥಿಕುಮಾರಂ ಕೇಳ್ದು ಸಿಂಹದಂತೆ ಗರ್ಜಿಸಿ ಮುನಿದು ಸಿಂಹಸೇನಮಹಾರಾಜಂಗಱಿಪಿದೊಡೆ ಪೋಗಲೀಯನೆಂದು ತತ್ಪುರೋದ್ಯಾನನಿವಾಸಿಯಪ್ಪ ಧಮೋಜ್ಜ್ವಳನೆಂಬ ಯಕ್ಷಂ ಕೊಟ್ಟದೃಶ್ಯಾಂಜನಪ್ರಯೋಗದಿಂ ನಡುವಿರುಳಪ್ಪಾಗಳ್ ತಾನುಂ ನಲ್ಲಳುಂ ಸ್ಯಂದನಾರೂಢರಾಗಿ ಪುರದಿಂ ಪೊಱಮಟ್ಟು ॥ ೯೮

ನಿಲ್ಲದೆ ಮುನಿಸಿಂ ಸಾಹಸ
ಮಲ್ಲಂ ರಿಪುಬಲಮನಲೆಯಲೆಂದದಟಿಂದಂ ।
ತಲ್ಲಣಿಸದ ಗಂಡಂ ಕೊಂ
ಕಿಲ್ಲದ ಕಲಿ ಕುಸಿಯದದಟನೂರ್ಜಿತತೇಜಂ ॥ ೯೯

ಬರುತ್ತುಂ ನದೀನಿಕರಂಗಳಂ ಕಳೆದು ಧೂರ್ತನಂತೆ ಮೇಲೆ ಪಾಯ್ವ ಪುಲಿಗಳಂ ಪಿಸುಣನಂತೆ ಜಿನುಂಗುವ ನೊಣಗಳಂ ದುರ್ಜನನಂತೆ ಕವಿವ ಸೀನಾಯ್ಗಳಂ ದಾಯಾದನಂತೆ ಮಲೆವ ಕಾಡೆಮ್ಮೆಗಳಂ

---

[1] ಭರಂಗೆಯ್ದು (ಕ. ಬ.)

ಕೂರ್ತ ತೊತ್ತಿನಂತೆ ಚಿತ್ತಮನಱಿಯದೆ ಸೀಳ್ವ ಸೀರ್ಕರಡಿಗಳಿಂದ ದ್ಭುತಮಪ್ಪ ಭೀಮವನಮೆಂಬ ಪೆರಡವಿಯೊಳಗೆ ಪೊಕ್ಕು ತನಗಿದಿರಾಗಿ ಗಜಱಿ ಗರ್ಜಿಸಿ ಪಾಯ್ತಂದ ಸಿಂಹಮಂ ಚಕ್ರಾಘಾತದಿಂ ಶಾರ್ದೂಲನಂ ಶರವೇಧದಿಂ ಮದಾಂಧಸಿಂಧುರಮಂ ಶರಸಂಧಾನದಿಂ ದೃಷ್ಟಿವಿಷಮಪ್ಪ ನಾಗರಂ ಧ್ವನಿಯೆಂಬ ಶರದಿಂದೋಡಿಸಿ ವಲ್ಲಭೆಗೆ ತನ್ನ ಬಿಲ್ಲ ಬಲ್ಮೆಯುಂ ತೋಱುತ್ತುಂ ಮೆಲ್ಲಮೆಲ್ಲನೆ ಬರುತ್ತಿರ್ಪುದುಂ ॥ ೧೦೦

ಆನಟ್ಟಡವಿಯೊಳುರ್ವಂ
ಹೀನಗುಣಂ ಪಾಪಯುಕ್ತನವಿಚಾರಿ ಸದಾ ।
ಸ್ತೇನವಿನೋದಂ ಚೋರಜ
ನಾನಂದಂ ಭೂಮಿಪಾಲನಪಗತಶೌಚಂ ॥ ೧೦೧

ಸುವೇಗನೆಂಬಂ ದಾಯಾದರ್ ಬಲ್ಲಿದರಾಗಿ ರಾಜ್ಯಮಂ ಕೊಂಡೊಡೆ ತದ್ವನಮಂ ಪೊಕ್ಕು ಕಳ್ಳರೆಲ್ಲರುಮಂ ಕೂಡಿಕೊಂಡು ॥ ೧೦೨

ದ್ರೋಣಾಚಾರ್ಯರ ರೂಪಂ
...ಮಾಡಿಟ್ಟು ಪಲವುಪುಷ್ಪವಳಿಯಿಂ ।
ಮಾಣದೆ ಪೂಜಿಸಿ ನೆನೆದ
ಕ್ಷೋಣಿಪ ಪದಪಂಕಜಂಗಳಂ ಚೋರೇಶಂ ॥ ೧೦೩

ನಿಚ್ಚಲುಂ ಬಿಲ್ಲಂ ಶ್ರಮಂಗೆಯ್ಯುತ್ತಿರ್ಪುದುಂ ॥ ೧೦೪

ಕರಮಲ್ಲದೆ ಕೋದಂಡದೊ
ಳರಡಿಲ್ಲದೆ ಖಲು ಗಣಂಗಮಾತನೆ ಜಗದೊಳ್ ।
ಪರಿಣತನೆನಿಸಿದನದಱಿಂ
ಗುರುಪದಭಕ್ತಂಗೆ ಸಾಧ್ಯಮಲ್ಲದುದುಂಟೇ ॥ ೧೦೫

ಅಂತು, ಬಿಲ್ಗೊಳತಿಜಾಣನುಂ ಪ್ರವೀಣನುಮೆನಿಸಿದ ಸುವೇಗಂ ಪ್ರಮಾಥಿಮಹಾರಾಜನ ಕೆಲದೊಳಿರ್ದ ಚಂದ್ರಲೇಖೆಯುಂ ಕಂಡು ಕಣ್ಬೇಟಂಗೊಂಡು, ಜ್ವರಮಾದರಂತೆ ದಾಹದಿಂ ಮೆತ್ತಿ, ಕಾಯ್ದ ಕಬ್ಬುನದಂತೆ

ಮೆಯ್ಕಾಯ್ದು, ಗಾಳಿಮುಟ್ಟಿದರಲೆಯಂತೆ ನಡುಗಿ, ಗ್ರಹಂಪಿಡಿದ ಮನುಷ್ಯನಂತೆ ಪರವಶನಾಗಿ, ಕೊಂತಗೊಂಡವನಂತೆ ಜೋಲ್ದು, ಬೇಸಗೆಯೊಳ್ ಪಯಣಂಬೋಪನಂತೆ ಬೆಮರ್ತು, ಬಿಸಿಲೊಳಿರ್ದ ಶಿಶುವಿನಂತೆ ಕೊಱಗಿ, ಕಱು ಸತ್ತ ಪಶುವಿನಂತೆ ಮಱುಗಿ, ದಿವ್ಯಮಂ ಪಿಡಿದು ಸೋಲ್ತವನಂತೆ ಕೊಱಗಿ, ಬೇಗೆವೋದ ಬೆಟ್ಟದಂತೆ ಕಂದಿ, ನುಯ್ಗೊಟ್ಟ ಪಟ್ಟಪುಲ್ಲೆಯಂತೆ ಬೆದಱಿ, ಬೇತಾಳನಂ ಕಂಡ ಪಂದೆಯಂತೆ ಮೂರ್ಛೆವೋಗಿ, ಬಲಮಿಲ್ಲದ ಕಾಳಗದಂತೆ ಕಗಮೆ ಸೋಲ್ತು, ಶೀತಳಮುಪ್ಪಿಡೆಯೊಳ್ ಪಡಲುಂ ಗಾಳಿಗೆ ಮೆಯ್ಯನೊಡ್ಡಲುಂ ಚಂದನಕರ್ಪೂರಂಗಳಂ ಮೇಲೊಟ್ಟಿಕೊಳಲುಂ ತಣ್ಣನಿರ್ಪ ನೀರಂ ಪೊಕ್ಕಿರಲುಂ ಮೇಲೆಱಚಿಕೊಳಲುಂ ಮನಮಾಗಿ ವಿರಹಾನಳನಿಂದಿರಲಾಱದೆ] [1] ‖ ೧೦೬

ಸಲ್ಲಲಿತಾಂಗಿಯುನ್ನತಿಯನಾರ್ಪೊಗೞರ್ ಬಗೆವಂದು ಕಾಮನಂ
ಬಲ್ಲದೆ ಕಾಮದೇವನಧಿದೇವತೆಯಲ್ಲದೆ ಕಾಮನಿರ್ಪ ಬೀ
ಡಲ್ಲದೆ ಕಾಮದೇವನ ಪತಾಕಿನಿಯಲ್ಲದೆ ಕಾಮನಾಡುವ
ಚ್ಚಲ್ಲದೆ ಕಾಮನೇಱುವ ಮದದ್ವಿಪಮಲ್ಲದೆ ಕಾಂತೆಯಲ್ಲಿವಳ್ ‖ ೧೦೭

ಮನಸಿಜನಾರಡಿಕಾಱಂ
ಮುನಿಸಿಂದೀಕಾಂತೆಯೆಂಬ ಕೂರಲಗಿಂ ಗಿ ।
ಱ್ಱನೆ ತೂಳ್ದು ಬೇಗಮೆಱೆದಪ
ನೆನಗಿಂ ಸಾವಲ್ಲದುಱಿವ ತೆಱನಂ ಕಾಣೆಂ ‖ ೧೦೮

---

1 ಎಂಬುದುಮಾ ಮಾತಂ ಪ್ರಮಾಥಕುಮಾರಂ ಕೇಳ್ದು ಸೈರಿಸಲುಮಾಱದೆ ಧೂಮಧ್ವಜನೆಂಬ ಯಕ್ಷಂ ಕೊಟ್ಟಂಜನಪ್ರಯೋಗದಿಂ ತಾನುಂ ನಲ್ಲಳುಂ ಅದೃಶ್ಯರೂಪದಿಂ ಸ್ಯಂದನಮನೇಱಿ ಪುರದಿಂ ಪೊಱಮಟ್ಟು ಪೊಱವೊಳಲೊಳಂಜನಪ್ರಯೋಗಮಂ ಬಿಸುಟು ಈರ್ವರುಂ ಸರ್ವಾಭರಣಭೂಷಿತರಾಗಿ ದಿವ್ಯವಸ್ತ್ರಮನುಟ್ಟು ವಿನೋದದಿಂ ಭೀಮವನಮೆಂಬ ಪೆರಡವಿಯೊಳ್ ಖರ್ಪನಂ ಸುವೇಗನೆಂಬೊರ್ವ ಕ್ಷತ್ರಿಯಪುತ್ರಂ ಪಗೆವರ್ಗಂಜಿ ತದ್ವನಮಂ ಪೊಕ್ಕು ಕಳ್ಳನಾಯ್ಕನಾಗಿ ಚಾಪವಿದ್ಯೆಯೊಳ್ ಗರ್ವಪರ್ವತಾರೂಢನಾಗಿರ್ದಾತಂ ಪ್ರಮಾಥಕುಮಾರನ ಕೆಲದೊಳಿರ್ದ ಚಂದ್ರಲೇಖೆಯುಮಂ ಕಂಡು ಕಣ್ಬೇಟಂಗೊಂಡು (ಗ)

ನೆರವಿಲ್ಲದಿಱಿವೆ ಕಷ್ಟಂ
ಸರೋಜಮುಖಿಯೀಕೆ ಯೆನ್ನಳಂ ಬಲ್ನೆರವಂ ।
ನಿರುತಂ ಪಡೆವೊಡೆ ಮೊಣ್ಬನೆ
ಮರುಳಪ್ಪಂ ಮಕ್ಕಳಾದೊಡಂ ಮೊಣ್ಡಪನೇ ॥ ೧೦೯

ಬಿರುದನೆನೆಂಬ ಮಾತು ಪೆಱಪಿಂಗಿದುದೊಳ್ಭಟನೆಂಬ ಮಾತು ನಿ
ಬ್ಬರವುಡುಗಿತ್ತು ವೀರನೆನಿಪಗ್ಗದ ಮಾತದು ದೂರಮಾಯ್ತು ನಿ
ಷ್ಠುರನಿವನೆಂಬ ಮಾತು ತೊಱೆವಾದುದು ಪೆಂಪಿನ ಮಾತು ಕೆಟ್ಟುದೀ
ತರುಣಿಯ ಕಾಣ್ಕೆಯೊಳ್ ಭಯಮುಮೋಹಮುಮಾದಪುದೆತ್ತವೋ
ಪೆಸೋ ॥ ೧೧೦

ಎಱೆದಪುದೆತ್ತಿ ನೂಂಕಿದಪುದಿರ್ದೆಡೆಯಿಂ ಕಡಿಕೆಯ್ದು [1] ದರ್ಪದಿಂ
ತೊಲಗಿಪುದುರ್ವಿ ಬೇರ್ವೆಱಿದು ಕೀಲಿಸಿ ಕಾಡಿಪುದಟ್ಟಿ ಮುಟ್ಟಿ ಮಾ
ರ್ಮಲೆದಪುದೆನ್ನ ಚಿತ್ತಮನಗುರ್ವಿನೊಳೀಕೆಯ ಚೆಲ್ವು ರೂಪು ಸಂ
ಚಲನಯನಂ ಘನಸ್ತನಯುಗಂ ನುತಹಾವವಿಳಾಸವಿಭ್ರಮಂ ॥ ೧೧೧

ಸಲ್ಲಲಿತಾಂಗಿಯ ವೊಪ್ಪವು [2]
ನೆಲ್ಲಿಯುಮಾಪಾದಮಸ್ತಕಂಬರೆಗಂ ತ ।
ಳ್ವಿಲ್ಲದೆ ನೋೞ್ಪೊಡೆ ಚೋದ್ಯಂ
ಚೆಲ್ಲಂ ಬೀಱುವವೊಲಿರ್ದುವವಯವವನಿತುಂ ॥ ೧೧೨

ಬಿರುದರೊಳಾಂತು ಕಾದಿ ಸೆಡೆದುಳ್ಕನೆ [3] ವೀರರೊಳಾಂತು ಕಾದಿ ಮೆ
ಯ್ಮರಿಯನೆ [4] ಸೊಕ್ಕು ಮಿಕ್ಕದಟರೊಳ್ ತೊಡರ್ದೊರ್ಯ್ವನೆ [5] ಯುದ್ಧದೊಳ್ ಮನಂ
ದಿರಿಯನೆ ಕಾಮನೆಂಬ ಖಳನೀಲಲಿತಾಂಗಿಯನೊತ್ತುಗೊಂಡು ಚೆ
ಚ್ಚರಮಿಸೆ ಪುಷ್ಪಬಾಣತತಿಗಳ್ಕಿದೆನಳ್ಕಿದೆನೋವೊ ಬೆರ್ಚಿದೆಂ ॥ ೧೧೩

1 ಕಡುಕೆಯ್ದು (ಗ)   2 ತಾಂಗಮನೊಪ್ಪವು (ಕ. ಬ.)
3 ಉಳ್ಕನೆ (ಕ. ಬ.)   4 ಮುರಿಯೆನೆ (ಕ. ಬ.)
ತೊಡರ್ದಾರ್ಡನೆ (ಕ. ಬ.)

ಇವಳ ಕಟಾಕ್ಷಮೆನ್ನೆರ್ದೆಯನುರ್ಚಿಪುದೀಕೆಯ ರೂಪು ದಾಱಿಯೊಳ್
ಕವಿದಪುದೆತ್ತಲೀಸತಿಯ ಜವ್ವನಮೆನ್ನನಡರ್ತು ತಾಗಿ ಕಾ
ಡುವುದತಿಕೋಪದುಬ್ಬರದಿನೀಲಲಿತಾಂಗಿಯ ಗಾಡಿ ಸೊಕ್ಕಿ[1] ಕಾ
ದುವ ಬಲುಬಂದಿಕಾಱನವೊಲಾಱಿಗೊಂಡಪುದೆನ್ನ ಚಿತ್ತಮಂ ॥ ೧೧೪

ಪೋಗದೆ ಸುತ್ತಿ ಮುತ್ತಿ ಪೊಣರ್ದಳ್ಕದೆ...ತನ್ನ ಗಂಡನಿಂ
ಬಾಗಿರೆ ತೋಱಲೀಸತಿಯ ಮುಂದೆ ಮನೋಭವನೆನ್ನನೆತ್ತಲುಂ
ತಾಗಿ ಕನಲ್ದು ಪುಷ್ಪಶರಸಂತತಿಯಿಂ ಬಿಡದೆಚ್ಚು ತುಳುತ
ಟ್ಟಾಗೆ ತಗುಳ್ದು ಕಾದಿದಪನಾವನನಾಂ ಶರಣೆಂದು ಕಾಣ್ಬೆನೋ ॥ ೧೧೫

ಕುರುಳ ಬೆಡಂಗುಮಂ ಮುಡಿಯ ಚೆಲ್ವುಮನಂಬುಜವಕ್ತ್ರದೊಳ್ಪಮಂ
ಕೊರಲ ಸಮುನ್ನತಸ್ತನದ[2] ತೋಳ ಕಮಂಕುಟಿ[3] ಬೆನ್ನ ಭಂಗಿಮೆ
ತ್ತಿರವುಮನಣ್ಣ ಬಾಯ್ದೆಱೆಯ ಪುರ್ವಿನ ಮೂಗಿನ ಕಂಗಳು[4]
ಬ್ಬರಿಪ ವಿಳಾಸದಂದಮುಮನೀಕ್ಷಿಸಿ ಸೋಲದ ಗಂಡನಾವನೋ ॥ ೧೧೬

ಎಂದು ತನ್ನೊಳ್ ನುಡಿದು[5] ॥ ೧೧೭

ಸುರರಾಜಂ ಬಂದು ಮಾರ್ಕೊಂಡೊಡಮಹಿಪತಿ ಬಂದಡ್ಡಮಾಗಿರ್ದೊಡಂ ಭಾ
ಸ್ಕರನಣ್ಮಿಂ ಪೊಂಗಿ ಬಂದಾಂತೊಡಮವನಿಯೊಳುಳ್ಳ ಕ್ಷಿತೀನಾಥರೆಲ್ಲಂ
ಭರದಿಂ ಕೈಕೊಂಡು ವೀರಂಬೆರಸು ಪೆಣರ್ದೊಡಂ ಮಾಣೆನೀಕಾಂತೆಯಂ ವಿ
ಸ್ತರದಿಂ ಕೈಕೊಂಡು ಕೊಂದೀತನನವಯವದಿಂ ಭೋಗಿಪೆಂ ರಾಗದಿಂದಂ ॥ ೧೧೮

1 ಪೊಕ್ಕು (ಗ)
2 ಲಸದ್ಘಟಸ್ತನದ (ಗ)
3 ತೋಳಿನಕೌಂಕುಟಿ (ಗ)
4 ನೀಳ್ದಕಣ್ಣಡು (ಕ. ಖ.)
5 ಬಗೆದು (ಕ. ಖ.)

[ಎಂದು ಮನದೊಳ್ ಪ್ರಮಾಥಿಕುಮಾರನಂ ಕೊಲ್ವ ಕಜ್ಜಮನೆತ್ತಿಕೊಂಡು ಪ್ರತಾಪಪರನಪ್ಪುದಱಿಂ ಪ್ರಮಾಥಿಕುಮಾರನೊರ್ವನೆಂದೇಳಿಸಿ ತಾನೆತ್ತಲೊಲ್ಲದೆ ತನ್ನನಾಯಕನೊರ್ವನಂ ಕರೆದು ಬಟ್ಟೆವೋಪ ಬಡವನಂ ಕೊಂದು ಕೋಮಲಲತಾಲಲಿತಗಾತ್ರೆಯುಂ ವನಜನೇತ್ರೆಯುಮಪ್ಪಾತನ ಪೆಂಡತಿಯುಮನಿಲ್ಲಿಗೆ ತದ್ರಥಂಬೆರಸು ತರ್ಪುದೆಂದು ಬೆಸನಂ ಪೇೞ್ವುದುಮವನಂತೆಗೆಯ್ವೆನೆಂದು ಬೆಸನಂ ಕೈಕೊಂಡು ಪೊಡೆಮಟ್ಟು ತನ್ನ ನೆಲೆಗೆವಂದು ತನ್ನ ಬಲಮೆಲ್ಲಮಂ ಕೂಡಿಕೊಂಡು ಪ್ರಮಾಥಿಕುಮಾರನನೆಯ್ದಿ ತಾಗಿ] [1] || ೧೧೯

ನಿನಗೇಕೀತರಳಾಯತಾಕ್ಷಿ ನಿನಗೇಕೀಸೌಂದರಾಕಾರೆ ಕಾ
ಮಿನಿಯಂ ಕಾಯದೆ [2] ಬಿಟ್ಟು ಪೋಗು ಪದಪಿಂದೀ ಕಾತೆಯಂ ಬಿಟ್ಟು ಭೋಂ
ಕನೆ ನೀಂ ಪೋಗದೆ ನಿಂದೆಯಪ್ಪೊಡಱಿವಕ್ಕೆಂದಾರ್ದು ಬಿಲ್ಲಾಳ್ಗಳಾ
ಮುನಿಸಿಂದಂ ಶರವೃಷ್ಟಿಯಂ ಸುರಿವುದುಂ ವಾತ್ಸಲ್ಯರತ್ನಾಕರಂ ||೧೨೦

ಜಿನಪಾದಾಂಬುಜಯುಗ್ಮಮಂ ನೆನೆದು ಬಿಲ್ಲಂ ಕೊಂಡು ಕೈಗಾಯ್ದೊ
ರ್ವನೆ ಬಂದೊಡ್ಡಿದ ವೈರಿಯಾಳನದಟಿಂ ಬಾಣಾಳಿಯಿಂದಿಕ್ಕಿ ಮೆ
ಲ್ಲನೆ ವೀರಂ ನಗುತುಂ ಮನೋರಮೆಗೆ ತೋಱುತ್ತಿರ್ಪಿನಂ ಭೃತ್ಯನೊ
ರ್ವನಮೋಘಾಸ್ತ್ರನ ಬಾಣದಿಂ ಬರ್ದುಕಿ ಭೀತಾತ್ಮಂ ಮಹಾಭೀತಿ
ಯಿಂ || ೧೨೧

ಬಂದು ಸುವೇಗಂಗೆ [ನಾಯಕರ] ಭೃತ್ಯರ ಸಾವುಮಂ ಪ್ರಮಾಥಿಕುಮಾರನ ವೀರಮುಮಂ ಬಿನ್ನಪಂಗೆಯ್ವುದುಂ ಮುನಿದು ಕೋಪಾವೇ

---

1 ಎಂದು ಪ್ರತಾಪಿಯಪ್ಪಾದಿತ್ಯಂ ತಾನೆತ್ತಲೊಲ್ಲದೆ ತನ್ನ ನಾಯಕನೊರ್ವನ ಕರೆದು ಬಟ್ಟೆವೋಪ ಬಡಸಾರ್ದವಾ ರಥವೇಗನನ್ನಿಲ್ಲಿಗೆ ಕೊಂಡುಬಾ ಬಾರಲೊಲ್ಲಂದೊಡಾತನಂ ಕೊಂದಾತನ ಪೆಂಡತಿಯನೊಡಗೊಂಡುಬಾಯೆಂದು ಬೆಸಸುವುದುಮಾತನಂತೆ ಗೆಯ್ವೆನೆಂದು ತನ್ನ ಬಲಮೆಲ್ಲಮನೊಂದಾಗಿ ಕೂಡಿಕೊಂಡು ಪೋಗಿ (ಗ)

2 ಸಾಯದೆ (ಕ. ಬ.)

ಶದಿಂ ನಾಯಕರೆಲ್ಲರಂ ಕರೆದು ಬೆಟ್ಟಮಂ ಗುಂಗುರು ಕಾಡಿತ್ತೆಂಬ, ಗಜಮಂ ನರಿ ನುಂಗಿತ್ತೆಂಬ, ಸಿಂಹಮಂ ನಾಯ್ ಕೆಣಕಿತೆಂಬ, ಶರಭನ ನೆರಲ ಜೋಡಾಡಿಸಿತೆಂಬ, ಮಾತಿನಂತೆ ಬಟ್ಟೆವೋಪ ತಿರಿಕನೊರ್ವನೆನ್ನ ನಾಯಕನಂ ಕೊಂದು ಬಲಮೆಲ್ಲಮನಿಕ್ಕಿ ವೀರಕ್ಕೆ ತೊನೆದುದ್ಧತಂ ಮೆಟ್ಟಿ ಗಂಡಿಂಗಾನೆ ಪಿರಿಯನೆಂದಿರ್ದಪಂ ಗಡಮವನನೀಗಳ್ ನೀವಿನಿ ಬರಂ ಪೋಗಿ ಕಾದಿ ದರ್ಪಮಂ ಕಿಡಿಸಿ ಕೊಲಲ್ವೇಡ ಪಿಡಿದು ಕೊಡಗ ಗಟ್ಟಿಗಟ್ಟಿ ಕೊಂಡೆನ್ನಲ್ಲಿಗೆ ತನ್ನಿ [ಮಾತನನೆನ್ನ ಕಣ್ಣಾಣಿವಿನಮಾನೆ ನಾನಾವಿಧದಿಂ ಕೊಂದು ದೆಸೆವಲಿಗೆಯ್ದು ಬಳಿಕಮಾತನ ಪೆಂಡತಿಯನರಸಿ ಮಾಡಿಕೊಳ್ವೆನೆಂದು ಬೆಸಸುವುದುಂ] [1] ॥ ೧೭೦

ನೆರೆದು ಸಮಸ್ತತಸ್ಕರರಗುರ್ವಿನೊಳುರ್ವಿ ಕಡಂಗಿ ಪೆರ್ವಲಂ
ಬೆರಸು ಮಹಾಸಮುದ್ರಮಿಳೆಯಂ ತಳರ್ವಂತೆ ಧರಿತ್ರಿ ಭಾರದಿಂ
ಬಿರಿಯೆ ಧರಿತ್ರಿ ಮರ್ತ್ಯಮಯ [2] ಮಾದವೊಲದ್ಭುತಮಾಗೆ ಕೋಪದಿಂ
ದುರಿಯುತುಮುಕ್ಕಿ ಸೊಕ್ಕಿ ಕಡುಪಿಂ ತಳರ್ದತ್ತು ಪುಳಿಂದಸಾಧನಂ॥

ಅಂತೆತ್ತಿ ಬಂದು ಪ್ರಮಾಧಿಕುಮಾರನ ರಥಮಂ ಮೂವಳಸಾಗೆ ಮುತ್ತಿಕೊಂಡು ಪೋಗದಡ್ಡಂಬಿನ [ಕೂರಂಬಿನ ಕವಲಂಬಿನ] ಪಾಱುಂ ಬಳಯ ಕಕ್ಕಡೆಯು [ಮಿಟ್ಟೆಯು] ಮೊಟ್ಟೆಸರಲ ಬಲ್ಸರಿಯಂ ಸುರಿಯೆ ॥

ಇದು ಪೆರ್ವಲಮಾನೊರ್ವನೆ
ಕದನಂ ಪಿರಿದಕ್ಕುಮೆಂದು ಮನದೊಳ್ ಬೆಚ್ಚಿ ।
ಲ್ಲದೆ ಕೋಪಮಿಲ್ಲದಿರ್ದಂ
ವಿದಿತಯಶಃಪ್ರಕರ [3] ನಮಳಚಾರುಚರಿತ್ರಂ ॥ ೧೭೧

ಅಂತಿದೊರ್ಯ್ಯನೆ ಲೀಲೆಯಿಂದನಿತುಬಾಣಕ್ಕಂ ಭರಂಗೆಯ್ದು ನಿ
ಶ್ಚಿಂತಂ ಸಾಯಕಮೊಂದನೆಚ್ಚನಿತುಮಂ ಬಿಲ್ಬಲ್ಮೆಯಿಂ ಭೂಪನೋ

1 ಎನೆ (ಗ)   2 ಬಿರಿಯೆಯು ಮರ್ತ್ಯಲೋಕಮಯ (ಗ)
3 ಪ್ರವರ (ಕ. ಬ.)

ರಂತಲ್ಲಾಡೆ ತಗುಳ್ದು [1] ಖಂಡಿಸುವುದುಂ ಸಿಗ್ಗಾಗಿ ಬಂದೆಗ್ಗಿನೊ
ಳ್ಪಿಂತಿಂಗೋಡದೆ ಬೆಚ್ಚಿ [2] ಕಟ್ಟಿದಲಗಿಂ ಕಿತ್ತೊಣ್ಮೆ ನಿಂದಿರ್ಪುದುಂ || ೧೨೬

ಚಂದ್ರಲೇಖೆ ನಕ್ಕು ದೇವ ನಿನಗಿವರ್ ದೊರೆಯಲ್ಲ, ಇವರ ನಿನ್ನ ಪ್ರತಾಪಮನಾರಯ್ವುಂದು ಸಿಂಹದ ನಾಯ ಕರಿಯು ನರಿಯು ಪುಲಿಯು ಪುಲ್ಲೆಯು ತೋಳನ ಕುಱಿಯು ಗರುಡನ ಪಾವಿನ ಬಲಾಬಲಂಗಳಂ ಪೋಲ್ಕು [ಮಿವರ್ ತಮ್ಮ ಬಂದೆಗ್ಗನೊಳ್ ಸಿಗ್ಗಾಗಿ ತಮ್ಮಾಳ್ದನ ಮೊಗಮಂ ಮಗುಳ್ದು ಪೋಗಿ ನೋಡಲ್ ನಾಣ್ಚಿ ದೇವರ ಬಾಣಾವಳಿಯೊಳ್ ಬಿರ್ದಕ್ಕಾಱಲ್ ಬಗೆದಪರ್ ; ಗೆಲ್ಲದ ಕಾಳಗದಿಂದೋಟಮೆ ಲೇಸೆಂಬುದು ; ನರಿಯುಂ ಬಡಿದೊಡೆ ಪೇಲ್ ಸುರಿಗುಮಲ್ಲದೆ ಲಾಭಮಿಲ್ಲದದುಕಾರಣದಿಂ ದಿನಿಬರುಮಂ ಬಱಿದೆ ಕೊಂದು ಪಾಪಮಂ ಮಾಡಿಕೊಳ್ಳದೆ ನಿದ್ರಾಬಾಣ ದಿಂದಿನಿಬರ್ಗಂ ನಿದ್ರೆಯುಂ ಮಾಡಿ ಸುಖದಿಂ ಪೋಪಮೆಂಬುದುಂ ಪ್ರಮಾಥಿಕುಮಾರಂ ನಲ್ಲಳ ಮಾತಿಂಗಂ ಮನದ ಕಾರುಣ್ಯಬುದ್ಧಿಗಂ ಮೆಚ್ಚಿ ದರ್ಶನಶುದ್ಧೆಯೆಂದಱಿದು || ೧೨೭

ಇನಿಯಳ ಬುದ್ಧಿಯಂ ಮನದೆಗೊಂಡು ಮಹೀಶ್ವರನಾಗಳಲ್ಲಿ ದು
ರ್ಜನರನಪಾಯದಿಂ ಕೊಲಲುಚಿಂತೆನಡರ್ತು (?) ವಿವೇಕದಿಂದೆ ಮೆ
ಲ್ಲನೆ ದಯೆ ಪುಟ್ಟೆ ನಿದ್ರೆಯನೆ ಮಾಡುವ ಶಕ್ತಿಯನುಳ್ಳ ಬಾಣಮೊಂ
ದನೆ ತೆಗೆದಾರ್ದು ನಿಂದಿಸುವುದುಂ ರಿಪುಸೇನೆ ಬೞಲ್ದು ನಿದ್ರೆಯಿಂ ||೧೨೮

ಬಡಿಕೊಂಡ ನೆಲ್ಲಿಯಂತೆ ನೆಲಕ್ಕೆ ಬೀೞ್ವುದುಂ] [3] ಅವರಪಜಯಮಂ ಸುವೇಗಂ ಕೇಳ್ದುಕ್ಕುಡಿಸೆ, [4] ನೆಲನಂ ಪೊಯ್ದು ಮೆಯ್ಯೞಿಯದೆ ತನ್ನ ಮುಂದಣ ನರಕಗಮನಮಂ ತೋರ್ಪಂತೆ ಕಂಪಿಸುವ ಮೆಯ್ಯುಂ ಕೆಚ್ಚನಾದ ಕಣ್ಣುಂ ಬೆಚ್ಚನಾದ ತನುವುಂ ಉರಿವೆರ್ದೆಯುಂ ಬೆರಸಗುರ್ವಾಗೆ ಮಸಗಿದ ಸಿಂಹದಂತಿರ್ದ ಸುವೇಗಂಗೆ ಪ್ರಧಾನ [ರುಂ ಬುದ್ಧಿ

1 ರಳ್ಳಂತಾಡದೆ ತಳರ್ದು (ಗ)   2 ಪಿಂತಣ್ಗೋಗದೆ ಪೆರ್ಚಿ (ಕ. ಖ.)

3 ಮಿವರಂ ಕೊಲಲ್ವೇಡೆಂಬುದುಂ ನಿದ್ರಾಬಾಣದಿಂದಿವರ್ಗೆ ನಿದ್ರೆಯುಂ ಮಾಡಿ ಪೋಪುದುಂ (ಗ)   4 ಕೇಳ್ದು (ಗ) ಕೇಳ್ದುಕ್ಕಿರಿಸಿ (ಕ. ಖ.)

ವೆಂತರುಂ ಚಾತುರ್ಯಮಪ್ಪವರುಂ ದೀರ್ಘಶರೀರಿಗಳುಂ ಕಾರ್ಯವೇದಿಗಳಪ್ಪವರುಮಿಂತೆಂದು ಪೇೞ್ದರ್] [1] ॥ ೧೨೯

ಸೆರಗಂ ಪಾರದೆ ನಮ್ಮ ನಾಯಕರನಿಂದಾಟಂದು ಕೊಂದಿಕ್ಕಿ ಭಾ
ಸ್ಕರತೇಜಂ ಕಲಿಯಾಗಿ ಪೋಗದೆ ಭರಂಗೆಯ್ದಿರ್ದನೆಂದಂದು ನಿ
ಷ್ಠುರವೀರತ್ವಮನಾರ್ವ ನಣ್ಮನದಟಂ ಶೌರ್ಯತ್ವಮಂ ಪೆಂಪನು
ರ್ವರೆಯೊಳ್ ಬಣ್ಣಿಪನಾವನಾತನಿದಿರೊಳ್ ನಿಂದಾಂತು ಮೆಯ್ಗಾವರಾರ್ [2] ॥

ನೆರವಿಲ್ಲೊರ್ವನೆ ದಿವ್ಯಕಾಮಿನಿಯುಮೀ ರೌದ್ರಾಟವೀಮಧ್ಯದೊಳ್
ಭರದಿಂದೊಯ್ದಪನೆಂದೊಡಾತನಳವಂ ಸೌಂದರ್ಯಮಂ ಧೈರ್ಯಮಂ
ಬಿರುದಂ ಬಣ್ಣಿಪನಾವನೇಱದತನಂಗೆಯ್ದಾತನಂ ಕೊಂದು ಸೌಂ
ದರಿಯೊಳ್ ಕೂಡುವೆನೆಂಬುದೆಗ್ಗು ಮರುಳೇ ಸೀಳಕ್ಕದೇಂಪೊಣ್ಣನೇ ॥

ಪರವೆಣ್ಗೊಳ್ಳದಳಂದು ಕೂರ್ತು ಸೆಱೆಯಿಟ್ಟಾರೆಂದೊಡಂ ಮೂಱದೊ
ರ್ವರುಮಂ ಕಾಣಿಕೆಗೊಳ್ಳದುಕ್ಕಿ [3] ಬಲಮಂ ನಚ್ಚಿರ್ದ ಲಂಕೇಶನಾ
ದೊರೆಯಂ ನಾಯುವೊಲಣ್ಮುಗೆಟ್ಟು ಮಡಿದಂ ತಾನೆಂದೊಡಾಡಾಗಿ ಸಾ
ಯುರೆ ದೂರಿಂಗೆಡೆಯಾಗಿ ಬೇಯುರೆ ಪರಸ್ತ್ರೀಗಾಸೆಗೆಯ್ದಿರ್ಪವರ್॥ ೧೩೨

ಪರವಧುವನ್ನದಗ್ನಿಜೆಗೆ ಸೋಲ್ತು ಸುಯೋಧನನನ್ನನುಂ ಮಹೀ
ಧರನಿಭಧೈರ್ಯನಪ್ಪ ವಿಭುವಪ್ಪ ಮಹಾಗುಣಿಯಪ್ಪ ಭೀಮನಿಂ
ದರಿಯುವೊಲಟ್ಟಿ ತೂಳ್ದಿ [4] ಗದೆಯಿಂ ನೆಱೆ ಮೋದಿಸಿಕೊಂಡು ಸತ್ತನಾ
ದೊರೆಯನುಮೆಂದೊಡಾರೆಱೆಯರನ್ಯರ ಪೆಂಡತಿಗಾಸೆವಟ್ಟವರ್ ॥ ೧೩೩

ಅದುಕಾರಣದಿಂ ಪರಸ್ತ್ರೀಯ ನೋಟಮಂ ಜವನ ಕಾಟಮೆನ್ನದೆ, ಪೆಱರ ಪೆಂಡಿರ ಚೆಲ್ವುಮಂ ಸೂಲಮೆನ್ನದೆ [5], ಲೋಗರ ಭಾರ್ಯೆಯರ ವಿಳಾಸಮಂ ಮೃತ್ಯುವಿನ ಕಯ್ಯ ಪಾಶಮೆಂದೆನ್ನದೆ, ಅನ್ಯಾಂಗ

1 ರಿಂತೆಂದರ್ (ಗ) 2 ಮೆಯ್ಗೆಯ್ವರೋ (ಗ)

3 ಕಾಣಿಗೆಕೊಳ್ಳದುಕ್ಕಿ (ಕ. ಖ.) 4 ತೂಳ್ದು (ಗ)

5 ಕಾಯ್ದಂತಕನ ಮಸೆದಲಗೆಂದೆನ್ನದೆ (ಕ. ಖ.)

ನೆಯರ ರೂಪಂ ಪಾಪದ ಬಟ್ಟೆಯೆನ್ನದೆ, ಮೆಚ್ಚಿ ನಚ್ಚಿ ಕೂಡುವ ಬಯಕೆಯನುಳ್ಳಾತಂ ಸಱಿಯನೇಱಿ ನೆಲಕ್ಕೆ ಬೀೞ್ವ, ಕರಡಿಗಿದಿರಾಗಿ ಪುಯ್ಯಲಿಡುವ, ಪುಲಿಯ ಮುಂದೆ ಪಟ್ಟಿರ್ಪ, ಪಸಿದ ರಕ್ಕಸಿಯುಂ ಕೆಳಗೊಳ್ವ, ಸಿಂಗದ ಮೀಸೆಯುಂ ಕೀಳ್ವ, ಶರಭಮಂ ಪಿಡಿದೇಱುವ, ನೃಪರ ಮಂಡೆಯುಂ ಪೊಯ್ವ, ಮಸೆದ ಸುರಗಿಯುಂ ನುಂಗುವ, [1] ಕಿಚ್ಚಂ ಪುಗುವ, ಪಾವಿನ ಬಾಯೊಳ್ ಕೈಯನಿಡುವ, ಪರಿವ ಬಂಡಿಗೆ ಕಾಲಂ ನೀಡುವ, ಸುಣ್ಣಮಂ ಬಱಿದೆ ತಿಂಬೆಗ್ಗನಂ ಪೋಲ್ಕುಮಿಂತು ‖ ೧೩೪

ಪರಕಾಂತಾನಿಕರಕ್ಕೆ ಸೋಲ್ತು ಮನಮಂ ಸಂತಯ್ಸಲೇನಾಱದು
ಬ್ಬರದಿಂದುಬ್ಬರಮಾಗೆ ಕೂಡಿ ಪಿರಿದಾಟಂದೆತ್ತಿಸೊಳ್ಪಡಿ ಮೇ
ಣ್ಪಿರಿದುಂ ನಿಗ್ರಹದಿಂದೆ ದಂಡಿಸಿ ಮಹಾದುಃಖತ್ವಮಂ ಮಾಡಿ ಪೋೞ್
ಧರಣೀಶರ್ ಕೊಲೆ ಸತ್ತು ಮತ್ತೆ ನರಕಂಬೊಕ್ಕಿರ್ಪರಾಪಾತಕರ್ ‖ ೧೩೫

ಪರವಧುಗಾಸೆಗೆಯ್ವ ನರನುಂ ಕುಲವೆಂಡಿರನೊಲ್ಲದಿರ್ಪ ನಿ
ಷ್ಠುರನುಮುದಾರನಲ್ಲದರಸುಂ ನೆರೆಯಂ ಪಗೆಗೊಳ್ವ ಗಾಂಪನುಂ
ಗುರುವನವಜ್ಞೆಗೆಯ್ವ ರುಷಿಯುಂ [2] ಪದಪಿಲ್ಲದ ದಾನಿಯುಂ ಜಿನೇ
ಶ್ವರಪದಸೇವೆಯಿಲ್ಲದವನುಂ ನೆಱೆ ರಂಜಿಸಲಾಱರುರ್ವಿಯೊಳ್ ‖ ೧೩೬.

ಪರವಧುಗಾಸೆಗೆಯ್ದು ಗತಿಗೆಟ್ಟು ಪರತ್ರಿಯನೊಕ್ಕು ಕಂಡರೆ
ಲ್ಲರುಮಱಿಯುಟ್ಟ ಮುಟ್ಟ ಮುನಿದೋವದೆ ಪೊಯ್ದು ಕವರ್ತೆಗೊಂಡು ನಿ
ಷ್ಕರುಣದಿನೊತ್ತಿ ಮೆಟ್ಟಿ ತಲೆಯಂ ಕಡಿದಾಕೆಯ ಮೂಗನೊಳ್ಕಿ ತಾ
ಗಿರೆ ನಡುಬೀದಿಯೊಳ್ ಪಲರಮುಂದರಿವ್ರೊಂದಪಮಾನವೊಳ್ಕತೇ ‖ ೧೩೭

ಪರವಧುಗೋತ ದುರ್ಜನನನಾಗಳೆ ಕೊಂದು ಧರಿತ್ರಿ ನೋಡೆ ಪಾ
ದರಿಗೆಯ ಮೂಗನಾಗಳರಿದಾತನ ಮಂಡೆಯನಾಗಳಾಕೆಗಾ
ಭರಣಮಿದೆಂದು ಕಟ್ಟಿ ನೆಱೆ ಬೀದಿಗಳೊಳ್ ಪಲರಾರ್ದು ಡಂಗುರಂ
ಬೆರಸು ತೊೞಲ್ವ ಕಷ್ಟತೆಯ ಪೇೞದೆ ಮುಂದಣ ದುರ್ಗತಿತ್ವಮಂ ‖

[1] ಬೈಕೆಯುಮಗಳ್ವ (ಗ) [2] ಶಿಶುವುಂ (ಗ)

ಪರವಧುಗೋತು ಕೂಡಲೆಡೆಯಿಲ್ಲದೆ ನೋಡಿ ಕನಲ್ದು ಜೋಲ್ದು ಕೊಕ್ಕರಿಸಿ ಪೆಱರ್ಗೆ ಬೆಚ್ಚಿ ಮನೆಗೋಗಿ[1] ಮಹಾಮೆಱುಕಕ್ಕೆ ಭೂಮಿಯೊಳ್ ಪೊರಳುತುಮಿರ್ದು ನೀರಡಿಸಿ ಬಾಯ್ ಪೊಗೆವೋಗೆ ನಿರರ್ಥಕತ್ವದಿಂ ದುರಿಯುತುಮಿರ್ಪ ತನ್ನೆರ್ದೆಯ ದಾಹಮೆ ಪೇೞದೆ ಪೊಲ್ಲದೆಂಬುದಂ ॥

ಮಾವಿನ ಪಣ್ಣನೊಲ್ಲದೆ ಬೇವಿನ ಪಣ್ಣಂ ತಿಂಬಂತೆ, ನಿರ್ಮಲಮಪ್ಪ ನೀರಂ ಕುಡಿಯದೆ ಕೆಸಱ ನೀರಂ ಕುಡಿವಂತೆ, ಹಂಸೆಯ ಪಾಸನೊಲ್ಲದೆ ಮುಳ್ಳಮೇಲೆ ಪಡುವಂತೆ, ಬಟ್ಟೆಯೊಳ್ ಪೋಗದೆ ಕಾಡಂ ಪುಗುವಂತೆ, ಕಱವಾವಂ ಪೊರೆಯದೆ ಗೊಡ್ಡಂ ಪೊರೆವಂತೆ, ತೋಂಟಕ್ಕೆ ನೀರನೆತ್ತದೆ ಬೀದಿಗೆ[2] ನೀರನೆತ್ತುವಂತೆ, ಮನೆಯಂ ಬಿಟ್ಟು[3] ಶ್ಮಶಾನದೊಳಿರ್ಪಂತೆ, ಬಾವಿಯಂ ಪೂೞ್ದು ಬೆಟ್ಟಮನಗೞ್ವಂತೆ, ಮಗನಂ ತೊಱೆದು ಕಳ್ಳನನೊಳಕೊಳ್ವಂತೆ, ಸೀರೆಯಂ ಕೊಟ್ಟು ನಾರಂ ಕೊಳ್ವಂತೆ, ತೆಂಗಿನ ಮರನಂ ಕಡಿದು ಸಾವೆಗೆ ಬೇಲಿಯನಿಕ್ಕುವಂತೆ, ಕಳವೆಯನೊಕ್ಕು ಮಳಲಂ ಕೊಳ್ವಂತೆ, ಮಾಣಿಕಮಂ ಬಿಟ್ಟು ಗುರುಗುಂಜೆಯಂ ಪಿಡಿವಂತೆ, ಕರ್ಪೂರಮನೊಲ್ಲದೆ ಪಗಿನಂ ಕೊಳ್ವಂತೆ, ಸಿರಿಯನೊಲ್ಲದೆ ತಿರಿದುಂಬಂತೆ, ಮಾನಿಸವಾೞ್ಗೆಲಸಿ ನಂಜಂ ಕುಡಿವಂತೆ, ಸಮ್ಯಕ್ತ್ವಮುಮಂ[4] ಸುಖಮುಮಂ ಪುತ್ರಲಾಭಮುಮನೀವ ಕುಲಾಂಗನೆಯನೊಲ್ಲದೆ ಪರಪೀಡೆಯುಮಂ ಮನೋದುಃಖಮುಮಂ ಬಹುಕ್ಲೇಶಮುಮಂ ಕೀರ್ತಿಯೞಿವುಮಂ ಧರ್ಮಕ್ಷಯಮುಮಂ ನರಕದ ಮಹಾದುಃಖಮುಮಂ ಮಾೞ್ಪ ಪರಾಂಗನೆಗಳಿಪುವುದು ಕಜ್ಜಮಲ್ಲೆಂದು[5] ಧರ್ಮಸ್ವರೂಪಮಂ ನುಡಿವುದುಂ ॥ ೧೪೦

ಅವರ ವಚನಂಗಳಂ ಕೇ
ಳ್ದವಧಾರಿಸಿ ಪೊಲ್ಲದೆಂಬ ಬಗೆಯಿಲ್ಲದ ಲೋ ।

---

1 ಮೂರು ಪುಸ್ತಕಗಳಲ್ಲಿಯೂ 'ಮನೆಗೋಗಿ' ಎಂದೇ ಇದೆ.

2 ಬಿದಿರಿಗೆ (ಗ) 3 ಸುಟ್ಟು (ಕ. ಖ.)

4 ಸಂಪತ್ತುಮಂ (ಕ. ಖ.) 5 ಬುದ್ಧಿಯಲ್ಲೆಂದು (ಗ)

ಕವಿರುದ್ಧಮೆಪ್ಪ ಕಜ್ಜಮ
ನವಯವದಿಂದೆತ್ತಿಕೊಂಡು ಮಾಣದೆ ಚಲದಿಂ ॥ ೧೪೧

ಮುನ್ನಿನ ನಾಯಕರ್ ಮಡಿದರೆಂಬುದನೊಯ್ಯನೆ ಕೇಳ್ದು ಭೀತಿಯಿಂ
ದನ್ನಡುಗುತ್ತುಮುಳ್ಳೞುಕಿ ಕಾದುವ ಬುದ್ಧಿಯನೊಲ್ಲದಂತುವಿಂ [1]
ತುನ್ನೞಿ ಲೋಗರಂಗನೆಗೆ ಸೋಲದಿರೆಂದೆನಗೆಯ್ದೆ ಧರ್ಮಮಂ
ಸನ್ನುತಮಾಗಿ ಪೇೞ್ವರಱಿವೆಂ ಗಳ ನಿಮ್ಮ ಪರಾಕ್ರಮಂಗಳಂ ॥೧೪೨

ನಾಯು ಬಾಲಮಂ ಪಿಡಿದು ತೊಱೆಯಂ ಪಾಯ್ವಂತೆ ನಿಮ್ಮ ಬಲಮಂ ಪಿಡಿದು ಕಾದಿ ವಿಳಾಸವತಿಯುನೆನಗೆ ಮಾಡಲಿರ್ದ ಗಾವಿಲನಲ್ಲೆನೆನ್ನ ಭುಜಬಲಮೆ ಸಾಲ್ಗುಂ ಪಂದೆತನದಿಂದೆನ್ನೊಡನೆ ಕಾಳಗಕ್ಕೆ ಬರಲೊಲ್ಲಿರಪ್ಪೊಡಿಲ್ಲಿಯೆ ಮಾಣ್ದು ಸಿರದಿರ್ಪುದಲ್ಲದೆ ನಿಮ್ಮ ಕಾಪ್ [2] ಧರ್ಮಶ್ರವಣಮಂ ಪೇೞುವೇಡೆಂಬುದುಂ ಪ್ರಧಾನರ್ ಸುವೇಗನ ಮನದ ತೀವ್ರತೆಯಂ ಕಂಡು ತಮ್ಮೊಳಿಂತೆಂದರ್ ॥ ೧೪೩

ದಿನಪತಿಗುಷ್ಣಮಂಬುರುಹವೈರಿಗೆ ಶೀತಳಮಬ್ಧಿಗುಪ್ಪುನೀರ್
ವನಿತೆಗೆ ಮಾಯುವೃತ್ತಿ [3] ಫಣಿಗುಗ್ರವಿಷಂ ಸಹಜಂಗಳಂತು ಮೋ
ದಿನಿಯೊಳಗಂತೆ ದುರ್ಮತಿಯುಮುದ್ಧತಿಯುಂ ಪುರುಳ್ಗೆಟ್ಟ ವಾಕ್ಯಮುಂ
ಮುನಿಸುಮುಪಾಯಚಿಂತೆಗಳುಮಿಂ ಸಹಜಂ ಕುನಯರ್ಗೆ ಲೋಕ
ದೊಳ್ ॥ ೧೪೪

ಪಾಪದೊಳಾದ ಚಿಂತೆಯುಂ ಕೊಲೆಯೊಳಾದ ರಾಗಮುಂ ಸದ್ಧರ್ಮದೊಳಾದ ಮುನಿಸುಂ ಪರಸ್ತ್ರೀಯೊಳಾದ ಕೂರ್ಮೆಯುಂ ಬೆಸನಿಗಳೊಳಾದ ಕೂಟಮುಂ ಕಳವಿನೊಳಾದ ಪ್ರೀತಿಯುಂ ಪುಸಿಯೊಳಾದ ಜಾಣುಂ ಪರಪೀಡೆಯೊಳಾದ ಪ್ರವೀಣತ್ವಮುಂ [4] ಸಾಧುಗಳೊಳಾದ ದುರ್ವಚನಮುಂ ವಿಷಯಂಗಳೊಳಾದ ಮೋಹಮುಂ ದ್ರವ್ಯದೊ

1 ಬುದ್ಧಿಯುನೆಯ್ದಲೊಲ್ಲದಂ (ಗ)

2 ಕೊಳ್ (ಗ) 3 ಮಾಯೆವೃತ್ತಿ (ಕ. ಬ.)

4 ಚತುಃ ಕಷಾಯದೊಳಾದ ಪೆರ್ಚುಗೆಯುಂ (ಗ)

ೞಾದ ಕಡುಲೋಭಮುಂ ನಿರ್ದೋಷಿಪರಮಾತ್ಮನೊೞಾದ ದೂಷಣೆಯುಂ ಸದ್ಧ್ಯಾನದೊೞಾದಾಲಸ್ಯಮುಂ ಕಾತ್ರಿತದಾನದೊೞಾದ ಪೆರ್ಚುಗೆಯುಂ [1] ನರಕಂಬುಗಲ್ವೇಡಿರ್ದ ಜೀವಕ್ಕೆ ಸಹಜಮದಂ ಮಾಣಿಸುವೆನೆಂಬುದು ಸರ್ವಜ್ಞಂಗಂ ಬಾರದದು ಕಾರಣದಿಂ ನರಕಂಬುಗಲ್ವೇಡಿರ್ದಂಗೆ ಪರವೆಣ್ಣೊೞಾದ ಪ್ರೀತಿ ಪೋಗಲಱಿಯದು [“ದುರಾಗ್ರಹಸ್ಯ ಹಿತೋಪದೇಶೋ ಬಧಿರಸ್ಯಾಗ್ರತೋ ಗಾನಮಿವ” ಎಂಬ ನೀತಿಯುಂಟೇ] ತಂಗಾವೇನೆಂದೊಡಂ ನಮ್ಮ ಮಾತು ಕೇಳಿಕ್ಕುಮಲ್ಲದೀತಂ ಕೇಳ್ವನಲ್ಲ ನಾಮಿನ್ನುಸಿರದಿರ್ಪಮೆಂದು ಪ್ರಧಾನರುಸಿರದಿರ್ಪುದುಂ ಸುವೇಗಂ ವೇಗಿಯಾಗಿ ಯುದ್ಧಕ್ಕೆ ನಡೆದು ॥ ೧೪೫

ಪೋಗದಿರೆಂದು ತಾಗಿ ರಥಮಂ ಸೆಡೆದುಳ್ಕದೆ ಪತ್ತಿ ಮುತ್ತಿ ಚೆ
ಲ್ವಾಗಿರೆ ತನ್ನ ಚಾಪದ ಪರಿಶ್ರಮಮಂ ನೆಱೆ ತೋರ್ಪೆನೆಂದು ಧ
ನ್ವಾಗಮವೇದಿಯುಂ ಜಿನಪದಾಂಬುಜಭೃಂಗನನಾಗಳತ್ಯಗು
ವಾರ್ಗೆ ಕುಕಿಲ್ದು ಕಾರ ಸರಿವೋಲ್ [2] ಸುರಿದಂ ಶರಸಂಕುಲಂಗೞಂ ॥

ಸರೞ ಸರಿಯಂ ನಿಕೃಷ್ಟಂ
ಸುರಿವುದುಮಪರಿಮಿತಮಾಗೆ ಭಯಮಿಲ್ಲದೆ ಝೇಂ ।
ಕರಿಸಿ ರಿಪುಸೇನೆ ಬಾಣೋ
ತ್ಕರದಿಂ ಕಯ್ಗಾಯುದನಿತುಮಂ ಖಂಡಿಸಿದಂ ॥ ೧೪೭

ಎಡೆಯೊೞ್ ಬಾಣಾವೞಿಯುಂ
ಕಡಿವುದುಮವನಾರ್ದು ಮತ್ತೆ ಸಾಯಕಚಯಮಂ ।
ಬಿಡುವುದು ಮಹಿಪನ ರಥಮಾ
ಗಡೆ ಸರೞಂ ಬಿದಿರ ಪೊದಱಿನಂತಾಯಿತ್ತುಸಿಸುಂ ॥ ೧೪೮

ಆನಿತುಂ ಸಾಯಕತತಿಯುಂ
ಮನುಜೇಂದ್ರಂ ನೋಡಿ ನಕ್ಕು [3] ಮತ್ತೊಂದಂಬಿಂ ।

1 ಹರ್ಷತ್ವಮುಂ (ಗ) 2 ಕಾಡ್ಸರಿವೋಲ್ (ಗ)
3 ಬೇಗ (ಕ. ಖ.)

ದನಿತುಮನರಿಸೈನ್ಯಂ ಭೋಂ
ಕನೆ ಮನದೊಳ್ ಜಱಿಯೆ ಕುಸಿಯೆ ತತ್ತಱದಱಿದಂ ॥ ೧೪೯

ತಱಿವುದುಮಾತಂ ಮಲಮಲ
ಮಱುಗಿ ಮಹಾಕೋಪದಿಂ ಶರಾವಳಿಯಂ ಮ ।
ತ್ತಱಿಯಟ್ಟೆ ಬೇಗಮಿಸುವುದು
ಮಱಿದುಂಬಿಗಳಂತೆ ಮೇಗೆ ನೆಗೆದೊಬ್ಬುಳಿಯಿಂ ॥ ೧೫೦

ಬರುತಿರ್ಪ ಬಾಣಮಂ ಸೌಂ
ದರರೂಪಂ ಕಂಡು ಬಾಣಮೊಂದಱಿನವನಂ ।
ತರದೊಳ್ ನಿರಿಸುವುದುಂ ವಿ
ಸ್ತರದಿಂ ರಮಣೀಯಮಾಯ್ತು ಪೀಲಿಯ ತಪೆವೋಲ್ ॥ ೧೫೧

ಅಂತಂಬರದೊಳ್ ನಿಂದಂ
ಬಂ ತಡೆಯದೆ ಕಂಡು ಕೋಪದೊದವಿಂದಾಕ ।
ರ್ಣಾಂತಂಬರೆಗಂ ತೆಗೆದಿಸೆ
ಸಂತತಮೊಡನೊಡನೆ ಮೇಗಣಿಂ ಬರ್ಪಂಬಂ ॥ ೧೫೨

ವಸುಧೀಶಂ ಕಂಡು ಬಾಣಾವಳಿಯೊಳನಿತುಮಂ ತತ್ಕ್ಷಣಂ ಕೋಪದಿಂ ಖಂಡಿಸೆ ಭೂಭಾಗಕ್ಕೆ ಬಿರ್ದಿರ್ದಲಗುಗಱಿಚಯಂ ಕೊಲ್ಗಳಂಭೋಧಿಯಂ ರಂಜಿಸೆ ನೀಲಾದ್ರೀಂದ್ರಮಂ ದುರ್ಗಮನನುನಯದಿಂ ಪೋಲೆ ತತ್ಸ್ಯಂದನಂ ಭಾವಿಸಿ ನೋೞ್ಪಂದೊಪ್ಪಿ ಲಂಕಾಪುರದ ಮಹಿಮೆಯಂ ಸೂಱೆಗೊಂಡಂತಿರಕ್ಕುಂ ॥ ೧೫೩

ಅಂತು ಪೋಗದೆಯಿಸೆ ಉಕ್ಕುಕ್ಕಂ [1] ತಾಗುವಂತೆ ತಾಗಿ ಸೆರಗು
ಗೆಯ್ಯದೆ ಕಾದುತ್ತಿರ್ಪುದುಂ ಪ್ರಮಾಥಿಕುಮಾರನ ಕಯ್ಯಂಬುಗಳರಡು

---

1 ಪೆಣಿದುಕಕ್ಕಂ (ಗ)

ಱುಯೆ [1] ಮೆತ್ತಲ್ಲಂ ತವ್ವುದುಂ ಚಂದ್ರಲೇಖೆ ಕಂಡು ಬೆಱಗಾಗಿ ಪಲ್ಲಿಲ್ಲದ ಪುಲಿಯುಂ ನಖವಿಲ್ಲದ ಸಿಂಹಮುಮೆನಿತುಬಲ್ಲಿತಾದೊಡಮೇಗೆಯ್ವುದು ಈತನಪ್ಪೊಡೆ ಬಲ್ಲಿದಂ ಬಲ್ಲಿದನಾಗಿಯುಂ ಕೈದುವಿಲ್ಲದೇಗೆಯ್ಗುಂ [2] ಸಾವು ನಿಶ್ಚಯಮಾಯ್ತೆಂದು ಚಿಂತಾಕ್ರಾಂತೆಯಾಗಿ ‖ ೧೫೪

ಪತಿಯುಂ ಬಿಟ್ಟು ಪರತ್ರೆಗೆಟ್ಟು ಕುಲಮಂ ಕಿತ್ತಿಕ್ಕಿ ನಾಯಾಗಿ ದು
ರ್ಮತಿಯಿಂ ದುರ್ಜನದೊಳ್ ದುರಾಚರಿತರೊಳ್ ನಿರ್ಧರ್ಮರೊಳ್ ಕೂಡಿ ಸ
ನ್ಮತಮಂ ಬಿಟ್ಟು ಪತಿವ್ರತಾಗುಣಮನೊಕ್ಕಾನಂದದಿಂದಿರ್ದ ಸಂ
ಸ್ಕೃತಿಸೌಖ್ಯೋನ್ನತಿಯಿಂ ಮಹಾಮಹಿಮೆಯಿಂ ಸಾವೇಂ ಕರಂ ಪೊಲ್ಲದೋ ‖ ೧೫೫

ಉರಿಯೊಳ್ ತಂದಿಕ್ಕಿ ಕಾಯ್ಪೆಣ್ಣೆಯುನೆಱೆದರಿದೀಡಾಡಿ ಖಂಡಂಗಳಂ ಸಿಂ
ಧುರದಿಂ ನುಗ್ಗಾಗೆ ಕಾಲ್ಕೈಮುಱಿಯೆ ತುಳಿಸಿ ಕೊಂತಂಗಳಿಂ ಕುತ್ತಿ ಶಸ್ತ್ರೋ
ತ್ಕರದಿಂ ಛೇಱುಟ್ಟು ಖೈರಂದಱಿದು ಕಡಿದು ನಾನಾಪ್ರಕಾರಂಗಳಿಂ ನಿ
ಷ್ಠುರದುಃಖವ್ರಾತದಿಂ ದಂಡಿಸುವ ನರಕಜರ್ಗೇವೊ ಮೆಯ್ಯೊಡ್ಡಲಾಱೆಂ ‖ ೧೫೬

ನರಿ ನಾಯ್ ಬೆಕ್ಕೊಂತಿ ಮಾರ್ಜಾ ಪೇರ್ ನೊಣಮುಂಡು ಕರಿ ಪೆರ್ಬಾವು ಪಾರಾವತಂ ವಾ
ನರನೆತ್ತಾಡಂಚೆ ಸಿಂಹಂ ಕರಡಿ ಮಹಿಷಿ ಪೆರ್ಮಾನಜಂ ಕೋೞಿ ಗಾರ್ದಂ
ಶರಭಂ ಸಾರಂಗಮಶ್ವಂ ಪಶು ಪುಲಿಯಿಲಿ ಕಾಡೆಮ್ಮೆ ಕಾಡ್ಕೋೞಿಯೆಂಬೀ
ತಿರಿಕವ್ರಾತಂಗಳೊಳ್ ಸಂಭವಿಸಿ ದುರಿತದಿಂ ದುಃಖಮಂ ಪೇೞಲಾಱೆಂ ‖

1 ಖಂದೆರಷುಱುಯೆ (ಗ) 2 ಏಗುವಂ (ಗ)

ಲಲಿತ [1] ಪತಿವ್ರತಾಗುಣಮನುರ್ವಿಸೆ ಕಾಂತನೊಳಾದ ಭಕ್ತಿಯುಂ
ನಿಲಿಸಿ ಪೊದಲ್ದ ದುಃಖಮುಮನಾರ್ಪಮುಸುಂ ಕಡುನೋವುಮಂ ಮಹೀ
ವಳಯದೊಳಾಂತು ಬೆಬ್ಬಳಿಸದಂಜದೆ ನೋಡ ಸುಖಕ್ಕೆ ಕೀರ್ತಿಗ
ಗ್ಗಳಿಕೆಗೆ ಮುಖ್ಯರಾದರದಱಿಂ ಗುಣಮುಳ್ಳರೆ ಪೂಜ್ಯರಲ್ಲರೇ ॥ ೧೫೮

ಎಂದು ಮುನ್ನಿನ ಮಹಾಗುಣವಂತರಪ್ಪರ ಕಥಾಂತರಂಗಳಂ ಭಾವಿಸಿ ಪ್ರಮಥಾಧಿಕುಮಾರನಿಂ ಮುನ್ನಿನ್ನ ಪತಿವ್ರತಾಗುಣಕ್ಕಂ ದರ್ಶನಕ್ಕಂ ಹಾನಿಯಾಗಲೀಯದೆ ಸಾವೆನೆಂದು ಶರೀರಮಂ ತೊಱೆದು ಧರ್ಮಧ್ಯಾನದಿಂ ಪಂಚಪರಮೇಷ್ಠಿಗಳ [ಶ್ರೀಪಾದಂಗಳಂ] ಹೃತ್ಕಮಲದೊಳ್ ತಾಳ್ದಿ ಪಂಚನಮಸ್ಕಾರಂಗಳನೋದುತ್ತುಂ ಬರ್ಪಂ [ಬಿ] ಗಿದಿರಾಗಿ ರಥದಿಂ ಪೊಱಮಟ್ಟು ನಿಂದಿರ್ಪುದುಂ ಸುವೇಗಂ ಚಂದ್ರಲೇಖೆಯ ಸರ್ವಾಂಗಮಂ ಕಂಡು ॥ ೧೫೯

ಕೀಲಿಸಿದಂತಿರೆ ನಯನಂ
ಬಾಲೆಯ ಲಲಿತಾಂಗದಲ್ಲಿ ನಟ್ಟಿರೆ ಮತಿಗೆ ।
ಟ್ಟಾಲಾಪಮಿಲ್ಲದಱಿಯದೆ
ಕಾಳಗದೊಳ್ ಕೂವ [2] ಕಂಭದಂತಿರೆ ನಿಂದಂ ॥ ೧೬೦

ಅಂತಿರ್ಪುದುಂ ಪ್ರಮಥಾಧಿಕುಮಾರನೆಡೆವೆತ್ತು ಕೂರಂಬೊಂದಂ [3] ತೊಟ್ಟು ತೀವಿ ತೆಗೆದಿಸುವುದುಂ ॥ ೧೬೧

ತಲೆ ಪಱಿದು ಜೋಲ್ದು ತೊಪ್ಪನೆ
ನೆಲದೊಳ್ ತನು ಬೀೞೆ ಸತ್ತು ಪರವನಿತೆಗೆ ಸೋ ।
ಲ್ತಳಿಪಿದ ಪಾಪದ ಫಲದಿಂ
ಮಲಿನಮನಂ ಜವನ ದಾಡೆಗಂದೊಳಗಾದಂ [4] ॥ ೧೬೨

---

1 ಸುಳಿಸಿ (ಕ. ಖ.) 2 ಕೂನ (ಕ. ಖ.)
3 ಪ್ರಮಥಾಧಿಕುಮಾರನಂಬೊಂದಂ (ಗ)
4 ಹೀನಮನಂ ಶೀಘ್ರಮಿರದೆ ನರಕಂಬೊಕ್ಕಂ (ಕ. ಖ.)

ನೋಡಿರೆ ಪಾಪದ ಪೆರ್ಚಂ
ಕೂಡದೆ ಪಿರಿದಟ್ಕಱಿಂದಮೊದವಿರೆ ಸಲೆ ಮಾ ।
ತಾಡದೆ ದೂರಾಂತರದೊಳ್
ನೋಡಿದ ಫಲದಿಂದಮಿೞಿದನಸುಗತಿಗಾತಂ ॥ ೧೬೩

[ಕಾಳಗಮಪ್ಪುದನಱಿದುಂ
ಬಾಲೆಗೆ ಸೋಲ್ತುತ್ತಲಿತ್ತು ಮಿಡುಕದೆ ನಿಂದೊ ।
ಳ್ಪಿಳೞಿದನೆಂದೊಡನ್ಯರ
ಬಾಲೆಗೆ ಸೋಲ್ತಂಗೆ ಬುದ್ಧಿ ದೊರೆಕೊಂಡಪ್ಪುದೇ ॥ ೧೬೪

ಗತಿಯುಂಟೋ ದಯೆಯುಂಟೋ
ಮತಿಯುಂಟೋ ಸುಗತಿಯುಂಟೊ ನಿರ್ವೃತಿಯುಂಟೋ ।
ಧೃತಿಯುಂಟೋ ಕೇಳನ್ಯರ
ಸತಿಯರ್ಗಳಪಿದ ನರಂಗೆ ವಸುಧಾತಳದೊಳ್ ॥ ೧೬೫

ಅಂತು ಪ್ರಮಾಥಿಕುಮಾರನ ಬಾಣದಿಂ ಮಿಡಮಿಡಮಿಡುಕಿ ಸುವೇಗಂ ನರಕದೊಳ್ ಪುಟ್ಟಿದಂ. ಸಮ್ಯಕ್ತ್ವಚೂಡಾಮಣಿ ರಿಪುಮಂ ಗೆಲ್ದು ಮುನ್ನಿನವರ ನಿದ್ರೆಯೆಲ್ಲಮನುಪಸಂಹರಿಸಿ ನಿಮ್ಮ ನಿಮ್ಮ ಮನೆಗೆ ಪೋಗಿಮೆಂದು ಕಳುಪಿ ಮನಃಪ್ರಿಯೆವೆರಸು ಕೌಶಾಂಬಿಗೆವಂದು ॥ ೧೬೬

ಬಿರುದಿಂ ಪೋಗಿ ಕಡಂಗಿ ದರ್ಪದೊದವಿಂ ಸುತ್ತಿರ್ದ ಭೂಪಾಲರೆ
ಲ್ಲರುಮಂ ಬೇಗದೆ ತಾಗಿ ಬಾಣತತಿಯಿಂ ಕೈಗಾಯದೆಚ್ಚುರ್ವಿ ನಿ
ಷ್ಠುರಕೋಪಾನಳನಿಂ ತಗುಳ್ದು ಹಯ.........
.....................ಗೊಂಡು ವಿಜಯಶ್ರೀಗೀಶನಾಗಿರ್ಪುದುಂ ॥ ೧೬೭

ದಂತಿಬಲಮಹಾರಾಜಂ ಪ್ರಮಾಥಿಕುಮಾರನಪ್ಪುದಂ ದೂರದಿಂ ದಱಿದು ಪುರಮಂ ಶೃಂಗಾರಂಗೆಯ್ದು ದಿಗೊರ್ಳಲ್ ಗುಡಿತೋರಣಂಗಳಂ ಕಟ್ಟಿಸಿ ಸಮಸ್ತಬಲಂಬೆರಸು ರಾಗದಿಂದಿದಿರ್ವರ್ಪುದುಂ ಕುಮಾರನ ಯ್ಯಂಗೆ ಬಂದು ಚಂದ್ರಲೇಖೆವೆರಸು ಪೊಡೆಮಡುವುದುಂ ॥ ೧೬೮

ಜಿನಪದಭಕ್ತನಾಗು ಜಿನಧರ್ಮದೊಳೊಳ್ಪಿದನಾಗು ಜೈನಶಾ
ಸನವರದೀಪನಾಗು ಜಿನಸೇವೆಯೊಳ್ ದೃಢನಾಗು ರಾಜ್ಯಗೋ
ಮಿನಿಗಧಿನಾಥನಾಗಿ ಸಲೆ ಭವ್ಯಜನಾಳಿಯೊಳೊಂದಿ ಕೂರ್ತು ಸ
ಜ್ಜನನುತನಾಗಿ ಪಾಲಿಸು ಮಹಾವನಿಯುಂ ರವಿಚಂದ್ರರುಳ್ವಿನಂ [1] ||೧೬೯

ಎಂದು ಪರಸಿ ತಕ್ಕೈಸಿಕೊಂಡು ಮಹಾವಿಭೂತಿಯಿಂದರಮನೆ ಗೊಡಗೊಂಡು ಬಂದು ಸಂತೋಷದಿಂ ಜಿನಾಭಿಷೇಕ ಪೂಜೆಗಳಂ ಮಾಡಿ ಕೆಲವುದಿವಸಕ್ಕೆ ಬಸಗೆಮರುಳ್ಗೊಂಡು || ೧೭೦

ತನಯಂಗೆ ರಾಜ್ಯಭರವಂ
ಮನುಜೇಂದ್ರಂ ಕೊಟ್ಟುವಿೞಾಪರಿಗ್ರಹದಿಂ ಬೇ |
ಳನಿಸದೆ ಜಿನೇಂದ್ರಪದಸೇ
ವನೆಯೊಳ್ ಸಚ್ಚಿತ್ತನಾಗಿ ನಿಲ್ವುದುಮಾಗಳ್ || ೧೭೧

ಧರಣೀಶರ್ ಬೆಸಕೆಯ್ಯೆ ಕೂರ್ತು ಸತತಂ ಕೈವಾರದಿಂದೆಯ್ದೆ ಭೃ
ತ್ಯರುದಾರರ್ ಪದಪಿಂದೆ ಪೊರ್ದೆ ಪರಭೂಪಾಲರ್ ಮಹಾಭೀತಿಯಿಂ
ನರಿಯಂತಂಜಿ ಕುನುಂಗಿ ತಮ್ಮ ಧನಮಂ ತಂದೀಯೆ ಭವ್ಯಾಳಿ ಪೆ
ರ್ಚಿರೆ ಸದ್ಧರ್ಮದಗುರ್ವು ಪರ್ವೆ ಧರೆಯುಂ ಭೂಭಾಗಮಂ ತಾಳ್ದಿದಂ ||

ಅಂತು ರಾಜ್ಯಶ್ರೀಯುಂ ತಾಳ್ದಿ ಸೌಂದರಮಹಾದೇವಿಯುಂ ಚಂದ್ರಲೇಖೆಯುಂ ಮೊದಲಾದನೇಕರಸಿಯರೊಳ್ ಕೂಡಿ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತುಮಿರ್ಪಿನಮಾಪುರಕ್ಕೊರ್ವ ಧರ್ಮಘೋಷಭಟ್ಟಾರಕರೆಂಬಧಿಕಗುಣರಪ್ಪ ರಾಜರ್ಷಿಯರ್ ಬರ್ಪುದುಂ ಅವರ ಬರವಂ ಋಷಿನಿವೇದಕಂ ಬಂದರಸಂಗೆ ಬಿನ್ನಪಂಗೆಯ್ವುದುಮಾತಂಗಂಗ ಚಿತ್ತಮನಿತ್ತು || ೧೭೨

ಪರಮೋತ್ಸವದಿಂ ಪುಣ್ಯಂ
ದೊರೆಕೊಂಡುದು ದಿವ್ಯಮುನಿಯ ಬರವಿನೊಳಮಗೆಂ |

---

[1] ಈ ಪದ್ಯವು (ಗ) ಪುಸ್ತಕದಲ್ಲಿ ಈ ಅಧ್ಯಾಯದ ಕೊನೆಗೆ ಬರುತ್ತದೆ.

ದರಸಂ ರಾಜಕುಮಾರರ್
ವೆರಸು ಸುರಾಧೀಶನಂತೆ ಪೊಱಮಟ್ಟಾಗಳ್ ‖ ೧೩೪

ಬಂದು ಜಿನಭಕ್ತಿಯಿಂ ಮುನಿ
ವೃಂದಾರಕನಂಘ್ರಿಯುಗಳಮಂ ಪೂಜಿಸಿ ಭೂ ।
ವಂದಿತಪದಪಂಕರುಹಂ
ವಂದಿಸಿ ಕುಳ್ಳಿರ್ದು ಮುಗಿದು ಹಸ್ತಾಂಬುಜಮಂ ‖ ೧೩೫

ನಿರ್ವಾಣಶ್ರೀಯ ಶೃಂಗಾರಮೆನಿಸಿದ ಜಿನಧರ್ಮಮಂ ಕಿವಿ
ಯಾಂತೇಕಚಿತ್ತದಿಂ ಕೇಳುತ್ತುಮಿರ್ದು ವಾತ್ಸಲ್ಯರತ್ನಾಕರಂ ಪರಾಂಗ
ನೆಗಳಪಿ ಕೆಡೆದ ಸಹಸ್ರಭಟನಪ್ಪ ಸುವೇಗನಂ ನೆನೆದು ಮನದೊಳ್
ವಿಸ್ಮಯಂಬಡುತ್ತಿರ್ಪುದುಂ ಧರ್ಮಘೋಷಣಭಟ್ಟಾರಕರವಧಿಜ್ಞಾನರ
ಪ್ಪುದಱಿಂ ಸಮ್ಯಕ್ತ್ವಚೂಡಾಮಣಿಯ ಮನದ ಚಿಂತೆಯನಱಿದಿಂತೆಂ
ದರ್] [1] ‖ ೧೩೬

ನೀಂ ನೆನೆಯುತ್ತಿರ್ಪ ಸುವೇ
ಗಂ ನಿನ್ನಂಗನೆಗೆ ಸೋಲ್ತ ಪಾಪದ ಫಲದಿಂ ।
ದಂ ನರಕಕೆಯ್ದಿ ವೇದನೆ
ಯಿಂ [2] ನವೆದಪನೀಗಳಂಬುದುಂ ನೃಪತನಯಂ ‖ ೧೩೭

[ಬೆಱಗಾಗಿ ಕರ್ಮ ಜೀವಿಗ
ಳಱಿಯದೆ ಮತಿಗೆಟ್ಟು ಪೆಱರ ಪೆಂಡಿರಯಿಂಪಿಂ ।
ಗೆಱಗಿ ಮತಿಗೆಟ್ಟು ಜಗುಪ್ಪೆಡೆ
ಯುಱಿಯದೆ ಮುಱುಗುತ್ತುಮಿರ್ಪರೇಂ ಸಾಸಿಗರೋ ‖ ೧೩೮

---

[1] ಅಂತಾತನಂ ಕೊಂದು ಕೌಶಂಬಿಗೆ ಬಂದು ಪೊಱಗಿರ್ದರಿಬಲಮಂ ಕಾದಿ ಗೆಲ್ದು ದಂತಿಬಳಮಹಾರಾಜನೊಳ್ ಕೂಡುವುದುಂ, ಧರ್ಮಘೋಷಣರೆಂಬಾಚಾರ್ಯ ರಾಪುರಕ್ಕೆ ಬರ್ಪುದುಂ ಅವರುಂ ತಾನುಂ ತಮ್ಮಯ್ಯನುಂ ಪೋಗಿ ವಂದಿಸಿ ಧರ್ಮಮಂ ಕೇಳುತ್ತಮಿರ್ಪುದು ವಾತ್ಸಲ್ಯರತ್ನಾಕರನು ಚಂದ್ರಲೇಖೆಗಳಿಪಿ ಸತ್ತ ಸಹಸ್ರಭಟನಪ್ಪ ಸುವೇಗನನು ನೆನೆವುದುಂ ಮುನಿವೃಂದಾರಕನವಧಿಯಿಂದಱಿದು ಇಂತೆಂದು (ಗ) [2] ದಿನ್ನುಂ ನರಕದ ನೆಲೆಯಿಂದಂ (ಗ)

ಸಾರಂ ಸ್ತ್ರೀಸುಖಮೆಂದವಿ
ಚಾರತೆಯಿಂ ಬಱಿದೆ ಮುಱುಗಿ ಬೆಳ್ತನದಿಂ ಸಂ ।
ಸಾರಿಗಳಱಗುವರನ್ಯರ
ನಾರಿಗೆ ನರಕಕ್ಕೆ ಜಗುಳ್ವ ಸಮಕಟ್ಟಿಂದಂ ॥ ೧೭೯

ತವ್ರುಡಂ ತಿಂದು ತುಯ್ಯಲನುಂಡೆನೆಂಬಂತೆ ನಾಯನೇಱ ಕರಿಯ ನೇಱದೆನೆಂಬಂತೆ ಗಂಜಿಯುಂ ಕುಡಿದು ಕಳವೆಯ ಕೂೞನುಂಡೆನೆಂಬಂತೆ ಬಾಚಲೆಯುಂ ತಿಂದು ಪಣ್ಣಂ ತಿಂದೆನೆಂಬಂತೆ ಕಬ್ಬಿನಡಿಯ ಬೇರಂ ತಿಂದು ಕಬ್ಬಂ ಮೆಲ್ದೆನೆಂಬಂತೆ ಸಂಸಾರದಲ್ಪಸುಖಮಂ ಸಂಕಲ್ಪದಿಂ ಮಹಾಸುಖಮೆಂದು ನಂಬಿ ನರಕದೊಳಾದ ಮಹಾದುಃಖಕ್ಕೊಳಗಾದರಕ್ಕಟಾ ಮೂರ್ಖರೆಂದು ತನ್ನೊಳ್ ಭಾವಿಸಿ ಮುನಿಕುಂಜರಂಗೆ ಪುನರ್ನಮಸ್ಕಾರಂಗೆಯ್ದು ತನ್ನ ಮನೆಗೆವಂದು] [1] ॥ ೧೮೦

ಪುಲಿಯುಂ ಸೊರ್ಕಿದ ಗಂಧಸಿಂಧುರಮುನತ್ಯಾಳಾಪಿಯಾಗಿರ್ದ ದುಷ್ಕುಲನಂ ಪನ್ನಗನಂ ವಿಷೋತ್ಕರಮನಸ್ತ್ರಾನೀಕಮಂ ಸಿಂಹಸಂಕುಲಮಂ ಕಾಣ್ಬವೊಲಂಜಿ ಸಾರದೆ ಪರಸ್ತ್ರೀಯರ್ಕಳಂ ಭೂರಿಭೂತಳದೊಳ್ ತಾಯ ಸಮಾನಮೆಂದು ಬಗೆದಂ ವಾತ್ಸಲ್ಯರತ್ನಾಕರಂ॥೧೮೧

ಎಸೆವ ಪರಸ್ತ್ರೀಯರ ತೆ
ಕ್ಕಸಿಱಂ ಪೆತ್ತು ಬಸುಱೆಂಬನಲ್ಲದೆ [2] ಮತ್ತೊಂ ।
ದಸದಾಳಾಪಮನೆನ್ನಂ
ವಸುಮತಿಯೊಳ್ ಸುಕವಿನಿಕರಪಿಕಮಾಕಂದಂ ॥ ೧೮೨

ಮಂಡಿತಮೆನಿಸುವ ಲೋಗರ
ಪೆಂಡಿರ ಪೆರ್ಮೊಲೆಯುಮಂ ಮನೋಮುದದಿಂ ಮು ।

---

[1] ಬೞಿಗಾಗಿ ದಂತಬಳಮಹಾರಾಜನದುವೆ ನಿರ್ವೇಗವಾಗಿ ಸಾಸಿರ್ವರರಸು ಮಕ್ಕಳ್ವೆರಸು ಜಾತರೂಪಧರನಾಗಿ ಪೋದನಿತ್ತಲ್ ಸಮ್ಯಕ್ತ್ವಚೂಡಾಮಣಿ (ಗ)

[2] ಪರಸ್ತ್ರೀರತೆಯೊಳ್ ಬಱಂಬೆತ್ತು ಬಸುಱಿಂಬನಲ್ಲದೆ (ಗ) ಪರಸ್ತ್ರೀಯರ ತೆಳ್ಪಸುರುಗಳಂ ಪೆತ್ತು ಬಸಿರೆಂದೆಂಬಾ (ಕ. ಬ.)

ನ್ನುಂಡ ಮೊಲೆಯೆಂಬನವನೀ
ಮಂಡಲದೊಳ್ ಸುಕವಿನಿಕರಪಿಕಮಾಕಂದಂ ‖ ೧೯೩

ಚಿತ್ತ್ರದಿಂದನ್ಯರ ಸಂ
ಪತ್ತಿನ ವನಿತೆಯರ ನೀಳ್ದ ನಿಡಿದೋಳ್ ಕಿಱಿಯಂ ।
ದೆತ್ತಿದ ತೋಳ್ಗಂದಿರ್ಪನು
ದಾತ್ತತೆಯಿಂ [1] ಸುಕವಿನಿಕರಪಿಕಮಾಕಂದಂ ‖ ೧೯೪

ಅಂತು ಕಾಳಕೂಟದೊಳ್ ಬೆರಸಿದ ಕೂೞಂತೆ ದೃಷ್ಟಿವಿಷ ಮಪ್ಪ ಪಾವಿನ ತಲೆಯ ಮಾಣಿಕದಂತೆ ಬೆಟ್ಟದಡಿಯಲ್ಲಿರ್ದ ನಿಧಿಯಂತೆ ನೆಗೞಿಳ್ದ ಮಡುವಿನೊಳಿರ್ದ ನಿಕ್ಷೇಪದಂತೆ ಚಕ್ರವರ್ತಿಯ ಬಾಯ ತುತ್ತಿನಂತೆ ಕತ್ತಿರಿವಾಣಿಯೊಳಗಣ ಕರ್ಪಿನಂತೆ] ಪುಲಿಯ ಮೀಸೆಯೊಳಿರ್ದ ಮುತ್ತಿನಂತೆ ಸಿಂಹದ ದಾರಿಯೊಳಿರ್ದ ಗಾರಿಗೆಯಂತೆ ಡಾಕಿನಿಯರ ಕೈಯ ಪೋಳಗೆಯಂತೆ ರಕ್ಕಸಿಯರಮನೆಯ ಬೆಲ್ಲದಂತೆ ಕಲ್ಲ ಬಿಡಮೆಯೊಳಿರ್ದ ಪಣವಿನಂತೆ] ಸಿಡಿಲೊಳಗಿರ್ದ ಸಕ್ಕರೆಯಂತೆ ಕಾಡೆಮ್ಮೆಯ ಮೊಲೆಯ ಪಾಲಂತೆ ಕಟ್ಟರಿವಪ್ಪ ಪರವನಿತೆಯರಂ ಪಂಬಲಿಸುವ [2] ನಾಲಗೆಯೊಳ್ ಪಣವನಿಕ್ಕಿ ತೋಱುವ ಕಣ್ಸನ್ನೆಗೆಯ್ವ ಸಂಕೇತಮುಂ ನುಡಿವ ಬೞಿಯಟ್ಟುವ ಮರುಳಂ, ಕಾಲ ಕಿಚ್ಚ ನೆರ್ದೆಗೆ [3] ತೆಗೆವ ಬೆಟ್ಟೇಱಿ ಮೃತ್ಯುಗರೆವ ಸುಣ್ಣಮಂ [ಬೞಿದೆ] ಕುಡಿಪ ಕಣ್ಣೊಡೆದುಕೊಳ್ವ ಕೋಳಕ್ಕೆ ಕಾಲಂ ನೀಡುವ ಶೂಲಮನೇಱಿ ಕುಳ್ಳಿರ್ಪ [4] ಕೊಲ್ವಾನೆಯ ಕಾಲಂ ಪಿಡಿವವನಂ ಪೋಲ್ಕುಂ. ಗಂಡನ ನೆರೆಯ ಪೊರೆಯ ತಳಾಱರ ಲೋಗರ [5] ಮಿಂಡರ ಭೂಪರ ಬಾರಿಗೆ ಬಿರ್ದ ಬೋಡಾಗಿ ನಾಯಾಗಿ ತೇಜಂಗೆಟ್ಟು ಸಾಗುಮುದು ತಪ್ಪಿ ಪಾದರಂ ಮೆಯ್ಯಿಕ್ಕಿದೊಡಂ, ಕದ್ದಾ ತನರಸನ ಕಯ್ಯೊಳ್, ಕದ್ದು ಪರದಾಡುವಂ ಸುಂಕಿಗನ ಕಯ್ಯೊಳ್,

1 ಉದಾತ್ತಯಶಂ (ಕ, ಖ.)
2 ಪಂಬಲಿಸುವವನುಂ ನೆವನೆವದಳೆ ಮಱುಗುವವನುಂ (ಗ)
3 ನಿದ್ರೆಗೆ (ಗ)
4 ಕೊಲುವಾನೆಗೆ ಪಾಳಂಬಡುವವನುಂ (ಗ)
5 ಮುನಿಪರ (ಗ)

ತುಡುಗುಣಿನಾಯ್ ಮನೆಯುವರ ಕಯ್ಯೊಳ್, ಪಂಚಕ[ರಪ್ಪ ಗಂಡುಗ]ಳ್ ತಳಾಱರ ಕಯ್ಯೊಳ್, ಪಲವುಸೂಪ್ [ನೀರನೀ] ಸುವಂ ನೀರ ಕಯ್ಯೊಳ್, ಪಾವಡಿಗಂ ಪಾವಿನ ಕಯ್ಯೊಳ್, ಪುಲಿವೇಂಟೆಗಾಱಂ ಪುಲಿಯ ಕಯ್ಯೊಳ್, ಕಡುಬಿರುದಂ [1] ಕಲಿಯ ಕಯ್ಯೊಳ್, ತುಡುಗಾಡುವ ಬಸವನಾರಂಬಿಗನ ಕಯ್ಯೊಳ್, ಇರುಳ್ವಟ್ಟೆಗಾಱಂ ಕಳ್ಳನ ಕಯ್ಯೊಳ್, ಸಿಕ್ಕುವಂತೆ ನಾರಕರ ಬಾರಿಯೊಳ್ ಬಿರ್ದು ಬಾಱದ ಭವಂ ಬರ್ಕುನೆಂಬ ಜಿನಾಗಮದೋಜೆಯುಂ ಭಾವಿಸಿ ಪಾರದರದ ವ್ಯಸನಕ್ಕೆ ಭಯಸ್ಥನಾಗಿ ॥ ೧೮೫

ರತಿ ರಂಭೆ ತಿಲೋತ್ತಮೆ ಭಾ
ರತಿಯೆಂಬಿವರೊರೆಗೆ ಬರ್ಪ ಪರವನಿತೆಯುರ್ಗ ।
ನ್ನತರಾಜವಂಶತಿಲಕಂ
ಗತಿಶಯದಿಂ ಸೋಲವಲ್ತೆ ಕಣ್ಣುಂ ಮನಮುಂ ॥ ೧೮೬

[ಅಂತು ಪರನಾರೀನಂದನನುಂ ಜಿನಪಾದಪದ್ಮಷಟ್ಪದನುಂ ಸದ್ಧರ್ಮವಿನೋದನುಂ ಮುನಿಜನಾನಂದಹೃದಯನುಂ ಸಮ್ಯಕ್ತ್ವಚೂಡಾಮಣಿಯುಂ ಭವ್ಯಜನಸರೋಜಿನೀರಾಜಹಂಸನುಮಾಗಿ] [2] ಪಲವುಕಾಲಂ ರಾಜ್ಯಂಗೆಯ್ದೊಂದುದಿವಸಂ ಗಂಟಲನಡಸಿ ಪಿಡಿದ ಜವನ ಕಯ್ಯುಗುರಿನಂತೆ ಸಾವು ಮುಟ್ಟಿವಂದುದೆಂದು ಕಿವಿಯೊಳ್ [3] ಪರ್ಚಿ ಪೇೞಲ್ ಬಂದ ಯಮಧರ್ಮರಾಜನ [4] ದೂತನಂತೆ ಮೃತ್ಯುರಾಜನ ತಳಾಱ [ರಣೆದ]ಡಂಗೆಯ್ವ ಸುಣ್ಣದಂತೆ ಮುನ್ನಂ ಧರ್ಮದ್ರೋಹನಾಗಿರ್ದ ಬೆಳ್ತನದ ಬೆಳ್ಪನಂತೆ ತಲೆಗೆ ಬಿಗಿದ ಕೃತಾಂತನ ಕಯ್ಯ ನೂಲ ನೇಣಿನಂತೆ ಕೊಲಲೆಂದು ಮೊಗಮಿಕ್ಕಿದ ಯಮಗಜದಂತದಂತೆ ಕೀನಾಶನೆಂಬ ಕಿರಾತನೆಚ್ಚ ಕವಲಂಬಿನ ಮೊನೆಯಂತೆ ತಲೆಗೆ [5] ಪಾಯ್ವಂತಕನೆಂಬ ಪುಲಿಯ ಪಲ್ಲೆಂಬಂತೆ ಜವ್ವನಮೆಂಬ ಸೂರ್ಯನ ಕೇಡಿಂ ಮರಣಮೆಂಬ ರಾತ್ರಿಯೊಳುದಯಂಗೆಯ್ದಳವೆಱೆಯೆಂಬಂತೆ ಕುಂದಿದಾ

1 ಕಡುವಿರಿಂಪಂ (ಗ) 2 ಎನಿಸಿ (ಗ)
3 ಕಿವಿಯಿಲ್ (ಕ. ಖ.) 4 ಕರ್ಮರಾಜನ (ಗ)
5 ಪರಿದಱಿವುವಕಾಳಮುಖನಸಿತಪೀತಾಕೆಯಂತೆ (ಗ)

ಯುಷ್ಯವೆಂಬ ತೊಱೆಯೆರಡುತಡಿಯ ಬಿಳಿಯ ಮಳಲ ದಿಂಟೆಯಂತೆ ಪಿಡಿದಡಸಿ ನುಂಗುವ ಸಂಸ್ಕೃತಿಯೆಂಬ ಶಾಕಿನಿಯ ಕಡೆಗಣ್ಣೆಂಬಂತೆ ಭಯಂಕರಮಾಗಿರ್ದ ಕೆನ್ನೆಯ ನರೆಯಂ ಕನ್ನಡಿಯೊಳ್ ಕಂಡು ॥೧೮೭

ಎನಿಸೆನಿಸು ಸಿರಿಯೊಳಿರ್ದೊಡ
ಮನಿಸನಿಸು ಮನಕ್ಕೆ ಮೋಹಮೊದವುತ್ತಿರ್ಕುಂ ।
ಮನಮಿಂಗೆ ಸಹಜಮದಱಿಂ
ಮನಮೆಂದುದನಾಡುತಿರ್ಪ ಮನುಜನೆ ಗಾಂಪಂ ॥ ೧೮೮

ಧನಮನುಪಾರ್ಜಿಸುವುದು ಮ
ತ್ತೆನಗೆಂದುಂ ಮರಣಮಿಲ್ಲ ಶಾಶ್ವತಮೆಂಬಂ ।
ತನುನಯಮೊದವುಗುಮಳಿಪುಂ
ಘನಮಕ್ಕುಂ ಸಹಜಮಸುಗಿದಂ [1] ಬಾರಿಪರಾರ್ ॥ ೧೮೯

ಸಾವಕ್ಕುಂ ಕಡುನೋಗುಂ
ಭಾವದೊಳಲ್ಲಾಡುತಿರ್ಕುಮತಿಲೋಲತೆಯಿಂ ।
ಭಾವಿಪುದು ಧರ್ಮಮೆಂದೊಡೆ
ಜೀವಂ ಧಾರಿಣಿಯೊಳಿಂತಿದಂ ಬಾರಿಪರಾರ್ ॥ ೧೯೦

ಪರವನಿತೆಗೋತು ಕೂಡಿರೆ
ಧರಣೀಶರ್ ಪಿಡಿಯೆ ಮೋಹಮಿಲ್ಲದೆ ಪೊನ್ನಂ ।
ಪಿರಿದೀವಂ ಧರ್ಮಕ್ಕೊಂ
ದರೆಗಾಣಿಗೆ ಜೀವಮಕಟ [2] ಮೋಹಿಸುತಿರ್ಪಂ ॥ ೧೯೧

ನಿಕ್ಕಾರಣಮರಸರ್ ಪಿಡಿ
ದಕ್ಕಟ ತೆಱಿಮೆಂದು ಬೇಡೆ ಬೇಡಿದ ಪೊನ್ನಂ ।
ನಿಕ್ಕುವಮೀಪಾಪಕರ್ಗಳೊಂ
ದಕ್ಕಿಯುಮಂ ಧರ್ಮಮೆಂದೊಡೀವವರೊಳರೇ ॥ ೧೯೨

---

1 ಸಹಜಮನುಜಗಿದ (ಗ)   2 ಜೀವನದಕೆ (ಗ)

ಪರಿತಂದು ಬಂದಿಕಾಱರ್
ಕೊರಲಂ ಪಿಡಿದೊತ್ತೆ ಬೇಡಿದರ್ಥಮನೀವರ್ ।
ವರಧರ್ಮಕ್ಕೊಂದಡಕೆಯು
ನೆರೆದೊಡಮಣಮೀವರೊಳರೆ ವಸುಧಾತಳದೊಳ್ [1] ॥ ೧೯೩

ಮರಣಂ ಸಾರ್ಚಿದೊಡಂ ಪೆಣಂ ಕೆಡೆವೊಡಂ ದಾರಿದ್ರ್ಯರಾಗಿರ್ದೊಡಂ
ಸಿರಿಯುಂ ಚಿಂತಿಸಿ ಪೆಂಡಿರಂ ನೆನೆದು ಪುತ್ರಾನೀಕಮಂ ನೋಡಿ ನಿ
ಷ್ಠುರದಿಂ ಬರ್ದುಗುವಲ್ಲದಣ್ಣ ಧರೆಯೊಳ್ ಕೂಡಿರ್ಪ ಸದ್ಧರ್ಮಮಂ
ನಿರುತಂ ಚಿಂತಿಸಲಾಱರಲ್ತೆ ಸಹಜಂ ಜೀವಕ್ಕೆ ಭೂಲೋಕದೊಳ್॥೧೯೪

ಎಂದು ಜೀವನೊಳಾದ ಹೀನಸ್ವಭಾವಮಂ ಚಿಂತಿಸಿ [ರಾಜ್ಯದೊಳನಿತುಕಾಲಮಿರ್ದೊಡಂ ಜೀವಕ್ಕೆ ಮೋಹಮುಗುರ್ವಾಗೊದವುಗುಮಲ್ಲದೆ ಸಾವೊಡಂ ಪೋಗದೆಂದು ನಕ್ಕು] ತನ್ನ ಪಿರಿಯಮಗನಪ್ಪ ವಿಮಲಕೀರ್ತಿಯೆಂಬಂಗೆ ಪಟ್ಟಮಂ ಕಟ್ಟಿ ರಾಜ್ಯಮಂ [ತೊಱೆದು ತಪಂಗೆಯ್ದು] [2] ಸಮಾಧಿಮರಣದಿಂ [ಮುಡಿಪಿ ದೇವಗತಿವಡೆ]ದಾರಣಮೆಂಬ ಪದಿನ್ನೈದನೆಯ [3] ಸ್ವರ್ಗದೊಳಪ್ಪತ್ತೆರಡುಸಾಗರೋಪಮಾಯುಷ್ಯಮನುಳ್ಳ ಕೀರ್ತಿಧರನೆಂಬ ಮಹರ್ಧಿಕದೇವನಾಗಿ ಪುಟ್ಟಿದನಿಂತು ॥ ೧೯೫

[4] ಪರವನಿತೆಗೆ ಸೋಲ್ತೊಡೆ ತಾಂ
ಪರವನಿತೆಯೆ ಕಷ್ಟಮೆಂದು ಪರವನಿತೆಯರೊಳ್ ।

---

1 ಧರೆಯೊಳ್ ಧರ್ಮಕ್ಕೆನೆ ಕೇಳರೆಯುಡಕೆಯು ನೀವರೊಳರೆ ವಸುಧಾತಳದೊಳ್ (ಗ)

2 ಕೊಟ್ಟು॥ ಜಿನಪದಭಕ್ತನಾಗು........ರವಿಚಂದ್ರರುಳ್ಳಿನಂ (೧೬೯ನೆಯ ಪದ್ಯ.) ಎಂದು ಪರಸಿ ಬುದ್ಧಿವೇಳ್ದು ಮುನ್ನಿನ ಧರ್ಮಘೋಷಣಭಟ್ಟಾರಕರಲ್ಲಿ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಪ್ರಮಾಧಿಮುನೀಂದ್ರಂ ಕಡೆಯೊಳ್ (ಗ)

3 ಪದಿನಾಱನೆಯ (ಗ)

4 [ಪರವನಿತೆಗೆಱಗದನ್ಯರ
ತರುಣಿಗೆ ಮನವಿಡಿಯದೇಕಚಿತ್ತದಿನವರೇಂ ।

ನೆರೆಯದೆ ಜಿನೇಂದ್ರಪದಮಂ
ಸ್ಮರಿಯಿಸಿದ ಮಹಾತ್ಮನೆಯ್ದುಗುಂ ನಿರ್ವೃತಿಯಂ ॥ ೧೯೬

ಎಂದು ಸ್ವದಾರಸಂತುಷ್ಟ್ಯತೆಯಿಂ ದೇವಗತಿವಡೆದ ಪ್ರಮಾಥಿ ಕುಮಾರನ, ಪರಸ್ತ್ರೀರತಿಯಿಂ ನರಕಕ್ಕೆ ಸಂದ ಸುವೇಗನ [1] ಕಥೆಯಂ ಗಣಧರಸ್ವಾಮಿಗಳ್ ಪೇಳ್ದುದುಂ [2] ॥ ೧೯೭

ಸುರರಾಜಾದ್ರೀಂದ್ರಧೈರ್ಯಂ ಪರಮತಗಿರಿವಜ್ರಾಯುಧಂ ಜೈನಯೋಗೀಶ್ವರದಾಸಂ ವಾಗ್ವಧೂವಲ್ಲಭನಘತಮ [3] ತೀವ್ರಾಂಶು ಪೆರ್ಚಿದರ್ಸನುರ್ವೀಶ್ವರಪೂಜ್ಯಂ ರಾಗದಿಂದಂ ಗುಣಗಣನಿಳಯಂ ಕೇಳ್ದು ತ್ರೈವಿದ್ಯಚಕ್ರೇಶ್ವರಪಾದಾಂಭೋಜಭೃಂಗಂ ಸುಕವಿಜನಮನಃಪದ್ಮಿನೀರಾಜಹಂಸಂ [4] ॥

ಇದು ನಿಖಿಲದಿವಿಜಪರ್ನೃಥಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ಸಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಬ್ರಹ್ಮ [5] ವ್ರತವ್ಯಾವರ್ಣನಂ
ತ್ರಯೋದಶಾಶ್ವಾಸಂ.

ದ್ರನನಿಳಿಂಪನವ್ನುಪದನಂ
ನೆನೆಯುತ್ತಿರೆ ಮೋಕ್ಷಮೆಂಬುದಾವುದುಗಹನಂ] (ಕ. ಬ.)

1 ಸುವೇಗನಿಂದಬ್ರಹ್ಮದೊಳಾದ (ಕ. ಬ.) 2 ಪೇಳೆಕೇಳ್ದು (ಗ)

3 ಎಲ್ಲಾ ಪ್ರತಿಗಳಲ್ಲಿಯೂ ಈ ಶಬ್ದವು ಅಕಾರಾಂತವಾಗಿಯೇ ಕಂಡು ರುತ್ತದೆ.

4 ವಾಗ್ವಧೂವಲ್ಲಭಘನತಮಚಂಡಾಂಶು ಪೆರ್ಚಿದರ್ಸಂದಾ।ದರದಿಂ ತ್ರೈವಿದ್ಯಚಕ್ರೇಶ್ವರನಮಲಪದಾಂಭೋಜಭೃಂಗಂ ಜಿನ ಶ್ರೀ। ಚರಣಾಲಂಕಾರಶೀರ್ಷಂ ಸುಕವಿಜನಮನಃಪದ್ಮಿನೀರಾಜಹಂಸಂ ॥ (ಗ) 5 ಸಬ್ರಹ್ಮ (ಗ)

ಚತುರ್ದಶಾಶ್ವಾಸಂ

ಶ್ರೀವಿಳಸಜ್ಜನವಂದ್ಯಂ
ಪಾವನಸಬ್ರಹ್ಮ [1] ಸುವ್ರತಂ ನಿರ್ವಾಣಂ |
ಶ್ರೀವಿಭವವೆಂದು ನಲಿದಂ
ಭೂವಿದಿತಂ ಸುಕವಿನಿಕರಪಿಕಮಾಕಂದಂ || ೧

ಅಂತು ಬ್ರಹ್ಮವ್ರತದ [2] ಕಥೆಯಂ ಕೇಳ್ದು ತದನಂತರಂ [ಶ್ರೇಣಿಕಮಹಾರಾಜನಮೃತಶ್ರೀರಮಣಿಯ ಗೃಹಮೆನಿಸುವಪರಿಗ್ರಹದ ಕಥೆಯನೆನಗೆ ನಿಮ್ಮಡಿ ಬೆಸಸುವುದೆಂದು || ೨

ಕರಕಮಲಂಗಳಂ ಮುಗಿದು ಸಂತಸದಿಂದಿರೆ ಗೌತಮರ್ ಮಹೀ
ಧರನಿಭಧೈರ್ಯರೂರ್ಜಿತರನಂಗಹರರ್ ಮುನಿವಂದಿತಕ್ರಮಾಂ
ಬುರುಹರುದಾತ್ತಚಾರುಚರಿತರ್ ಜಲರಾಶಿನಿನಾದದಿಂ ಮಹೀ
ಶ್ವರರತಿಭಕ್ತಿಯಿಂದೊಸೆದು ಕೈಮುಗಿಯುತ್ತಿರೆ ಪೇೞ್ದರರ್ತಿಯಿಂ] [3] || ೩

ಫಲಮಿಲ್ಲದೆ ಪೂವನೆ ತೋಱಿ ಪೋಪ ಸಂಪಗೆಯಂತೆ ಬಱಿ [4] ಮಾತನೆ ತೋಱಿ ಪೋಗದೆ, ತಳಿರನೆ ತೋಱಿ ಪೋಪಶೋಕೆಯಂತೆ ಸಿರಿಯನೆ ತೋಱಿ ಪೋಗದೆ, ಪರೆಪನೆ ತೋಱಿ ಪೋಪ ಆಲದಂತೆ ಬಳಸನೆ ಸುತ್ತಿ ಪೋಗದೆ, ಬಲ್ಪನೆ ತೋಱಿ ಪೋಪ ತರಿಯಂತೆ [5] ಮಹಿಮೆಯನೆ ತೋಱಿ ಪೋಗದೆ, ನಾರನೆ ತೋಱಿ ಪೋಪ ಸೆಣಂಬಿನಂತೆ ತನ್ನನೆ ಮೆಱೆದು [6] ಪೋಗದೆ; ಮಾವಿನಂತೆಲ್ಲಮಱೊಳಂ ನೆಱೆದು ಪುಣಿಸೆಯಂತೆ ಪಲವಱೊಳವೊಪ್ಪಿ, ಲವಣದಂತೆ ಸದ್ದೃಷಿಗಳ ಕೂಟ

---

1 ಸದ್ಧರ್ಮ (ಗ) 2 ಸುವ್ರತದ (ಗ) 3 ನಿಯಮಿತ ಪರಿಗ್ರಹದ ಕಥೆಯಂ ಬೆಸಸಿಮೆಂಬುದುಂ ಇಂತೆಂದು ಪೇೞ್ದರ್ (ಗ) 4 ಮಱು (ಗ)
5 ತಱಿಯ ಮರದಂತೆ (ಗ) 6 ತೋಱಿ ಮೆರೆದು (ಗ)

ದೊಳ್ ರುಚಿವಡೆದು, ದೀಪವರ್ತಿಯಂತೆ ಪಂಚಪರಮೇಷ್ಠಿಗಳ್ಗೆಱಕಂ ಮಾಡಿ, ಸೊಡರಂತೆ ಚಾತುರ್ವರ್ಣ್ಯದೊಳ್ ಸ್ನೇಹದಿಂ ಕೂಡಿ; ಸಮೆದ ಚೀಲದೊಳ್ ಪೊನ್ನನಿಕ್ಕುವಂತೆ, ಕಿಚ್ಚುಳ್ಳೊಲೆಯೊಳ್ ಕೂೞನಡುವಂತೆ, ಪಣ್ಣಿದಾನೆಯನೇಱುವಂತೆ, ಮಡಿಯಾದ ಸೀರೆಯನುಡುವಂತೆ, ಮದುವೆಯಾದಳಂ ಮನೆಗೆ ತರ್ಪಂತೆ, ರಾಶಿಯಾದ ಧಾನ್ಯಮನಳೆವಂತೆ, ಸಮೆದಾಭರಣಮಂ [1] ತುಡುವಂತೆ, ತಂದೆ ತೋಱಿದ ಬಯ್ಕೆಯನಗಳ್ವಂತೆ [ಬಂದ ನಿಧಾನಮಂ ಕೈಕೊಳ್ವಂತೆ] ಸಮ್ಯಕ್ತ್ವಂಬೆರಸು ಪಂಚಾಣುವ್ರತಮಂ ಕೈಕೊಂಡು; ಕೋಡಗಂ ತಂಬುಲಮಂ ತಿಂಬಂತೆ, ಮರುಳ್ ಸೀರೆಯನುಡುವಂತೆ, ಕಾಗೆ ಕೂೞಂ ತಿಂಬಂತೆ, ಕುರುಡಿ ಜೋಳವಂ ಕುಟ್ಟುವಂತೆ, ಪಸುಗೂಸು ಪಾಲ್ಗುಡಿವಂತೆ, ಪಲ್ಲಿಲ್ಲದೆಮ್ಮೆ ಪುಲ್ಲಂಮೇವಂತೆ, ಮುದುಕಂ ಪೂಗಟ್ಟುವಂತೆ, ಜ್ವರಬಂದವನುಣ್ಬಂತೆ, ಮೋಟಂ ನೀರ್ಗುಡಿವಂತೆ, ಹಂಚುಹಱಿಮಾಡಿ ಕಿಡಿಸದೆ ಲೇಸಾಗಿ ನಡಪಿ; ವ್ಯವಹಾರಕ್ಕೆ ಪೋದನೆಡೆಯ ದುಃಖಮಂ ಸೈರಿಸಿ ಲಾಭಂಬೆರಸಿ ಮನೆಯಂ ಪುಗುವಂತೆ, ಷಟ್ಖಂಡಮಂ ಸಾಧಿಸಿದ ಚಕ್ರವರ್ತಿ ಗೆಲ್ಲಂ ಬೆರಸು ಪುರಮಂ ಪುಗುವಂತೆ, ಕೆಯ್ಯಂ ಕಾದು ದುಃಖಬಟ್ಟೊಕ್ಕಲಿಗಂ ಧಾನ್ಯಂ ಬೆರಸೂರಂ ಪುಗುವಂತೆ, ಪಲಕಾಲಂ ನಿಧಾನಮಂ ಸಾಧಿಸಿದಾತಂ ನಿಧಿವೆರಸು ನೆಲೆಗೆ ಪೋಪಂತೆ, ಕೂಸುಕಾರಣಮಾಗಿ ಮಾವಂಗೆ ಬೆಸಕೆಯ್ದಾಳಯಂ ಮದುವೆಯಾಗಿ ಸುಖಮಿರ್ಪಂತೆ, ಸಿರಿಯುಳ್ಳ ತಂದೆಗೆಡಱದೆ ಮನದನ್ನನಾಗಿ ತೊೞ್ತುವೆಸಂಗೆಯ್ದ ಮಗಂ ತಂದೆಯ ಸಿರಿಗೊಡೆಯನಾಗಿರ್ಪಂತೆ ಕಡೆಯೊಳ್ ದೇವೇಂದ್ರಚಕ್ರವರ್ತಿಗಳ ಪದಮನೆಯ್ದಿ ಕ್ರಮದಿಂ ಮೋಕ್ಷಶ್ರೀಯೊಳ್ ಕೂಡಿ ಸುಖಮಿರ್ಪುದು ॥ ೪

ಎನಿತು ಪರಿಗ್ರಹದ ತೊಡ
ರ್ಪನಿತೆ ಮನೋದುಃಖಮೆಂಬುದಂ ತಾಂ ತನ್ನೊಳ್ ।
ನೆನೆದು ಪರಿಗ್ರಹಮಂ ತೊಱೆ
ವನೆ ದೇವಂ [2] ಮುಕ್ತಿವನಿತೆಗಾತನೆ ಕಾಂತಂ ॥ ೫೪

---

1 ಸಲುಗೆಯಾದಾಭರಣಮಂ (ಗ) 2 ತಂನನೆತೊಱೆವಂ (ಗ)

ಇನ್ನಾ ಪರಿಗ್ರಹದೊಳಾದ ಮಹಾಮಹಿಮೆಯೆಂತೆಂದೊಡೆ, [ಜಂಬೂದ್ವೀಪದ ಭರತಕ್ಷೇತ್ರದ ಕುರುಜಾಂಗಣವಿಷಯದ ಶ್ರಾವಂತಿಯೆಂಬ ಪುರಮಾಪುರಿಮನಾಳ್ವನುಪರಿಚರಮಹಾರಾಜನೆಂಬನಾತನ ಮನೋಹರಿಯರ್ ಪದ್ಮಾವತಿಯುಂ ಪ್ರಭಾವತಿಯುಂ ಸುಪ್ರಭೆಯುಂ ಕನಕಪ್ರಭೆಯುಂ] [1] ಮೆಂಬ ನಾಲ್ವರ್ ಪಟ್ಟಮಹಾದೇವಿಯರ್ ಮೊದಲಾಗೈನೂರ್ವರರಸಿಯರಿಂತು ॥ ೬

ಶತದಳನಯನೆ ಮನೋಭವ
ಲತಾಂಗಿ ಸಮ್ಯಕ್ತ್ವನಿಳಯೆ ಸೀತಾನಿಭೆ [2] ಸ।
ನ್ನುತರೂಪೆಯೆನಿಪ ಪದ್ಮಾ
ವತಿಯು ಮಗಂ ತಾನನಂತವೀರ್ಯಂ ಪೆಸರಿಂ ॥ ೭

ಆತಂ ಮೊದಲಾಗೈನೂರ್ವರ್ [ಕುಮಾರರುಂ ಮಕುಟಬದ್ಧರುಂ ವಿಳಾಸಿನೀಜನಮುಂಬೆರಸು ದೇವೇಂದ್ರನಂತೊಡ್ಡೋಲಗಂಗೊಟ್ಟು ರಸಗೀತಮುಮಂ ಪರಮಾಂಡಳಿಕರ ಪೆರ್ಗಡೆಗಳ ಮಾತುಗಳುಮಂ ಕೇಳುತ್ತುಂ ಕುಮಾರರ ವಿಳಾಸಿನೀಜನದ ಅರಸಿಯರ ರೂಪುಗಳಂ ನೋಡುತ್ತುಂ ಮಹಾವಿನೋದದಿಂದಿರ್ಪುದುಂ ॥ ೮

ಸುರಗಿಯು ಸಂದ ಸಂಪಗೆಯು ಪೊನ್ನೆಯು ಜಾದಿಯು ಚೆಲ್ವುವೆತ್ತ ಪಾ
ದರಿಯು ಸುಗಂಧಮಪ್ಪ ಕುಸುಮಾವಳಿಯಿಂ ನನೆಯಿಂ ಮುಗುಳ್ಗಳಿಂ
ಕರಮತಿಶೋಭೆಯಿಂ ಸಮೆದ ಹಾರಮುಮಂ ಸಹಕಾರಪಲ್ಲವೋ
ತ್ಕರಮುಮನೊಪ್ಪುವೆತ್ತೆಳೆಯ ಕಾಯ್ಗಳ ಗೊಂಚಲುಮಂ ಸರಾಗದಿಂ ॥

ವನಪಾಲಕಂ ತಂದೊಡ್ಡೋಲಗಂಗೊಟ್ಟಿರ್ದುಪರಿಚರಮಹಾರಾಜಂಗೆ ಕೊಟ್ಟು ಮೆಯ್ಯಿಕ್ಕಿ ಪೊಡೆಮಟ್ಟು ದೂರದೊಳ್ ನಿಂದು ಕೈಗಳಂ ಮುಗಿದು ದೇವಾ ವಸಂತದ ಪುಗಿಲೊಳ್ ವನಂ ವನದೇವಿಯ

1 ಕಣಾದವಿಷಯದ ಸಾವಂತಿಯೆಂಬ ಪುರಮನಾಳ್ವನುಪಚರಿತಮಹಾರಾಜನೆಂಬನಾತಂಗೆ ಪದ್ಮಾವತಿಯುಮಮಿತಮತಿಯುಂ ಸುವ್ರತಿಯುಂ ಪ್ರಭಾವತಿಯುಂ(ಗ)

2 ಶೀಲಾಂಬುಧಿ (ಗ)

ಜವ್ವನದಂತೆ ರಯ್ಯಮಾಗಿರ್ದಪುದದಂ ದೇವರ್ಗೆ ಬಿನ್ನಪಂಗೆಯ್ಯಲೆಂ
ದು ಬಂದೆನವಧರಿಸುವುದೆಂದುಸಿರದಿರ್ಪುದುಮರಸನಾತಂಗಂಗಚಿತ್ತಮಂ
ಕೊಟ್ಟು ನಾಳೆ ಸಕಲಜನಂಬೆರಸು ವನಕ್ರೀಡೆಗೆ ಬಂದಪೆಂ ವನಮಂ
ಲೇಸುಮಾಡುವುದೆಂದು ಪೋಗಲ್ವೇೞ್ದು ಕುಮಾರರ್ಗಮರಸಿಯರ್ಗಂ
ವನಪಾಲಕಂ ಕೊಟ್ಟ ಕುಸುಮದ ತೊಡವುಗಳುಮಂ ಪಿರಿಯರ್ಕಿಱಿ
ಯರಱಿದು ಕೊಟ್ಟು ಮಱುದಿವಸಂ ॥ ೧೦

ಶರನಿಧಿಯಂತೆ ತೂರ್ಯರವಮುಣ್ಮೆ ಮಹೀಶ್ವರನಂದನರ್ ಮದ
ದ್ವಿರದಘಟಾಳಿಯಿಂ ಮದಗಜೇಂದ್ರಮನೇಱಿ ಮನೋಜನಂದದಿಂ
ಬರೆ ತನಯರ್ ಮನೋಹರಮದದ್ವಿರದಂಗಳನೇಱಿ ಸುತ್ತಲುಂ
ಬರೆ ಗಣಿಕಾಜನಂ ನೆರೆದು ಚಾಮರಮಿಕ್ಕೆ ವಿಭೂತಿಯಿಂ ನೃಪಂ ॥ ೧೧

ಪದ್ಮಾವತಿ ಮೊದಲಾದೈನೂರ್ವರರಸಿಯರುಂ ವಿಳಾಸಿನೀಜನ
ಮುಂಬೆರಸು ಪೊಱಮಟ್ಟು ವನಕ್ಕೆ ಬಂದು ವನದ ಚೆಲ್ವಿಂಗೆ ಸಂತೋ
ಷಂಬಟ್ಟು ಪಿರಿದುಬೇಗಂ ವನಕ್ರೀಡೆಯನಾಡಿ ಬೞಲ್ದು ಮತ್ತಿನರಸಿಯ
ರುಮಂ ರಾಜಕುಮಾರರುಮಂ ದೂರದೊಳಿರವೇೞ್ದು ಮನೋನಯನ
ವಲ್ಲಭೆಯುಪ್ಪ ಪದ್ಮಾವತಿಯುಮಮಿತಮತಿಯುಂ ಸುಪ್ರಭೆಯುಂ ಪ್ರಭಾ
ವತಿಯುಮೆಂಬ ನಾಲ್ವರ್ ಪಟ್ಟದರಸಿಯರುಂ ತಾನುಂ ಚಂದನಕರ್ಪೂರ
ಕಾಳಾಗರುಕುಂಕುಮಮಂ ಮೊದಲಾದನೇಕದ್ರವ್ಯಂಗಳಂ ಮುನ್ನಮೆ ವನ
ಪಾಲಕಂ ಕದಡಿದ ಸುದರ್ಶನಮೆಂಬ ಕೊಳಕ್ಕೆ ಬಂದು ॥ ೧೨

ಜಲವಿಹಗಂಗಳಂ ಸುೞಿವ ಹಂಸೆಗಳಂದೆಸೆದಿರ್ದ ನಯ್ದಿಲಿಂ
ಜಲದನಿಕಾಯದಿಂ ನೆಗೞ್ದ ನೀಳಸರೋರುಹದೊಪ್ಪದಿಂ ಮಹೋ
ಜ್ಜ್ವಲತರಮಪ್ಪ ರತ್ನನಿಕುರಂಬದ ಕಾಂತಿಗಳೆತ್ತಲುಂ ತಳ
ತ್ತಳಸುವ ಕೋಂಟೆಯಿಂ ಬಳಸಿಯುಂ ನೆಱೆ ಪತ್ತಿದ ಸಲ್ಲತಾಳಿಯಿಂ॥೧೩

ಒಪ್ಪುವ ಕೊಳನಂ ನೀಡುಂ ನೋಡಿ ಸರೋವರದ ಚೆಲ್ವಂ ಮನ
ದೆಗೊಂಡು ರತ್ನಮಯಮಪ್ಪ ಸೋಪಾನಂಗಳಂ ಮೆಟ್ಟಿ ಮೆಲ್ಲಮೆಲ್ಲ
ನಿೞಿದು ನೀರಂ ಪೊಕ್ಕು ॥ ೧೪

ನರಪತಿ ಕೊಂಡು ಚೀರ್ಕೊಳವೆಯುಂ ಬಿಡದೊಯ್ಯನೆ ಕೂರ್ವೆಯಿಂ ಮನೋ
ಹರಿಯರ ಮೇಲೆ ಚಿಮ್ಮಿ ನಯದಿಂದೆ ತದಂಬು ಮೃದುತ್ವದಿಂ ತಳೋ
ದರಿಯರ ಮೆಯ್ಯ ಕುಂಕುಮದೊಳೊಂದಿ ನಿಮಿರ್ಕೆಯಿನೊಪ್ಪಿ ಮಾಣಿಕಾ
ಭರಣದ ಭಂಗಿಯಂ ನೆಱೆಯೆ ತಾಳ್ದಿದುದದ್ಭುತಮೆಂಬಿನಂ ಜನಂ ॥ ೧೫

ಅರಸಿಯುರಾತ್ಮವಲ್ಲಭನಮೇಲೆ ತುಳುಂಕೆ ತದಂಬು ಮೇದಿನೀ
ಶ್ವರನತಪಾದಪಂಕಜನ ಪೂಸಿದ ಚಂದನಪಂಕದೊಳ್ ಸವಿ
ಸ್ತರಮೊಡಗೂಡಿ ಚೆಲ್ವುವಡೆದೊಪ್ಪುವುದದ್ಭುತಮಾಗೆ ಮೌಕ್ತಿಕಾ
ಭರಣಮಿದೆಂದು ಬೆಬ್ಬಳಿಸಿ ನೋಡುವ ನೋಟಕರುಂ ನರೇಂದ್ರರುಂ ॥

ಸುರಗಿಯ ಕೇದ ಮಲ್ಲಿಗೆಯ ಜಾದಿಯ ಮೊಲ್ಲೆಯ ಬೆಳ್ಪಿನಿಂ ಮನೋ
ಹರಮೆನಿಸಿರ್ದ ಕುಂಕುಮರಜಂಗಳ ಶೋಭನಮಪ್ಪ ಕೆಂಪಿನಿಂ
ಸುರುಚಿರಮಪ್ಪ ಕಸ್ತುರಿಯೊಳೊಂದಿ ವಿರಾಜಿಪ ಕರ್ಪಿನಿಂ ಸರೋ
ವರಮೆಸೆದಿರ್ದುದಂಗಜನ ಲೀಲೆಯ ಚಿತ್ರಪಟಂಬೊಲೊಪ್ಪದಿಂ ॥ ೧೭

ಅರಸಂ ಸರಸಿರುಹಾನನೆ
ಯುರಮೇಲೆ ತುಳುಂಕೆ ರಾಗದಿಂದಂ ನೋಡು ।
ತ್ತಿರೆ ಬಿಡದೆ ವಾರಿಜಾನನೆ
ಯುರುಮರಸನಮೇಲೆ ಸೂಸೆ ಜಲಮಂ ನಗುತುಂ ॥ ೧೮

ಅಂತು ರಾಗರಸಮೊದವೆ ಚಿತ್ತಾಹ್ಲಾದದಿಂ ಮೆಯ್ಯಱಿಯದೆ ಜಲಕ್ರೀಡೆಯನಾಡುತ್ತುಮಿರ್ಪನ್ನೆಗಂ ವಿಜಯಾರ್ಧಪರ್ವತದುತ್ತರಶ್ರೇಣಿಯೊಳಳಕಾಪುರಮೆಂಬುದುಂಟಾಪೊೞಲನಾಳ್ವಂ ಖೇಚರರಾಜಂ ವಜ್ರದಾಡನೆಂಬಂ ತನ್ನ ಪ್ರಾಣವಲ್ಲಭೆಯಪ್ಪ ಮದನವೇಗೆಯೆಂಬ ಪಟ್ಟದರಸಿವೆರಸಿ ಭೌಮವಿಹಾರಾರ್ಥಂ ವಿಮಾನಾರೂಢನಾಗಿ ದಕ್ಷಿಣಾಶಾಭಾಗಕ್ಕೆ ಬರುತ್ತಿರ್ಪಲ್ಲಿ ಪ್ರಾಣೇಶ್ವರಿಯರೊಳ್ ಕೂಡಿ ಜಲಕ್ರೀಡೆಯನಾಡುವುಪರಿಚರಮಹಾರಾಜನುಮಂ ಮುಂದಿರ್ದ ನಾಲ್ವರ್ ಮಹಾದೇವಿಯರುಮಂ

ನೆರೆದಿರ್ದಂತಃಪುರಪುರಂಧ್ರಿಯರುಮಂ ಬಳಸಿ ಸಂದಣಿಸಿರ್ದ ರಾಜಕುಮಾರರುಮಂ ಕಂಡತಿ-ವಟ್ಟು ಪೋಗದೆ ನೋಡುತ್ತಿರ್ಪುದುಂ ಮದನವೇಗೆಯಿಂತೆಂದಳ್] [1] ॥ ೧೯

ಈತರಳಾಯತಾಕ್ಷಿಯರಿನೀ ನೆರೆದಿರ್ದ ಕುಮಾರರಿಂ ಮಹಾ
ಖ್ಯಾತಿಯನುಳ್ಳ ಭೂಪನಿಕುರಂಬದಿನೀನಿಹಯಕೋಟಿಯಿಂ ಕರಿ
ವ್ರಾತದಿನೀವಿಳಾಸದ ವಿಳಾಸಿನಿಯರ್ಕಳನೀಭಟಾಳಿಯಿಂ
ದೀತನ ರಾಜ್ಯಲೀಲೆ ಸುರರಾಜನ ಲೀಲೆವೊಲೊಪ್ಪಿ ತೋಱುಗುಂ ॥ ೨೦

ಎಂದಂಗಾರ[ಕ]ವಾರದ ಪೆಸರ್ ಮಂಗಳವಾರಮೆಂಬಂತೆ ಬಱಿದೆ ಕಾಗೆಗಳಂತಂತರಿಕ್ಷದೊಳ್ ಪಾಱುವ ನಮಗೆ ವಿದ್ಯಾಧರರೆಂಬೊಣ ಪೆಸರಲ್ಲದೀಮಹೀನಾಥನಂತೆ ವಿಭವಾನ್ವಿತರಲ್ಲರೆಂಬುದುಂ [ನಲ್ಲಳ ಮಾತಂ ಕೇಳ್ದು ವಜ್ರದಾಡನುಪರಿಚರಮಹಾರಾಜನಮೇಲೆ ಕೋಪಂ ಪುಟ್ಟಿ ಮದನವೇಗೆಯನಳಕಾಪುರಕ್ಕೆ ಕಳಿಪಿ ಮಗುಳ್ದು ಬಂದು] [2] ॥ ೨೧

ಪಿರಿದಪ್ಪಱಿಯಂ ಖಚರೇ
ಶ್ವರನೊವರ್ಗದಲೆತ್ತಿ ತಂದು ಮುನಿಸಿಂ ಪದ್ಮಾ |
ಕರಮನಱಲೊದವೆ ಪರಿಜನ
ಮಿರಿದಾಯ್ತೆಂದೊಡನೆ ಮುಚ್ಚಿ ಪೋಪುದುಮಾಗಳ್ ॥ ೨೨

[ಜನಪನುಮರಸಿಯರುಂ ಭೋಂ
ಕೆನೆ ಪಾಸಱೆ ಕೊಳದಮೇಲೆ ಕವಿದಿರೆ ಪೊಱಗ |

---

1 ಕುಮಾರರ್ವೆರಸು ಸುಖದಿನಿರ್ಪುದುಪರಿಚರಿತಮಹಾರಾಜಂ ರಾಜ್ಯಂಗೆಯ್ಯುತ್ತಮಿರ್ದೊಂದುದಿವಸಂ ಸುದರ್ಶನವೆಂಬ ಸರೋವರದೊಳ್ ನಾಲ್ವರರಸಿಯರುಂ ತಾನುಂ ಜಲಕ್ರೀಡೆಯನಾಡುತಿಪ್ಪನ್ನೆಗಂ ವಜ್ರಕುಮಾರನೆಂಬ ವಿದ್ಯಾಧರಂ ಮದನವೇಗೆಯೆಂಬ ತನ್ನ ಪ್ರಾಣವಲ್ಲಭೆವೆರಸು ಭೌಮವಿಹಾರಾರ್ಥಮಾಕಾಶದೊಳ್ ವಿಮಾನಾರೂಢನಾಗಿ ಬರುತ್ತಿರ್ಪಲ್ಲಿ ಮದನವೇಗೆ ಪ್ರಾಣೇಶ್ವರಿಯರೊಳ್ ಕೂಡಿ ಜಲಕ್ರೀಡೆಯನಾಡುತ್ತಿಪ್ಪುಪರಿಚರಿತಮಹಾರಾಜನಂ ಕಂಡು ತಲೆಯಂ ತೂಗಿ ವಜ್ರದಾಡನ ಮೊಗವಂ ನೋಡಿ (ಗ) 2 ಮುನಿದು (ಗ)

ಣ್ಗೆನಸುಂ ಪೊಱಮಡಲಱಿಯದೆ
ಘನವಪ್ಪವಿಗೆಯು ಕೀರ್ತಿನಂತೊಳಗಿರ್ದರ್ ॥ ೭೩

ತಡೆಯದೆ ಮೇಲೆತ್ತಲ್ ಬ
ಲ್ದಡಿಗರ್ ಬಲದಿಂದೆ ಕೆಡೆಯೆ ನೂಂಕಲುಮೆಂತುಂ ।
ಗಡ ಬಾರದೆನಿಪ ಬೆಟ್ಟಂ
ಗಡಹಡಿಸದೆ ನೋಡಿ ನಾಲ್ವರುಂ ಕಾಮಿನಿಯರ್] [1] ॥ ೭೪

ಇದು ಕರ್ಮದೇಷ್ಟೆಯಿಂದಾ
ಯ್ತಿದಕ್ಕೆ ನಾವಲಸಿ ಮಱುಗಿ ಮನದೞಲಿಂದಂ ।
ಕುದಿದೊಡೆ ಪೋಕುಮೆ ಪೋಗದು
ಬಿದಿ ಬರೆದಕ್ಕರಮನೂರಸಿ ಕಳೆದವರೊಳರೇ ॥ ೭೫

ಪಾಪೋದಯದಿಂ ಪೊರ್ದುಗು
ಮೇ ಪಡೆಮಾತಧಿಕದುಃಖಮುಂ ಸಾವುಗಳುಂ ।
ಪೋಪುವೆ ಪೋಗವು ಕೆಮ್ಮನೆ
ಚಾಪಲಮನರಾಗಿ ಮಱುಗಲಕ್ಕುಮೆ ಭವ್ಯರ್ ॥ ೭೬

[ಈಗಳನಾಯ್ತೊ ಸುಖಮೆಂ
ಬೀಗರ್ವಂ ಬೇಡ ತೀವ್ರಕರ್ಮೋದಯದಿಂ ।
ದಾಗದೆ ಪೋಕುಂ ಚಿಂತೆಯು
ನಾಗಳ ಪುಟ್ಟಿಸುಗುಮಘಮನಾರ್ಜಿಸುವರ ॥ ೭೭

ತನಯರುಮಯ್ಯನುಮಜ್ಜನು
ಮನುಜರುಮತಿಮಿತ್ರರಪ್ಪರುಂ ಪತಿಯುಂ ಕಾಂ ।
ಚನಮುಂ ಮನೆಯುಂ ನಿಕ್ಕುವ
ಮೆನಗೆಂದುಂ ತಿಬ್ಬಮೆಂದು ನಲಿವನೆ ಗಾಂಪಂ] ॥ ೭೮

---

1 ಅದಂ ಅರಸಿಯರ್ ಕಂಡು (ಗ)

ಮಱುಗುವುದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ಸೇದೆಗೆ
ಟ್ಟೞಿಯದೆ ಬೇವುದೇಕೆ ಮನದೊಳ್ ಕಡುಗುಂದುವುದೇಕೆ ಚಿತ್ತದೊಳ್
ಮಱುಗದೆ ನೊಂದು ಚಿಂತಿಸದೆ ನಾಡೆ ಪಲುಂಬದೆ ಮತ್ತೆ ಸೇದೆಗೆ
ಟ್ಟೞಿಯದೆ ಬೇಯದಾತ್ಮಹಿತಮಂ ನೆಱೆ ಮಾಡುಗೆ ಬುದ್ಧಿಯುಳ್ಳವರ್ ॥

ಎಂದು ತಮ್ಮೊಳೋರೊರ್ವರ್ಗೆ ಧರ್ಮಶ್ರವಣಂಗೆಯ್ದು ಶುದ್ಧ ಮನರಾಗಿ [ನಮ್ಮಂ ಪೊರ್ದಿದರಸನ ಮನಮುಂ ಸುಖಮಪ್ಪಂತು ಮಾಡುವೆವೆಂದು ರಾಜ್ಯಾಭಿಲಾಷಾಚಿತ್ತನುಂ, ಅಧರ್ಮಮನನುಂ ಸ್ತ್ರೀಲಂಪಟನುಂ ಗದ್ಗದಕಂಠನುಂ ವಿಹ್ವಲೀಭೂತನುಂ ಮಹಾಭಯಸ್ಥನುಂ] ಮರಣಭೀರುವುಮಾಗಿರ್ದ ಪರಿಚರಮಹಾರಾಜಂಗಭಿಮುಖರಾಗಿ ಧರ್ಮಮನಿಂತೆಂದು ಪೇೞ್ದರ್ ॥ ೩೦

ಸಾವಾದುದೆಂದು ಬೆಚ್ಚದೆ
ಕಾವವರಾರೆನ್ನನೆಂದು ಜಱಿಯದೆ ಮನದೊಳ್ ।
ನೋವಿಂಗೇಗುವೆನೆನ್ನದೆ
ಭಾವಿಸು ಜಿನಪದಮನನ್ಯರಂ ಭಾವಿಸದಿರ್ ॥ ೩೧

[ಮುನ್ನಿನ ಸಿರಿಯುಂ ಮಹಿಮೆಯು
ನುನ್ನತಿಯುಂ ಗಜಮನಶ್ವಮುಂ ನಂದನರಂ ।
ಭಿನ್ನಾಂಬುಜವದನೆಯರಂ
ನೀನ್ನೆನೆಯದೆ ದೇವ ನೆನೆ ಜಿನೇಶ್ವರಪದಮಂ] ॥ ೩೨

ಏನಾನುಮ ನೆನೆದಾರ್ತ
ಧ್ಯಾನದಿನೆಲೆ ಸತ್ತು ತಿರಿಕರೊಳ್ ತಿರಿಯದೆ ಸ ।
ಜ್ಜ್ಞಾನಾಂಭೋಧಿಯನಮೃತಸು
ಖಾನಂದನ ದಿವ್ಯಪಾದಮಂ ನೆನೆ ಮನದೊಳ್ ॥ ೩೩

[ಬಿಡು ರಾಜ್ಯದ ಮೋಹಮನೆಡೆ
ಯುಡುಗದೆ ನೆನೆ ಜೈನಧರ್ಮಮಂ ಕಿಡುವ ಪರಿ ।

ಗ್ರಹಯುಗವಂ ಪಿಡಿಯದೆ ಬಿಡು
ಪಡಿಮಾತೇಂ ಬಿಟ್ಟೊಡೆಯ್ದುವೈ ಶುಭಗತಿಯಂ] ॥ ೩೪

ಮತ್ತಂ [ಪರಿಗ್ರಹದ] ಮೋಹದಿಂ ಸಂಸಾರದೊಳ್ ತಿಱ್ಱನೆ ತಿರಿದು ದೆಸೆಗೆಟ್ಟು ಮುಳುಗಿದ ಪಟಹಸ್ತನ ಕಡಾರಪಿಂಗಳನ ಪಿಣ್ಯಾಕ[1] ಗಂಧನ ದಂಡಕಮಹಾರಾಜನ ಬ್ರಹ್ಮದತ್ತನಂತೆ ಮಹಾದುಃಖಕ್ಕೊಳಗಾಗದೆ ಬಾಹ್ಯಾಭ್ಯಂತರ [ಪರಿಗ್ರಹ]ಂಗಳಂ ಬಿಟ್ಟೇಕಚಿತ್ತದಿಂ ಜಿನಪಾದ ಪಲ್ಲವಂಗಳಂ ನೆನೆಯುತ್ತಿರ್ಪುದೆಂದು ಪೇೞ್ದು ॥ ೩೫

ಎನಿಸುಪರಿಗ್ರಹಭರಮುಮಂ
ಟನಿತುಮನಿಂಬಾಗೆ ಬಿಟ್ಟು ನಿರ್ಮಲನಂ ದೇ ।
ವನಿಕಾಯವಂದ್ಯನಂ ಮ
ತ್ತೆನಿಸದೆ ಜಿನನಂ ಸುಚಿತ್ತದಿಂ ನೆನೆಯುತ್ತಂ ॥ ೩೬

ಮುಡಿಪಿ ಸೌಧರ್ಮಕಲ್ಪದೊಳ್ ಸ್ವಸ್ತಿಕಾವರ್ತಮೆಂಬ ವಿಮಾನದೊಳೊಂದುಸಾಗರೋಪಮಾಯುಷ್ಯಮನೊಡೆಯ ಆನಂದನುಂ ಕಾಂತನುಂ ಅಮಿತಕಾಂತನುಂ ಸುಕಾಂತನು[2]ಮೆಂಬ ಸಾಮಾನಿಕದೇವರಾಗಿ ಪುಟ್ಟಿದರಿತ್ತಲ್ ಉಪರಿಚರಮಹಾರಾಜಂ ॥ ೩೭

[ಕರಿತುರಗಂ ಪದಾತಿ ರಥಸಂತತಿ ಸಂತತಮೊಪ್ಪೆ ಸುತ್ತಲುಂ
ಬರೆ ತರಳಾಯತಾಕ್ಷಿಯರನಂಗಲತಾಂಗಿಯರಿಕ್ಕೆ ಕೂರ್ತು ಚಾ
ಮರಮನಗುರ್ವಿನಿಂ ದಿವಿಜರಾಜನವೋಲ್ ನೆಱೆ ರಾಜವೀಧಿಯೊಳ್
ಕರಮನುರಾಗದಿಂದೆಸೆದು ಬರ್ಪುದನಾಂ ನೆನದೆಂತು ಸೈರಿಪೆಂ ॥ ೩೮

ನಿಕ್ಕುವಮಿಂದ್ರನ ಭಂಡಾ
ರಕ್ಕಂ ಖಚರಾಧಿಪತಿಯ ಪೆಂಪಿನ ಭಂಡಾ ।
ರಕ್ಕಂ ನೋಡೆನ್ನರ್ಥಂ
ಮೊಕ್ಕಳಮದನೆಂತು ಬಿಸುಟು ಪೋಪೆನೊ ಬಿಡಿಯೇ ॥ ೩೯

1 ಪಿಂಗಳಕ (ಕ. ಬ.) 2 ಅತಿಕಾಂತನುಂ ಸುರಕಾಂತನುಂ (ಗ)

ಧರಣೇಂದ್ರನ ಸತಿಯರ್ಗಂ
ಸುರರಾಜನ ಪೆಂಡವಾಸದೊಳ್ವೆಂಡಿರ್ಗಂ ।
ಕರಮೆನ್ನರಸಿಯರಯ್ನೂ
ರ್ವರುಮಗ್ಗಳಮವರನೆಂತು ಬಿಸುಟಾನಿರ್ಪೆಂ ॥ ೪೦

ಪನ್ನಗರಾಜನ ಸಿರಿಗಂ
ಸನ್ನುತಸುರಪತಿಯ ಪಿರಿಯ ಸಿರಿಗಂ ಬಗೆವಂ ।
ದೆನ್ನ ಸಿರಿ ಮಿಗಿಲಿದಂ ಬಿ
ಟ್ಟೆನ್ನೆಲ್ಲಿಗಮಾಯ್ದುಮಗನೆ (?) ನಾಂ ಪೋದಪೆನೋ ॥ ೪೧

ಎಂದು] ಪರಿಗ್ರಹಕಾಂಕ್ಷೆಯಿಂ ಕುದಿವ ನೀರಂತೆ ಮಱುಗಿ ತಱಿದಿಕ್ಕಿದ ತಳಿರಂಕೆ ಕಂದಿ ಮಾಗಿಯ ತೊಱೆಯಂತೆ ಕುಂದಿ ಪಿಡಿವೆತ್ತ ಪಾವಿನಂತೆ ಸುಯ್ದು ಬಿದಿಯಂ ಬೈದಾರ್ತಧ್ಯಾನದಿಂ ಸತ್ತು ಮನೋಹರಮೆಂಬುದ್ಯಾನದೊಳ್ ಸರ್ವಾಶ್ರಯಮೆಂಬ ಗುಹೆಯೊಳ್ ಪೆರ್ಬಾವಾಗಿ ಪುಟ್ಟಿದನಿತ್ತಲ್ ಅನಂತವೀರ್ಯಂ ಮೊದಲಾದೈನೂರ್ವರ್ ಕುಮಾರರುಮರಸಿಯರುಂ ಸಾಮಂತರುಂ ಪರಿಜನಮುಮರಸಂಗೆ [1] ತೊಟ್ಟನೆ ಕೇಡಾದುದಕ್ಕೆ ॥ ೪೨

[ಚಿಂತಿಸಿ ದುಃಖಾನಳನಿಂ
ಸಂತತಮೆರ್ದೆಯುರಿಯೆ ಮಱುಕದಿಂ ಮತಿಗೆಟ್ಟೋ ।
ರಂತೆ ನೆನೆನೆನೆದು ಧರಣೀ
ಕಾಂತನ ಕಾಂತೆಯರ ಗುಣಮನಿರುಳುಂ ಪಗಲುಂ] [2] ॥ ೪೩

ಪಿರಿದು ವಿಭೂತಿಯಿಂ ಮದಗಜೇಂದ್ರಮನೇಱಿ ಸಮಸ್ತಭೂಮಿಪರ್
ವೆರಸು ಸಮಸ್ತಕಾಮಿನಿಯರುಂ ಪರಿವಾರಮುಮಾತ್ಮಜಾತರುಂ
ಬೆರಸು ವನಕ್ಕೆ ರಾಗದಿನುದಾರ [3] ಗುಣಾಂಬುಧಿ ಪೋಪುದೇಕೆ ನಿ
ಷ್ಠುರದಪಮೃತ್ಯು ಬಂದ ತಸಿ ಮುಟ್ಟುವುದೇಕಿದುಚೋದ್ಯಮಲ್ಲವೇ ॥ ೪೪

---

1 ಅರಸಂಗೆ ಅರಸಿಯರ್ಗೆ (ಗ) 2 ಬಿಱಿಗಾಗಿ (ಗ)
3 ಪೆರ್ಚಿದನುದಾರ (ಕ. ಖ.)

[ಸಿರಿಯುಂ ಖೇಚರರಾಜರ್
ಪುರುಡಿಸಿ ತಂದಿಕ್ಕಿ ಪೋದರೋ ದೂರ್ತಿಗಂ ವ್ಯಂ ।
ತರದೇವರಿಕ್ಕಿ ಪೋದರೊ
ಪರೀಕ್ಷಿಸಂದಿದು ಮಹಾದ್ಭುತಂ ಧಾರಿಣಿಯೊಳ್ ॥ ೪೫

ಎಂದು ಮಹೀನಾಥನ ಪದ್ಮಾವತಿಮೊದಲಾದ ನಾಲ್ವರರಸಿಯರ ಗುಣಮಂ ನೆನೆನೆನೆದು ಮಱುಗಿ ಕುದಿದು ಕೆಟ್ಟೆನೆಂದೊಳಱಿ ಮೊಯ್ಯಾಱಿಯುದಱಲ್ವನಂತವೀರ್ಯರ್ಗಂ ಮೊದಲಾದ ಕುಮಾರರಂ] [1] ಬುದ್ಧಿವಂತರ್ ಧರ್ಮಶ್ರವಣದಿಂ ಮೋಣಿಸಿ ದುಃಖಮನಾಱಿಸಿ ಮಱುದಿವಸಂ ॥ ೪೬.

ಮಂಗಳವಱೆ ಭೋರೆನೆ ವಾ
ರಾಂಗನೆಯರ್ ನೆರೆದು ಪಾಡೆ ಮಂಗಳಮಂ ಪು ।
ಣ್ಯಾಂಗನೆಯರಿಕ್ಕೆ ಸೇಸೆಯ
ನಂಗಜಸದೃಶಂಗನಂತವೀರ್ಯಂಗಾಗಳ್ ॥ ೪೭

[ನಲಿನಲಿದು ಮಕುಟಬದ್ಧರ್
ವಿಳಾಸದಿಂ ಕಟ್ಟೆ ಪಟ್ಟಮಂ ಜಿನಧರ್ಮಾ ।
ತ್ಪಲಚಂದ್ರನಾಗು ಮುನಿಜನ
ವಿಳಸಿತಪದಭಕ್ತನಾಗು ನೆಲನುಳ್ಳಿನೆಗಂ ॥ ೪೮

ಎಂದು ಪರಸಿ] [2] ಸಂತೋಷದಿಂದಿರೆ ಮಱುದಿವಸಂ ಸಾರಸ್ವತರೆಂಬಾಚಾರ್ಯರವಧಿಜ್ಞಾನಿಗಳಯ್ನೂರ್ವರ್ಮುನಿವರರ್ವೆರಸು ವಿಹಾರಿಸುತ್ತುಂ [ಶ್ರಾವಂತಿಪುರಕ್ಕೆ ಬಂದು ಮನೋಹರೋದ್ಯಾನದೊಳ್ ಲೇಸಪ್ಪ ಶಿಲಾತಳದಮೇಲೆ ಕುಳ್ಳಿರ್ದು ಪಂಥಾತಿಚಾರನೇಮಮಂ ಮಾಡುತ್ತಿರ್ಪುದುಮವರ ಬರವಂ ಋಷಿನಿವೇದಕನನಂತವೀರ್ಯಮಹಾರಾಜಂಗೆ ಬಿನ್ನಪಂಗೆಯ್ವುದುಂ ಅರಸನವರಿರ್ದದೆಸೆಯುತ್ತಲೇೞಡಿಯಂ ನಡೆದು ಪೊಡೆಮಟ್ಟು ಋಷಿನಿವೇದಕಂಗೆ ಮೆಚ್ಚುಗೊಟ್ಟು] [3] ॥ ೪೯

1 ಎಂದು ಮಱುಗುವನಂತವೀರ್ಯರ್ಗಂ ಮೊದಲಾದೆಲ್ಲರ್ಗಂ (ಗ)
2 ಅಂತು ಪಟ್ಟಮಂ ಕಟ್ಟೆ (ಗ)   3 ಅಲ್ಲಿಗೆ ಬರ್ಪುದುಂ (ಗ)

ಪಿರಿದುವಿಭೂತಿಯಿನರ್ಚನೆ
ವೆರಸು ಸಮಸ್ತಾವನೀಶ್ವರರ್ವೆರಸು ಮಹೀ ।
ಶ್ವರನರ್ತಿವೆರಸು ಯೋಗೀ
ಶ್ವರರಲ್ಲಿಗೆ ಬಂದು ಮುನಿಕದಂಬಮನಾಗಳ್ ॥ ೫೦

ಬಲವಂದು ಮೂಱುಸೂೞ್ನಿ
ರ್ಮಲನಂಘ್ರಿಯುನಷ್ಟವಿಧಸದರ್ಚನೆಯಿಂದಂ ।
ಜ್ಜ್ವಲಮನದಿಂದರ್ಚಿಸಿ ನಿ
ಶ್ಚಲಚಿತ್ತಂಗೆಱಗಿ ಭಕ್ತಿಪೂರ್ವಕದಿಂದಂ ॥ ೫೧

ವಂದಿಸಿ ನರೇಂದ್ರನಾದರ
ದಿಂದಂ ನಿರ್ಮಳರನುೞಿದ ಋಷಿಯರುಮಂ ಸಾ ।
ನಂದಮನಂ ಗುರುಪರಿವಿಡಿ
ಯಿಂದಂ ವಂದಿಸಿ ಮನೋನುರಾಗದಿನಾಗಳ್ ॥ ೫೨

ಮುನಿಪತಿಯ ಮುಂದೆ ಕುಳ್ಳಿ
ರ್ದನುಪಮಸದ್ಧರ್ಮಮಂ ಮನೋಭವರೂಪಂ ।
ಮನಮಾರೆ ಕಿಱಿದುಬೇಗಂ
ಜನನಾಥಂ ಕೇಳ್ದು ತಿಳಿದು ತದನಂತರದೊಳ್ ॥ ೫೩

ಎಮ್ಮ ಜನಕಂಗಂ ಜನನಿಯುರ್ಗಮಾಕಸ್ಮಿಕಮೆ ಕಾರಣಂ ಸಾವಾದುದೆಂತು ನಿಮ್ಮಡಿ ಬೆಸಸಮೆಂಬುದುಂ ಮುನೀಶ್ವರನವಧಿಲೋಚನದಿಂದಱಿದು [ವಜ್ರದಾಡನೆಂಬ ವಿದ್ಯಾಧರಂ ಭೌಮವಿಹಾರಾರ್ಥಂ ಮದನವೇಗೆಯೆಂಬ ತನ್ನ ಪೆಂಡತಿವೆರಸು ಬರುತ್ತುಂ ಜಲಕ್ರೀಡೆಯನಾಡುತ್ತುಮಿರ್ಪೀನಿಮ್ಮಯ್ಯನಂ ನೋಡುತ್ತುಮಿರ್ಪುದುಂ ಮದನವೇಗೆ ಮಹೀನಾಥರೊಳೀತನ ರಾಜ್ಯಮೆ ಸಫಲಮೆಂದು ಪೊಗೞ್ವುದುಮಾಮಾತಿಂಗೆ ವಜ್ರದಾಡಂ ಪುರುಡಿಸಿ ಮದನವೇಗೆಯುನಳಕಾಪುರಕ್ಕೆ ಕಳಿಪಿ ಪಿರಿದಪ್ಪ ಶಿಲೆಯುಂ ಕೊಂಡು ಬಂದು ನಿಚ್ಛಿದ್ರಮಾಗಿ ಮುಚ್ಚಿ ಪೋದನವನಿಂ ಸಾವಾಯ್ತೆಂದು ಪೇೞ್ವುದುಂ ॥ ೫೪

ನರನಾಥನಱಿದು ಮತ್ತಂ
ವರಮುನಿನಾಥಂಗೆ ಭಕ್ತಿಯಿಂ ಪೊಡೆಮಟ್ಟಾ ।
ದರದಿಂ ನಿಮ್ಮಡಿ ಭೂಮೀ
ಶ್ವರನುಂ ಜನನಿಯರುಮೆಲ್ಲಿ ಪುಟ್ಟಿರ್ದಪರೋ ॥ ೫೫

ಬೆಸಸುವುದದನೆನೆ ಕೀರ್ತಿ
ಪ್ರಸರಂ ಜೈನಾಂಗಮಾಂಬುನಿಧಿಶಿಶಿರಕರಂ ।
ವಸುಧಾಧಿಪತಿಗೆ ನೆಱೆ ಸಂ
ತಸಮಪ್ಪಂತಾಗೆ ಪೇೞಲುದ್ಯತನಾದಂ ॥ ೫೬

ನಿನ್ನ ಜನನಿಯರ್ ಪದ್ಮಾವತಿಮೊದಲಾದ ನಾಲ್ವರುಂ ಮೇಲೆ ಭಯಂಕರಮಾಗಿರ್ದ ಶಿಲೆಗಂಜದೆ ಪ್ರಾಣಭಯಮಾಯ್ತೆಂದು ಮನದೊಳ್ ನಡುಗದೆ ಚಿತ್ತದೊಳ್ ಕೊಂಕದೆ] [1] ॥ ೫೭

ತನುವಂ ಮತ್ತಿಹಲೋಕದಲ್ಪಸುಖಮಂ ದಿವ್ಯಾಂಬರಾನೀಕಮಂ
ಧನಮಂ ಭೂಷಣಮಂ ಸುಭೋಜನಮುಮಾತ್ಮಾಧೀಶನಂ ಕೂರ್ಪನಂ
ದನರಂ ಚಿಂತಿಸಿ ಕಂದಿ ಕುಂದಿರದೆ ಬಿಟ್ಟಾನಂದದಿಂ ಶುದ್ಧಭಾ
ವನೆಯಿಂ ನಿರ್ಮಲಚಿತ್ತದಿಂ ಮುಡಿಪಿ ತತ್ಸೌಧರ್ಮಸತ್ಕಲ್ಪದೊಳ್ ॥ ೫೮

[ಸ್ವಸ್ತಿಕಾವರ್ತಮೆಂಬ ವಿಮಾನದೊಳ್] ಸಾಮಾನಿಕದೇವರಾಗಿ ಪುಟ್ಟಿದರ್ ನಿಮ್ಮಯ್ಯಂ [ರಾಜ್ಯವಿಭೂತಿಯುಂ ಮಕ್ಕಳ ಭಂಡಾರದ ಪೆಂಡಿರ ಸ್ನೇಹಮುಂ ನಿನ್ನ ಚಾಗದ ಭೋಗದ ಪರಿಗ್ರಹದ ನಾಡಿನ ಬೀಡಿನ ಚಾತುರಂಗಬಲದ ರಾಜ್ಯಭರದ ಮೋಹೋದಯದಿಂ]ದಾರ್ತಧ್ಯಾನಪರನಾಗಿ ಸತ್ತು ಮಱುಕದಿಂ ಬಂದೀವನದೊಳ್ ಸರ್ವಾಶ್ರಯಮೆಂಬ ಗುಹೆಯೊಳ್ ಪೆರ್ಬಾವಾಗಿ ಪುಟ್ಟಿರ್ದಪನೆಂಬುದುಂ ಜನನಿಯರ್ ಪರಿಗ್ರಹನಿವೃತ್ತಿಯಿಂದಾದ [ಶುಭಪರಿಣಾಮದಿಂ ಪಡೆದ] ದೇವಗತಿಯುಮಂ, ಜನಕಂ ಪರಿಗ್ರಹದಿಂದಾದ [ದುಷ್ಪರಿಣಾಮದಿಂ ಪಡೆದ ತಿರಿಕ] ಗತಿಯುಮಂ ಕಂಡು ಬೆಱಗಾಗಿ ॥ ೫೯

---

[1] ಅವರ ಮರಣದೊಳಾದ ವೃತ್ತಾಂತಮೆಲ್ಲಮಂ ಪೇಳ್ವುದುಂ ಅಱಿದವರೆಲ್ಲಿ ಪುಟ್ಟಿದರೆಲ್ಲಿರ್ದಪರೆನೆ ನಿನ್ನ ಜನನಿಯರ್ ನಾಲ್ವರುಂ (ಗ)

ಒಱದೆ ಪರಿಗ್ರಹಕ್ಕೆ ಅಗಿ ದುಷ್ಪರಿಣಾಮದಿನೇಷ್ಟೆಗೆಟ್ಟು ಪಾಂ
ಗಱಯದೆ ಸೌಖ್ಯಭೂಮಿರುಹಮಂ ಕಡಿದಕ್ಷಯಲಕ್ಷ್ಮಿಯಂ ಮನಂ
ಮುಱಯಿಸಿ ಪುಟ್ಟಿ ನಾಡೆ ತಿರಿಕಂಗಳೊಳಕ್ಕಟ ತೀವ್ರದುಃಖದಿಂ
ಮಱುಗುತುಮಿರ್ಪ ಕಾರ್ಯಮನೆ ಚಿಂತಿಸುತಿರ್ಪವು ದುಃಖಜೀವಿಗಳ್[1]||

ತನುವುಂ ಗೇಹಮುಮರ್ಥಮುಂ[2] ಕರಿಗಳುಂ ಜಾತ್ಯಶ್ವಮುಂ ಸಂದ ನಂ
ದನರುಂ ಮಿತ್ರರುಮಯ್ಯನುಂ ಜನನಿಯುಂ ಮುನ್ನಾರೊಡಂಬೋದರೊ
ಯ್ಯನೆ ಮುನ್ನಾವನನೊತ್ತಿ ಕಾದರದಱಂ[3] ತಾಂ ಬೇಱು ದೇಹಾದಿಯು
ಪ್ಪನಿತುಂ ಬೇಱೆನುತಿರ್ಪ ಭವ್ಯನೆ ವಲಂ ಧನ್ಯಂ ಪೆಱರ್ ಧನ್ಯರೇ || ೬೧

ಎಂದು [ಪರಿಗ್ರಹದ ನಿಷ್ಪರಿಗ್ರಹದ ಹೀನಾಧಿಕತ್ವಮಂ ಮನ ದೊಳ್ ವಿಚಾರಿಸಿ ಮುನಿನಾಥಂಗೆ ಕರಕಮಲಂಗಳಂ ಮುಗಿದಿಂ ತೆಂದಂ || ೬೨

ಉಪರಿಚರನೃಪತಿ ನಿಮ್ಮಡಿ
ವಿಪರೀತಧ್ಯಾನದಿಂ ದುರಾಗ್ರಹಿಯಾಗಿ |
ರ್ದಪನೀಗಳಾತನಂ ನಿ
ಷ್ಕಪಟಜಿನೇಶ್ವರಮತೋಕ್ತಿಯಿಂ ಪ್ರಿಯದಿಂದಂ || ೬೩

ತಿಳಿಪಲ್ ಬಕ್ಕುಮೊ ಬಾರದೊ
ಘಳಿಲೆನೆ ಬೆಸಸುವುದು ಶೀಘ್ರಮೆಂಬುದುಮವನೀ |
ತಳಪತಿಗೆ ನುಡಿದರುರ್ವೀ
ತಳಪೂಜ್ಯರ್ ವಿಮಳರಂಬುನಿಧಿನಿಸ್ವನದಿಂ][4] || ೬೪

ನೀಂ ಪೋಗಿ ಧರ್ಮಮಂ ಪೇೞ್ವುದುಮಾಪಾವು ಜಾತಿಸ್ಮರನಾಗಿ ತನ್ನ ಮುನ್ನಿನ ಭವಮನಱದು ಧರ್ಮಮಂ ಕೈಕೊಳ್ಗುಮನ್ನೆಗಂ ದೇವಲೋಕದಿಂ ನಿಮ್ಮ ಜನನಿಯರಪ್ಪ ನಾಲ್ವರುಂ ಬಂದು ಪೂರ್ವ

1 ಜೀವರಾಶಿಗಳ್ (ಗ) 2 ಸಂಚಿಸಿದರ್ಥಮುಂ (ಗ)
3 ಕೊಂದರದಱಂ (ಗ) 4 ಬಗೆದು ಎಮ್ಮಯ್ಯನ ಪಾಪಮಂ ತಿಳಿಪಲುಂ ಬಕ್ಕುಮೊ ಬಾರದೊ ಬೆಸಸಿಮೆನೆ (ಗ)

ಸ್ವರೂಪದಿಂ ನಿನಗೆ [1] ಸಂಘಾತವಾಗಿರೆ ಧರ್ಮಮಂ [ಪೇೞ್ದು ತದನಂತರಂ ಸದ್ಧರ್ಮದೊಳಾದ ಪರಮೈಶ್ವರ್ಯಮುಮಂ ಜಿನಪದಸ್ಮರಣೆಯೊಳಾದ ಮಹಾವಿಭವಮುಮಂ ನಿಷ್ಪರಿಗ್ರಹವ್ರತದೊಳಾದ ಪೆಂಪುಮಂ ತೋಱಿ ಸಾಱಿ ಲೋಕಕ್ಕಂ ನಿನಗಂ ಪೇೞ್ವಂತೆ ದಿವ್ಯಸ್ವರೂಪಮಂ ಕೈಕೊಂಡು ಗಗನತಳಕ್ಕೆ ನೆಗೆದು ತಂತಮ್ಮ ಶ್ರೀಯುಮಂ ವಿಭೂತಿಯುಮಂ ತೋಱಿ ದೇವಲೋಕಕ್ಕೆ ಪೋಪರೆಂಬುದುಂ ॥ ೬೫

ಮುನಿಪತಿಗನಂತವೀರ್ಯಾ
ವನಿನಾಥಂ ಭಕ್ತಿಪೂರ್ವಕಂ ಪೊಡೆಮಟ್ಟು ।
ಯ್ಯನೆ ಸರ್ಪನಿರ್ದ ಪುತ್ತಿಂ
ಗನುವಯದಿಂ ಬಂದು ಗುಹೆಯ ಬಾಗಿಲ ಪೊರೆಯೊಳ್] [2] ॥ ೬೬

ನಿಂದಿರ್ದ ನೋೞ್ಪುದುಂ ಮುನಿ
ವೃಂದಾರಕನೆಂದ ಮಾರ್ಗದಿಂ ಸುಯ್ಯುತ್ತುಂ ।
ಮುಂದಿರ್ದ ನಾಗನಂ ಕಂ
ಡೆಂದಂ ನೃಪನಿಚಯಮುಕುಟಘಟ್ಟಿತಚರಣಂ ॥ ೬೭

ವನಿತೆಯರಾಗಿರ್ದಂ ನೆ
ಟ್ಟನೆ ವೀರಂಬೆರಸು ತೊಱೆದು ಸಕಳಮುಮಂ ಸ ।
ಜ್ಜನಪಾದಭಕ್ತಿಯಿಂ ದೇ
ವನಿವಾಸಕ್ಕೊಗೆದರಂತುಟಾಗಲ್ವೇಡಾ ॥ ೬೮

ಮೀಸೆಗಳಂ ಪೊತ್ತಿರ್ದಂ
ಸಾಸಂಗೆಟ್ಟಳ್ಕಿ ಬಳ್ಕಿ ಮನದುಬ್ಬೆಗದಿಂ ।
ಪೇಸುಪತವಾಗಿ ನಾಗನಿ
ವಾಸದೊಳೋವಯ್ಯ ಪುಟ್ಟಿ ತಿರಿವುದು [3] ಮಾಯ್ತೇ ॥ ೬೯

---

1 ಪೂರ್ವಸ್ವರೂಪಮಂ ತೋಱಿ ನಿಮಗ (ಗ)

2 ಪೇಳ್ವರೆಂಬುದುಂ ಸರ್ಪಾಶ್ರಯಮೆಂಬ ಗುಹೆಗೆ ಬಂದು (ಗ)

3 ನವೆವುದು (ಗ)

ಅರಸಿಯರನಿಬರುಮರ್ಹ
ಚ್ಚರಣಮೆ ಶರಣೆಂದು ವೀರದಿಂ ಮುಡಿಪಿ ಸುರಾ |
ಸುರವಂದ್ಯರಾದರದಱಿಂ
ಧರೆಯೊಳ್ ಸನ್ಮತಿಗಳಪ್ಪವರ್ ಕೆಟ್ಟಪರೇ ‖ ೨೦

ತೊಡರ್ದ ಪರಿಗ್ರಹಯುಗದೊಳ್
ದೃಢನಲ್ಲದೆ ಬಿಟ್ಟು ಜೈನಪದಸೇವನೆಯಂ |
ಮಡಿದಿಲ್ಲಿ ಸರ್ಪನಾದೈ
ಕಡುಮೂರ್ಖರ್ ಕಿಡುವರೆಂಬುದಾವುದು ಚೋದ್ಯಂ ‖ ೨೧

ಸುರುಚಿರರತ್ನಾವಳಿಯಿಂ
ಕರಮೊಪ್ಪುವ ರಾಜಭವನದೊಳ್ ಮುನ್ನಿರ್ಪೈ |
ದುರಿತದ ಫಲದಿಂ ಫಣಿಮಂ
ದಿರದೊಳ್ ನೀನೀಗಳಿರ್ದ್ದ ನವೆವಂತಾದೈ ‖ ೨೨

ನರಪತಿ ನೀಂ [1] ದಿವ್ಯಸ್ತ್ರೀ
ಯರ ನಡುವೆ ವಿಳಾಸಮೊದವೆ ಮುನ್ನಿರ್ಪೈ ನಿ |
ಷ್ಠುರಪಾಪದಿಂದಮೀಗಳ್
ಗರಳಧರರ ನಟ್ಟ [2] ನಡುವೆ ನಿಲ್ವಂತಾದೈ ‖ ೨೩

ಕಳವೆಯ ಕೂಳಿಂ ಸೊಗಯಿಪ
ತಿಳಿದುಪ್ಪಂಬೆರಸು ಲೀಲೆಯಿಂ ಮುನ್ನುಣ್ಬೈ |
ಪುೞುಗಳನಿಲಿಗಳನಾಯ್ದಾ
ಯ್ದುೞಿಲೊಳಮೊೞವಮ್ಮ ಈಗ [3] ತಿಂಬಂತಾದೈ ‖ ೨೪

ಮೃದುಶಯ್ಯೆಯೊಳಂಗನೆಯರ್
ಪದಪಿಂದಂ ಸೋಂಕೆ ರಾಗದಿಂ ಪವಡಿಸುವೈ |
ಮುದವೊದವೆ ಮುನ್ನಮೀಗಳ್
ಮೃದುವಲ್ಲದ ಪರಲಮೇಲೆ ಪಡುವಂತಾದೈ ‖ ೨೫

---

1 ನರನಾಥರ (ಗ) 2 ಪಾಪದಲ್ಲಿನೀನಜಗರ ಸಂಕುಲಗೃಹದ (ಗ)
3 ಯ್ದಾಣಲೋೞವೊೞವಸ್ಥಲಿಗ (ಕ.ಬ.) ಯ್ದುಳಲೊಪವಿದ ಕಪ್ಪೆಗಳುಮಂ(ಗ)

ಈಗಳಿನ ಕಷ್ಟತನಮುಮಂ
ನೋಗಡಿಸದೆ ಮುನ್ನಮಾದ ಮಹಿಮೆಯುಮಂ ನೀಂ ।
ಬೇಗಂ ಚಿಂತಿಸಿ ಬಿಡುವುದು
ಭೋಗದ ದೇಹದ ತೊಡರ್ಪುಮಂ ಮೋಹಮುಮಂ ॥ ೩೬

ತನುವಿನ ಧನವಿನ ಪೆಂಡಿರ
ತನಯರ ಕಡು [1] ಮೋಹದಿಂದೆ ನೀನಿಂತಾದೈ ।
ವಿನಯಪರನಾಗಿ ಮುನ್ನಿನ
ವನಿತುಮನಿಂಬಾಗಿ ಬಿಟ್ಟು ನಿರ್ಮಳನಾಗೈ ॥ ೩೭

[ವಿಷಯಂಗಳ ಕಾಂಕ್ಷೆಯಿನೆಲೆ
ವಿಷಧರನಾಗಿರ್ದೆಯಿನ್ನುಮತಿಲೋಲತೆಯಿಂ ।
ವಿಷಮಂ ತಾಳ್ದದೆಯಪ್ಪೊಡೆ
ವಿಷಮಮಿದೆನಿಸಿರ್ದ ನರಕವಾರಿಧಿಗಿೞಿವೈ] ೩೮

ಎಂದು ಪೇೞ್ವುದುಮಾಪರಿಚರನಪ್ಪ ಪೆರ್ಬಾವು ಜಾತಿಸ್ಮರನಾಗಿ ತನ್ನ ಮುನ್ನಿನ ಭವಮನಱಿದು [ಗುಹೆಯ ಬಾಗಿಲ್ಗೆ ಬಂದು ಕಿವಿಯಾಂತ]ನಂತವೀರ್ಯಮಹಾರಾಜನ ಮಾತುಗಳಂ ಕೇಳುತ್ತುಮಿರ್ಪುದುಂ ದೇವಲೋಕದೊಳ್ ಪುಟ್ಟಿದರಸಿಯರ್ [ನಾಲ್ವರುಂ ಪರಿಗ್ರಹಕಾಂಕ್ಷೆಯಿಂ ಸ್ವಸ್ವಾಮಿಯಪ್ಪ ಪರಿಚರನಾರ್ತಧ್ಯಾನದಿಂ ಸತ್ತು ಪೆರ್ಬಾವಾಗಿ ಪುಟ್ಟಿರ್ದುದನವಧಿಜ್ಞಾನದಿಂದಱಿದು ಧರ್ಮವಾತ್ಸಲ್ಯದಿಂ ಬೋಧಿಸಲೆಂದು ಮನೋಹರೋದ್ಯಾನವನಕ್ಕೆ ದೇವಲೋಕದಿಂದಿೞಿದು] ಮುನ್ನಿನ ರೂಪಿಂ ಬಂದು ಗುಹೆಯ ಬಾಗಿಲೊಳಿರ್ದ ಪಾವಿಂಗೆ [ಮೃದುನಿನಾದದಿಂ] ಧರ್ಮಮನಿಂತೆಂದು ಪೇೞ್ದರ್ ॥ ೩೯

ಕಿಡುವ ಪರಿಗ್ರಹಯುಗಮಂ
ಪಿಡಿದು ದುರಾಚಾರ ನಿನ್ನ ಪಾಪೋದಯದಿಂ ।

1 ಮೋಹತೊಡಪಿನಿಂದಿಂತಪ್ಪೈ (ಗ)

ಕಡುದುಃಖಾಬ್ಧಿಯೊಳಿರ್ಪುದ
ನೊಡರಿಸಿ ಪಾವಾಗಿ ಪುಟ್ಟಿ ನವೆವಂತಾದ್ಯೆ ॥ ೮೦

ತೊಱೆವುದು ದುಷ್ಪರಿಗ್ರಹವೆನೆಂದು ಜಿನೋಕ್ತಿಯಿನೆಮ್ಮ ಪೇೞ್ದುದಂ
ಮಱೆದು ಪರಿಗ್ರಹಕ್ಕೆಱಗಿ ದುರ್ಮತಿಯಿಂ ಮರಣಕ್ಕೆ ಗೊಡುಗೊಂ
ಡಱಿತಮನೊಕ್ಕು ಸತ್ತು ದುರಿತೋದಯದಿಂ ಫಣಿಯಾಗಿ ಪುಟ್ಟಿದೈ
ಕುಱಿ ಪೆಱರಾರೊ ನೀನೆ ಕುಱಿ ನೀನೆ ಜಡಾತ್ಮನೆ ನೀನೆ ಗಾಂಪನೈ ॥ ೮೧

[ಮುನ್ನೆಮ್ಮ ಪೇೞ್ದ ಧರ್ಮಮ
ದನ್ನೆಯದೆ ತಿರಿಕಯೋನಿಯೊಳ್ ಪುಟ್ಟಿದೆಯಿ ।
ನ್ನಿನ್ನ ಮರುಳಾಟಮಂ ಬಿ
ಟ್ಟನ್ನತಜಿನಪಾದಪದ್ಮಮಂ ನೆನೆ ಮನದೊಳ್ ॥ ೮೨

ಜಿನಪಾದಪದ್ಮಮಂ ಬಿ
ಟ್ಟನಿತೊಂದಪಮಾನವೃತ್ತಿಗೊಳಗಾದೈ ನೀಂ ।
ಮನದೊಳ್ ಬಗೆಯದೆ ಪೆಱತಂ
ನೆನೆ ರಾಗದಿನಿಂದ್ರವಂದ್ಯನಂಘ್ರಿದ್ವಯಮಂ] ॥ ೮೩

ನಿಷ್ಕಾರಣಂ ತೆರಳಿಯ ಪುೞುವಿನಂತೆ ನಿನ್ನಂ ನೀನೆ ದುಷ್ಪರಿಣಾಮದಿಂ ಸುತ್ತಿಕೊಂಡು ಬೆಟ್ಟದೊಳ್ ಪ್ರೊಣರ್ವ ಕೋಡಿಲ್ಲದ ಕಾಡಾನೆಯಂತೆ ಕೂಡದ ಸುಖಕ್ಕೆ ಬಯಸಿ ಸೇದೆಗಿಡದೆ, ಕಂಪಲೊಳ್ ಬಿರ್ದ ಪಶುವಿನಂತೆ ಸಂಸಾರದೊಳ್ ಬಿರ್ದು ನವೆಯದೆ, [ಮೀನಂಗೊಂಡ] ಚಪಳನಂತೆ ತಿರಿಕಯೋನಿಯೊಳ್ ಪುಟ್ಟ[ಮಲಮಲ]ಮಱುಗದೆ, ಸಾಲಂಗೊಂಡ [ಬಡ] ವನಂತೆ ಸ್ತ್ರೀ ಸುಖಕ್ಕೆಳಸಿ ಮನದೊಳ್ ಜಱಿಯದೆ, ಮಾರ್ಬಲಮಂ [1] ಕಂಡ ಪಂದೆಯಂತೆ ಸದ್ಧರ್ಮದೊಳಾದ ನಡೆವಳಿಗೆ ಬೆದಱದೆ, ತುಡುಗುಣ್ಣ ತೊತ್ತಿನಂತೆ ಕೋಲ್ಲದ ವ್ರತಕ್ಕಲಸಿ ನಡುಗದೆ, ಸುರಗಿಯಂ ಕಂಡ ಪುಲ್ಲೆಯಂತೆ ಸತ್ಯವ್ರತಕ್ಕಾಱದೋಸರಿಸದೆ, ತೇೞ್ತಿಂದ

1 ಪೂರ್ವಲಯುವಂ (ಗ)

ಮಗವಿನಂತೆ ಕೊಲ್ಲದ ವ್ರತಕ್ಕೆ ಬೇಸತ್ತು ದೆಸೆಗಿಡದೆ[1], ಕಳವುವೋವ ಮನೆಯಂತೆ ಬ್ರಹ್ಮವ್ರತಕ್ಕೆ ಬೆರ್ಚಿ ತಲ್ಲಣಿಸದೆ, ಪುಲ್ಲಕಡ್ಡಿಯಂ ಕಂಡ ತೃಣಗ್ರಾಹಿಯಪ್ಪನಿಲದಂತೆ ಗುಣವ್ರತಕ್ಕೆ[2] ಸಂಚಲಿಸದೆ, ತೂಂಕಡಿಸುವ ವೃದ್ಧನಂತೆ ಶಿಕ್ಷಾವ್ರತಕ್ಕೆ ಭಯಸ್ಥನಾಗಿ ಜೋಲದೆ, ಪಱುಗೋಲೊಳ್ ದರ್ಂಬಿಗನಂತೆ[3] ಗುರುವಚನಮಂ ಬಿಟ್ಟು ಪೋಗದೆ, ಮೊದಲ್ಗೆಟ್ಟ ಪರದನಂತೆ ಘಳಿಗೆಗೊಂದಂ ನೆನೆಯದೆ, ಶೃಂಗಾರಕರ್ತಿಗನಪ್ಪ ಬಡವನಂತೆ ಚಿಂತಿಸಿ ಕೆಡದೆ, ವನಿತೆಗೋತ ಋಷಿಯಂತೆ ಶುಭಧ್ಯಾನದಿಂ ಕಿಡದೆ, ಕಾಲೂರ ಸೂಳೆಯಂತೆ ಬಱಿದೆ ದುರ್ಮತಕ್ಕೆ ತೊನೆಯದೆ, ಸನ್ಮಾರ್ಗಧಾರಿಯಾಗಿ ಮುನ್ನಿನವಗುಣಂಗಳಂ ಬಿಟ್ಟು ನಿರ್ಮಳಚಿತ್ತದಿಂ ಧರ್ಮದೊಳ್ ಕೂಡಿ ಜಿನಪಾದಸೇವೆಯೊಳಿರ್ದು ಸ್ವರ್ಗಾಪವರ್ಗ [ಸುಖ]ಕ್ಕೆ ಭಾಜನನಾಗೆಂದು ತಮ್ಮ ವೀರವೃತ್ತಿಯಿಂ ಪಡೆದ ದೇವಗತಿಯುಮಂ ಭೀತಮನದಿಂದನಿವೃತ್ತಿಯಿಂದುಪರಿ[4] ಚರಮಹಾರಾಜಂ ಪಡೆದ ತಿರಿಕಗತಿಯು ಪಡೆಪುವಮಂ ಪೇೞ್ದು ತದನಂತರಂ ॥ ೮೪

ಉರದೊಳ್ ಮುತ್ತಿನಹಾರಮೊಪ್ಪೆ ಶಿರದೊಳ್ ಮಿಕ್ಕಿರ್ದ ರತ್ನಾವಳೀ
ಸ್ಫುರಿತೋದ್ಯನ್ಮಕುಟಂ ಪಳಂಚೆ ಪೊಳೆಪಿಂ ಚೆಲ್ವಾಗಿ ಹಸ್ತಾಗ್ರದೊಳ್
ಕರಮಿಂಬಾಗಿರೆ ದಿವ್ಯರತ್ನವಳಯಂ ಸರ್ವಾಂಗದೊಳ್ ಭೂಷಣೋ
ತ್ಕರಮಲ್ಲಲ್ಲಿಗಮೆರ್ಕೆವೆತ್ತಿರೆ ಸುರರ್ ಲೋಕಕ್ಕಗುರ್ವಪ್ಪಿನಂ ॥ ೮೫

ದಿವ್ಯಾಂಬರಭೂಷಣಾಲಂಕೃತರಾಗಿ ॥ ೮೬

ಇವರ್ಗಂ ಸೂರ್ಯಂಗಮೇನಂತರಮವನಿಯೊಳಾರ್ ನೋೞ್ಪೊಡಂ ತೇಜದೊಳ್ ಮ
ತ್ತಿವರ್ಗಂ ಚಂದ್ರಂಗಮೇನಂತರಮವನಿಯೊಳಾರ್ ನೋೞ್ಪೊಡಂ ಕಾಂತಿಯೊಳ್ ಮ

---

1 ನೆಡೆಯದೆ (ಗ)

2 ಅನಿಲದಂತೆ ಪರಿಗ್ರಹಕೆಱಗದೆ ಬಿಸಿಲೊಳಿರ್ದ ವಿಮಾನಂತೆ ಗುಣವ್ರತಕ್ಕೆ (ಗ)

3 ಪರುಗೋಲದರ್ಂಬಿಗನಂತೆ (ಕ. ಬ.) 4 ದಾದನೀಚಯಿದೆಂದುಪರಿ (ಗ)

ತ್ರಿವರ್ಗಂ ಕಾಮಂಗಮೇನಂತರಮಪ್ಪನಿಯೊಳಾರ್ ನೋೞ್ಪೊಡಂ ರೂಪಿನೊಳ್ ಭೂ
ಭುವನಕ್ಕಾಶ್ಚರ್ಯಮೆಂಬಂತೊಗೆದು ಗಗನದೊಳ್ ನಿಂದರತ್ಯಂತಧೈರ್ಯರ್ || ೮೭

ಅಂತು ಮುಕ್ತಾಜಾಲ [ಘಂಟಾಜಾಲಕ]ಂಗಳಿಂದೊಪ್ಪುವ ವಿಮಾನಾರೂಢರಾಗಿ ಸಮುದ್ರರವಕ್ಕೆಣೆಯೆನಿಸಿ ಘೂರ್ಣಿಸುವ ದೇವದುಂದುಭಿ ಮೆಸು [ಗಗನತಳದೊಳ್ ನಿಂದು ನಾಲ್ವರ್ ದೇವರುಂ ತಂತಮ್ಮ ವಿಭೂತಿಯುಮುಂ] [1] ಪರಿಗ್ರಹನಿವೃತ್ತಿಯೊಳಾದ ಮಹಾಫಲಮುಮಂ ಪೇೞ್ದು ದೇವಲೋಕಕ್ಕೆ ಪೋದರಿತ್ತಲನಂತವೀರ್ಯಮಹಾರಾಜನುಂ ನೆರೆದ ನೆರವಿಯುಂ ವಿಸ್ಮಯಂಬಟ್ಟು || ೮೮

[ಜಿನತತ್ತ್ವೋಕ್ತಿಯೊಳೊಂದಿ ಜೈನಮತಮಂ ಲೇಸಾಗಿ ಸಚ್ಚಿತ್ತದಿಂ
ಮನದೊಳ್ ಸಂಶಯಮಾಗದಾತ್ಮಹಿತಮೆಂದಾದಂ ಮನಂಗೊಂಡು ಸ
ಜ್ಜನರಂ ಮೆಚ್ಚಿಸಿ ಜೀಯಜೀಯೆನಿಸಿ ತಾಳ್ದಿರ್ದಾ ಮಹಾತ್ಮಂಗೆ ದೇ
ವನಿಕಾಯಂ ಬೆಸಕೆಯ್ವುದಚ್ಚರಿಯೆ ದೇವೇಂದ್ರತ್ವಮಾಶ್ಚರ್ಯಮೇ]||

ಸಂದಾಣುವ್ರತಮಯ್ದುಮಂ ವಿಮಳಸದ್ರತ್ನಂಗಳಿಂದಂದು ಸಾ
ನಂದಂ ತಾಳ್ದಿ ಚತುಷ್ಕಷಾಯಭಟರಂ ತೂಳ್ದಟ್ಟಿ ಪಾಪಾರಿಯಂ
ಪೊಂದಲ್ಕೀಯದೆ ಕೂಡಿ ಸತ್ಪುರುಷರೊಳ್ ಜೈನಾಂಘ್ರಿಯಂ ತಾಳ್ದಿ ನಿಂ
ದಂದಕ್ಕುಂ ದಿವಿಜೇಂದ್ರದಿವ್ಯಸುಖಮುಂ ನಿರ್ವಾಣಸಾಮ್ರಾಜ್ಯಮುಂ ||

[ಎಂದು ಜಿನಧರ್ಮದೊಳಾದ ವಿಭವಮುಮಂ ಜಿನಪಾದಸೇವೆಯ ಪೆಂಪುಮಂ ಪೊಗೞ್ದು ಮಗುೞ್ದು ಬಂದು ಸಾರಸ್ವತಮುನಿನಾಥಂಗೆ ಪೊಡೆವಟ್ಟು ನಿಮ್ಮ ಬೆಸಸಿದಂತೆಲ್ಲಾ ಕಾರ್ಯಮಾದುದಿನ್ನು ಪಾವಿಂಗಾಯುಷ್ಯಮೆನಿತುಂಟೆಂದು ಬೆಸಗೊಳ್ವುದುಂ ಮುನಿನಾಥನಿಂತೆಂದಂ || ೯೧

1 ಜಿನಾಧಿಪತಿಯ ಚರಣಸೇವೆಯೊಳಾದ ಫಲಮುಮುಂ (ಗ)

ನರಪತಿ ಪದಿನೈದುದಿನಂ
ಬರೆಗಂ ಫಣಿಗುಂಟು ಜೀವಿತಂ ಮಿಗಿಲಿಲ್ಲೆಂ ।
ದರೆಗಳಗೆಯುಮೆನೆ ಭೂವಿಾ
ಶ್ವರನಱಿದಾಶ್ಚರ್ಯವೆಂದು ಮತ್ತಂತೆಂದಂ ॥ ೯೦

ಅಂತಾದೊಡೆ ನಿಮ್ಮಡಿ ನೀವಲ್ಲಿಗೆ ಬಿಜಯಂಗೆಯ್ದು ತತ್ಫಣಿಗೆ ತೊ
ಱವಿಯಂ ಕುಡುವುದೆಂಬುದುಂ ಸಾರಸ್ವತಮುನಿನಾಥಂ ಸಕಲಮುನಿವರ
ರ್ವೆರಸು ಸರ್ಪಾಶ್ರಯಗುಹೆಗೆವಂದು ಬಾಗಿಲೊಳದ್ದ ಪೆರ್ವಾವಿಂಗೆ
ಧರ್ಮಂಪೇೞ್ದು ಮುಕ್ತಿಲಕ್ಷ್ಮಿಯು ಕುಡುವ ಪಂಚರತ್ನಮೆನಿಸುವ
ಪಂಚಾಣುವ್ರತಮಂ ಕಾರುಣ್ಯದಿಂ ಕೊಟ್ಟು ಮೆಲ್ಲನಿಂತೆಂದರ್ ॥ ೯೧

ನಿನಗಾಯುಷ್ಯಂ ಪಿರಿದಿ
ಲ್ಲನುನಯದಿಂ ಮೇಲೆ ನೋಡ ಪದಿನೈದುದಿನಂ ।
ಮನವಿಕ್ಕಿ ಕುಂದಿ ಜಱಿಯದೆ
ನಿನಗಪ್ಪುದಿದೊಳ್ಳಿತಾಗಿ ನೆನೆ ನೀಂ ಮನದೊಳ್ ॥ ೯೪

ಮುನ್ನಿನ ಭವದೊಳ್ ನೀನ
ತ್ಯುನ್ನತಸ್ಯ ರಾಜಪುತ್ರಸ್ಯ ದುರ್ಮನದಿಂ ।
ದೆನ್ನ ಸಿರಿಯೆಂದು ಮೋಹಿಸಿ
ಪನ್ನಗನಾದೆ ಜಡಾತ್ಮ ದುರಿತೋದಯದಿಂ ॥ ೯೫

ನೀನಱಿಯ ನಿನ್ನವನಿತೆಯು
ರೇನುಮನಣ್ಕಿತ್ತು ನೆನೆದು ಕುದಿಯದೆ ಜಿನನಂ ।
ಧ್ಯಾನಿಸಿ ತತ್ಫಲದಿಂದವ
ನೂನಸುಖಾಸ್ಪದಮನೆಯ್ದಿದರ್ ಮುಱುಭವದೊಳ್ ॥ ೯೬

ಅದುಕಾರಣದಿಂ ಸೌಖ್ಯಾ
ಭ್ಯುದಯಂ ಜಿನಪಾದಸೇವೆ ಮತ್ತುೞಿವವು ದುಃ ।
ಖದ ಪುತ್ತು ಚಿಂತೆಯಾಗರ
ಮೊದವಿದ ದುರ್ಗತಿಯ ದಾರಿ ನೋವಿನ ಮಡುಗಳ್ ॥ ೯೭

ಜಿನರೂಪಸ್ಮರಣೆಯು ಜೀ
ವನಿಕಾಯಕ್ಕಾರ್ಮಮಾತ್ಮಹಿತಮಘಹರಣಂ ।
ಜಿನನುತಮಪವರ್ಗಶ್ರೀ
ವನಿತೆಯ ತೊಡವಮರಪತಿಯ ಲಕ್ಷ್ಮಿಯ ತಿಲಕಂ] ॥ ೯೮

ಅದಕ್ಕೆ ಸಂದೆಯಮಿಲ್ಲೆಂದು ಜಿನಧರ್ಮದೊಳಾದ ವಿಭವಮುಮಂ ಜಿನಪಾದಸೇವೆಯ ಪೆಂಪುಮಂ ಪೊಗೞ್ದು [ಮತ್ತಮಾರಾಧನೆಯಿನರ್ಚಿಸಿ ಸ್ವಾಧ್ಯಾಯಂಗೊಂಡು] [1] ಮೃದುನಿನಾದದಿನಿಂತೆಂದು ಪೇೞ್ದರ್ ॥ ೯೯

ಜೀವಂಬಿಡುವೆಡೆಯೊಳ್ ದೃಢ
ಭಾವನೆಯಿಂ ತನುವನನ್ನಮಂ ತೊಱೆದವನು ।
ರ್ವೀವಳಯಮುಱಿಯಲಮೃತ
ಶ್ರೀವನಿತೆಯೊಳರದೆ ನೆರೆದು ಸುಖಿಯಾಗಿರ್ಕುಂ [2] ॥ ೧೦೦

ಮುನ್ನಂ ಪಲವುಭವಂಗಳೊ
ಳನ್ನೆರಪಿದ ಕರ್ಮಚಯಮುಮೀಭವದೊಳ್ ಮ ।
ತ್ತನ್ನದೆ ಮಾಡಿದ ಪಾಪಮು
ಮೇಂ ನಿಲಲಱಿದಪುದೆ ತೊಱೆದ ಭವ್ಯಂಗಿಳೆಯೊಳ್ ॥ ೧೦೧

ಮತ್ತಂ ಸಂನ್ಯಸನದ ಪೆಂಪಂ ಪೇೞ್ವೊಡೆ ಸಂನ್ಯಸನಮಂ ಕೈಕೊಂಡ ಮಹಾಪುರುಷನ ಕರ್ಮಂ ಕಿಚ್ಚು ಪತ್ತಿದ ಕರಡದಂತೆ ಭಸ್ಮಮಕ್ಕುಂ ವಜ್ರಂ ತಾಗಿದ ಗಿರಿಯಂತೆ ನುಚ್ಚುನೂಱಕ್ಕುಂ ಸೂರ್ಯನ ರಶ್ಮಿ ಮುಟ್ಟಿದ ಮಂಜಿನಂತೆ ಕರಗುಗುಂ, ಬಲ್ಲಿದಂಗೆ ಪೊಣರ್ದೋಡಿದನಂತೆ ಕೆಟ್ಟೋಡುಗುಂ, ಗಾಳಿಗೊಳಗಾದ ಮುಗಿಲಂತೆ ಪಾಱುಗುಂ,

---

1 ಸಾರಸ್ವತಮುನಿಯಲ್ಲಿಗೆ ಬಂದೆಲ್ಲಮಂ ಪೇೞ್ದುಮವರ್ ಸಾವಿನಲ್ಲಿಗೆ ಬಂದು ನಿನಗಿಂ ಪದಿನೈದು ದಿವಸಮಾಯುಷ್ಯಮೆಂದಱಿಪಿ ಪಂಚಾಣುವ್ರತಮುಮಂ ಸಂನ್ಯಸನಮುಮಂ ಕೊಟ್ಟಾರಾಧನೆಯುಮನರ್ಚಿಸಿ ಸ್ವಾಧ್ಯಾಯಮುಮಂ ಕೊಟ್ಟು (ಗ)

2 ವಳಯದೊಳಪುನರ್ಭವಜೀವನರುಹಮುಖಿಯೊಳತಿಯಿಂ ನೆರೆದಿರ್ಕ್ಕುಂ (ಕ. ಖ.)

ಪೆರ್ವೊನಲಿಂಗಿದಿರಾದ ಮಳಲೇಱಿಯಂತೆ ಜಱಿಗುಂ, ಸೊಡರಂ ಪೊರ್ದಿದ ಪತಂಗದಂತೆ ತವ್ವುಗುಂ, ಬೆಂಕೆಯಂ ಪೊರ್ದಿದ ತಱಗೆಲೆಯಂತೆ ಕರಿಪ್ಪುರಿಯಕ್ಕುಂ, ಚಂದ್ರನ ಕಿರಣಕ್ಕಿದಿರಾದ ಕತ್ತಲೆಯಂತೆ ಪರಿದೋಡುಗುಂ, ಸಿಂಹಕ್ಕಿದಿರಾದ ಗಜದಂತೆ ಕಿಡುಗು[1] ಮಿಂತು ॥ ೧೦೨

ಜಿನರಂ ನೆನೆ ಮನದೊಳ್ ಮೆ
ತ್ತಿನ ತನು ಮೊದಲಾದ ದುಷ್ಪರಿಗ್ರಹಮಂ ಬೆ ।
ಳ್ತನದಿಂ ಪಂಬಲಿಸದಿರೊ
ಯ್ಯನೆ ಕೇಳುತ್ತಿರು ಮದೀಯವಚನಾಮೃತಮಂ[2] ॥ ೧೦೩

ಮತ್ತಂ, ಪುಲ್ಲ ಕಿರ್ಚಿನಂತೆ ಸುರಚಾಪದಂತೆ ಬೀದಿಯ ಸೊಡರಂತೆ ಬಯಲೊಡೆಯಂತೆ ಮಾಗಿಯ ಮರದೆಲೆಯಂತೆ ಶರೀರಂ ಮೊದಲಾಗೆಲ್ಲಾ ವಸ್ತುಗಳುಂ ನಿಷ್ಠೆಯಲ್ಲೆಂದು[3] ಪೇೞ್ವಧ್ರುವಮುಮಂ ; ನೀರಂ ಕಂಡ ಕತ್ತೆಯಂತೆ ಕಿರ್ಚ್ಚಂ ಕಂಡ ಪುಲಿಯಂತೆ ಸೊಡರಂ ಕಂಡ ಕೋಡಗದಂತೆ ನಾಯಂ ಕಂಡ ಪುಲ್ಲೆಯಂತೆ ನಾಡರಸಂ ಕಂಡ ಮನ್ನೆಯನಂತೆ ತನು ಮೊದಲಾದ ಸಮಸ್ತಮುಂ ಶರಣಲ್ಲೆಂದು ಪೇೞ್ವ ಶರಣಮುಮಂ ಕಳನೇಱಿದಂಕನಂತೆ ಸೂಲಮೇಱಿದ ಕಳ್ಳನಂತೆ ಸಾವ ಮಾನಿಸನಂತೆ ಕುತ್ತದೊಳ್ ನವೆವನಂತೆ ಕೊಳದೊಳಿರ್ದನಂತೆ ಜೀವಮೆಲ್ಲಿಯುಮೇಕಮೆಂದು ಪೇೞ್ವೇಕತ್ವಮುಮಂ ; ಕಾಱ್ಕಿಚ್ಚಿಂಗೆ ಪುಲ್ಲ ಬೇಲಿ ಪೆರ್ವೊನಲಿಂಗೆರೆಯ ಪಟ್ಟೆ ಗಜಘಟೆಗೆ ಬಾಟೆಯ ಬನಂ ಬಡಿಗೆಗೆ ಮಡಕೆಯ ವೆಟ್ಟು ಪೆರ್ಗಾಳಿಗೆ ಬೂದಿಯ ರಾಶಿ ಬಲ್ಲಿತಲ್ಲದಂತೆ ಮಂತ್ರ ದುರ್ಗ ಬುದ್ಧಿಬಲ ಮಿತ್ರ ಬಾಂಧವರ್ಮೊದಲಾಗೆಲ್ಲಂ ಸಾವುಮಂ ಕೇಡುಮಂ ತಪ್ಪಿಸಲಾಱರೆಂದು ಪೇೞ್ವನನ್ಯತ್ವಮುಮಂ ; ಪಗರಣಿಗರಂತೆ ಪಚ್ಚೋಲಿಂತಿಯಂತೆ [ತಿರಿವನ ಪಡಪಿನಂತೆ ಸೂರ್ಯನಂತೆ] ಬೆಳವ ಸಸಿಯಂತೆ[4]

---

1 ಬೆದಱಿ ಕಿಡುಗು (ಗ)   2 ಧರ್ಮಾಮೃತಮಂ (ಗ)

3 ಮೊದಲಾದ ದುಃಪರಿಗ್ರಹಮುಂ ಸಮಸ್ತಮುಂ ನಿತ್ಯಮಲ್ಲೆಂಬುದಮಂ (ಗ)   4 ಪ್ರತಿಸೂರ್ಯನಂತೆ (ಗ)

ಜೀವಂಗಳ್ ಬಗೆದ ಬಣ್ಣಿಗೆಯುಕ್ಕುಮೆಂದು ಪೇೞ್ದು ಸಂಸಾರಮುಮಂ ; ಸುರಗಿಯ ಮೊಟದಂತೆ ಬೆಲ್ಲವಡುಗೆಯಂತೆ ಕಾಳಗದ ಗೆಲ್ಲದಂತೆ ಬಂದಿಕಾಱನ ಪಡಪಿನಂತೆ ಸಾಧನೆಕಾಱನ ಸಿರಿಯಂತೆ ಕಡುದುಃಖಮುಂ ಸುಖಮುಮಿಾ ಸ್ವರೂಪಮೆಂದು ಪೇೞ್ದು ಲೋಕಮುಮಂ ; ಪಡಿಗದಂತೆ ತೊವಲ ಕುಱಿಯಂತೆ ಪೊಲೆಯರ ಮನೆಯಂತೆ ಪಾವಿನ ಕಣಾದಂತೆ ಕಳ್ಳ ಮಡಕೆಯಂತೆ ಶರೀರಂ ಪೊಲ್ಲೆಂದು ಪೇೞ್ದುಶುಚಿತ್ವಮುಮಂ ; ಸೂಜಿಯ ಬೞಿಯ ದಾರದಂತೆ ತಾಯ ಬೞಿಯ ಶಿಶುವಿನಂತೆ ಕಾಲ ಬೞಿಯ ನೀರಂತೆ ಮೊಱಗಿನ ಬೞಿಯ ಮಿಂಚಿನಂತೆ ಬುಱಿಲ್ಕೆಯ ಬೞಿಯ ನಿದ್ರೆಯಂತೆ ಆರ್ತ ರೌದ್ರ ಧರ್ಮ ಶುಕ್ಲಮೆಂಬ ನಾಲ್ಕುಂ ಧ್ಯಾನದ ಬೞಿವಿಡಿದು ಶುಭಾಶುಭಕರ್ಮಮಾಶ್ರಯಿಸುಗುಮೆಂದು ಪೇೞ್ದಾಶ್ರಯಮುಮಂ ; ಬಡ್ಡಿಯಿಕ್ಕುವಂ ಮೊದಲಂ ಕೊಟ್ಟು ಪತ್ರಮಂ ಸೀಳಿಸುವಂತೆ ಕೇಣಿಕಮಿಕ್ಕುವ ಪರದನೊತ್ತೆಯುಮಂ ಬಿಡಿಸುವಂತೆ [1] ನಡೆವ ಬಟ್ಟೆಯೊಳ್ ಪೊಂಗೆಡಿಸಿ ಅರಸುವಂತೆ [2] ಭಂಡಾರಮನೊಪ್ಪಿಸಿ ಪೋಪ ಸೇನಬೋವನಂತೆ ಸಿದ್ಧಾಯಮನಿಕ್ಕಿ ವಿಶುದ್ಧಿಯಂ ಕೊಂಬ ಗ್ರಾಮಣಿಯಂತೆ ಬರ್ಪ ಕರ್ಮಮಂ ತೆಗೆವ ಇರ್ದ ಕರ್ಮಮಂ ಗೆಲ್ವುಪಾಯಮಂ ಪೇೞ್ದು ಸಂವರೆಯುಮಂ ; ಸೊಡರೆಣ್ಣೆಯಂ ಪೀರ್ವಂತೆ ಬಿಸಿಲ್ ನೀರಂ ಪೀರ್ವಂತೆ ಮಂತ್ರಾಕ್ಷರಂ ವಿಷಮಂ ಪೀರ್ವಂತೆ ಕಿರ್ಚು ನೀರಂ ಪೀರ್ವಂತೆ ಆನೆಯ ಕ್ಷುದಗ್ನಿ ಬೇಳದ ಕಾಯ ತಿರುಳಂ ಪೀರ್ವಂತೆ ಮಹಾಪರೀಷಹಂಗಳಿಂ ಕರ್ಮಂಗಳ್ ಕಿಡುಗುಮೆಂದು ಪೇೞ್ದು ನಿರ್ಜರೆಯುಮಂ ; ಚಂದ್ರೋದಯದಿಂ ಸಮುದ್ರಂ ಪೆರ್ಚುವಂತೆ ಗೊಬ್ಬರದಿಂ ಬೆಳಸು ಪೆರ್ಚುವಂತೆ ಆಜ್ಞೆಯಿಂ ನಾಡು ಪೆರ್ಚುವಂತೆ ಪಿಂಡಿಯಿಂ [3] ದೆಮ್ಮಿಯ ಪಾಲ್ ಪೆರ್ಚುವಂತೆ ಮೊಲೆವಾಲಿಂ ಮಕ್ಕಳ್ ಪೆರ್ಚುವಂತೆ ದಾನಪೂಜೆಶೀಲೋಪವಾಸದಿಂ ಧರ್ಮದಿಂದಮುತ್ತಮಕ್ಷಮಾದಿತಪೋನುಷ್ಠಾನದಿಂ ಪುಣ್ಯಂ ಪೆರ್ಚುಗುಮೆಂದು ಪೇೞ್ದು

---

1 ನಂಬಿ ಕೊಡುವಂತೆ (ಕ. ಬ.) 2 ನೂೞ್ಚುವಂತೆ (ಗ)

3 ಹಿಂಡಿಯಿಂದಕ್ಕಿಯಿಂ (ಗ)

ಧರ್ಮಮುಮಂ ; ಚಕ್ರಾಯುಧದಂತೆ [1] ಬಿದಿಯ ರತ್ನದಂತೆ ಪರುಷವೇದಿಯಂತೆ ಸಿದ್ಧಿಯಂತೆ ಅಪೂರ್ವಮಪ್ಪ ಬೋಧಿಯುಮಂ ಕ್ರಮಂ ತಪ್ಪಲೀಯದೆ ಪೇೞ್ದು ॥ ೧೦೪

ಬಂದುಭವಂ ಸಮಾಧಿಮರಣಂ ದೊರೆಕೊಂಡೊಡೆ ಕಷ್ಟವೃತ್ತಿಯೊಳ್
ಪೊಂದದೆ ದೇವಮಾನವಪತಿತ್ವಮನೆಯ್ದಿ ಸಮಸ್ತಕರ್ಮಮಂ
ಕುಂದಿಸಿ ಬೇಗಮೆಂಟುಭವದಿಂದೊಳಗಕ್ಷಯಮೋಕ್ಷಲಕ್ಷ್ಮಿಯೊಳ್
ಸಂದೆಯಮಿಲ್ಲದೊಂದಿ ಸುಖಮಿರ್ಪರಸಂಚಲರಾಗಿ ರಾಗದಿಂ ॥ ೧೦೫

ದುಕೂಲಮನೀಡಾಡಿ ಬಣ್ಣಮನುಡುವ [2], ಸೊಡರಂ ಪೊಱಗಿಕ್ಕಿ ಮಿಂಬುೞುವನೊಳಗಿಡುವ, ಕಣ್ಣಂ ಕಳೆದು ಪೀಲಿಯ ಕಣ್ಣನಿಡುವ ಕಯ್ಯಂ ಕಡಿದು ಮರಗಯ್ಯಂ[ಕಟ್ಟಿ]ಕೊಳ್ವ, ಪೊನ್ನಂ ಕೊಟ್ಟು ಮೂಗನರಿಸಿಕೊಳ್ವ, ಮೇಲುದಂ ಕೊಟ್ಟು ತಲೆಯಂ ಬೋಳಿಸಿಕೊಳ್ವ, ಕಯ್ಯಂ ಕೊಟ್ಟು ಪುಲ್ಲಂ ಕೊಳ್ವ, ಕಂಕಣಮಂ ಬಿಟ್ಟು ಬಳೆಯಂ ಕೊಳ್ವ, ಪೆಂಡಿರಂ ಮಾಱಿ ತೊೞ್ತರಂ ಕೊಳ್ವ, ಹಾರಮನೀಡಾಡಿ ಪಾವಂ ಕಟ್ಟುವ, ಪಸುವಂ ಮಾಱ್ದು ನಾಯಂ ಕಱೆವ, ತಂಬುಲಮಂ ಬಿಟ್ಟು ಸಗಣಮಂ ತಿಂಬ [3], ಕರ್ಪುರಮಂ ಬಿಟ್ಟು ಪಗಿನಂ ಕೊಳ್ವ [4] ಜಾತ್ಯಶ್ವಮಂ ಬಿಟ್ಟು ಮರಗಾಲಂ ಕೊಳ್ವ, ತುಪ್ಪಮಂ ಕೊಟ್ಟು ನೀರಂ ಕೊಳ್ವ, ಕೋಟಿವೇದಿಯಪ್ಪ ರಸಮಂ ಬಿಟ್ಟು ಎಣ್ಣೆಯಂ ಕೊಳ್ವ, ಭಂಡಾರಮಂ ಕೊಟ್ಟು ಪಿಂಡಿಯಂ ಮೆಲ್ವ, ಗಾವಿಲನಂತಾಗಿ ಶಾಶ್ವತಸುಖಮನೀವ ರತ್ನತ್ರಯಂಗಳಂ ಬಿಟ್ಟು ಕಿಡುವ ಪರಿಗ್ರಹಮುಮಂ ನೆನೆಯುತ್ತುಮಿರಲಾಗದೆಂದು ಧರ್ಮಮಂ ಪೇೞುತ್ತುಮಿರ್ಪುದುಮಿತ್ತಲನಂತವೀರ್ಯಮಹಾರಾಜಂ ಪದಿನೈದುದಿವಸಂಬರಂ ಜಿನಪೂಜೆಗಳಂ

1 ಪರುಷವೇದಿಯಂತೆ ಚಕ್ರಾಯುಧದಂತೆ ಚಿಂತಾಮಣಿಯಂತೆ (ಗ)

2 ಹಱುಣೆಯನುಡುವ (ಗ)

3 ನಂದನವನಮಂ ಕಡಿದು ಮನೆಯಮಾಡುವ (ಗ)

4 ಪೊನ್ನ ಮಡಕೆಯಂ ಕೊಟ್ಟು ಮಣ್ಣ ಮಡಕೆಯಂಕೊಳ್ವ (ಗ)

ಮಾಡಿಸುತ್ತುಮಿರ್ಪುದುಂ ಉಪರಿಚರನಪ್ಪ ಪೆರ್ಬಾವು ಧರ್ಮಮಂ ಕೇಳುತ್ತುಂ ಪ್ರಾಣವಿಯೋಗದೊಳ್ ವಜ್ರದಾಡನ ಮಾಡಿದ ಸಾಹಸಮಂ ನೆನೆಯುತ್ತುಂ ಸತ್ತು ಭವನವಾಸಿಗರಲ್ಲಿ ಮೂಱುಪಳಿತೋಪಮಾಯುಷ್ಯಮನೊಡೆಯನಾಗಿ ವ್ಯಂತರಕುಲದೊಳ್ ವಿಮಳನೆಂಬ [ಪೆಸರ] ದೇವನಾಗಿ ಪುಟ್ಟಿದನಿತ್ತಲನಂತವೀರ್ಯಮಹಾರಾಜಂ ಮುನೀಂದ್ರೋತ್ತಮರಂ ಬೆಸಗೊಂಡು ದುರ್ಭಾವದಿಂ ಭವನವಾಸಿಗಲೋಕದೊಳ್ ತತ್ಕ್ಷಣ ಪುಟ್ಟಿದುದನಱಿದು ಬೆಱಗಾಗಿ ॥ ೧೦೬

ಪಿರಿದಪ್ಪ ಪರಿಗ್ರಹಮಂ
ಪರಿಹರಿಸಿದ ಫಲದಿನುಪರಿಚರನರಸಿಯರೊ ।
ಪ್ಪಿರೆ ದಿವಿಜವಂದ್ಯರಾದರ್
ಪರಿಗ್ರಹಾಪೇಕ್ಷೆಯಿಂದಮಿವನಿಂತಾದಂ ॥ ೧೦೭

ಎಂದು ಬೆರ್ಚಿ ತನ್ನ ಪಿರಿಯ ಮಗನಪ್ಪ ಸುಬಾಹುಕುಮಾರಂಗೆ ರಾಜ್ಯಪಟ್ಟಮಂ ಕಟ್ಟಿ [ಸಕಳ] ಸಾಮ್ರಾಜ್ಯಮಂ ತೊಱೆದು [ಸಮಸ್ತ ರಾಜಕುಮಾರರ್ವೆರಸು] [1] ಜಿನದೀಕ್ಷೆಯಂ ಕೈಕೊಂಡುಗ್ರತಪಶ್ಚರಣಂಗೆಯ್ದು [2] ಸಂಮೇಧಪರ್ವತದೊಳ್ ಕರ್ಮಕ್ಷಯಂಗೆಯ್ದು ನಿರ್ವೃತಿಯನೆಯ್ದಿದನಿತ್ತಲ್, ಭವನವಾಸಿಗನಪ್ಪ ವಿಮಲದೇವಂ ವಜ್ರದಾಡನಪ್ಪ ವಿದ್ಯಾಧರನಂ ಕಂಡು ವಿಭಂಗಜ್ಞಾನದಿಂ ಪೂರ್ವವೈರಮನಱಿದು ॥ ೧೦೮

ಮುನಿದು ಕಡುಕೋಪದಿಂ ಭೋಂ
ಕನೆ [3] ಖಚರನ ವಿದ್ಯೆಯೆಲ್ಲಮಂ ಕಿಡಿಸಿ ಮಹಾ ।
ವನಧಿಗೆಱದೊಯ್ದು ಖಚರೇ
ಶನುಮಂ ಖಚರಾಧಿಪತಿಯ ವಲ್ಲಭೆಯರುಮಂ ॥ ೧೦೯

---

1 ಸಾರಸ್ವತಭಟ್ಟಾರಕರಲ್ಲಿ (ಗ)   2 ತಪದೊಳ್ ನೆಗಳ್ದು (ಗ)
3 ಭೋಂಕನೆ (ಗ)

ಎನ್ನರಸಿಯುರುಮನೆನ್ನು ಮ
ನುನ್ನತಿಯಿಂ ಪೆಟ್ಟುವೆರ್ಚೆ ಪುರುಡಿಸಿ ಕೊಂದೈ ।
ಮುನ್ನಿಷ್ಕರುಣತೆಯಿಂ ನೀಂ
ನಿನ್ನಂ ಕಂಡೀಗಳಂತು ಸೈರಿಸಲಾರ್ಪೆಂ ॥ ೧೧೦

ಕುಡಿಕುಡಿ ನೀರಂ ಬಾಯಂ
ಬಿಡು ಬಿಡು ನೋವಿಂಗೆ ಸೆಡೆಯದಿರ್ ಸೆಡೆಯದಿರೆಂ ।
ದಡಿಗಡಿಗೆ ನಗುತುಮೋರಂ
ತೆಡೆಯುಡುಗದೆ ಪಿರಿದುಬೇಗವಮಾಖಗಪತಿಯಂ ॥ ೧೧೧

ಪುಡುಕುನೀರರ್ದಿ ಮೊದಲಿಸುತ್ತುಮಿರ್ಪುದುಂ ವಜ್ರದಾಡವಿದ್ಯಾಧರಂ ಕಳತ್ರಂಬೆರಸು ಕೊಂದಕೊರ್ಲೆಸತ್ತರೆಂಬ ನಾಣ್ಣುಡಿಯುಂ ದಿಟಂ ಮಾಡಿ ರೌದ್ರಧ್ಯಾನದಿಂ ಸತ್ತು ಮೊದಲ ನಂಕದೊಳ್ ಮೂಱುಪಳತೋಪಮಾಯುಷ್ಯಮನೊಡೆಯನಾರಕನಾಗಿ ಪುಟ್ಟಿದಂ. ಇತ್ತಲ್ ಕುರುಜಾಂಗಣವಿಷಯದೊಳ್ ಹಸ್ತಿನಾಪುರಮನಾಳ್ವ ಜಯದತ್ತಮಹಾರಾಜನಾತನರಸಿ
ವಿಜಯಮಹಾದೇವಿಯೆಂಬಳ್ ॥ ೧೧೨

ವನಜಾನನೆ ಸುತರಿಲ್ಲದೆ
ಮನಕತದಿಂ ಬಂದು ಗುರುಗಳಂ ವಂದಿಸಿ ಮೆ ।
ಲ್ಲನೆ ಬೆಸಗೊಳ್ವುದುಮಾಸ
ನ್ನಮನಿಯೆಂದಂ ಮಗಳೆ ನಿನಗೆ ಪರಮೋತ್ಸವದಿಂ ॥ ೧೧೩

ಮದನನಿಭಂ ಜಿನಧರ್ಮಾ
ಭ್ಯುದಯಂ ಭುವನೈಕವಂದ್ಯನಮಲಚರಿತ್ರಂ ।
ವಿದಿತಯಶಂ ಪುಟ್ಟುಗುಮೆಂ
ಬುದುಮಾಗಳ್ ನಲಿದು ದಿವ್ಯಮುನಿಪನ ನುಡಿಯಂ ॥ ೧೧೪

ನಂಬಿರ್ಪುದುಂ ಕೆಲವುದಿಸಕ್ಕೆ ವಿಮಲದೇವನಪ್ಪ ಭವನವಾಸಿಗಳ ಬಂದು ಗರ್ಭದೊಳ್ ನೆಲೆಸುವುದುಂ ಗರ್ಭವಾಗಿ ನವಮಾಸಂ ನೆಱೆದು

ಗಂಡುಗೂಸಂ ಪೆತ್ತು ಗುರುದತ್ತಭಟ್ಟಾರಕರಾದೇಶದಿಂ ಪುಟ್ಟಿದನಪ್ಪು
ದಱಿಂ ಗುರುದತ್ತನೆಂದು ಪೆಸರಿಟ್ಟು ಕೊಂಡಾಡುತ್ತಿರೆ ಸಕಲಶಾಸ್ತ್ರ
ದೊಳ್ ಪರಿಣತನಪ್ಪುದಱಿಂ ವಿಜಯದತ್ತಮಹಾರಾಜಂ ಗುರುದತ್ತಂಗೆ
ಪಟ್ಟಮಂ ಕಟ್ಟಿ ಧರಾಭಾರಮನೊಪ್ಪಿಸಿ ಸುಧರ್ಮಭಟ್ಟಾರಕರಲ್ಲಿ
ದೀಕ್ಷೆಯುಮಂ ಕೈಕೊಂಡು ಪೋದನಿತ್ತಲ್ ॥ ೧೧೫

ಗುರುದತ್ತನೃಪತಿ ಸಕಲೋ
ರ್ವರೆಯುಂ ತಮ್ಮಯ್ಯನೆಡೆಗೆ ತಾಂ ಮೀಱಕೆಯ್ಕೆ ।
ಬೇರ್ರಲಧಿಕವೆಂದು ಧರೆ ಘೋಂ
ಕರಿಸೆ ಮಹಾಖ್ಯಾತಿವೆರಸು ವಿಭವದಿನಾಳ್ದಂ ॥ ೧೧೬

ಅಂತಿರ್ದೊರ್ಮೆ ಚಂಪಾಪುರದ ಧಾತ್ರೀವಾಹನನ ಮಗಳಪ್ಪ
ಭಯಮತಿಯುಂ ಬೇಡಿ ಪೆರ್ಗಡೆಗಳನಟ್ಟುವುದುಂ ಕೊಡಲೊಲ್ಲನೆಂ
ದೊಡೆ ಭಂಗಮಾದ ಸಿಂಗದಂತೆ ಪೋಗದೆತ್ತಿ ಕಾದುವುದುಂ ಏೞನೆಯ
ದಿವಸದಂದು ಮಹೀಂದ್ರದತ್ತನೆಂಬ ರಾಜಪುತ್ರನಂಗೈ ಪಱಿದು ನೆಲಕ್ಕೆ
ಬೀೞ್ವುದುಂ ಅದನೊಂದುಗಿಡುಗಂ ಕೊಂಡು ಪೋಗಿ ಕನ್ಯಾಮಾಡದ
ಮುಂದಿಕ್ಕುವುದುಮ್ಮನಭಯಮತಿಕುಮಾರಿ ಕಂಡು ತದ್ವೃತ್ತಾಂತಮ
ನೆಲ್ಲಮನಱಿದು ಜೀವಬಾಧೆಗೆ ಪಿರಿದುಂ ಭಯಸ್ಥೆಯಾಗಿ [1] ॥ ೧೧೭

---

1 ಈ ಗದ್ಯಕ್ಕೆ ಬದಲಾಗಿ (ಕ) ಪುಸ್ತಕದಲ್ಲಿ ಮುಂದೆ ಬರೆದಿರುವ ಭಾಗ ವಿದೆ :—

ಅಂತು ರಾಜ್ಯಲಕ್ಷ್ಮೀಮನೋಹರನಾಗಿರ್ಪುದುಮೊಂದುದಿವಸಂ ಪರದನೊ ರ್ವನಮೂಲ್ಯವಸ್ತುಗಳನೊಂದುಪಟಮುಮಂ ತಂದರಸನ ಮುಂದಿಟ್ಟು ನಿಂದಿ ರ್ಪುದು ಮರಸನಾಪಟದೊಳ್ ಬರೆದ ಪೆಣ್ಣ ರೂಪಂ ನೋಡಿ ವಿಸ್ಮಯಂಬಟ್ಟದಾರ ರೂಪೆಂದು ಬೆಸಗೊಳ್ವುದುಮಂಗವಿಷಯದ ಚಂಪಾಪುರಮನಾಳ್ವ ಧಾತ್ರೀವಾಹನ ಮಹಾರಾಜನ ಮಗಳಪ್ಪಭಯಮತಿಕುಮಾರಿಯ ರೂಪೆಂದು ಬಿನ್ನಪಂಗೆಯ್ಯು ದುಂ ॥

ಪರದಂಗೆ ಮೆಚ್ಚಿ ಧರಣೀ
ಶ್ವರಮಾದ್ಯಂ ಮೆಚ್ಚುಗೊಟ್ಟು ತದನಂತರದೊಳ್ ।
ಸರಸಿಜಮುಖಿಯುಂ ಮದಸಿಂ
ಧುರಗಮನೆಯುಮೆನಗೆ ಕುಡುವುದೆಂದವನೀಶಂ ॥

ಎನಗೆ ಗುರುದತ್ತನಲ್ಲದೆ
ಜನನಾಥರ್ ತನ್ನ ರೂಪು ನಿಶ್ಚಯುವೆಂದಾ ।
ವನಜಮುಖಿ ದಾದಿಯುಂ ನೆ
ಟ್ಟನೆ ವಸುಧಾಧೀಶನಲ್ಲಿಗಟ್ಟುವುದಾಗಳ್ ॥ ೧೧೮

ಧಾತ್ರೀವಾಹನಮಹಾರಾಜಂ ಮಗಳಟ್ಟಿದ ಮಾತಂ ಕೇಳ್ದು ಸಂತೋಷಂಬಟ್ಟು ಕಾಳಗಮಂ ಮಾಣಿಸಿ ಗುರುದತ್ತಮಹಾರಾಜಂಗೆ ಕುಮಾರಿ

ಪೆರ್ಗಡೆಗಳನಟ್ಟುವುದುಂ ಧಾತ್ರೀವಾಹನಮಹಾರಾಜನಭಯಮತಿಯುಂ ಕೂಡಲೊಲ್ಲದೆ ಕಲಹಮಂ ಪಣ್ಣಿ ವಿಶ್ವಮತಿಯುಂ ವಿಶ್ವಕರ್ಮನುಮೆಂಬಿರ್ವರ್ ಬಡಗಿಯರಂ ಕಂಡು ಗುರುದತ್ತನಪ್ಪೊಡೆ ಇಲ್ಲಿದನಾತನಂ ಪಗೆಗೊಂಡು ನಮಗೆ ಮೃತ್ಯುಪೊದಿಪ್ಪುದು ಕಜ್ಜಮಲ್ಲೆಂದು ನೀಮೋರ್ವರೋರ್ವರಾಱುತಿಂಗಳಿಂದೊಳಗೆ ತಡೆಯದ್ಯನೂಱು ರಥಂಗಳಂ ಮಾಡುವುದೆಂಬುದುಂ ವಿಶ್ವಮತಿ ಬೇಗಮಾಱುತಿಂಗಳಿಂದೊಳಗೆ ಅಯ್ನೂರು ರಥಂಗಳಂ ಮಾಡಿ ತಂದೊಪ್ಪಿಸಿದಂ. ವಿಶ್ವಕರ್ಮನಾಱುತಿಂಗಳಿಂದೊಂದು ರಥದ ಗಾಲಿಯುಂ ಸವಿಸ್ತರಂ ಮಾಡಿ ತಂದರಸಂಗೆ ತೋಱುವುದುಮರಸನದಱ ಗುಣಮನಱಿಯದೆವೊಂದೆ ಗಾಲಿಯಂ ತಂದನೆಂದು ॥

ಮುನಿದು ಕೊಲವೇಳ್ಪುದೊಯ್ಯನೆ
ಬಡಗಿಯುಮಮಾರಥದ ಗಾಲಿಯುಂ ಭರದೊಳ್ಕೀ ।
ದಿನಿಯೊಳರಡಿಕ್ಕಿ ಗುರುದ
ತ್ತನರೇಶ್ವನಲ್ಲಿಗುಜಿ ಬಂದವಯುವದಿಂ ॥

ವಾತ್ಸಲ್ಯರತ್ನಾಕರನಂ ಕಂಡು ತನ್ನ ಬಂದ ವೃತ್ತಾಂತಮೆಲ್ಲಮಂ ಪೇಳ್ದು ಕರಣೊಪ್ಪಿಕ್ಕಿರ್ದನಿತ್ತಲಾರದದ ಗಾಲಿ ನೆಲದೊಳ್ ಬೀಳದೆ ಪದಿನೈದುದಿವಸಂಬರಮೊಡೆಯುಡುಗದೆ ಅಂತರಿಕ್ಷದೊಳ್ ತಿಣ್ಣನೆ ತಿರಿಯುತ್ತಿರೆ ಧಾತ್ರೀವಾಹನಮಹಾರಾಜಂ ಕಂಡು ಮೆಚ್ಚಿ ವಿಶ್ವಕರ್ಮನೆಲ್ಲಿದನೆನೆ ಗುರುದತ್ತಮಹಾರಾಜನಂ ಶರಣೊಕ್ಕಿರ್ದಪನೆಂಬುದುಂ ಅರಸಂ ಮುನಿದವನಂ ಶೀಘ್ರಮಟ್ಟುವುದೆಂದು ಗುರುದತ್ತಮಹೀಶನಲ್ಲಿಗೆ ಪೆರ್ಗಡೆಗಳನಟ್ಟುವುದುಮಭಯಮತಿಯುಂ ಕೂಡಲೊಲ್ಲದೆ ರೋಷದೊಳಗೀಯುತ್ತಿಪ್ಪಾತನೀಮಾತಿಂಗೆ ಭಂಗಮಾದ ಸಿಂಗದಂತೆ ಪೊದಳ್ದಿತ್ತಿ ಚಂಪಾಪುರಮಂ ಮೂವಳಸಾಗಿ ಸುತ್ತಿ ಮುತ್ತಿಕೊಂಡು ॥

ಸರಸಿಜಮುಖಿಯುಂ ಕಪ್ಪಂ
ಬೆರಸೀವುದು ಬೇಗಮಿಮಾಯುದಿದೊಡೆ ತನ್ನಂ ।

ಯಂ ಕುಡುವುದುಂ ವಾತ್ಸಲ್ಯರತ್ನಾಕರನಭಯಮತಿಗೆ ಮಹಾದೇವೀ ಪಟ್ಟಮಂ ಕಟ್ಟಿ ಹಸ್ತಿನಾಪುರಕ್ಕೆವಂದು ಸುಖದಿಂ ರಾಜ್ಯಂಗೆಯ್ಯುತ್ತಿಮಿರ್ಪುದುಂ ವಜ್ರದಾಡನಪ್ಪ ನಾರಕಂ ನರಕದಿಂ ಬಂದು ನೀಲಗಿರಿಯೆಂಬ ಪರ್ವತದೊಳ್ ಪುಲಿಯಾಗಿ ಪುಟ್ಟಿ ತದ್ಗಿರೀಂದ್ರದ ಕೆಳಗಿರ್ದ ನಾಡವರೆಲ್ಲರುಮಂ ಕಾದುತ್ತಿರ್ಪುದುಮಾನಾಡವರೆಲ್ಲಂ ಗುರುದತ್ತಮಹಾರಾಜನರಮನೆಗೆ ಬಂದು ಪುಯ್ಯಲಿಡುವುದುಂ [1] ಪೂರ್ವವೈರಮುಂಟಪ್ಪುದಱಿಂ ತೊಟ್ಟನೆ

ಧುರದೊಳ್ ತಡಲ್ಲದಿಕ್ಕುವೆ
ನರವರಿಸುವ ಗಂಡನಲ್ಲೆ ನೀಯವಸರದೊಳ್ ॥

ಎಂದು ಪೆರ್ಗಡೆಗಳನಟ್ಟುವುದುಂ ಧಾತ್ರೀವಾಹನಮಹಾರಾಜನವರ ಮಾತಿಂಗೆ ನಕ್ಕು ॥

ಲಿಂಗಿಯುಮಂ ದೂತರುಮಂ
ಸಂಗರದೊಳ್ ಭೀತನಪ್ಪ ಬಂಟನುಮಂ ಪೇ ।
ಳ್ಗಂಗನೆಯರುಮಂ ಕೈದುಗ
ಳಿಂ ಗೆಂಟಾಗಿರ್ದ ನರರುಮಂ ಕಲಿಯುಪ್ಪರ್ ॥

ಕೊಲಲಾಗದು ನೀವುಸಿರದೆ ಪೋಗಿಮೆಂದು ಯುದ್ಧಸನ್ನದ್ಧನಾಗಿ ಪೊಱಮಟ್ಟು ಸಮುದ್ರಂ ಸಮುದ್ರಮುಂ ತಾಗುವಂತೆ ತಾಗಿ ಕಾದುತ್ತಿರ್ಪುದುಮೇೞನೆಯ ದಿವಸದಂದು ಬ್ರಹ್ಮೇಂದ್ರದತ್ತನೆಂಬ ರಾಜಪುತ್ರನ ಮುಂಗೈ ಪಱಿದು ನೆಲಕ್ಕೆ ಬೀೞ್ವುದುಮದನೊಂದು ಗಿಡಿಗಂ ಕೊಂಡು ಕನ್ಯಾವಾಡದ ಮುಂದಿಕ್ಕುವುದುಮದನಭಯಮತಿಕುಮಾರಿ ಕಂಡು ತದ್ವೃತ್ತಾಂತಮೆಲ್ಲಮನಱಿದು ॥

ಗುರುದತ್ತನುಮಂಗಮಹೀ
ಶ್ವರನುಂ ನುಗರ್ಗಿ ತಾಗಿ ಚಾತುರ್ಬಲಮಂ ।
ಧುರದೊಳಱೆಯಟ್ಟಿ ಕೊಂದಪ
ನರಿದಾಯ್ತೀವೆನ್ನ ಪಾಪಕರ್ಮದ ಕಥದಿಂ ॥
ಛಲದಿಂ ಮೆಯ್ಯಱಿಯದೆ ಪಲ
ರಳಿವಂ ಕೈಕೊಳ್ಳದೆಯ್ದೆ ನಿಃಕರುಣದಿನು ।
ಜ್ಜ್ವಲದಯೆಯುಂ ಮನದಿಂದಂ
ತೊಲಗಿಸಿದಧರ್ಮಪರಿವರ್ಗರುಂ ಮುನಿಸಿಂದಂ ॥

1 ನರನಾಥಂ ಕೇಳ್ದು ಸವಿ
ಸ್ತರದಿಂ ಖರವೇಳ್ದು ಕೇಳ್ವುದುಂ ನಾಡವರಂ ।

ಕೋಪದಿಂ ಪುಲಿಯಿರ್ದ ಗುಹೆಯ ಬಾಗಿಲೊಳ್ ಬೆಟ್ಟಾಗಿ ಪುಳ್ಳಿಯ ನೊಟ್ಟಿಸಿ ಕಿಚ್ಚನಿಕ್ಕುವುದುಂ ಪಱಿಯ ರಭಸಕ್ಕೆ ಪುಲಿ ಪೊಱಮಡಲ ಪ್ಕಱದೆ ಬೆಂದು ಸತ್ತು ಕಾಮನಿರ್ಜರೆಯೆಂಬ ಸೌರಾಷ್ಟ್ರವಿಷಯದ ದ್ರೋಣಿಮಂಥ ಮೆಂಬ ಪರ್ವತದ ಕೆಳಗಿರ್ದ ಪಳ್ಳಿಖೇಟಮೆಂಬೂರೊಳ ಳಾಭರಣನೆಂಬ ಪಾರ್ವಂಗಂ ಕಂಟಕೆಯೆಂಬ ಪಾರ್ವಿತಿಗಂ [1] ಹಳಮುಖ ನೆಂಬ ಮಗನಾಗಿ ಪುಟ್ಟಿ ಬಳೆಯುತಿರ್ದನಿತ್ತಲ್ ಗುರುದತ್ತಮಹಾರಾ ಜನಮೃತಾಶ್ರುಭಟ್ಟಾರಕರೇಕವಿಹಾರಿಗಳ್ ತನ್ನ ಪುರಕ್ಕೆ ಬಂದೊಡ ವರಂ ವಂದಿಸಿ [2] ತನ್ನ ಭವಮಂ ಬೆಸಗೊಳ್ವುದುಂ ಅವರುಪರಿಚರ ಮಹಾರಾಜನಾದ ಭವಂ ಮೊದಲಾಗೆ ಗುರುದತ್ತನಾದಲ್ಲಿವರಮಾದ ನಾಲ್ಕು ಭವದೊಳಾದ ವೃತ್ತಾಂತಮೆಲ್ಲಮಂ ಪೇೞ್ವುದುಂ || ೧೯೯

ಅಭಯಮತಿದೇವಿಯುಂ ತ
ನ್ನ ಭವಮನಟ್ಕಿತುರ್ದ ಕೇಳ್ವುದುಂ ಮುನಿಪಂ ಸಂ |
ದಭಯಮತಿಗಱಿಪಿದಂ ಪೂ
ರ್ವಭವಮನಿಂತೆಂದು ದುಂದುಭಿಧ್ವನಿಯಿಂದಂ || ೨೦೦

ಚಂಪಾಪುರದೊಳೊರ್ವಂ ಗರುಡವೇಗನೆಂಬ ಕಿರಾತನಿರ್ದ

ದರಸಂಗೆ ಪುಲಿಯೊಳಾದು
ಬ್ಬರಮಂ ಬಿನ್ನವಿಪುದುಂ ನರೇಂದ್ರಾರಾಧ್ಯಂ || (ಕ.)

[1] ಪಾರ್ವತಿಗಂ (ಗ)   [2] ಗುರುದತ್ತಮಹಾರಾಜಂ ಪುಲಿಯಂ ಕೊಂದು ಮಹೋತ್ಸಹದಿಂ ಪೊಳಲ್ಗೆ ವಂದು ರಾಜ್ಯಂಗೆಯ್ಯುತ್ತಿರ್ಪುದುಮೊಂದು ದಿವಸಂ ||

ಧರಣೀಭೂಷಣಮೆಂಬುದು
ಗಿರಿ ತದ್ಗಿರಿಯೊಳ್ ದುರಘೌಘಹರರ್ ಗುಣಸಾ |
ಗರರೂರ್ಜಿತವರ್ತನೋಭವ
ಹರಣರ್ ಕಳಾಗ ಮೈಕಪಾರಗರಮಳರ್ ||

ಏಳುನೂರ್ವರ್ ರುಷಿಯರ್ವೆರಸು ಅಮೃತಾಸ್ರವಭಟ್ಟಾರಕರ್ ವಂದಿರ್ದರೆಂಬುದಂ ಕೇಳ್ದು ಸಮ್ಯಕ್ತ್ವಚೂಡಾಮಣಿ ಸಕಳಮಕುಟಬದ್ಧರುಮಭಯಮತಿ ಮಹಾದೇವಿಯುಂಬೆರಸು ಪೋಗಿ ಮುನಿವರರಂ ವಂದಿಸಿ ಮುಂಪೆ ಕುಳ್ಳಿರ್ದು ಧರ್ಮಮಂ ಕೇಳ್ದು ತದನಂತರಂ (ಕ.)

ನಾತನ ಪೆಂಡತಿ ಗೋಮುಖಿಯೆಂಬಳೊಂದುದಿವಸಂ ಶ್ರಾವಕರೆಲ್ಲರುಂ ಸಮಾಧಿಗುಪ್ತಾಚಾರ್ಯರಲ್ಲಿ ವ್ರತಂಗಳಂ ಕೈಕೊಳ್ವುದುಂ ಕಂಡತಿಯಾಗಿ ತಾನುಂ ಪಂಚಾಣುವ್ರತಂಗಳಂ ಕೈಕೊಂಡು ಪೋಗಿ ಗರುಡವೇಗಂ ಬಲೆಯನೊಡ್ಡಿ ತಂದ ಪಕ್ಕಿಗಳೆಲ್ಲಮಂ ಬಿಟ್ಟು ಕಳೆವುದುಂ ಪೇಡಂ ಬಂದು ಬಡಿವುದುಂ ಗಂಡನಂ ಬಿಟ್ಟು ನಂಟರ ಮನೆಯೊಳ್ ಪೊರ್ದಿರ್ದು ಧಾತ್ರೀವಾಹನ ಮಹಾರಾಜನ ಸಿರಿಯಂ ನೋಡಿ ಬಯಸಿ ಕೆಲವಾನುಂ ಕಾಲಕ್ಕೆ ವ್ಯಾಧಿಯಿಂ ಸತ್ತು ತದ್ವ್ರತದ ಫಲದಿಂ ಮಗಳಾಗಿ ಪುಟ್ಟಿದೆಯೆಂಬುದುಂ ॥ ೧೨೧

ಜನಪತಿಯುಮರಸಿಯುಂ ಮು
ನ್ನಿನ ತಮ್ಮ ಭವಂಗಳಂ ಸವಿಸ್ತರದಿಂ ಮೆ ।
ಲ್ಲನೆ ಕೇಳ್ದು ನಂಬಿ ಸಂಸೃತಿ
ವನಧಿಯುಮಂ ದಾಂಟೆ ಪೋಪ ಬಗೆಯನೆ ಬಗೆದರ್ ॥ ೧೨೨

ಜವನೆಂಬ ನಾಯು ಬಾರಿಗೆ
ಭವಭವದೊಳ್ ಜೀವನೆಂಬ ಮೊಲನಘವಟ್ಟುಂ [1] ।
ಭವಮಱಿಯದೆ ಬೆಚ್ಚಲ್ಲದೆ
ಜವನನೆ ಮೆಚ್ಚಿಪ್ಪುದೊಲ್ಲವತಿಶಯಸುಖಮಂ ॥ ೧೨೩

ಪುಸಿವರ ಪಿಸುಣರ ದೆಸೆಯಿಂ
ವಸುಮತಿ ಕಿಡುಗೆನ್ನದವರ ಮಾತನೆ ಪಿಡಿವಾ ।
ಲಿಸುವವನಿಪಾಳರಂದದಿ
ನಸುವಂ [2] ಬಿಡದಿಂದ್ರಿಯಂಗಳೆಂದುದನೆಂಗುಂ ॥ ೧೨೪

ಅಳಿಪಿಂ ಸಂಸೃತಿಯುಂ ಮು
ನ್ನೊಳಗಱಿಯದೆ ನಂಬಿ ಕೆಟ್ಟ ಕೇಡದೆ ಸಾಲ್ಗುಂ ।
ಮಳರಹಿತಮಪ್ಪ ಜಿನರು
ಜ್ಜ್ವಳಪಾದಪಯೋಜಯುಗ್ಮಮಂ ಪೊರ್ದಿರ್ಪೆಂ ॥ ೧೨೫

---

1 ಮೂಲಮಟ್ಟುವುದುಂ (ಗ)   2 ಅಸುವುಂ (ಕ. ಖ.)

ಮನೆಯುಂ ನಿಲಿಸುವ ಸಜ್ಜನ
ವನಿತೆಯನೀಡಾಡಿ ಸೂಳೆಗೆಳಸಿರ್ದ ಜಡಾ |
ತ್ಮನ ತೆಱದಿನೆಗ್ಗನಾಗದೆ
ಜಿನಮತಮಂ ಪಿಡಿವೆನನ್ಯಮತಮಂ ಬಿಡುವೆಂ || ೧೨೬

ದಿವಿಜೇಂದ್ರಖೇಚರೇಂದ್ರವಿ
ಭವಮುಮಂ ಮನುಜೇಂದ್ರ [1] ರಱುಸುಖಂಗಳುಮೋವ |
ಧ್ರುವಮುವನಮೋಘಮೊಲ್ಲೆಂ
ಪ್ರವರಜಿನರ್ ಪಡೆದ ಮೋಕ್ಷಪದಮದೆ ಸಾಲ್ಗುಂ || ೧೨೭

ನಿಲ್ಲದೆ ನಾಲ್ಕುಂಗತಿಗಳೊ
ಳೆಲ್ಲಂ ತಿರಿತಂದೆನನ್ಯರಂ ಪೊರ್ದಿ ಮನಂ |
ತಲ್ಲಣಿಸಿದುದೀಜಿನಪದ
ಪಲ್ಲವಮಂ ಪೊರ್ದಿ ಪೊರ್ದುವೆಂ ನಿರ್ವೃತಿಯಂ || ೧೨೮

ಎಂದು ಭಾವಿಸಿ ಶ್ರೀದತ್ತನೆಂಬ ತನ್ನ ಪಿರಿಯಮಗಂಗೆ ಪಟ್ಟಮಂ ಕಟ್ಟಿ ಧರಾಭಾರಮನೊಪ್ಪಿಸಿ ಸಕಲರಾಜ್ಯಮುಮಂ [2] ತೊಱೆದಮೃತಾಸ್ರವಭಟ್ಟಾರಕರಲ್ಲಿ ಜಿನದೀಕ್ಷೆಯಂ ಕೈಕೊಂಡು ದ್ವಾದಶಾಂಗಶ್ರುತಧರನಾಗಿ [3] ಪಲವುಕಾಲಂ ಗುರುಸೇವೆಯೊಳಿರ್ದು ಗುರುಗಳಾಜ್ಞೆಯಿಂದೇಕವಿಹಾರಿಗಳಾಗಿ ಪೋದರಿತ್ತಲಭಯಮತಿಯುಮವರೆ ಗುರುಗಳಾಗೆ ಸುವ್ರತಗಂತಿಯರಲ್ಲಿ ಜಿನದೀಕ್ಷೆಯಂ ಕೈಕೊಂಡು[ಗ್ರೋಗ್ರ] ತಪ[ಶ್ಚರಣ]ಂಗೆಯ್ದು [ಸಮಾಧಿಮರಣದಿಂ] ಮುಡಿಪಿ ಕಾಪಿಥ [4] ಮೆಂಬೆಂಟನೆಯ ಕಲ್ಪದೊಳ್ ಮಿತ [5] ಕಾಂತನೆಂಬ ದೇವನಾಗಿ ಪುಟ್ಟಿದಳಿತ್ತ ಗುರುದತ್ತಭಟ್ಟಾರಕರುಂ ವಿಹಾರಿಸುತ್ತುಂ ಬಂದು ಪಳ್ಳಿಖೇಡಪೊೞಲೊಳ್

---

1 ನರೇಂದ್ರ (ಕ. ಬ.)
2 ಕಟ್ಟಿ ಸಾಮ್ರಾಜ್ಯಮಂ ಕೊಟ್ಟು ತಾಂ ತೊಱೆದ (ಕ. ಬ.)
3 ಧಾರಿಯಾಗಿ (ಗ)
4 ಕಾಪಿಷ್ಟ (ಕ. ಬ.)
5 ಅಮೃತ (ಗ)

ಯತ್ರಾಸ್ತಮಿತವಾಸಿಗಳಪ್ಪದಱಿಂ ನೇಸರ್ಪಡುವುದುಂ ಪೋಗಲೊಲ್ಲದೆ ರಾತ್ರಿಪ್ರತಿಮೆನಿಂದು ಬೆಳಗಾದಾಗಳ್ ಮಂಜು ಪಿರಿದಾಗೆ ನೆಲನಪ್ರಾಸುಕಮೆಂದು ಸೂರ್ಯಪ್ರತಿಮೆನಿಂದರನ್ನೆಗಂ ವಜ್ರದಾಡ [ಚರ] ನಪ್ಪ ಹಳಮುಖನುೞಿಲೆಂದು ಪೋಗುತ್ತೆ [ತನ್ನ ವಲ್ಲಭೆಗೆ ಮೂಡಣಕೆಯ್ಗೆ ಕೂೞಿಂ ತಪ್ಪುದೆಂದು ಪೇೞ್ದು ಪೋಗಿ] [1] ಮೂಡಣಕೆಯ್ ಕೆಸಱಾಗಿರೆ ಪಡುವಣ ಕೆಯ್ಗೆ [ಪೋಗುತ್ತೆ ಮೂಡಣಕೆಯ್ ಕೆಸಱ್ ಪಿರಿದಾದೊಡೆ ಪಡುವಣ ಕೆಯ್ಗೆ ಪೋದಂ ಕೂೞನಲ್ಲಿಗೊಯ್ವೆಂದು · ಪೇೞ್ವುದೆಂದು ಮುನಿವರರ ಮುಂದೆ ನುಡಿದು] [2] ಪೋಗಿ ಮೂಱುಜಾವಂಬರಮುತ್ತು ಪೆಂಡತಿಯು ಬರವಂ ಕಾಣದೆ ಪಸಿದು ಮನೆಗೆ ಬಂದು [ಪಸಿದ ಕೋಪದಿಂ ತನ್ನ] ಭಾರ್ಯೆಯುಂ ಸಾಯಬಡಿವುದುಮಾಕೆ ನಿಮ್ಮ ಪೋದ ದೆಸೆಯ ನಱಿಯದಿರ್ದೆನೆನೆ ಅಲ್ಲಿ ನಿಂದ ರಿಸಿಯರ್ಪೇೞ್ದರಿಲ್ಲಾ [ಪೇೞೆನೆ ಅವಳಂಜಿ ಪೇೞ್ದರಿಲ್ಲೆಂದು ಪುಸಿದು] [3] ಪೇೞ್ವುದುಂ ಮುನಿನಾಥನಮೇಲೆ ಮುನಿಸಾಗಿ ದುಷ್ಟಬುದ್ಧಿಯುಂ ಸುಟ್ಟು ಕೊಂದಲ್ಲದುಣ್ಣೆನೆಂದು [ಪರಿದು] ಪೋಗಿ ಸೀರೆಯುನೆಣ್ಣೆಯೊಳದ್ದಿ ಪಾದದಿಂ ತಲೆವರಂ ಸುತ್ತಿಕಿಚ್ಚಂ ತಗುಳ್ಚುವುದುಂ ॥ ೧೨೯

ಹಳಮುಖನೆನ್ನಂ ಕೆಮ್ಮನೆ
ಮುಳಿಸಿಂ ನಾನಾಪ್ರಕಾರದಿಂ ಸುಟ್ಟಪನೆಂ ।
ದೊಳಗುರಿಯದೆ ತಲ್ಲಣಿಸದೆ
ತಳರದೆ ಸಂಕಿಸದೆ ನಿಂದನಚಲಿತಧೈರ್ಯಂ ॥ ೧೩೦

ಆತಂಗೆ ಮುನಿಯಲೊಲ್ಲದೆ
ಭೀತಿಯಿನಲ್ಲಡದೊಂದೆಮನದಿಂ ಕರ್ಮ ।
ವ್ರಾತಮನರಿದಂ ಬಗೆವೊಡೆ
ಭೂತಳದೊಳ್ ಕೋಪಮಿಲ್ಲದಾತನೆ ಧನ್ಯಂ ॥ ೧೩೧

---

1 ತನ್ಮುನೀಂದ್ರರಂ ಕಂಡು (ಗ) 2 ಪೋದಂ ಕೂೞನಲ್ಲಿಗುಯ್ವೆಂದೆನ್ನ ಪೆಂಡತಿಗೆ ಪೇೞೆಂದು (ಗ) 3 ಪೇೞಿಮೆನೆ ಪೇೞದುಸಿರದಿರ್ದನೆಂದು (ಗ)

ಮುನ್ನಿನ ಕರ್ಮಮೆ ನೆವನೆವ
ದಿನ್ನೆಟ್ಟನೆ ಬಂದು ಫಲಮನಿತ್ತಪುಗದಱಿಂ |
ದಿನ್ನಾಕರ್ಮಕ್ಕಲ್ಲದೆ
ಸನ್ನುತಮತಿಯವರ್ಗೆ ಮುಳಿವುದೊಂದೆಗ್ಗಲ್ತೇ || ೧೩೨

ಮುನಿದೊಡೆ ಕರ್ಮವಿರೋಧಿಗೆ
ಮುನಿವುದು ತತ್ಕರ್ಮರಾಜನ ಪ್ರೇರಣೆಯಿಂ |
ಘನಮಪ್ಪ ಪೀಡೆಯಂ ನೆ
ಟ್ಟನೆ ಮಾಡುವ ದುರ್ಜನರ್ಗೆ ಮುನಿವುದು ಚದುರೇ || ೧೩೩

ಬಱಿವೆರಸಿದೇಱುಂ ಕುಪ್ಪಸವೆರಸಿದ ಮಿಾಹವುಂ ಮುಗಿಲ್ವೆರಸಿದ ಮದುವೆಯುಂ ಮಣ್ವೆರಸಿದ ನೀರುಂ ಕಿಸುವೆರಸಿದ ಪೊನ್ನುಂ ಗಸಿವೆರಸಿದೆಣ್ಣೆಯುಂ ನೀರ್ವೆರಸಿದ ಪಾಲುಂ ಕಪ್ಪುವೆರಸಿದ ಮಾಣಿಕವುಂ ಮುನಿಸುವೆರಸಿದ ಕೂರ್ಮೆಯುಂ ಮುಳ್ವೆರಸಿದ ಕೂೞುಮೆಂತುಂ ಲೇಸಲ್ಲದಂತೆ ಶರೀರದ ಪರಿಗ್ರಹ [ದ] ಮೋಹದೊಳ್ ಬೆರಸಿದ ಧ್ಯಾನಮು ಮೊಪ್ಪದು ಮತ್ತಂ ತೊೞೆ ಕಾರಣಮಾಗಿ ಪೞುಗೋಲುಂ ಮುಳ್ ಕಾರಣಮಾಗಿ ಕೆರ್ಪುಂ ಸೂಳ್ ಕಾರಣಮಾಗಿ ಕುಂಟಣಿಯುಂ ಮಗಳ್ ಕಾರಣಮಾಗಿ ಅಳಿಯನಂ ಬೆಸಂ ಕಾರಣಮಾಗಿ ಬಂಟನಂ ಕೊಂಡಾಡುವಂತೆ ಸ್ವರ್ಗಾಪವರ್ಗಂ ಕಾರಣಮಾಗಿ ಶರೀರಮುಮಂ ಪರಿಗ್ರಹಮುಮಂ ತಕ್ಕಂತೆ ಕೊಂಡಾಡುವುದು. ರಸಂ ಬಂದೊಡೆ ತಂಬುಲಮಂ, ಎಳ್ ಬಂದೊಡೆ ಕೊದಳಿಯುಂ, ಬೆಳಸು ಬಂದೊಡೆ ನೆಲನಂ, ಸಾಲಂ ಬಂದೊಡೆ ಬಟ್ಟೆಗುತ್ತನಂ, ಕೂೞನುಂಡೊಡೆ ಪುಲ್ಲಿಗೆಯುಂ [1] ಬಿಡುವಂತೆ, ತನ್ನ ಕಾರ್ಯಂ ತೀರ್ದ ಬೞಿಕ್ಕೆ ಕಡೆಯೊಳ್ ಶರೀರಮುಮಂ ಪರಿಗ್ರಹಮುಮಂ ತ್ರಿಶುದ್ಧಿಯಿಂ ಬಿಟ್ಟು ಪರಿಚ್ಛೇದಿಯಪ್ಪುದೀನೀತಿಯಲ್ಲದೆ [2] ಸ್ವರ್ಗಾಪವರ್ಗಂಗಳನೆಯ್ದುವೆನೆಂಬಂ [ಗಳವೆರಸು ಬಿಲಂಬುಗುವೆನೆಂಬ ಕಡಿತಲೆವೆರಸು ಪಾಸಿನಮೇಲೆ ನಿದ್ರೆಗೆಯ್ವೆನೆಂಬ ಕುದುರೆಯ

1 ಪತ್ಥಳಿಯುಂ (ಗ)   2 ಪರಿಚ್ಛೇದಿಸಿಯಿಪ್ಪುದಿನಿಸಲ್ಲದೆ (ಗ)

ನೇಱು ಮಾಡಕೆಯ್ದುವೆನೆಂಬ ಬಂಡಿವೆರಸು ಕೋಂಟೆಯುಂ ಲಂಘಿಸುವೆನೆಂಬ] ಬಿಟ್ಟೇಱುಮೆಡ್ಡಣಂಬೆರಸು ತೊಱೆಯನೀಸುವೆನೆಂಬ ಬೆಳ್ತನ [1] ಮೆಕ್ಕುಮೊಂದು ಶರೀರಮುಮಂ ಪರಿಗ್ರಹಮುಮಂ ತೊಱೆದು ಶುಕ್ಲ ಧ್ಯಾನದಿಂ ಘಾತಿಕರ್ಮಂಗಳಂ ಕಿಡಿಸಿ ಕೇವಲಜ್ಞಾನಿಯಾಗಿರ್ಪುದುಂ ಚತುರ್ವಿಧದೇವರ್ಕಳುಂ ಕೇವಲಿಪೂಜೆಯಂ ಮಾಡಲ್ವೇಡಿ ಬಂದು ಪೂಜಿಸಿ ಮುಂದೆ ನಿಂದು [ಸ್ತುತಿಸಿದರಿಂತು] ॥ ೧೩೪

ಜಯ ದಿವಿಜಮಹಿತ ಜಯ ದೋಷರಹಿತ
ಜಯ ದಿವ್ಯಮೂರ್ತಿ ಜಯ ವಿದಿತಕೀರ್ತಿ
ಜಯ ಮದನವೈರಿ ಜಯ ದುರಿತಹಾರಿ
ಜಯ ಗುಣನಿಧಾನ ಜಯ ಸುಖನಿಧಾನ
ಜಯ ಶಾಂತರೂಪ ಜಯ ವಿಜಿತಕೋಪ [2]
ಜಯ ಮೋಹವಿಳಯ ಜಯಧರ್ಮನಿಳಯ
ಜಯ ಭವ್ಯವಂದ್ಯ ಜಯ ಜಗದ್ವಂದ್ಯ
ಜಯ ಕಾಂತಿಧಾಮ ಜಯ ಪುಣ್ಯಧಾಮ
ಜಯ ಮುನಿಗಣೇಶ ಜಯ ಮದವಿನಾಶ
ಜಯ ದಯಾಸಮುದ್ರ ಜಯ ನಯಸಮುದ್ರ
ಜಯ ಸಚ್ಚರಿತ್ರ ಜಯ ಜಗಪವಿತ್ರ
ಜಯ ಸೇವ್ಯವಚನ ಜಯ ಸತ್ಯವಚನ
ಜಯ ಯಮಕೃತಾಂತ ಜಯ ಮುಕ್ತಿಕಾಂತ
ಜಯ ಬೋಧರೂಪ ಜಯ ನಷ್ಟತಾಪ
ಜಯ ಸಕಲರುಂದ್ರ ಜಯ ಜಯ ಜಿನೇಂದ್ರಾ ॥ ೧೩೫

ಶ್ರೀಯುಂ ನಿಶ್ಶ್ರೇಯಸಸಂ
ಶ್ರೀಯುಂ ಜಿನ ನಿನ್ನ ಪಾದಸೇವನೆಯಿಂ ವಾ ।
ಕ್ಶ್ರೀಯುಂ ಧವಳತಕೀರ್ತಿ
ಶ್ರೀಯುಂ ದೊರೆಕೊಳ್ಗುಮಲ್ಲಿ ಸಂದೆಯಮುಂಟೇ ॥ ೧೩೬

---

1 ಬೞಂಬ (ಗ) 2 ಪಾಪ (ಕ. ಬ.)

ಸುರರಾಜಮುಕುಟಘಟ್ಟಿತ
ಚರಣದ್ವಯ ಕರ್ಮಜಲಧಿಬಡಬಾನಲ ಭಾ ।
ಸುರಬೋಧ ನಿನ್ನನಱಿಯದೆ
ದುರಿತಯುತರ್ ಪೊರ್ದಲಾಱರಕ್ಷಯಸುಖಮಂ ॥ ೧೩೭

ನರಕದೊಳಡಿಗಡಿಗೆ ಮಹಾ
ದುರಿತದ ಫಲದಿಂದೆ ಬಿರ್ದು ನವೆವರ್ ನಿನ್ನಂ ।
ಸ್ಮರಿಯಿಸಲಱಿಸಲೊಲ್ಲದೆ
ನರರವನಿಯೊಳಲ್ಲಿ ದೇವ ಸಂದೆಯಮುಂಟೇ ॥ ೧೩೮

ದಿನಕರನುದಯಂಗೆಯ್ಯದೆ
ಘನಮಪ್ಪ ಮಹಾಂಧಕಾರಮುಡುಗದ ತೆಱದಿಂ ।
ಜಿನನಾಥ ನಿನ್ನ ಪದಮಂ [1]
ನೆನೆಯದ ಮನುಜಂಗೆ ಪೋಗದೆಂತುಂ ಕರ್ಮಂ ॥ ೧೩೯

ತಾರಾಧೀಶ್ವರನುದಯದೆ
ವಾರಾಸಿ ಕಡಂಗಿ ಪೆರ್ಚುವಂತಿರೆ [2] ಮುಕ್ತಿ ।
ಶ್ರೀರಮಣ ನಿನ್ನ ಮಹಿಮೆಗೆ
ಧಾರಿಣಿಯೊಳ್ ಭವ್ಯನಪ್ಪ ಮನುಜನ ನಲಿಗುಂ ॥ ೧೪೦

ಪಿಂಗದ ಬೆಳ್ದಿಂಗಳ್ ಕ
ಳ್ಳಂಗೆಂತುಂ ಶೋಭೆವಡೆಯದಂತದಱಿಂದು ।
ತುಂಗಗುಣ ನಿನ್ನ ಮೃದುವಚ
ನಂಗಳುಮೇಗೆಯ್ದುವೊಪ್ಪನೆಱಮನದಂಗಂ ॥ ೧೪೧

ನಿನ್ನಾಗಮಮಿರ್ದಂತಿರೆ
ತನ್ನಿಚ್ಛೆಗೆ ನಚ್ಚಿ ಮೆಚ್ಚಿ ಕಷ್ಟರ ಮನಮಂ ।

---

1 ಮತಮಂ (ಕ. ಖ.) 2 ತಾರಾಧಿಪನುದಯದೊಳಂಭೋರಾಶಿ ಕಡಂಗಿ ಪೆರ್ಚುವಂದದಿ (ಗ)

ಮನ್ನಿಸಿ ನೆಱೆ ಕೇಳ್ವ ನರಂ
ಸನ್ನುತಸೌಖ್ಯಕ್ಕೆ ದೇವ ಭಾಜನನಲ್ಲಂ ॥ ೧೪೨

ಬಿಡದಭವ ನಿನ್ನ ಮತಮಂ
ಪಿಡಿದಿರ್ದನೆ ಪಡೆಗುಮಕ್ಷಯಶ್ರೀಸುಖಮಂ ।
ಕುಡುವುದು ನಿನ್ನಭಿಮತಮಂ
ಬಿಡದಿರ್ಪತಿಶಯಸುಬುದ್ಧಿಯಂ ದುರಿತಹರಾ ॥ ೧೪೩

ಎಂದನೇಕಸ್ತುತಿಶತಸಹಸ್ರಂಗಳಿಂ ಸ್ತುತಿಯಿಸುವ ದಿವಿಜನಿಕಾಯ ಮಂ ಹಳಮುಖಂ ಕಂಡು ಭಯಂಗೊಂಡು ಗುರುದತ್ತಕೇವಳಿಗಳ ಶ್ರೀ ಪಾದಪದ್ಮಂಗಳ್ಗೆಱಗಿ ಪೊಡೆಮಟ್ಟು ತನ್ನ ಮುನ್ನಿನ ನಾಲ್ಕುಭವಂಗಳಂ ಕೇಳ್ದು ಸಂಸಾರಕ್ಕೆ ವಿಸ್ಮಯಂಬಟ್ಟು ವಿರಕ್ತನಾಗಿ ಅವಸರ್ಪಿಣೀಕಾ ಲದ ಸಾಮರ್ಥ್ಯಮೆನಗೆ ಬೆಸಸುವುದೆಂದು ವಿನಮಿತಮಸ್ತಕನಾಗಿರ್ಪು ದುಂ ಜಿನಸಮಯವಾರ್ಧಿವರ್ಧನಚಂದ್ರನಿಂತೆಂದು ಪೇೞ್ದಂ ॥ ೧೪೪

ಪರಹಿತರಿಲ್ಲ ಧರ್ಮಪರರಿಲ್ಲ ದಯಾನ್ವಿತರಿಲ್ಲ ಮರ್ತ್ಯರೊಳ್
ಕರುಣಿಗಳಿಲ್ಲ ಸಚ್ಚರಿತರಿಲ್ಲ ದೃಢವ್ರತರಿಲ್ಲ ಮೋಹದೊಳ್
ಪೊರೆಯದರಿಲ್ಲ ಶೀಲಗುಣಮುಳ್ಳವರಿಲ್ಲ ಸಮಸ್ತಶಾಸ್ತ್ರದೊಳ್
ಪರಿಣತರಿಲ್ಲ ಧಾರಿಣಿಯೊಳುರ್ವಿದ ದುಷ್ಷಮಕಾಲದೇೞ್ಗೆಯೊಳ್ [1] ॥೧೪೫

ದರಪುರಮಾಗಿ [2] ಪೋಕು ಮಱೆ ಪೆರ್ಚಿಳಸೆಲ್ಲಿಯುಮಾಗದೊರ್ವರುಂ
ಸ್ಥಿರಗುಣರಿಲ್ಲ ಭೂಭುಜರೊಳಾಜ್ಞೆಗಳಿಲ್ಲ ಕವರ್ತೆ ಮೊಕ್ಕಳಂ
ತಿರಿವರನೇಕರರ್ಥಪತಿಗಳ್ ಪಲರಿಲ್ಲ ಜನಕ್ಕೆ ಪೀಡೆ ತ
ಸ್ಕರರಿನಿಳೇಶರಿಂದೊದವುಗುಂ ಸಲೆ ದುಷ್ಷಮಕಾಲದೇೞ್ಗೆಯೊಳ್ ॥೧೪೬

ಸಿರಿ ದೊರೆಕೊಳ್ವದಾಸಿರಿಗೆ ಚಿಂತಿಸುತಿರ್ಪರನೇಕರಾಗಮ
ಜ್ಞರ ನುಡಿದೋಱೆಯಿಂ ನಡೆವರಿಲ್ಲ ತದಾಗಮಮಂ ಧರಿತ್ರಿಯೊಳ್

1 ಕಲಿಗಾಲದೇೞ್ಗೆಯೊಳ್ (ಕ.) 2 ದುರದರ (ಗ)

ಕರಮನುರಾಗದಿಂ ಪದೆದು ಕೇಳದೆ ದುರ್ಗತಿಹೇತುವಪ್ಪ ದು
ಶ್ಚರಿತಕಥಾಳಿಯೊಳ್ನಲಿವರೊಪ್ಪಿರೆ ದುಷ್ಷಮಕಾಲದೇಶ್ಗೆಯೊಳ್ ‖ ೧೪೩

ದಯೆದಮಮಪ್ಪ ಧರ್ಮಮಮನೇಕರುಮೊಲ್ಲದೆ ಕಷ್ಟಮಪ್ಪ ನಿ
ರ್ದಯಮನೆರಸಿರ್ದ ಧರ್ಮಮನುದಾರತೆಯಿಂ ನೆಱೆ ಪೊರ್ದುವರ್ ಗುಣಾ
ಶ್ರಯರನವುಂಕಿ ಬಾಧಿಸಿ ಕನಿಷ್ಠಗುಣಾನ್ವಿತರಪ್ಪರೊಳ್ ಮಹಾ
ಪ್ರಿಯಮನೆ ಮಾಡುವರ್ ಪದೆದು ಮಾಣದೆ ದುಷ್ಷಮಕಾಲದೇಶ್ಗೆಯೊಳ್ ‖

ಗಂಡರಮೇಲೆ ಸತ್ಯಗುಣಮುಂ ಪ್ರಭುಶಕ್ತಿಯುಮಾಯತಿಕ್ಕೆಯುಂ
ಪೆಂಡಿರಮೇಲೆ ದಿವ್ಯಗುಣಮುಂ ಪತಿಭಕ್ತಿಯುಮುನ್ನತಿಕ್ಕೆಯುಂ
ಪಂಡಿತರಪ್ಪರೊಳ್ಗುಣಮುಮಾಗಮದೋಜೆಯುಮುನ್ನತಿಕ್ಕೆಯುಂ
ಮಂಡಲದೊಳ್ ವಿಚಾರಿಸುವೊಡಾಗವು ದುಷ್ಷಮಕಾಲದೇಶ್ಗೆಯೊಳ್ [1] ‖

ಬಡವರಮೇಲುದಾರಗುಣಮುಳ್ಳವರೊಳ್ ಕಡುಲೋಭಮೊಳ್ಳಿತಂ
ನುಡಿವವರೊಳ್ ದರಿದ್ರತೆ ಕುಲಾನ್ವಿತರೊಳ್ ಕಡುಹೀನವೃತ್ತಿ ನೋ
ಪ್ಪೊಡೆ ಕುಲಹೀನರೊಳ್ ಮಹಿಮೆ ಗಾವಿಲರೊಳ್ ಸಿರಿ ಬುದ್ಧಿವಂತರೊಳ್
ಬಡತನಮಾವಗಂ ಜನಿಯಿಕುಂ ಸಲೆ ದುಷ್ಷಮಕಾಲದೇಶ್ಗೆಯೊಳ್ ‖

---

1 (ಕ) ಮತ್ತು (ಗ) ಪುಸ್ತಕಗಳಲ್ಲಿ ೧೪೫ನೆಯ ಪದ್ಯವಾದ ಮೇಲೆ

ಕುಲಜರ ಸತ್ಯಮುಳ್ಳವರ ಧರ್ಮಸಮೇತರ ಮಾತನಾರುಮೊ
ಬ್ಬುಳತವುಡಿಂಗೆ ಕೊಳ್ಳರದನಾಲಿಸದೆಲ್ಲಿಯುಮೊಲ್ವ ಧಾತ್ರಿಪರ್
ಖಳರ ಕುಲಾಪಹಾರಿಗಳ ಕಷ್ಟರ ಮಾತನೋತು ಭೂ
ತಳದೊಳವಜ್ಞೆಗೈಯದೆ ಮನಂಬಿಡೆ ದುಸ್ಸಮಕಾಲದೇಳ್ಗೆಯೊಳ್ ‖

ಎಂಬ ಪದ್ಯವೂ, ೧೪೬ನೆಯ ಪದ್ಯವಾದ ಮೇಲೆ

ಗುರುಗಳ ವಾಣಿಯಿಂ ನಡೆವ ಶಿಷ್ಯರನುತ್ತಮಮಪ್ಪ ಧರ್ಮದೊಳ್
ಚರಿಯಿಪ ಮಾರ್ತ್ಯರಂ ಸುಜನರೆಂದುದನಾಲಿಪ ಕೇಳ್ವ ಭೂಮಿಪಾ
ಲರನೆಡಗರ್ಗಪ್ಪ ಬಾಂದವರನೊಳ್ಳಿದಗೊರ್ಳ್ಳಿದರಾಗಿ ಬಾಳ್ವರಂ
ಕರಮರಿದಣ್ಣ ಕಾಣ್ಬುದು ವಿಚಾರಿಸಿ ದುಸ್ಸಮಕಾಲದೇಳ್ಗೆಯೊಳ್ ‖

ಎಂಬ ಪದ್ಯವೂ ಇವೆ.

ಸಸಿ ಕಿಡುಗುಂ ತೃಣಂ ಬಹಳಮಕ್ಕುಮಸತ್ಯಮೆ ಪೆರ್ಚುಗುಂ ಶ್ರುತಂ [1]
ಕುಸಿಗುಮನಿಷ್ಟಕಾರಿಗಳ ಬಾಳ್ವಿರುದಾರರೆ ಸಾವರೆತ್ತಲುಂ
ಮಿಸುಕದು ಜೈನಧರ್ಮದ ನೆಗಳ್ತೆ ಕುಲಿಂಗಿಗಳುಂ ಕುದೈವಮುಂ
ವಸುಧೆಯೊಳುರ್ವುಗುಂ ನಿಮಿರ್ದು [2] ದುಷ್ಷಮಕಾಲದೇಳ್ಗೆಯೊಳ್ ||

ದುರಿತದೊಳಾರ್ತರ್ ಕೂರ್ತಸಗಿ ದುರ್ವ್ರತಮಂ ಪಿಡಿದುರ್ಕಿ ಸೊಕ್ಕಿ ನಿ
ಷ್ಠುರನರಕಾಬ್ಧಿಯೊಳ್ ಕೆಡೆದು ದುಃಖಮನುಣ್ಬವರುರ್ವಿಯೊಳ್ ಪಲರ್
ನಿರುಪಮಮಪ್ಪ ಜೈನಪದಸೇವನೆಯಿಂ ಸುರಲೋಕಕೆಯ್ದುವರ್
ಧರೆಯೊಳಪೂರ್ವಮಚ್ಚರಿ ವಿಚಾರಿಸೆ ದುಷ್ಷಮಕಾಲದೇಳ್ಗೆಯೊಳ್ || ೧೫೨

ಎಂದು ಪೇಳ್ದುದುಂ ದುಷ್ಷಮಕಾಲಕ್ಕಂ ತನ್ನ ಮುನ್ನಗೆಯ್ದ ಪಾಪಕ್ಕಂ ನಡುಗಿ ಜಿನದೀಕ್ಷೆಯುಂ ಕೈಕೊಂಡು ಪೋದಂ ; ಗುರುದತ್ತಮುನಿನಾಥಂ [3] ಧರಣೀಚಕ್ರದೊಳ್ ವಿಹಾರಿಸುತ್ತುಂ [ಬಂದು] ಪಳ್ಳಿಖೇಟದೊಳ್ [4] ಜಾತಿಜರಾಮರಣತ್ರಯದೂರಮಪ್ಪ ನಿರ್ವಾಣಶ್ರೀಯನೆಯ್ದಿದನದುಕಾರಣದಿಂ || ೧೫೩

ಕರಮೆ ಪರಿಗ್ರಹಮಂ ಪಿಡಿ
ದಿರದೆ ಜಿನೇಂದ್ರಾಗಮೋಕ್ತಿಯಿಂದಿರ್ಪ ಮಹಾ |
ಪುರುಷಂಗೆ ತಡೆಯದಕ್ಷಯ
ಸಿರಿಯಕ್ಕುಂ ಸುಕವಿನಿಕರಪಿಕಮಾಕಂದಾ || ೧೫೪

ಜಿನಪದಸೇವನೆಯುಂ ಮನ
ದನವರತಜಿನೇಂದ್ರಭಕ್ತಿಯುಂ ತತ್ವದಭಾ |
ವನೆಯುಂ ಭಾವಿಸೆ ಸಹಜಂ
ನಿನಗಿಳೆಯೊಳ್ ಸುಕವಿನಿಕರಪಿಕಮಾಕಂದಾ || ೧೫೫

---

1 ನೃತಂ (ಬ.) 2 ಪಸರಿಸುಗುಂ ಸವಿಸ್ತರದೊಳುರ್ವುಗು (ಬ.)
3 ಜಿನಾಧೀಶ್ವರಃ (ಗ) 4 ಯೋಗನಿರೋಧಂಗೆಯ್ದು ಯೋಗಿಭಟ್ಟಾರಕನಾಗಿ ಪಂಚಹ್ರಸ್ವಾಕ್ಷರೋಚ್ಚಾರಣಮಾತ್ರದಿಂದಾಯುಷ್ಯನಾಮಗೋತ್ರವೇದನೀಯಮೆಂಬ ನಾಲ್ಕುಮಘಾತಿಕರ್ಮಂಗಳಂ ಕೆಡಿಸಿ ತತ್ಸಮಯದೊಳ್ (ಗ. ಕ.)

ಪಿಂಗದೆ ಮಿಥ್ಯಾವಾದಿಗ
ಳಂ ಗೆಡೆಗೊಂಡಾಡದಿರ್ಪ ಕಾರಣದಿಂದಂ ।
ಪಿಂಗದ ಸಂಸೃತಿಯನಿದಂ
ನೀಂ ಗೆಲ್ದೈ ಸುಕವಿನಿಕರಪಿಕಮಾಕಂದಾ ॥ ೧೫೬

ಉಱಿ ಸೆಱೆವಿಡಿದಿರ್ದುದಱಿಂ
ಮಱೆಯದೆ ಜಿನಪಾದಯುಗ್ಮಮಂ ದುರಿತಂಗಳ್ ।
ಪೆಱಪಿಂಗಿದುವಮೃತಶ್ರೀ
ಗೆಱೆಯನೆ ನೀಂ ಸುಕವಿನಿಕರಪಿಕಮಾಕಂದಾ ॥ ೧೫೭

ಮುಟ್ಟಲೆಗಂಡ ಸ್ತ್ರೀಯುಂ
ತಿಟ್ಟುಮಿರಲ್ಕಿಲ್ಲ ನಾಲ್ಕುದಿವಸಂ ನಿನಗಿಂ ।
ಕಟ್ಟಾಸನ್ನಮುಮೊಂದೆನೆ
ನಿಟ್ಟಿಸುವೊಡೆ ಸುಕವಿನಿಕರಪಿಕಮಾಕಂದಾ ॥ ೧೫೮

ಧರೆಯುಂ ಬಿಟ್ಟತ್ತಿತ್ತಲ್
ಸುರಗಿರಿ ತೊಲಗದವೊಲರ್ಹನಂಘ್ರಿಯನೆಂತುಂ ।
ಪರಿಹರಿಸದು ನಿನ್ನ ಮನಂ
ಪರಮಾರ್ಥಂ ಸುಕವಿನಿಕರಪಿಕಮಾಕಂದಾ ॥ ೧೫೯

ಕೆಱೆಯುಂ ಕಂಡು ಕಳವೆಯುಂ ಬಿತ್ತುವಂತೆ ರಪಣಮಂ ಕಂಡು ಕಡನಂ ಕುಡುವಂತೆ ಮದವಣಿಗೆಯುಂ ಕಂಡು ಮದುವೆಗೊಡರ್ಚುವಂತೆ ಮಱೆಯುಂ ಕಂಡು ಆರಂಬಕ್ಕೊಡರ್ಚುವಂತೆ ಕೂಟಂ ಕಂಡು ಬಿದ್ದಿನರಂ ಕರೆವಂತೆ [1] ಪಯಿನಂ ಕಂಡು ಕಱುವಂ ಬಿಡುವಂತೆ ಬೆಳಗಂ ಕಂಡು ಪೊನ್ನಂ ನೋಡುವಂತೆ ಕಂಬಮಂ ಕಂಡು ಮನೆಯುಂ ಮಾಡುವಂತೆ ಬೆಳದ ಕೆಯ್ಯಂ ಕಂಡು ಕಣನಂ ಮಾಡುವಂತೆ ಸಸಿಯುಂ ಕಂಡು ನೀರಂ ಬಿಡುವಂತೆ ಮೊದಲೊಳ್ ನಿರ್ದೋಷಿಯಪ್ಪ ದೇವನನಱಿದು ಸಮ್ಯಕ್ತ್ವಂಬೆರ

1 ತಡವಂತೆ (ಬ. ಗ.)

ಸು ವ್ರತಂಗಳೊಳಂ ಧರ್ಮದೊಳಂ ನೆಗೞ್ವಾತಂಗೆ ವ್ರತದೊಳ್ ತಪದೊಳಾದ ಕಾರ್ಯಸಿದ್ಧಿಯಕ್ಕುಂ. ಸಮ್ಯಕ್ತ್ವಮಿಲ್ಲದೆ ವ್ರತಮುಂ ಧರ್ಮಮುಂ ತಪಮುಂ ಪ್ರಭುವಿಲ್ಲದೂರಂತೆ ಸೂರ್ಯನಿಲ್ಲದ ಪಗಲಂತೆ ಬಟ್ಟೆಯಿಲ್ಲದ ಪಯಣದಂತೆ ಕೆಚ್ಚಲಿಲ್ಲದಾವಿನಂತೆ ನೀರಿಲ್ಲದ ಬೆಳಸಿನಂತೆ ಮುಡಿಯಿಲ್ಲದ ಶೃಂಗಾರದಂತೆ ಮೊಲೆವಾಲಿಲ್ಲದ ತಾಯಂತೆ ಬಾರ್ತೆಯಿಲ್ಲದದು ಕಾರಣದಿಂ ದರ್ಶನಾಂಗಂಗಳ ನಿಶ್ಶಂಕಾದ್ಯಷ್ಟಗುಣಂಗಳ ಫಲದಿಂ, ದರ್ಶನಂಬೆರಸಿದಯ್ದಣುವ್ರತಫಲದಿಂ, ದರ್ಶನಂಬೆರಸಿ, ಸುಖಮನೆಯ್ದಿದ ವಸುಭೂತಿಯುಂ ಅಂಜನಚೋರನುಂ ಅನಂತಮತಿಕುಮಾರಿಯುಂ ಉದ್ದಾಯನಮಹಾರಾಜನುಂ ರೇವತೀಮಹಾದೇವಿಯುಂ ಜಿನೇಂದ್ರಭಕ್ತನುಂ ವಾರಿಷೇಣಕುಮಾರನುಂ ವಜ್ರಕುಮಾರನುಂ ವಿಷ್ಣುಕುಮಾರನುಂ ಧನಕೀರ್ತಿಕುಮಾರನುಂ ಧನದಮಹಾರಾಜನುಂ ಜಿನೇಂದ್ರದಾಸನುಂ ಪ್ರಮಾಥಿಕುಮಾರನುಂ ಗುರುದತ್ತ ಮಹಾರಾಜನುಮೆಂಬೀ ಪದಿನಾಲ್ವರ್[ಮಹಾ] ಪುರುಷರೊಳಾದ ಪದಿನಾಲ್ಕುಂಕಥೆಗಳ ನಱಿದು ತಾನುಮವರಂತೆ ನೆಗೞ್ದು ಸಂಸಾರಸಮುದ್ರಮಂ ಕಳೆವುದೆಂದು ಗೌತಮಸ್ವಾಮಿಗಳ್ ಪೇೞೆ ಕೇಳ್ದು ಮಗಧಾವನೀವಲ್ಲಭಂ ತನಗಾಗಳ್ ಮುಕ್ತಿಶ್ರೀ ಕೈಸಾರ್ದುದೆಂಬಂತೆ ಸಂತೋಷಂಬಟ್ಟು ಪುರಕ್ಕೈವಂದು ಪೆರ್ಚಿಂದಿಪ್ಪತ್ತನಾಲ್ವರ್ [2] ತೀರ್ಥಕರ ಪರಮದೇವರ್ಗೆಯಭಿಷೇಕಮುಮಂ ಪೂಜೆಯುಮಂ ಮಾಡಿ ಪಲವುತೆಱದ ರತ್ನಂಗಳಿಂದರ್ಚಿಸಿ ಕೈಗಳಂ ಮುಗಿದು ॥ ೧೬೦

ಪುರುಪರಮೇಶ್ವರ ಸೌಖ್ಯಸದನ ಜಯ
ದಿವಿಜಗಣಾರ್ಚಿತಪಾದಪದ್ಮ ಜಯ
ವಿಲಸದಜಿತಜಿನ ದುರಿತಹರಣ ಜಯ
ಶತಮುಖಶತನುತಚಾರುಚರಣ ಜಯ
ಶಂಭವಜಿನಪತಿ [3] ದುರಘದೂರ ಜಯ
ಮುಕ್ತಿಶ್ರೀಕುಚನೂತ್ನಹಾರ ಜಯ

---

1 ಗೌತಮಗಣಧರ ಸ್ವಾಮಿಗಳ್ (ಗ) 2 ಪೆರ್ಚಿದಾರ್ಹಾರದಾನದಿಂದಂ ಇಪ್ಪತ್ತನಾಲ್ವರ್ (ಬ) 3 ಸಂಭವದುಜ್ವಲ (ಬ., ಗ.)

ಸಂದಭಿನಂದನ ವಿಗತಮೋಹ [1] ಜಯ
ರಮ್ಯಾಲಂಕೃತಗುಣಸಮೂಹ ಜಯ
ಸುಮತಿಜಿನೇಶಪರೋಪಕಾರಿ ಜಯ
ಮನಸಿಜಮದಗಜಸಿಂಧುರಾರಿ ಜಯ
ಪದ್ಮಪ್ರಭಜಿನ ಶಾಂತರೂಪ ಜಯ
ಲೋಕತ್ರಯಹಿತ ಪೂಜ್ಯಪಾದ ಜಯ
ಸತ್ಸುಪಾರ್ಶ್ವ ಭುವನೈಕಸಾರ ಜಯ
ಕರ್ಮಮಹೀರುಹವರಕುಠಾರ ಜಯ
ಚಂದ್ರಪ್ರಭ ಹಿಮಕಿರಣತೇಜ ಜಯ
ಭಾಕ್ತಿಕಜನಕಲ್ಪಾವನೀಜ ಜಯ
ಪುಷ್ಪದಂತ ದಿಗ್ರಮ್ಯವಸ್ತ್ರ ಜಯ
ಕಿಲ್ಬಿಷನಗಕುಲವಾಸವಾಸ್ತ್ರ ಜಯ
ಶೀತಲ ಶೀತಲಸದೃಶವಚನ ಜಯ
ವಜ್ರಶಿಲಾತಲಲಿಖಿತವಚನ ಜಯ
ಸುಶ್ರೇಯಾಂಸಜಿನೇಂದ್ರರುದ್ರ ಜಯ
ದುಷ್ಕೃತಪನ್ನಗಪತಿಖಗೇಂದ್ರ ಜಯ
ವಾಸುಪೂಜ್ಯದೇವಾಧಿದೇವ ಜಯ
ಸನ್ಮುನಿಸೇವ್ಯ ಮಹಾನುಭಾವ ಜಯ
ವಿಮಲ ಗುಣರತ್ನರಾಶಿ ಜಯ
ನಿಖಿಲಶೀಲಗುಣತೋಯರಾಶಿ ಜಯ
ಅನಂತ ಗುಣಾಂಬುಧಿ [2] ವೀತರಾಗ ಜಯ
ಪಂಚಮಹಾಕಲ್ಯಾಣಯೋಗ್ಯ ಜಯ
ಧರ್ಮಜಿನೇಶ್ವರ ಧರ್ಮವಾರ್ಧಿ ಜಯ
ನಿಷ್ಠುರಾಷ್ಟಕರ್ಮಾಭ್ರಪವನ ಜಯ
ಶಾಂತಿಜಿನೇಶ್ವರ ಪುಣ್ಯನಿಳಯ ಜಯ

---

1 ವೃಜಿನರ್ಮೋಹ (ಬ.) 2 ಜಯನನಂತ ಜಿನ (ಗ)

ಶರಣಾಗತಜನಕರ್ಮವಿಲಯ ಜಯ
ಕುಂಥುಜಿನೇಶ್ವರ ಜಗದ್ವಂದ್ಯ ಜಯ
ಗುಣಮಣಿ ಮುನಿಗಣ [1] ನಿಕರ ವಂದ್ಯ ಜಯ
ಅರಜಿನ ಸುರನರನಿಕರವಂದ್ಯ ಜಯ
ಸಾರಸ್ವತತತ್ತ್ವವಿದಿತನೂತ ಜಯ
ಮಲ್ಲಿಜಿನೇಶ್ವರ ಸುಸ್ವರೂಪ ಜಯ
ಕರ್ಮಕಲಂಕತಮಃಪ್ರದೀಪ ಜಯ
ಮುನಿಸುವ್ರತ ಜಿನರಾಜಹಂಸ ಜಯ
ಸುಗತಿವಧೂಕರ್ಣಾವತಂಸ ಜಯ
ನಮಿಜಿನ ಮುಕ್ತಿಶ್ರೀನಿವಾಸ ಜಯ
ಸಕಲಶ್ರೀವನಿತಾವಿಲಾಸ ಜಯ
ನೇಮಿಜಿನೇಶ್ವರ ವಿನುತಶರಣ ಜಯ
ಹರಿಕುಲಗಗನಸಹಸ್ರಕಿರಣ ಜಯ
ಪಾರ್ಶ್ವಜಿನೇಶ್ವರ ದಿವ್ಯಮೂರ್ತಿ ಜಯ
ಲೋಕಾಲೋಕವ್ಯಾಪ್ತಕೀರ್ತಿ ಜಯ
ವರ್ಧಮಾನಜಿನ ಭುವನಪೂಜ್ಯ [2] ಜಯ
ನೆಗಳ್ದಷ್ಟಾದಶದೋಷರಹಿತ ಜಯ ಜಯಜಯಾ [3] ॥ ೧೬೧

ಎಂದ[ನೇಕಸ್ತುತಿಶತಸಹಸ್ರಂಗಳಿಂ] ಸ್ತುತಿಸಿ ॥ ೧೬೨

ಪ್ರಿಯದಿಂ ತೂರ್ಯಸ್ವನಂ ವಾರಿಧಿವೊಲೆಸೆಯಲುಂ ವಾರನಾರೀಕದಂಬಂ
ನಯದಿಂ ಕೈಗೆಯ್ದು ಸುತ್ತಂ ಬರಲುಮೊಸಗೆಯಿಂ ಪುಣ್ಯಕಾಂತಾಜನಂ ಸೇ
ಸೆಯನುತ್ಸಾಹದಿಂದಂ ಪರಸಿ ವಿಭವದಿಂದಿಕ್ಕಲುಂ ಬಂದು ರಾಜಾ
ಲಯಮಂ ಚೆಲ್ವಾಗೆ ಪೊಕ್ಕಂ ಸುಕವಿಜನಮನಃಪದ್ಮಿನೀರಾಜಹಂಸಂ ॥

1 ಗಣಧರಾದಿಮುನಿ (ಕ)   2 ವರ್ಧಮಾನಭುವನೈಕಮಹಿತ (ಗ)
3 ರಹಿತಜಯ ಜಯಗುಣನಿಧಾನಾ (ಗ)

ಗಿರಿಶಿಖಿವಾಯುಮಾರ್ಗಶಶಿಸಂಖ್ಯೆಯೊಳಾವಗವೊಂದಿ ವರ್ತಿಸು
ತ್ತಿರೆ ಶಕಕಾಲಮುನ್ನತಿಯ ನಂದನವತ್ಸರದೊಳ್ ಮಹೋತ್ಸವಂ
ಬೆರಸೆಸೆದಿರ್ದ ಭಾದ್ರಪದಮಾಸದೊಳಗ್ಗದ ಶುಕ್ಲಪಕ್ಷದೊಳ್
ನಿರುಪಮಮಪ್ಪ ಪಾಡಿವದೊಳೊಪ್ಪುವ ಹಸ್ತಯುತಾರ್ಕವಾರದೊಳ್ ॥

ಧರಣೀಪೂಜ್ಯಂ ಭವ್ಯೋ
ತ್ಕರವಂದ್ಯಂ ಕಾವ್ಯರತ್ನಮಮಳಯಶಶ್ರೀ ।
ಕರಮೆನಿಸಿರ್ದೀಗ್ರಂಥಂ
ನಿರುತಂ [1] ನಿರ್ವಾಹ [2] ಮಾಯ್ತು ನಿರ್ವಿಘ್ನತೆಯಿಂ ॥ ೧೬೫

ಪರಚಕ್ರಾದಿಲಸಚ್ಚತುರ್ದಶ [3] ಮಹಾರತ್ನಂಗಳಂ ತಾಳ್ದಿ ನಿಂ
ದರಮೋಘಂ ನುತಚಕ್ರವರ್ತಿಪದದೊಳ್ ನಿಲ್ವಂತೆ ಸದ್ದರ್ಶನಾ
ದ್ಯರದೇವಾನತಸಚ್ಚತುರ್ದಶವಿದಗ್ಧಪ್ರೀತಿಯುಪ್ಪೀಕಥೋ
ತ್ಕರಮಂ ತಾಳ್ದಿದರುಂ ವಿಶೇಷಪದದೊಳ್ ನಿಲ್ವರ್ ಮಹೋತ್ಸಾಹದಿಂ ॥

ಪಲರುಂ ಧರ್ಮಮನೊಲ್ಲದುಗ್ರನರಕಾಂಭೋರಾಶಿಯೊಳ್ ಬಿರ್ದು ಕೋ
ಟಲೆಗೊಳ್ವರ್ಗಱಿವಂತು ಕನ್ನಡದಿನೊಪ್ಪಂಬೆತ್ತ ಜಾಣ್ಮಾತಿನಿಂ
ಪಲವುಂ ದೇಸೆಯಿ [4] ಸಂದುದಾಹರಣೆಯಿಂ ಪೇಳ್ದಿಂ ಬುಧಕರ್ಮಮಯಿಂ
ತಲೆಯುಂ ತೂಗುವಿನಂ ಜಿನೇಂದ್ರಮತಮಂ ವಾತ್ಸಲ್ಯರತ್ನಾಕರಂ ॥ ೧೬೭

ಮುಳುಗುಂದದೊಳಿರ್ದು ಮಹೋ
ಜ್ಜ್ವಳಧರ್ಮಾಮೃತಮನರ್ತಿಯಿಂದಂ ಭವ್ಯಾ ।
ವಳಿಗಱಿಪಿದಂ ಧರಿತ್ರೀ
ತಳಪೂಜ್ಯಂ ಸುಕವಿನಿಕರಪಿಕಮಾಕಂದಂ ॥ ೧೬೮

ಕುಲಶೈಲಾವಳಿ ನಿಲ್ವಿನಂ ಸುರನಿವಾಸಂ ನಿಲ್ವಿನಂ ಧಾರಿಣೀ
ವಲಯಂ ನಿಲ್ವಿನಮಂಬುರಾಶಿನಿಕುರಂಬಂ ನಿಲ್ವಿನಂ ನಿಲ್ಕೆ ನಿ

---

[1] ಹರುಷದ (ಗ) [2] ನಿರ್ವಾಣ (ಕ. ಖ.)
[3] ವರಚಕ್ರಾಧಿಪರುಂ ಚತುರ್ದಶ (ಕ. ಖ. ಗ.) [4] ದೇಸೆಯ (ಗ)

ರ್ಮಲಧರ್ಮಾಮೃತಮೆಯ್ದೆ ತೋಯನಿಧಿಪರ್ಯಂತಂಬರಂ ಪರ್ವಿ ಭೂ
ತಳದೊಳ್ ಕಾಂಚನರಾಶಿಯಂತೆಸೆಯುತುಂ ಚಂದ್ರಾರ್ಕರುಳ್ಳನ್ನೆಗಂ ||

ಜಿನಧರ್ಮಂ ಸಕಲಾವನೀತಳಮುಮಂ ಪರ್ವಿಕ್ಕೆ ಭೂಪಾಲಕರ್
ಜನಮಂ ನ್ಯಾಯದೊಳೊಂದಿ ರಕ್ಷಿಸುಗೆ ಭೂಲೋಕಕ್ಕೆ ಸಂತೋಷಮ
ಪ್ಪಿನೆಗಂ ಪೆರ್ಮೆ ಕೊಳ್ಗೆ ಭವ್ಯನಿಕರಕ್ಕಾನಂದಮುಂ ಬೇಳ್ಪ ಕಾಂ
ಚನಮುಂ ಕೀರ್ತಿಯುಮಕ್ಕೆ ದಿವ್ಯಸುಖಮುಂ ಭದ್ರಂ ಶುಭಂ ಮಂ
ಗಳಂ || ೧೩೦

ಇದು ನಿಖಿಲದಿವಿಜಪರವೃಢಮಕುಟತಟಘಟಿತಮಣಿಗಣವಿಲುಳಿತಕಿರಣ
ಚುಂಬನೀಯಪರಮಜಿನಚರಣಯುಗಳಸರಸಿರುಹಮತ್ತಮಧುಕರ
ಸಿರುಪಮಸಹಜಕವಿಜನಪಯಃಪಯೋಧಿಹಿಮಕರ
ನುತಭಾವಯುತ ದಿಗಂಬರದಾಸ ನೂತ್ನಕವಿತಾವಿಳಾಸ
ಶ್ರೀಮನ್ನಯಸೇನದೇವವಿರಚಿತಮಪ್ಪ
ಧ ರ್ಮಾ ಮೃ ತ ದೊ ಳ್
ಅಪರಿಗ್ರಹ[1] ವ್ರತವ್ಯಾವರ್ಣನಂ
ಚತುರ್ದಶಾಶ್ವಾಸಂ.

ಧರ್ಮಾಮೃತಂ ಸಂಪೂರ್ಣಂ.

---

[1] ನಿಃಪರಿಗ್ರಹ (ಗ)

ಶ್ರೀಮದ್ರಾಕ್ಷಸವತ್ಸರೇ ವಿಮಲಿನೇ ಮಾಸೇ ಪುನಃ ಫಾಲ್ಗುನೇ
ವಾರೇ ದೇವಗುರೋಸ್ಸ್ವಕಾರ್ಯವಿಹಿತೇ ಶ್ರಿಪೌರ್ಣಮಾಸ್ಯಾಂ ತಿಥೌ
ಆದಿಶ್ರೀಯತಿಪುಂಗವಾಯ ಜಗತೀಪೂಜ್ಯಾಯ ವಿಪ್ರಾನ್ವಯೋ
ರಾಜಾಖ್ಯಸ್ಸ್ವಯಮಾದರೇಣ ಲಿಖಿತಂ ದತ್ತೇ ಸ್ಮ ಧರ್ಮಾಮೃತಂ (ಬ)